# ಅಪರಂಜಿ

ತಿಳಿನಗೆಯ ಕಾರಂಜಿ

ಎಪ್ರಿಲ್ - 2019

## ಯುಗಾದಿ ವಿಶೇಷಾಂಕ




ಚುನಾವಣಾ ಶಾಯಿ ಗುರುತು – ಐದೇ ವಾರ.

ಕೆಟ್ಟ ಸರಕಾರದ್ದು – ಐದು ವರ್ಷಕ್ಕೂ ಹೆಚ್ಚು.

ಬಿಡಿ ಪ್ರತಿ: ರೂ. 30.00

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್



**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ




# ಅಪರಂಜಿ

ತಿಳಿನಗೆಯ ಕಾರಂಜಿ


**ಸಂಪುಟ 36**

**ಸಂಚಿಕೆ – 07**

**ಎಪ್ರಿಲ್ – 2019**


## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 3 |
| ಮೊದಲ ಮಾತು | ಅಪರಂಜಿ ಶಿವು | 4 |
| ನಮ್ಮ ನಮ್ಮಲ್ಲಿ | ಎಂ. ಶಿವಕುಮಾರ್ | 5 |
| ಕ್ರಿಸ್ಟಾಫ್ ನೀಮನ್ | ಶಿವಕುಮಾರ್ | 8 |
| ಬಹಿರಂಗ ಪತ್ರ (ಕೊರವಂಜಿಯಿಂದ) | ರಾ.ಶಿ. | 11 |
| ಡಿಜಿಟಲ್ ಡಿಟಾಕ್ಸ್ | ನಂದಿನಿ ಕಾಪಡಿ | 13 |
| ಹೀಗೊಂದು ಕನ್ನಡ ಸಂಘ | ಡಿ. ಶ್ಯಾಮಲ ರವಿಶಂಕರ್ | 19 |
| ಟೆಕ್ ಸ್ಯಾವಿ ಸಿಮಿ | ಚಿತ್ರಾ ರಾಮಚಂದ್ರನ್ | 22 |
| ಮಾರಾಟಕ್ಕಿವೆ | ಸಿ ಆರ್ ಸತ್ಯ | 31 |
| ಬೆಳ್ಳುಳ್ಳಿ, ಚಳ್ಳೆಹಣ್ಣು ಮತ್ತು .... | ವಾಣಿ ಸುರೇಶ್ | 34 |
| ಪಕ್ಷಾಂತರ | ಪಾಲಹಳ್ಳಿ ವಿಶ್ವನಾಥ್ | 37 |
| ಟಾಪ್ ಟೆನ್ ಕಾಹಿಲೆ | ಭುವನೇಶ್ವರಿ ಹೆಗಡೆ | 39 |
| ಮಂದಹಾಸದ ಪ್ರಭುಶಂಕರರು | ಬೇಲೂರು ರಾಮಮೂರ್ತಿ | 41 |
| ಹನಿ , ಮನಿ ಮತ್ತು ಮಿನಿ | ಎಚ್. ಡುಂಡಿರಾಜ್ | 46 |


ವ್ಯಂಗ್ಯಚಿತ್ರ

ಮುಖಪುಟ : ಕೃಪೆ – ಅಂತರ್ಜಾಲ

ಒಳಪುಟಗಳಲ್ಲಿ : ನಾಗನಾಥ್, ರಘುಪತಿ ಶೃಂಗೇರಿ, ಗುಜ್ಜಾರ್




*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003. email: koravanji42@hotmail.com ದೂರವಾಣಿ: 080-23345259

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು – 560 068. ದೂರವಾಣಿ: 080–26688488. email: belururamamurthy@gmail.com

*ಮುದ್ರಣ: ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

| | | |
|---|---|---|
| ಕೆಂಪಣ್ಣನ ಕಿಡ್ನಿ ಸ್ಟೋನ್ | ಡಾ. ಸಿ.ಕೆ. ರೇಣುಕಾರ್ಯ | 48 |
| ಹೀಗೊಂದು ರಾಜ್ಯೋತ್ಸವ | ಪ್ರಭಣ್ಣ | 53 |
| ಪುರುಷೋತ್ತಮನ ಪತ್ತೇದಾರಿಕೆ | ಎಚ್. ಗೋಪಾಲಕೃಷ್ಣ | 56 |
| ಸೀರಿಯಲ್ ಪ್ರಭಾವ | ಎಂ.ಎಸ್. ನರಸಿಂಹಮೂರ್ತಿ | 63 |
| ತಾಂತ್ರಿಕ ಸುಳಿಯಲ್ಲಿ | ಕೃಷ್ಣ ಸುಬ್ಬರಾವ್ | 66 |
| ಗಾಂಪರ ಗುಂಪು ನೀವು ಕಂಡಿರಾ | ವೈ. ಎನ್. ಗುಂಡೂರಾವ್ | 68 |
| ಜಲಜಾಕ್ಷಿ ಮನೆ ಮಾತು .... | ಎಚ್. ಆರ್. ಹನುಮಂತರಾವ್ | 75 |
| ಅವರೇಕಾಳ್ ಮತ್ತು ವೈಟ್ ಹೌಸ್ | ಜಿ.ವಿ. ನಿರ್ಮಲ | 79 |
| ಬಾಗಮ್ಮನ ಬಡಾಯಿ | ಗಾಯತ್ರಿ ಮೂರ್ತಿ | 81 |
| ಈಡೇರಿದ ಆಸೆ | ಅನಿತಾ ನರೇಶ್ ಮಂಚಿ | 84 |
| ಇಂಗ್ಲಿಷ್ ಬಾರದ ಫಾರಿನ್ ಹುಡುಗಿ | ಸಹನಾ ಪ್ರಸಾದ್ | 86 |
| ತುಂತುರು | ದಂನಆ | 88 |
| ಬಿಸಿನೆಸ್ ನೆಟ್ ವರ್ಕ್ | ಇ. ಆರ್. ರಾಮಚಂದ್ರನ್ | 89 |
| ಚಿಂತ್ಯಾಕೆ ಮಾಡುತಿ | ಶರತ್ ಕಲ್ಕೋಡ್ | 92 |
| ಐಲು ಸೀಟಿನಲ್ಲಿ ಪ್ರಯಾಣ | ಜೈ ಕುಮಾರ್ ಮರಿಯಪ್ಪ | 101 |
| ನೀ ಮಾಯೆಯೊಳಗೋ ! | ರೇಖಾ ಹೆಗಡೆ ಬಾಳೆಸರ | 104 |
| ಕಾಣದಂತೆ ಮಾಯವಾದನು | ಗಣೇಶ್ ಹೆಗಡೆ | 108 |
| ಮೊಬೈಲ್ ಬಂದಿದೆ ಕೊಳ್ಳಿರೋ | ಈರಪ್ಪ ಕಂಬಳಿ | 110 |
| ನಿಧಿ ದೊರಕಿತು | ಎನ್ ರಾಮನಾಥ್ | 113 |
| ನಕಲಿ ಅಭಿಮಾನಿಗಳ ಅಸಲಿಯತ್ತು | ಪ್ರಕಾಶ್ ಶೆಟ್ಟಿ | 116 |
| ಪಂಡಿತ ಪುತ್ರ | ವೈ ಎಂ. ರಘುನಂದನ್ | 118 |
| ರೆಸಲ್ಯೂಷನ್ ಎಂಬ ಉಪದ್ರವ | ಲತಾ ಹೆಗಡೆ | 121 |
| ಹುಷಾರು ಹುಷಾರು | ನಂನಾಗ್ರಾಜ್ | 125 |
| ಹೆಸರಿನಲ್ಲೇನಿದೆ ಮಹಾ | ಸುಧಾ ಸರನೋಬತ್ | 127 |








# ಅಪರಂಜಿ ಕಿಡಿ

– ಪ್ರಕಾಶ್

**ಮುರಿದು ಬಿದ್ದ ಟ್ರಂಪ್ – ಕಿಂ ಮಾತುಕತೆ – ಸುದ್ದಿ**

ಇದೀಗ ಹಾಗಲ ಕಾಯಿ ಬೇವಿನಕಾಯಿ!!

★★★

**ಆರ್.ಟಿ.ಒ; ಲಂಚವೇ ಇನ್ನೂರು ಕೋಟಿ – ಪತ್ರಿಕೆ**

ರುಷುವತ್ತು?!

★★★

**1971ರ ವೇಳೆಗೆ ಹಾಸನದಲ್ಲಿ ವಿಮಾನ ನಿಲ್ದಾಣ – ಪತ್ರಿಕೆ**

ಇದು 1969, ಮಾರ್ಚ್ ದಿನಪತ್ರಿಕೆ!!

★★★

**ಆಯವ್ಯಯ ಪ್ರಗತಿಪರ ಜನಪರ –ರಾಜಕೀಯ ಹೇಳಿಕೆ**

ಯಾವ ಜನ ಸ್ವಾಮಿ?!

★★★

**ತಾಪಮಾನ ದಿಢೀರ್ ಏರಿಕೆ – ಬೆಂಗಳೂರು ಸುದ್ದಿ**

ಚುನಾವಣೆ ಪ್ರಭಾವ!!!

★★★

**ಮತದಾರರನ್ನು ಭ್ರಷ್ಟರಾಗಿಸಿದ್ದೇವೆ – ಹೇಳಿಕೆ**

ಆತ್ಮಾವಲೋಕನ ಅಂದರೆ ಇದೇ!!

★★★

**ಉಕ್ಕಿನ ಸೇತುವೆ ಬದಲು ಕಾಂಕ್ರೀಟ್ ಬಳಕೆ –ಸುದ್ದಿ**

ಇದು ಆಶ್ವಾಸನೆಯೋ, ಬೆದರಿಕೆಯೋ?!

★★★

**ಮಾರ್ಚ್ ಎಂಟರಂದು 'ಮಹಿಳಾ ದಿನ' ಆಚರಣೆ –ಸುದ್ದಿ**

ಅಪರಂಜಿ ಸಂತಸ ಪಟ್ಟಳಂತೆ!!

# ಮೊದಲ ಮಾತು

**- ಶಿವಕುಮಾರ್**

ಎಂದಿನಂತೆ ಯುಗಾದಿ ಹಬ್ಬದಂದು ಸಂಭ್ರಮದಿಂದ ನಿಮ್ಮೆಲ್ಲರನ್ನು ರಂಜಿಸಲು ವಿಶೇಷ ಸಂಚಿಕೆಯ ರೂಪದಲ್ಲಿ ಅಪರಂಜಿ ನಿಮ್ಮ ಮನೆಗೆ ಬಂದಿದ್ದಾಳೆ. ನಮ್ಮ ಬಳಗದ ಎಲ್ಲ ಬರಹಗಾರ, ಬರಹಗಾರ್ತಿಯರೂ ತಮ್ಮ ಸೃಜನಶೀಲತೆಯಿಂದ ಈ ಪುಟಗಳ ಮೌಲ್ಯವನ್ನು ಹೆಚ್ಚಿಸಿರುವುದು ಬಹು ಸಂತಸದ ಸಂಗತಿ. ಕೊರವಂಜಿಯ ಸಂಪಾದಕರಾಗಿದ್ದ ದಿವಂಗತ ರಾ.ಶಿ.ಯವರ ಪುಟ್ಟ ಲೇಖನವೊಂದನ್ನು ಆರಿಸಿ ಈ ಸಂಚಿಕೆಯಲ್ಲಿ ನೀಡಿದ್ದೇವೆ. ಇಲ್ಲಿನ ವೈವಿಧ್ಯಮಯ ಬರಹಗಳು ಚೇತೋಹಾರಿಯಾಗಿ ಮೂಡಿಬಂದಿದೆ ಎಂದು ನಿಮಗೆ ಅನ್ನಿಸಿದರೆ, ನಮ್ಮ ಪ್ರಯತ್ನ ಸಾರ್ಥಕ.

ಈ ಸಂಚಿಕೆ ಇಷ್ಟು ಅಚ್ಚುಕಟ್ಟಾಗಿ ಹೊರಬಂದಿರುವುದಕ್ಕೆ ಸಂಪಾದಕ ಮಂಡಲಿಯ ಬೇಲೂರು ರಾಮಮೂರ್ತಿ, ಆನಂದ, ಸತ್ಯ ಮತ್ತು ಗೋಪಾಲಕೃಷ್ಣ ಇವರುಗಳ ಮುತುವರ್ಜಿ, ಶ್ರದ್ಧೆ ಮತ್ತು ಉತ್ಸಾಹ ಕಾರಣ ಎಂದರೆ ತಪ್ಪಾಗಲಾರದು. ನಾವು ಕೊಟ್ಟ ಎಲ್ಲ ತೊಂದರೆಗಳನ್ನು ಸಹಿಸಿ, ನಗುನಗುತ್ತಲೇ ಡಿಟಿಪಿ ಕೆಲಸವನ್ನು ನಿರ್ವಹಿಸಿದ ರವೀಂದ್ರ ಮತ್ತು ಆಚಾರ್, ಮುದ್ರಕರಾದ ನಾಥ್ ಮತ್ತು ಅವರ ಸಿಬ್ಬಂದಿ ವರ್ಗದ ಸಂತೋಷ್ ಮತ್ತು ನಾಗರಾಜ್ ಇವರೆಲ್ಲರಿಗೂ ಅಪರಂಜಿ ಆಭಾರಿ. ಕಳೆದ ವರ್ಷವಷ್ಟೇ ನಮ್ಮ ಟ್ರಸ್ಟಿನ ಸಾರಥ್ಯವನ್ನು ವಹಿಸಿಕೊಂಡ ಉಲ್ಲಾಸ್ ತಮ್ಮ ನಿರ್ವಹಣಾ ಸಾಮರ್ಥ್ಯದಿಂದ ಎಲ್ಲ ಕೆಲಸಕಾರ್ಯಗಳನ್ನು ಬಹು ಸುಲಲಿತವಾಗಿ ನಡೆಸುತ್ತಿರುವುದು ಅಪರಂಜಿಯ ಸೌಭಾಗ್ಯ.

'ನಗೆಮುಗುಳು' ಹಾಸ್ಯ ಮಾಸಪತ್ರಿಕೆಯ ಶ್ರೀಯುತ ರಾಮಣ್ಣ ಆವರು ನಿಧನರಾದ ಸುದ್ದಿ ಕೇಳಿ ಆಘಾತವಾಯಿತು. ಸದಾ ನಗೆಮುಖದ ಸಜ್ಜನ ಜೀವಿಯಾಗಿದ್ದ ರಾಮಣ್ಣ ಆವರು ಇನ್ನಿಲ್ಲ. ಆದರೆ ಅವರ ಒತ್ತಾಸೆಯಿಂದ ಸ್ಥಾಪಿತವಾದ 'ನಗೆಮುಗುಳು' ನಿರಂತರವಾಗಿ ನಗೆರಸಿಕರನ್ನು ರಂಜಿಸುವುದರಲ್ಲಿ ಯಾವ ಸಂಶಯವೂ ಇಲ್ಲ. ಭಗವಂತನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲಿ.


ವಿಕಾರಿನಾಮ ಸಂವತ್ಸರವು ಎಲ್ಲಾ ಓದುಗರಿಗೂ, ನಮ್ಮ ಬಳಗದ ಎಲ್ಲರಿಗೂ ಸೌಖ್ಯ, ಶುಭ, ಶಾಂತಿ, ನೆಮ್ಮದಿಗಳನ್ನು ತರುವಂತಾಗಲಿ ಎಂದು ಅಪರಂಜಿ ಭಗವಂತನಲ್ಲಿ ಬೇಡುತ್ತಾಳೆ.



## “ನಮ್ಮ ನಿಮ್ಮಲ್ಲಿ”

• ಶಿವಕುಮಾರ್

ಹಲವು ವರ್ಷಗಳ ಹಿಂದೆ ನಾನು ಈ ಅಂಕಣದಲ್ಲಿ ಗೀತೆಯ ಮೇಲಿನ ಪುಸ್ತಕವೊಂದನ್ನು ಪರಿಚಯಿಸಿದ್ದು ನಿಮಗೆ ನೆನಪಿರಬಹುದು. ಗೀತೆಯನ್ನು ಮಕ್ಕಳಿಗೆ ಪರಿಚಯಿಸುವ ''ದ ಗೀತ ಫಾರ್ ಚಿಲ್ಡ್ರನ್'' ಎಂಬ ಆ ಪುಸ್ತಕ, ನಮ್ಮ ಅಪರಂಜಿ ಬಳಗದ ಸುಜಾತಾ ರಾಜಣ್ಣ ಅವರ ಮಗಳು ರೂಪಾ ಬರೆದದ್ದು. ಈ ಪುಸ್ತಕವನ್ನು ಓದಿದ ನಂತರ, ಅದರಲ್ಲಿನ ಸರಳ ಶೈಲಿ, ಮಕ್ಕಳಿಗೆ ಅರ್ಥವಾಗುವ ಭಾಷೆಯ ಬಳಕೆ, ಮೂಲ ಪಾಠಕ್ಕೆ ಎಲ್ಲಿಯೂ ಅಪಚಾರವಾಗದಂತಿದ್ದ ನಿರೂಪಣೆ, ಇವನ್ನೆಲ್ಲಾ ನಾನು ಬಹುವಾಗಿ ಮೆಚ್ಚಿ ಈ ಪುಸ್ತಕವನ್ನು ಅಪರಂಜಿ ಓದುಗರಿಗೆ ಸಂಭ್ರಮದಿಂದ ಪರಿಚಯಿಸಿದ್ದೆ. ಅದಾಗಿ ನಾಲ್ಕು ವರ್ಷಗಳ ನಂತರ, ಹಲವು ವಾರಗಳ ಹಿಂದೆ ರೂಪಾ ಫೋನ್ ಮಾಡಿ, '' ಅಂಕಲ್ ವೇದ ಮತ್ತು ಉಪನಿಷತ್ತುಗಳ ಬಗ್ಗೆ ಮಕ್ಕಳಿಗಾಗಿ ನಾನು ಬರೆದ ಒಂದು ಪುಸ್ತಕ ಪ್ರಕಟವಾಗಿದೆ. ಮೊಟ್ಟಮೊದಲು ಈ ಸುದ್ದಿಯನ್ನ ನಿಮಗೆ ತಿಳಿಸುಕ್ಕೆ ಫೋನ್ ಮಾಡಿದೆ'' ಎಂದಾಗ, ''ಇದೆಂಥ ಹೈವೈರ್ ಆ್ಯಕ್ಟ್ ಮಾಡುಕ್ಕೆ ಹೊರಟೆ, ಅಂತಹ ಗಹನವಾದ ವಿಷಯಗಳನ್ನ ಮಕ್ಕಳಿಗೆ ತಿಳಿಸೋದಾದರೂ ಹೇಗೆ? ಆದರೂ ಭಗವದ್ಗೀತೆ ಬರೆದು ನಿಭಾಯಿಸಿದ ನಿನಗೆ ಈ ಕೆಲಸ ಅಷ್ಟು ಕಷ್ಟವಾಗಿರಲಾರದು. ಐ ಲುಕ್ ಫಾರ್ವರ್ಡ್ ಟು ರೀಡ್ ದ ಬುಕ್'' ಅಂತ ಹೇಳಿದೆ. ಒಂದು ವಾರದ ನಂತರ ಪುಸ್ತಕ ಕೈ ಸೇರಿತು.






ಮೊದಲಿಗೆ ಉಪನಿಷತ್ತುಗಳ ಬಗ್ಗೆ ಸ್ವಲ್ಪ ಹಿನ್ನೆಲೆ ಮಾಹಿತಿ. ವೇದಾಂತ ಬೋಧನಾ ಗ್ರಂಥಗಳಲ್ಲಿ ಪ್ರಮುಖವಾಗಿ ಮೂರು ಮೂಲಗ್ರಂಥಗಳಿವೆ. ಇವೇ ಪ್ರಸ್ಥಾನತ್ರಯಗಳು. ಪ್ರಸ್ಥಾನ

ಎಂದರೆ ಮೂಲ ಆಕರ ಗ್ರಂಥ ಅಥವಾ ಆಧಾರ ಗ್ರಂಥ ಎಂದು ಅರ್ಥ. ಈ ಮೂಲ ಆಧಾರ ಗ್ರಂಥಗಳಲ್ಲಿ ಮೊದಲನೆಯದೇ ಉಪನಿಷತ್ತುಗಳು. ಇದನ್ನು ಶ್ರುತಿ ಪ್ರಸ್ಥಾನವೆಂದೂ ಕರೆಯುವರು. ಇದು ನೇರವಾಗಿ ದೇವವಾಣಿಯೆಂದು ನಂಬಿಕೆ. ಹಾಗಾಗಿ ಇದು ಅಪೌರುಷೇಯ. ಎರಡನೆಯ ಪ್ರಸ್ಥಾನ ಗ್ರಂಥ ಭಗವದ್ಗೀತೆ. ಇದನ್ನು ಸ್ಮೃತಿ ಪ್ರಸ್ಥಾನ ಎನ್ನುತ್ತಾರೆ. ನ್ಯಾಯಪ್ರಸ್ಥಾನನೆಂಬ ಮೂರನೆಯ ಪ್ರಸ್ಥಾನ ಗ್ರಂಥವೆಂದರೆ ಬ್ರಹ್ಮಸೂತ್ರಗಳು. ಇದು ಉಪನಿಷತ್ತುಗಳಿಗೆ ತಾರ್ಕಿಕ ತಳಹದಿಯನ್ನು ನೀಡುತ್ತದೆ. ನನ್ನ ಕೈಯ್ಯಲ್ಲಿದ್ದ ಪುಸ್ತಕ ಮೊದಲ ಪ್ರಸ್ಥಾನ ಗ್ರಂಥದ ಜೊತೆಗೆ ವೇದಗಳ ಬಗ್ಗೆಯೂ ಸಹಾ ಕಿರಿಯರಿಗೆ ತಿಳಿಯಹೇಳುವ ಒಂದು ಪ್ರಯತ್ನವಾಗಿತ್ತು. ಹಾಗಾಗಿ ಇದನ್ನು ಹೈವೈರ್ ಆ್ಯಕ್ಟ್ ಎಂದು ನಾನು ಕರೆದಿದ್ದರಲ್ಲಿ ಉತ್ಪ್ರೇಕ್ಷೆ ಏನೂ ಇಲ್ಲ ಅಂದುಕೊಂಡೇ ಓದಲು ಪ್ರಾರಂಭಿಸಿದೆ. ಈ ಲೇಖಕಿಯ ಎಲ್ಲ ಪುಸ್ತಕಗಳಂತೆ ಇದೂ ಸಹಾ ಒಂದೇ ಓದಿನಲ್ಲಿ ಮುಗಿಯಿತು.

ಮಕ್ಕಳಿಗೆ ವೇದಾಂತದಂತಹ ವಿಷಯಗಳನ್ನು ತಿಳಿಯಹೇಳಬೇಕಾದರೆ ಬರೆಯುವ ಶೈಲಿ, ಬಳಸುವ ದೃಷ್ಟಾಂತಗಳು, ಉಪಯೋಗಿಸುವ ಭಾಷೆ ಇವೆಲ್ಲಾ ಅತಿ ಮುಖ್ಯ. ಅಲ್ಲದೇ ಉಪನಿಷತ್ತುಗಳಲ್ಲಿ ಆಖ್ಯಾಯಿಕೆಯ ರೂಪದಲ್ಲಿ ಬರುವ ಕಥೆಗಳನ್ನು ಸ್ವಾರಸ್ಯವಾಗಿ ಹೇಳುವುದರಿಂದ ಕಿರಿಯರ ಗಮನವನ್ನು ಓದಿನ ಕಡೆ ಸೆಳೆಯುವುದು ಸುಲಭವಾದೀತು. ರೂಪಾ, ಈ ಪ್ರಯತ್ನದಲ್ಲಿ ಅಸಾಧಾರಣ ಯಶಸ್ಸನ್ನು ಗಳಿಸಿರುವುದು ಈ ಪುಸ್ತಕದ ಬಹು ಮುಖ್ಯ ಹೆಗ್ಗಳಿಕೆ.

ನಾನ್ನೂರಕ್ಕೂ ಹೆಚ್ಚು ಪುಟಗಳಿರುವ ಈ ಪುಸ್ತಕವನ್ನು ಕುರಿತು ಬಹು ವಿವರವಾಗಿ ಬರೆಯಹೊರಟರೆ ಅದೇ ಒಂದು ಕಿರುಹೊತ್ತಗೆಯಾದೀತು. ಹಾಗಾಗಿ ನನಗೆ ಚೆನ್ನ ಅನ್ನಿಸಿದ ಹಲವು ಅಂಶಗಳನ್ನು ಸಂಕ್ಷಿಪ್ತವಾಗಿ ತಿಳಿಸುವೆ. ಇದನ್ನು ಓದಿದ ಮೇಲೆ ನಿಮಗೆ ಪುಸ್ತಕವನ್ನು ಕೊಂಡು ಓದುವ ಮನಸ್ಸಾದರೆ ಈ ಕಿರುಪರಿಚಯದ ಉದ್ದೇಶ ನೆರವೇರಿದಂತೆ.

ಪುಸ್ತಕವನ್ನು ಕೈಗೆತ್ತಿಕೊಂಡಾಗ ಮೊದಲ ಪುಟದಲ್ಲೇ ಈ ಪುಸ್ತಕದ ಅರ್ಪಣೆಯ ಸಾಲುಗಳು ಕಾಣಸಿಗುತ್ತವೆ.

‘‘ಈ ಪುಸ್ತಕದ ಎಲ್ಲ ಓದುಗರಿಗೆ,

ಮಾನವತ್ವವನ್ನು ಮೆರೆಯುವುದರಲ್ಲೇ ಸಂತುಷ್ಟರಾಗಬೇಡಿ,

ನಿಮ್ಮ ಸ್ವಸ್ವರೂಪ ದೇವರೆಂಬುದನ್ನು ಕಂಡುಕೊಳ್ಳಿ’’

ಈ ಸಾಲುಗಳನ್ನು ಓದಿದ ಮೇಲೆ ಪುಸ್ತಕದ ಲೇಖಕಿ ಒಂದು ಭದ್ರ ಬುನಾದಿಯ ಮೇಲೆ ತನ್ನ ಬರಹವನ್ನು ಪ್ರಾರಂಭಿಸಿರುವುದನ್ನು ಕಂಡು ಎಷ್ಟೋ ಸಮಾಧಾನವಾಯಿತು.

ಈ ಪುಸ್ತಕದ ಒಂದು ಮುಖ್ಯ ವಿಶೇಷ ಗುಣವೆಂದರೆ ಅದರ ಲೈಟ್ ಹಾರ್ಟೆಡ್ ಶೈಲಿ. ಇಲ್ಲಿ ಪಂಚಕೋಶ ವಿವೇಕವನ್ನು ಒಂದರೊಳಗೊಂದು ಹುದುಗಿರುವ ರಷ್ಯದ ಮಟ್ರ್ಯೋಷ್ಕಾ ಬೊಂಬೆಗೆ ಹೋಲಿಸಿರುವುದನ್ನು ಕಾಣಬಹುದು. ಶಾಂತಿ ಮಂತ್ರಗಳು ಸಾಮ್ ಫಾರ್ ಕಾಮ್ ಆದರೆ, ಮೂರು ಯಜ್ಞಗಳಾದ ಅಶ್ವಮೇಧ, ರಾಜಸೂಯ ಮತ್ತು ಸೋಮಗಳು ಆಸಮ್



ಥ್ರೀಸಮ್ ಆಗುತ್ತವೆ. ಜಗತ್ ಸೃಷ್ಟಿಯ ಬಗ್ಗೆ ಋಗ್ವೇದದಲ್ಲಿ, ಹಿರಣ್ಯಗರ್ಭವೇ ಮೊದಲಾಗಿ ಅನೇಕ ವಿವರಣೆಗಳಿವೆ. ಈ ಅಧ್ಯಾಯದ ಪ್ರಾರಂಭದಲ್ಲಿ ಕೆಳಗಿನ ಎರಡು ಉಲ್ಲೇಖನಗಳಿವೆ.



''ಇವು ನನ್ನ ಜೀವನದ ಹಾದಿಯನ್ನು ನಿರ್ಧರಿಸಿರುವ ನಿಯಮಗಳು. ನಿಮಗೆ ಇವು ಇಷ್ಟವಾಗದಿದ್ದರೆ, ಬೇರೇ ಹಲವು ನಿಯಮಗಳನ್ನು ಸೂಚಿಸಬಲ್ಲೆ'' –ಗ್ರೌಚೋ ಮಾರ್ಕ್ಸ್ ಅಮೆರಿಕೆಯ ಖ್ಯಾತ ನಗೆಗಾರ.

''ಇವು ನಮ್ಮ ಜಗತ್ ಸೃಷ್ಟಿಯ ವಿವರಗಳು. ನಿಮಗೆ ಇವು ಇಷ್ಟವಾಗದಿದ್ದರೆ ನಮ್ಮಲ್ಲಿ ಬೇರೆ ವಿವರಗಳೂ ಇವೆ'' – ಋಗ್ವೇದ.

ವೇದ ಉಪನಿಷತ್ತುಗಳಂತಹ ಗಂಭೀರ ವಿಷಯಗಳನ್ನು, ಅವುಗಳ ಸಂದೇಶಕ್ಕೆ ಎಳ್ಳಷ್ಟೂ ಅಪಚಾರವಾಗದಂತೆ ಈ ಲಘು ಶೈಲಿಯನ್ನು ಬಳಸಿರವುದು ಲೇಖಕಿಯ ಹೆಚ್ಚುಗಾರಿಕೆ.

ನಚಿಕೇತನ ಕಥೆ, ಸತ್ಯಕಾಮ ಜಾಬಾಲಿಯ ವೃತ್ತಾಂತ, ಜನಕ ಮಹಾರಾಜನ ಕೆಟ್ಟ ಕನಸು, ಶ್ವೇತಕೇತುವಿನ ಶಿಷ್ಯವೃತ್ತಿ ಇವೆಲ್ಲವನ್ನೂ ಬಹು ಆಸಕ್ತಿ ಮೂಡಿಸುವಂತೆ ಇಂದಿನ ಪೀಳಿಗೆಯ ಜೀನ್ಸ್ ಧಾರಿ, ಮಾಲ್ ವಿಹಾರಿ ಕಿರಿಯರಿಗೆ ಹೇಳುವ ಹಿರಿಯ ಸವಾಲನ್ನು ಈ ಪುಸ್ತಕ ಬಹು ಯಶಸ್ವಿಯಾಗಿ ನಿರ್ವಹಿಸಿದೆ ಎಂದು ಖಂಡಿತವಾಗಿ ಹೇಳಬಹುದು.

ಈ ಪುಸ್ತಕದ ಬಗ್ಗೆ ನ್ಯೂಯಾರ್ಕಿನ ವೇದಾಂತ ಸೊಸೈಟಿಯ ನಿರ್ದೇಶಕ ಸ್ವಾಮಿ ಸರ್ವಪ್ರಿಯಾನಂದ ಪುರಿಯವರು ಹೇಳಿರುವ ಮಾತುಗಳನ್ನು ನೋಡಿ.

''ನೀವು ಮಾಡುತ್ತಿರುವ ಈ ಶ್ಲಾಘನೀಯ ಕಾರ್ಯ ಸಮಾಜಕ್ಕೆ ಮಾತ್ರವಲ್ಲ, ನಿಮ್ಮ ಅಧ್ಯಾತ್ಮ ಸಾಧನೆಗೂ ಸಹಾಯಕರ ವೇದಾಂತದ ಅಧ್ಯಯನ ಮತ್ತು ಪ್ರವಚನ ಒಂದು ಅತ್ಯಂತ ಉಪಯುಕ್ತ ನಿದಿಧ್ಯಾಸನ ಮಾರ್ಗವೆಂಬುದು ನನ್ನ ಅನುಭವ.''




ಶ್ರೀಮತಿ ರೂಪಾ ಪೈ ಅವರ ನಿದಿಧ್ಯಾಸನ ಇದೇ ರೀತಿಯಲ್ಲಿ ನಿರಂತರವಾಗಿ ಸಾಗಲಿ ಎಂದು ಹಾರೈಸುವೆ. ■

# ಕ್ರಿಸ್ಟಾಫ್ ನೀಮನ್ - ಅಸಾಮಾನ್ಯ ಚಿತ್ರಕಾರ

*ಪರಿಚಯಿಸಿದವರು :* • **ಶಿವಕುಮಾರ್**

ಕ್ರಿಸ್ಟಾಫ್ ನೀಮನ್ ಒಬ್ಬ ಖ್ಯಾತ ಚಿತ್ರಕಾರ. ಅಮೆರಿಕೆಯ ಜನಪ್ರಿಯ ನಗೆ ಪತ್ರಿಕೆ ನ್ಯೂಯಾರ್ಕರ್ ಈತನನ್ನು ತನ್ನ ಸ್ಟಾಫ್ ಆರ್ಟಿಸ್ಟ್ ಆಗಿ ಆರಿಸಿಕೊಂಡಿದೆ. ಈತ ಹುಟ್ಟಿದ್ದು ಜರ್ಮನಿಯ ವೈಬ್ಲಿಂಗೆನ್ನಲ್ಲಿ. ಸ್ಟಟ್ ಗರ್ಟ್‌ನ ಅಕಾಡೆಮಿ ಆಫ್ ಫೈನ್ ಆರ್ಟ್ಸ್ ನಲ್ಲಿ ಈತ ಚಿತ್ರಕಲೆಯಲ್ಲಿ ಪರಿಣತಿಯನ್ನು ಗಳಿಸಿದ. 1997ರಲ್ಲಿ ಈತ ನ್ಯೂಯಾರ್ಕಿಗೆ ವಲಸೆ ಬಂದ. ಈತನ ಚಿತ್ರಗಳು, ನ್ಯೂಯಾರ್ಕರ್, ಅಟ್ಲಾಂಟಿಕ್ ಮಂಥ್ಲಿ, ನ್ಯೂಯಾರ್ಕ್ ಟೈಮ್ಸ್ ಮ್ಯಾಗಜೀನ್ ಇತ್ಯಾದಿಗಳಲ್ಲಿ ಬೆಳಕು ಕಂಡಿವೆ. ಅಮೆರಿಕನ್ ಇನ್ಸ್ಟಿಟ್ಯೂಟ್ ಆಫ್ ಗ್ರಾಫಿಕ್ ಆರ್ಟಿಸ್ಟ್ ಈತನನ್ನು ಸನ್ಮಾನಿಸಿದೆ. 2010ರಲ್ಲಿ ಈತನನ್ನು ಆರ್ಟ್ ಡೈರೆಕ್ಟರ್ಸ್ ಹಾಲ್ ಆಫ್ ಫೇಮ್‌ಗೆ ಆಯ್ಕೆಮಾಡಲಾಯಿತು.

ದಿನಬಳಕೆ ವಸ್ತುಗಳನ್ನು ಒಂದು ವಿಶೇಷ ದೃಷ್ಟಿಕೋನದಿಂದ ನೋಡಿ ಅವುಗಳಿಂದ ಒಂದು ಸೃಜನಶೀಲ ಕೃತಿಯನ್ನು ಹೊರಹೊಮ್ಮಿಸುವುದು ಕ್ರಿಸ್ಟಾಫ್ ನ ಚಾತುರ್ಯ. ಈ ಕೆಳಗೆ ಅವನ ಇಂತಹ ಹಲವು ಕೃತಿಗಳನ್ನು ನೀಡಿದೆ. ಇವುಗಳೆಲ್ಲಾ ಕ್ಯಾಪ್ಷನ್‌ಲೆಸ್ ಕಾರ್ಟೂನ್ಸ್, ಒಮ್ಮೆ ಕಣ್ಣಾಡಿಸಿ..























ಒಂದು ಬಹಿರಂಗ ಪತ್ರ

# ಸರಸ್ವತಿಯುತ ವಿಜ್ಞಾನ ಪ್ರಚಂಡ......ರಿಗೆ.

• ರಾ. ಶಿ.

ಮಹಾಸ್ವಾಮೀ,

ತಾವು ಅತ್ಯಾಧುನಿಕ ವಿಜ್ಞಾನ ಪರಿಶೋಧನೆಗಳನ್ನು ನಡೆಸಿ, ಸಮಷ್ಟಿಯ ರಹಸ್ಯಗಳನ್ನೆಲ್ಲಾ ಬೆತ್ತಲೆ ಕಂಡಿದ್ದೀರಿ ಅಂತ ಕೇಳಿ ಬಹಳ ಸಂತೋಷವಾಯಿತು. ಆದರೂ ನಮ್ಮಂತಹ ಪಾಮರರಿಗೆ, ಪೇಟೆಯಲ್ಲಿ ವಾಸಿಸುವ ಪಾಮರರಿಗೆ ಅಷ್ಟಾಗಿ ನಿಮ್ಮಿಂದ ಇನ್ನೂ ಪ್ರಯೋಜನವಾಗಿಲ್ಲ. ನಮ್ಮ ಕಷ್ಟಗಳೇನೆಂಬುದು ನಿಮಗೆ ತಿಳಿಯದೇ ಇರುವುದೇ ಇದಕ್ಕೆ ಕಾರಣ ಎಂದೆಂದುಕೊಂಡು ಈ ಪತ್ರ ಬರೆಯುತ್ತಿದ್ದೇನೆ. ನಿಮ್ಮ ಸ್ನೇಹಿತ ವಿಜ್ಞಾನ ಮಾರ್ತಾಂಡರಿಗೆಲ್ಲಾ ಈ ಕಾಗದವನ್ನು ಷರಾ ಸೂಚಿಸಿ ಕಳಿಸಿದರೆ ಲೋಕ ಕಲ್ಯಾಣವಾಗುತ್ತದೆ. ನಿಮ್ಮ ಮುಂದಿನ ಕಾರ್ಯಕ್ರಮಕ್ಕೆ ಈ ಪಟ್ಟಿಯನ್ನು ಉಪಯೋಗಿಸಿಕೊಂಡರೆ ಚೆನ್ನು.

**1. ಒಂದು ಲೋಟ:-** ಮಾಣಿ ಬೆರಳನ್ನು ಒಳಕ್ಕೆ, ಹಾಕಿದ ಕೂಡಲೇ ಲೋಟದ ಅಂಚು ಆ ಬೆರಳನ್ನು ಕಟಕಾರಿಸಬೇಕು.

**2. ಹಾಲಿನ ಪಾತ್ರೆ:-** ನೀರು ಹೆಚ್ಚಾದ ಹಾಲು ಒಳಕ್ಕೆ ಬಿದ್ದ ಕೂಡಲೇ ಪಾತ್ರೆಯು ಕೆಂಪಾಗಿ ಲಬೋ ಲಬೋ ನಾದ ಹೊರಡಬೇಕು.

**3. ಹೊಸ ತಕ್ಕಡಿ:-** ವ್ಯಾಪಾರಸ್ಥ ಅದನ್ನು ಕಿರುಬೆರಳಿಂದ ಅನ್ಯಾಯವಾಗಿ ಅಮುಕಿದಾಗ ಅಲ್ಲೇ ಚೇಳು ಕುಟುಕಿದಂತೆ ಕುಟುಕುವ ತ್ರಾಸು.

**4. ಟೋಪಿ:-** ಕೆಟ್ಟ ಯೋಚನೆ ತಲೆಯೊಳಕ್ಕೆ ಬಂದ ಕೂಡಲೇ ಕಪ್ಪಾಗಿ ಹೊರಬೀಳುವಂತಹ ಬಿಳಿ ಟೋಪಿ.

**5. ಉಂಗುರ:-** ಹಿಂಬದಿಯಲ್ಲಿ ಹಣ ತೆಗೆದುಕೊಂಡಾಗ, ಲೋ! ಲೋ!! ಲೋ!!! ಅಂತ ಕೂಗಿಕೊಳ್ಳುವಂತಹ ಉಂಗುರ.

**6. ಮೈಕ್:-** ಭಾಷಣಕಾರ ತಲೆಯೆಲ್ಲಾ ಮಾತನಾಡಲಾರಂಭಿಸಿ ಕಡೆಗೆ ನೀತಿಬೋಧೆ ಮಾಡಲು ಶುರುಮಾಡಿದಾಗ, ಭಾಷಣಕಾರನ ಮೂಗನ್ನು ಹಿಡಿದು ಎರಡು ಕೆನ್ನೆಗೂ ರಪ್ಪಂತ ರಾಚುವಂತಹ ಮೈಕ್.

**7. ಛತ್ರಿ:-** ಪರಪುರುಷ ಹಾಗೂ ಪರಸ್ತ್ರೀ ಸ್ಪರ್ಶವಾಗುತ್ತಿದ್ದ ಕೂಡಲೇ ಹಿಡಿ ಕೆಂಪೇರಿ, 'ಬಿಡಿ ಅಂದ್ರೆ' ಅಂತ ಕೂಗುವ ಛತ್ರಿ.



**8. ಚಪ್ಪಲಿ:-** ಸಭೆ ಸಮಾರಂಭದಿಂದ ಹೊರಗೆ ಬಂದಾಗ ಕಂಡವರ ಚಪ್ಪಲಿಗೆ ಕಾಲಿಟ್ಟರೆ, ಕೂಡಲೆ ಕಡಿಯುವಂತಹ ಚಪ್ಪಲಿ.

**9. ಜಾತಕ:-** ಜ್ಯೋತಿಷಿಯು ಮಗುವಿನ ಆರ್ಥಿಕ ಅಂತಸ್ತು ನೋಡಿ, ಅಧಿಕ ಫಲ ಬರೆಯಲು ಯತ್ನಿಸಿದಾಗ, ನಕ್ಷತ್ರಗಳು ಅವನಿಗೆ ಕನಸಿನಲ್ಲಿ ಕಾಣುವಂತೆ ಮಾಡುವ ಹೋರಾರಾಶಿ.

**10. ಫೌಂಟನ್‌ಪೆನ್:-** ಪ್ರಶ್ನೆ ಪತ್ರಿಕೆಗಳು ಕೈಗೆ ಬಂದಾಗ, ಈ ಪೆನ್ನನ್ನು ಕಾಗದಕ್ಕೆ ಮುತ್ತಿಡಿಸಿದರೆ ಅದೇ ಸ್ವಯಂ ಬರಹಗಾರನಂತೆ ಬರೆಯುವ ಫೌಂಟನ್‌ಪೆನ್.

ಈ ಹತ್ತು ವಿಷಯಗಳಲ್ಲಿ ಸಂಶೋಧನೆ ನಡೆಸಿ ಕೃತಕಾರ್ಯರಾದರೆ ಇಂದಿನ ಜನಾಂಗಕ್ಕೆ ಬೆನ್ನು ಬಲ ಕೊಟ್ಟಂತೇ ಆಗುತ್ತದೆ.

ಯೋಚಿಸಿ ನೋಡಿ!

ನಿಮ್ಮವ,

**ರಾ. ಶಿ.**

**ವಿ. ಸೂ. --**


ಓದುಗರಿಗೆ:-

ಅಯ್ಯಾ! ವಾ! ಅಮ್ಮಾ!

ನಿಮಗೆ ಈ ತೆರನಾದ, ಜನಜೀವನಕ್ಕೆ ಸಾರ್ಥಕವಾದ ಯೋಚನೆಗಳು ಹೊಳೆದರೆ, ಬೇರೆ ಕೆಲಸ ಇಲ್ಲದಿದ್ದರೆ, ಷಾಯಿ ಕಾಗದ ಇದ್ದರೆ, ನನಗೆ ಬರೆದು ಕಳಿಸಿ. ನಾನದನ್ನು ವಿಜ್ಞಾನ ಮಾರ್ತಾಂಡರಿಗೆ ಕಳಿಸಿ ಇಹಲೋಕದ ಕಷ್ಟವನ್ನು ಪರಿಹರಿಸಲು ಸಾಕ್ಷಾತ್ ಶ್ರೀಮನ್ನಾರಾಯಣನಂತೆ ಯತ್ನಿಸುತ್ತೇನೆ.

ನಿಮ್ಮವ,

**ಸಂಪಾದಕ.** ■






# ಡಿಜಿಟಲ್ ಡಿಟಾಕ್ಸ್

**• ನಂದಿನಿ ಕಾಪಡಿ**

ಎಷ್ಟೋ ದಿನಗಳ ನಂತರ ಗೆಳತಿ ರೇಖಾಳ ಫೋನ್ ಬಂದಿತ್ತು . ತುಂಬಾ ಬೇಜಾರು ಮಾಡಿಕೊಂಡೇ ಮಾತಾಡಿದಳು . ಆದದ್ದು ಏನು ಎಂದರೆ ಅವಳ 18 ವರ್ಷದ ಮಗಳು ನೇಹಾ ಈಗ ಒಂದು ವಾರದಿಂದ ಮಾತೇ ಆಡುತ್ತಿಲ್ಲ. ಯೂನಿವರ್ಸಿಟಿ ಈಗ ಕ್ರಿಸ್ಮಸ್ ರಜಕ್ಕೆಂದು ಮುಚ್ಚಿರುವುದರಿಂದ ವಿದ್ಯಾಭ್ಯಾಸಕ್ಕೇನೂ ತೊಂದರೆಯಿಲ್ಲ. ಆದರೆ ತುಂಬಾ ಚೂಟಿಯಾಗಿದ್ದ ಮತ್ತು ಸದಾ ಗೆಲುವಾಗಿದ್ದ ಹುಡುಗಿ ಹೀಗೇಕಾದಳು ? ತಾಯಿ ತಂದೆ ಹೆದರಿಕೊಂಡು ಏನಮ್ಮ ಯಾಕೆ ಹೀಗೆ ಮೌನವಾಗಿದ್ದೀಯ ? ಮೈ ಸರಿಯಿಲ್ಲವೇ ಅಥವಾ ವಿದ್ಯಾಭ್ಯಾಸದ ಹೊಣೆಯೇ? ಅಥವಾ ಬಾಯ್ ಫ್ರೆಂಡ್ ಎಂದು ಯಾವುದೇ ಯುವಕನ ಸ್ನೇಹವಾಗಿದೆಯೇ/ಬಾಯ್ ಫ್ರೆಂಡ್ ಕೈ ಕೊಟ್ಟನೆ ಅಥವಾ ಬೇರೆ ಏನಾದರೂ ಕಾಡುತ್ತಿದೆಯೇ ಎಂದು ಕೇಳಿದಾಗ ಹುಡುಗಿ ಪೆಚ್ಚಾಗಿ ನೋಡುತ್ತಾ ನಾನು ಈ ಮನೆ ಬಿಟ್ಟು ಹೋದರೆ ಸಾಕು ಬಾಯ್ ಫ್ರೆಂಡ್ ಅಂತೆ , ವಿದ್ಯಾಭ್ಯಾಸದ ಒತ್ತಡವಂತೆ ಎನ್ನುತ್ತಾ ಕೋಪಮಾಡಿಕೊಂಡಳು. ಇಂದು ಬೆಳಿಗ್ಗೆ ಪೆಚ್ಚಾಗಿ ಕೂತಿದ್ದಳು . ಮತ್ತೆ ನಾನು ಏನಮ್ಮ ಯಾಕೆ ಹೇಗಿದ್ದಿಯಾ ಎಂದೆ ನನ್ನ ತಲೆ ಸಂಪೂರ್ಣವಾಗಿ ಖಾಲಿ ಯಾಗಿದೆ . ಏನು ಮಾಡಬೇಕೆಂದು ಗೊತ್ತಾಗುತ್ತಿಲ್ಲ ಎನ್ನುತ್ತಾ ಮುಖ ಸಪ್ಪೆ ಮಾಡಿಕೊಂಡಳಂತೆ. ಸರಿ ತಂದೆ ತಾಯಿ ಅವಳ ಗೆಳತಿಯರ ಹತ್ತಿರ ವಿಚಾರಿಸಿದಾಗ, ಅವಳು ನಮ್ಮ ಹತ್ತಿರವೂ ಮಾತಾಡುತ್ತಿಲ್ಲ ಎಂದು ಉತ್ತರ ಬಂದಿತಂತೆ . ಮುದ್ದು ಮಗಳಿಗೆ ಅವಳಿಗೆ ಇಷ್ಟ ಆಗುವ ತಿಂಡಿ ಮಾಡಿ ಕೊಟ್ಟರೆ ಮಾತಾಡದೆ ತಿಂದು ತನ್ನ ರೂಮಿಗೆ ಹೋಗಿ ಮಲಗಿಬಿಡುತ್ತಾಳಂತೆ . ದಯವಿಟ್ಟು ನಂಗೆ ಏನಾದರೂ ಉಪಾಯ ಸೂಚಿಸು ಎಂದು ಅತ್ತುಕೊಂಡಳು.

ನಂಗೂ ಆಶ್ಚರ್ಯ. ನೇಹಾ ಆಟ ಪಾಠಗಳಲ್ಲಿ ಮುಂದು . ತುಂಬಾ ಚೆನ್ನಾಗಿ ಶಾಸ್ತ್ರೀಯ ಸಂಗೀತ ಹಾಡುವಳು. ಯಾವಾಗಲೂ ಪ್ರಸನ್ನವಾಗೇ ಇರುವಳು .ಹಾಗಾದರೆ ಏನಿರಬಹುದು ಕಾರಣ ? ಮಾರನೆಯ ದಿನ ಮತ್ತೆ ರೇಖಾಳ ಫೋನು ಬಂತು. ಕುಟುಂಬದ ಡಾಕ್ಟರ್ ಅವಳನ್ನು ನೋಡಿ ಸ್ವಲ್ಪ ಪಾಠದ ಒತ್ತಡದಿಂದ ವಿರಾಮ ಸಿಕ್ಕರೆ ಸಾಕು . ಆರೋಗ್ಯಕ್ಕೆ ಭಯ ಪಡುವ ಕಾರಣವಿಲ್ಲ ಎಂದು ವಿಟಮಿನ್ ಗುಳಿಗೆ ಬರೆದು ಕೊಟ್ಟರಂತೆ .

ಎಂಟು ದಿನಗಳ ನಂತರವೂ ನೇಹಾ ಪೆಚ್ಚಾಗಿಯೇ ಕುಳಿತಾಗ ಅವಳನ್ನು ಮಾನಸಿಕ ತಜ್ಞರ ಹತ್ತಿರ ಕರೆದುಕೊಂಡು ಹೋಗುವುದು ಅಂದುಕೊಂಡು ತಾಯಿ ತಂದೆಯರು ಮಾತಾಡಿಕೊಂಡಾಗ ಮಾನಸಿಕವಾಗಿ ನನಗೇನೂ ಆಗಿಲ್ಲ ಎಂದು ಮತ್ತೆ ಜೋರಾಗಿ ಕಿರಿಚಿದಳಂತೆ. ಕೆಲಸದ ಹುಡುಗಿ ಪಾರ್ವತಿ ದೃಷ್ಟಿ ತೆಗೆಯೋಣ ಎನ್ನುತ್ತಾ ಕೆಜಿ ಉಪ್ಪು, ಕೆಜಿ ಕೆಂಪು ಮೆಣಸಿನಕಾಯಿ, ಅರ್ಧ ಕೆಜಿ ಕರಿಮೆಣಸು ಮತ್ತು ಹಂಚಿ ಕಡ್ಡಿ ಪರಕೆ ತಂದು ಹುಡಿಗಿಯ ಸುತ್ತ ತಿರುಗುತ್ತ 15 ನಿಮಿಷಗಳು ದೃಷ್ಟಿ ತೆಗೆದಳಂತೆ. ನೇಹಾ ಕೋಪಗೊಂಡು ಒಳಗೆ ಹೋಗಿ ಮಲಗಿಬಿಟ್ಟಳಂತೆ. ಈಗ ಅಳುವ ಸರದಿ ರೇಖಾಳದು ! ಪ್ರತಿ ದಿನ ಹತ್ತು ಸಲ ಫೋನ್ ಮಾಡಿ ಜಾತಕ ತೋರಿಸಿ ಪರಿಹಾರ ಮಾಡಿಸಲೇ ? ಅಥವಾ ಹೊರಗೆಲ್ಲಾದರೂ ಕರೆದುಕೊಂಡು ಹೋಗಲೇ ಎಂದು ಕೇಳುವಳು .



ನನಗಿಂತ ರೇಖಾ ವಯಸ್ಸಿನಲ್ಲಿ ಚಿಕ್ಕವಳು ಆದರೆ ಯಾವುದೋ ಒಂದು ಕಾರ್ಯಕ್ರಮದಲ್ಲಿ ಅವಳ ಪರಿಚಯವಾಗಿ ಫೋನ್ ಮತ್ತು ವಾಟ್ಸಪ್ ಮೂಲಕ ಗೆಳೆತನ ಬೆಳೆದು ಹೆಮ್ಮರವಾಗಿತ್ತು. ನನಗೆ ರೇಖಾಳಿಗೆ ಸಮಾಧಾನಕ್ಕಿಂತ ಸಮಸ್ಯೆಯ ಪರಿಹಾರ ಸೂಚಿಸುವ ಪ್ರಬಲ ಇಚ್ಛೆ. ಆದರೆ ನಾನು

ಡಾಕ್ಟರ್ ಅಲ್ಲವಲ್ಲ! ಮನೋ ವಿಜ್ಞಾನವೂ ಬರುವುದಿಲ್ಲವಲ್ಲ! ಆದರೆ ನೋಡಿ, ಇಚ್ಛೆ ಪ್ರಬಲವಾದಾಗ ಬ್ರಹ್ಮಾಂಡವೇ ಸಹಾಯಕ್ಕೆ ಬರುತ್ತದೆ ಎನ್ನುತ್ತಾರಲ್ಲ ಹಾಗಾಯಿತು!

ನಿವೃತ್ತಿಯ ನಂತರ ನನ್ನ ಮತ್ತು ಪತಿದೇವರ ಆಸಕ್ತಿಗಳು ತುಂಬಾ ಬೇರೆಯಾದರೂ ಟಿವಿ ನೋಡುತ್ತಾ ಕುಳಿತು ದೇಶೀ ಹಾಗೂ ವಿದೇಶಿ ಚಾನಲ್ಲುಗ್ಳನ್ನು ನೋಡುತ್ತಿದ್ದರೆ ಬರೀ ಸಮಾಚಾರ ಏಕೆ ಹೊಸ ವಿಷಯಗಳ ಪರಿಚಯವೂ ಆಗುವುದು. ಮನೋರಂಜನೆ ಕಡಿಮೆ ಇಲ್ಲ. ಜಪಾನಿನ ಕಾರ್ಯಕ್ರಮ ಅದರಲ್ಲೂ ಜಪಾನ್ ದೇಶದ ಪ್ರಮುಖ ಕುಸ್ತಿ ಸುಮೋ ನೋಡುವುದು ಮಾತ್ರ ಇಬ್ಬರಿಗೂ ಇಷ್ಟವಾಗಿಬಿಟ್ಟಿತ್ತು . ಅದೇ ಅಲ್ಲದೆ ಜಪಾನ್ ದೇಶದ ಬೇರೆ ಬೇರೆ ಕಾರ್ಯಕ್ರಮಗಳು ಇಷ್ಟವಾಗಿ ಒಂದು ಗಂಟೆಯಾದರೂ ಆ ಕಾರ್ಯಕ್ರಮಗಳನ್ನು ನೋಡುತ್ತಿದ್ದೆವು .

ಒಂದು ದಿನ ಚರ್ಚೆಯ ವಿಷಯವಾಗಿ ಈಗಿನ ತರುಣ ಪೀಳಿಗೆಯಲ್ಲಿ ಸ್ಮಾರ್ಟ್ ಫೋನ್ ಬಂದು ಏನೆಲ್ಲಾ ಪರಿಣಾಮ ಆಗಿವೆ ಎಂದು ಮನೋವಿಜ್ಞಾನಿಕರು ಮಾತನಾಡುತ್ತಿದ್ದರು . ಮುಖ್ಯ ಚರ್ಚೆಯ ವಿಷಯವಾಗಿ ಇಬ್ಬರು ಮನೋತಜ್ಞರು ತರುಣರಲ್ಲಿ ಹೊಸದಾಗಿ ಕಾಣಿಸಿಕೊಂಡಿರುವ ಬೇನೆ ಸೋಶಿಯಲ್ ಮೀಡಿಯಾ ಬಗ್ಗೆ ಮಾತನ್ನಾಡುತ್ತಿದ್ದರು. ವಾಟ್ಸಪ್, ಫೇಸ್ ಬುಕ್, ಇನ್‌ಸ್ಟಾಗ್ರಾಂ ತರಹ ಬೇರೆ ಬೇರೆ ಸಾಮಾಜಿಕ ಮಾಧ್ಯಮಗಳು ಮಕ್ಕಳು ಹಾಗೂ ತರುಣರಲ್ಲಿ ಅತಿಯಾಗಿ ಬಿಟ್ಟಿವೆ. ಉದಾಹರಣೆ ನೋಡಿ ಎಂದು ಹಲವಾರು ದೃಶ್ಯ ತೋರಿಸಿದರು .

ಸ್ಮಾರ್ಟ್ ಫೋನ್ ನಲ್ಲಿ ದಿನಕ್ಕೆ ಇಪ್ಪತ್ತು ಸಲ ಸೆಲ್ಫಿ ತೆಗೆದು ಅದನ್ನು ಸೋಶಿಯಲ್ ಮೀಡಿಯಾ ನಲ್ಲಿ ಅಪ್‌ಲೋಡ್ ಮಾಡಿ ಅದಕ್ಕೆ ಎಷ್ಟು ಜನ ಲೈಕ್ ಮಾಡಿದ್ದಾರೆ ಎಂದು ನಿಮಿಷಕ್ಕೆ ಹತ್ತು ಸಲ ನೋಡುವುದು .ಆ ಲೈಕ್ ಗಳಲ್ಲಿ ಎಷ್ಟು ಜನ ಗೆಳೆಯ ಗೆಳತಿಯರು ಮತ್ತು ಎಷ್ಟು ಜನ ಪರರು? ಇದರದೇ ಇನ್ನೊಂದು ಮುಖ, ಗೆಳೆಯ–ಗೆಳತಿ–ಪ್ರಸಿದ್ಧ ಸಿನಿಮಾ ನಟ ನಟಿಯರು ಅಪ್ಲೋಡ್ ಏನು ಮಾಡಿದ್ದಾರೆಂದು ನೋಡುವುದು . ಈ ಪ್ರಕ್ರಿಯೆಗೆ ಸುಮಾರು ಎರಡು ಗಂಟೆಗಳು ಕನಿಷ್ಠ ಪಕ್ಷ ಬೇಕು. ಒಂದು ವೇಳೆ ಗೆಳತಿಯ ಸೆಲ್ಫಿಯೇ ಹೆಚ್ಚು ಜನ ಲೈಕ್ ಮಾಡಿದ್ದರೆ ಒಂದು ತರಹ ಅಸೂಯೆ. ಆಮೇಲೆ ಬೇರೆ ಪೋಷಾಕಿನಲ್ಲಿ ಸೆಲ್ಫಿ ತೆಗೆದು ಮತ್ತೆ ಅಪ್ಲೋಡ್ ಮಾಡುವುದು. ಮತ್ತೆ ಅದೇ ಪ್ರಲಾಪ!

ದೃಶ್ಯ 2.ಟ್ವಿಟರ್ ನಲ್ಲಿ ಏನೇನು ನಡೆಯುತ್ತಿದೆ ಅಂತ ಕುತೂಹಲ. ಎಲ್ಲವನ್ನು ಓದಿ ಮತ್ತೆ ತಮ್ಮ ಪ್ರಕ್ರಿಯೆ ತೋರಿಸುವುದು .ಇದಕ್ಕೆ ಜಾಸ್ತಿ ಸಮಯ ಬೇಡ. ಒಂದು ಅರ್ಧ ಗಂಟೆ ಸಾಕು !

ದೃಶ್ಯ 3: ಆನ್‌ಲೈನ್ ಶಾಪಿಂಗ್.ಯಾವ ಯಾವ ಕಡೆ ಸೇಲ್ ನಡೆಯುತ್ತಿದೆ ಎಂದು ಕುತೂಹಲ. ಗೆಳೆಯ ಗೆಳತಿಯರ ಹತ್ತಿರ ಇದರ ಬಗ್ಗೆ ಚರ್ಚೆ. ಒಂದೇ ಸಾಮಾನು ಮೈಂಟ್ರಾ ನಲ್ಲಿ ಅಮೆಜಾನ್ ಗಿಂತ 30 ರೂಪಾಯಿ ಕಡಿಮೆ ಇತ್ಯಾದಿ ಇತ್ಯಾದಿ !

ಅದಲ್ಲದೆ ಚಾಟ್, ವಾಟ್ಸಪ್ ಹೀಗೆ ಸತತವಾಗಿ ಸೋಶಿಯಲ್ ಮೀಡಿಯಾ ಜತೆ ಸಂಪರ್ಕ. ಒಂದು ತರಹ ಕೃತಕ ಜೀವನ ಯಾರಿಗೂ ಪುಸ್ತಕ ಓದುವುದು ಬೇಕಿಲ್ಲ ಗೂಗಲ್ ಗುರು ಎಲ್ಲ ಮಾಹಿತಿಗೂ ಸಿದ್ಧ. ಕಂಪ್ಯೂಟರ್ ತನ್ನ ಕಟ್, ಕಾಪಿ ಪೇಸ್ಟ್ ಮೂಲಕ ಯಾರಿಗೂ ಬರವಣಿಗೆ ಬೇಡ. ತಣ್ಣಗಿನ ಹವೆಯಲ್ಲಿ ನಡೆಯುವುದು ಓಡುವುದು ಬೇಡ ಮೊಬೈಲ್ ನಲ್ಲಿ ನಾಲ್ಕಾರು ತರಹ ಆಟಗಳನ್ನು ಒಂದೇ ಸಲ ಆಡುವುದು . ಮಕ್ಕಳಿಗೆ ಕುಟುಂಬದವರೊಂದಿಗೆ ಸಂಬಂಧ ಬೇಡ. ಮೊಬೈಲ್ ಒಂದೇ ಅವರ ಆಸರೆ . ಇವೆಲ್ಲದರ ಪರಿಣಾಮ ಮಾನಸಿಕ ಬಳಿಕೆ. ಬರ್ನ್ ಔಟ್ ಎನ್ನುವ ಹೊಸ ಕಾಯಿಲೆ ! ಇದಕ್ಕೆ ಪರಿಹಾರವೇನು? ಹೊಸ ಬೇನೆಗೆ ಹಳೆಯ ಪರಿಹಾರ . ಅದೇ ಡಿಜಿಟಲ್ ಡಿಟಾಕ್ಸ್.. ಸ್ಮಾರ್ಟ್ ಫೋನುಗಳ ಉಪಯೋಗದ ಸಮಯದಲ್ಲಿ 90 ಪರ್ ಸೆಂಟ್ ಕಮ್ಮಿ ದಿನಕ್ಕೆ ಒಂದೇ ಗಂಟೆಯಷ್ಟು ಅದರ



ಉಪಯೋಗ. ಸರಿ ಸ್ವಾಮಿ ಆದರೆ ಇದನ್ನು ಕಾರ್ಯ ರೂಪದಲ್ಲಿ ತರುವುದು ಹೇಗೆ? ಅದು ಪಾಲಕರ ಕೈಯಲ್ಲಿ ಎನ್ನುತ್ತಾ ಇಬ್ಬರೂ ತಜ್ಞರು ತಮ್ಮ ಕೈ ತೊಳೆದುಕೊಂಡರು .

ನನ್ನ ಸೋಮಾರಿ ಮೆದುಳು ಒಮ್ಮೆಗೇ ಪ್ರಕಾಶಗೊಂಡು ನೇಹಾಳ ಸಮಸ್ಯೆ ಈ ರೀತಿ ಬರ್ನ್ ಔಟ್ ಇರಬಹುದೇ ಅವಳಿಗೆ ಡಿಜಿಟಲ್ ಡಿಟಾಕ್ಸ್‌ನ ಅವಶ್ಯಕತೆಯಿದೆಯೇ ? ಆಹಾ ಯುರೇಕಾ ಎಂದು ಜೋರಾಗಿಯೇ ಹೇಳಿ ಇಲ್ಲಿಂದ ಪ್ರಾರಂಭವಾಯ್ತು ನನ್ನ ಕಾರ್ಯಾಚರಣೆ . ಪತಿಯೊಂದಿಗೆ ಮೊದಲು ಸಮಸ್ಯೆಯ ಕೂಲಂಕಷ ವಿಶ್ಲೇಷಣೆ . ಆ ಪ್ರಕಾರ ನೇ ಹಾಳನ್ನು ದೂರದ ಊರಿಗೆ ಸಮಯ ಕಳೆಯಲೆಂದು ಕರೆದುಕೊಂಡು ಹೋಗುವುದು. ಅಲ್ಲಿ ಸ್ಮಾರ್ಟ್ ಫೋನಿಗೆ ಅವಕಾಶವೇ ಇರಬಾರದು. ನನ್ನ ಪತಿ ಮೌನವಾಗಿಯೇ ಇದ್ದರು.

ರೇಖಾಳಿಗೆ ಫೋನಾಯಿಸಿದೆ .ನನ್ನ ಮಾತಿನ ವೈಖರಿ ಮತ್ತು ನಾನು ಹೇಳಿದ ವಿಷಯದ ಸಮಂಜಸತೆ ಮತ್ತು ನೇಹಾಳ ಬಗ್ಗೆ ನನಗಿರುವ ಪ್ರೀತಿ ಎಲ್ಲವನ್ನೂ ಸೇರಿಸಿ ರೇಖಾ ನೋಡೋಣ ನಿನ್ನದೇ ಪರಿಹಾರ ಮೊದಲು ಮಾಡೋಣ ಎಂದವಳೇ ತನ್ನ ಪತಿಯ ಹತ್ತಿರ ಮಾತಾಡಲು ಹೋದಳು. ಹತ್ತೇ ನಿಮಿಷಗಳಲ್ಲಿ ರೇಖಾ ಫೋನ್ ಮಾಡಿ ಆ ಊರಿನಲ್ಲಿ ಮೊಬೈಲ್ ನಡೆಯಲು ಸಾಧ್ಯವಾಗದಿರುವುದು. ಅಂದರೆ ವೈಫೈ ಇಲ್ಲ. ಟಿವಿ ಸಿಗ್ನಲ್ ಸಿಗಬಾರದು . ಆದರೆ ಲ್ಯಾಂಡ್‌ಲೈನ್ ಇರಬೇಕು . ನಿಲ್ಲಲು ಸರಿಯಾದ ಹೋಟೆಲ್ ಅಥವಾ ಗೆಸ್ಟ್ ಹೌಸ್ ಸಿಗಬೇಕು . ಸರಿಯಾದ ನೀರು ಮತ್ತು ವಿದ್ಯುತ್ ಶಕ್ತಿ ಇರಬೇಕು. ಅಲ್ಲಲ್ಲೆ ಓಡಾಡಲು ಟ್ಯಾಕ್ಸಿ ಸಿಗಬೇಕು ಹತ್ತಿರದಲ್ಲಿ ಡಾಕ್ಟರ್ ಇರಬೇಕು ಇತ್ಯಾದಿ ಇತ್ಯಾದಿ. ನೀನೇ ಅಂತಹ ಜಾಗ ಹುಡುಕಿಕೊಡು . ನಾವು ಖಂಡಿತ ನೇಹಾಳನ್ನು ವಿರಾಮಕ್ಕೆಂದು ಕರೆದುಕೊಂಡು ಹೋಗುತ್ತೀವಿ ಇವುಗಳು ರೇಖಾ ನನ್ನ ಮುಂದೆ ಇಟ್ಟ ಕಂಡೀಶನ್ ಗಳು . ಯಾಕೋ ಸಹಾಯ ಮಾಡಲು ಹೋದವಳ ಮುಂದೆ ಗೂಗ್ಲಿ ಎಸೆದಳು ನಿನ್ನ ಗೆಳತಿ ಎಂದು ನನ್ನ ಪತಿ ದೇವರು ತಮ್ಮದೇ ಒಂದು ಬಾಣ ಬಿಟ್ಟರು.

ನಾನೂ ಹೆದರಿಕೊಳ್ಳುವ ಪಾರ್ಟಿಯಲ್ಲ. ನಾನು ಸರ್ಕಾರೀ ಕೆಲಸ ನಿರ್ವಹಿಸುವಾಗ ಇಂತಹ ನೂರಾರು ಕೆಲಸ ಮಾಡಿದ್ದೆ. ಸರಿ ನನ್ನ ಕಾರ್ಯಾಚರಣೆ ಇಲ್ಲಿಂದ ಶುರುವಾಯಿತು .

ಸೀದಾ ನನ್ನ ಸ್ಮಾರ್ಟ್ ಫೋನ್ ತೆಗೆದು ನನ್ನ ಜತೆಯಲ್ಲೇ ಕೆಲಸ ಮಾಡಿದ ಸಹೋದ್ಯೋಗಿಗಳ ವಾಟ್ಸಪ್ ಗ್ರೂಪ್ ತೆಗೆದು ಸಮಸ್ಯೆ ಹೀಗಿದೆ ನಿಮ್ಮಗಳಿಗೆ ಇಂತಹ ಜಾಗ ಎಲ್ಲಿದೆ ಎಂದು ಗೊತ್ತಿದ್ದರೆ ತಕ್ಷಣ ತಿಳಿಸಿ ಎಂದು ಮೆಸೇಜ್ ಕಳಿಸಿದೆ . ಪತಿ ಮತ್ತು ಮಕ್ಕಳು, ಅಳಿಯಂದಿರಿಗೂ ಅದೇ ಮೆಸೇಜ್. ಅಣ್ಣನಿಗೆ ಮತ್ತು ಅವನ ಮಕ್ಕಳಿಗೂ ಅದೇ ಮೆಸೇಜ್.. ಅದನ್ನು ನೋಡಿ ನಗುತ್ತ ಪತಿ ದೇವರು ಬುದ್ಧನ ಮುಂದೆ ಕಿಸಾ ಗೌತಮಿ ಸತ್ತ ಮಗುವನ್ನು ಬದುಕಿಸಿಕೊಡೆಂದು ಪ್ರಾರ್ಥಿಸಿದಾಗ ಭಗವಾನ್ ಬುದ್ಧನು ಸಾವೇ ಕಂಡಿಲ್ಲದ ಮನೆಯಿಂದ ಸಾಸಿವೆ ತಾ. ಖಂಡಿತ ಮಗುವನ್ನು ಬದುಕಿಸುವೆ ಎಂದಹಾಗೆ,ಮೊಬೈಲೇ ಇಲ್ಲದ ಜಾಗ ಹುಡುಕಲು ನೀನು ಎಲ್ಲಿಗೆ ಹೋಗುವೆ ಎಂದರು. ಅವರ ಮಾತು ಸರಿ ಎನಿಸಿತು . ದೂರ ಸಂಚಾರದಲ್ಲಿ ನಮ್ಮ ದೇಶ ಹೊಂದಿದ ಪ್ರಗತಿ ಕಡಿಮೆಯೇ ? ಆದರೂ ಹುಚ್ಚು ಹುಮ್ಮಸ್ಸು. ನೇಹಾಳು ಸರಿಯಾದರೆ ಸಾಕು. ಒಳ್ಳೆಯ ಮನಸ್ಸಿದ್ದರೆ ಎಲ್ಲವೂ ಅಂದುಕೊಂಡಂತೆ ನಡೆಯುವವು ಎಂಬ ಮಾತು ನೆನಪಿಗೆ ಬಂತು. ವಾಟ್ಸಪ್ ನೋಡಲು ಹೋದೆ .



ನಂದಿನಿ , ಇಂತಹ ಪರೋಪಕಾರದ ಕೆಲಸದಲ್ಲಿ ನಿವೃತ್ತಿ ಜೀವನ ನಡೆಸುತ್ತಿದ್ದೀಯ ಭಲೇ . ದೇವರು ನಿನ್ನ ಕಾರ್ಯಕ್ಕೆ ಯಶಸ್ಸು ಕೊಡಲಿ ಇದು ನನ್ನ ಸಹೋದ್ಯೋಗಿ ರಾಜೀವನ ಉತ್ತರ.

ನಿನ್ನ ಉತ್ಸಾಹಕ್ಕೆ ನನ್ನ ಮೆಚ್ಚಿಗೆ . ನಿನಗೆ ತಿಳಿದಿರುವಂತೆ ಭಾರತ ದೇಶದಲ್ಲಿ ಮೊಬೈಲೇ ಇಲ್ಲದ ಊರಿಲ್ಲ. ಆದರೆ ಎಷ್ಟೋ ಊರುಗಳಲ್ಲಿ ವೈಫೈ ಸೌಲಭ್ಯವಿಲ್ಲ ಅದನ್ನು ನೀನು ಪರೀಕ್ಷಿಸು . ದೂರ ಸಂಚಾರ

ಮಿನಿಸ್ಟ್ರಿ ವೆಬ್‌ಸೈಟ್ ತೆಗೆದು ನೋಡು. ಆ ನಂತರ ನಮ್ಮ ಸಿ.ಎ.ಜಿ. ಆಡಿಟ್ ರಿಪೋರ್ಟ್ ಹುಡುಕಿ ನೋಡು ಇದು ಇನ್ನೊಬ್ಬ ಸಹೋದ್ಯೋಗಿ ನಿಹಾಲ್ ಸಿಂಗ್ ನ ಅನಿಸಿಕೆ.

ಮೂರನೆಯ ಉತ್ತರ ಸಹೋದ್ಯೋಗಿ ಜಯಶ್ರೀಯದು. ಅಯ್ಯೋ ಪಾಪ ನಂದಿನಿ ! ನನ್ನ ವಾರಗಿತ್ತಿಯ ಅಕ್ಕನ ಮಗಳಿಗೂ ಹೀಗೆ ಆಗಿತ್ತು .ನಾನು ಅವಳಿಗೆ ಫೋನಾಯಿಸಿ ಅವರು ಹೇಗೆ ಈ ಸಮಸ್ಯೆ ಪರಿಹರಿಸಿದರು ಎಂದುಕೇಳಿ ತಿಳಿಸುತ್ತೇನೆ. ಅಲ್ಲಿಯವರೆಗೆ ತಾಳ್ಮೆಯಿರಲಿ ನಿನ್ನ ಗೆಳತಿಯ ಮಗಳಿಗೆ ನನ್ನ ಶುಭ ಆಶಯ .

ನಾಲ್ಕನೆಯ ಉತ್ತರ ಸಹೋದ್ಯೋಗಿ ಶಂಕರ್ ಬೋಸ್ ನದ್ದು ದೀದೀ , ನನಗೆ ಅಂತಹ ಜಾಗ ಗೊತ್ತು ಆದರೆ ನಿನ್ನ ಗೆಳತಿ ಹಿಮಾಲಯದ ತಪ್ಪಲಿನಲ್ಲಿರುವ ಹಳ್ಳಿಗೆ ಬರಬೇಕು . ಅಲ್ಲಿಯ ಭೌಗೋಳಿಕ ದೃಷ್ಟಿಯಿಂದ ಸ್ಪೆಕ್ಟ್ರಮ್ ಅಲ್ಲಿಗೆ ತಲುಪುವುದಿಲ್ಲ. ಆದರೆ ಆ ಜಾಗದಲ್ಲಿ ಹೋಟೆಲ್ ಯಾ ಗೆಸ್ಟ್ ಹೌಸ್ ಎರಡೂ ಇಲ್ಲ. ಅವರು ಟೆಂಟ್ ಹಾಕಿಕೊಂಡು ಇರಬಹುದು. ಬ್ರಹ್ಮಪುತ್ರ ಉಪನದಿ 4 ಕಿಲೋಮೀಟರ್ ದೂರದಲ್ಲಿ ಹರಿಯುತ್ತದೆ ಅಲ್ಲಿಂದ ನೀರು ತಂದು ಸ್ವಂತವಾಗಿ ಅಡಿಗೆ ಮಾಡಿಕೊಂಡು ಊಟ ಮಾಡಬಹುದು . ಆದರೆ ಒಂದು ಮಾತು ಅಲ್ಲಿ ಕಾಡು ಪ್ರಾಣಿಗಳು ಬರುವ ಸಾಧ್ಯತೆಯಿದೆ. ಅದಕ್ಕಾಗಿ ಬಂದೂಕ ಅಗತ್ಯ ಮತ್ತು ಸೊಳ್ಳೆ ಕಾಟ ತಪ್ಪಿಸಲು ಅಗತ್ಯವಾದ ಧೂಪ್ ಮುಂತಾದುವು. ಗುಡ್ ಲಕ್.

ಶಂಕರನ ಉತ್ತರ ನೋಡಿದ ಬೇರೆಲ್ಲರೂ ಬಿದ್ದು ಬಿದ್ದು ನಗುತ್ತ ಕಣ್ಣಲ್ಲಿ ನೀರು ಬರುವ ಸ್ಮೈಲೀ ಗಳನ್ನು ಕಳಿಸಿದರು .

ಇನ್ನೊಂದು ಪ್ರತಿಕ್ರಿಯೆ ಗೆಳೆಯ ಬಾಲ ಗೋಪಾಲನದು – ನಂದಿನಿ ನಿವೃತ್ತಿಯಾದ ನಂತರ ನನ್ನನ್ನು ಕಾಡುತ್ತಿರುವ ಸಮಸ್ಯೆ ಟು ಬಿ ಆರ್ ನಾಟ್ ಟು ಬಿ . ಈ ಎಲ್ಲ ಮೊಬೈಲ್‌ನಂತಹ ಉಪಕರಣಗಳು ಮತ್ತು ಸೋಶಿಯಲ್ ಮೀಡಿಯಾ ಅಂತಹ ಮಾಧ್ಯಮಗಳಿಗೆ ನಾವು ಸಿಲುಕಬೇಕೆ ಇಲ್ಲವೇ ? ಒಂದು ವೇಳೆ ಸಿಲುಕಿ ಕೊಂಡರೆ ಮೊಸಳೆಯ ಬಾಯಿಗೆ ಹೋದಂತೆ . ಸಿಲುಕದಿದ್ದರೆ ಆದಿ ಮಾನವನ ತರಹ ಹಿಂದುಳಿದಂತೆ . ಈ ಎರಡು ಸಮಸ್ಯೆಗಳ ನಡು ಮಾರ್ಗ ಯಾವುದು ಎಂದು ಯೋಚಿಸಬೇಕು . ಮುಂದುವರೆದರೆ ಒಂದು ಭಯ ಮುಂದುವರೆಯದಿದ್ದರೆ ಹಿಂದೆಯೇ ಉಳಿಯುವ ಭಯ . ಈ ಭಯವನ್ನು ಹೇಗೆ ನಿಯಂತ್ರಿಸಬೇಕು ಇದು ಈಗಿನ ಕಾಲದ ಮುಖ್ಯ ವಿಚಾರ . ಸ್ವಲ್ಪ ಕಾಲಕ್ಕೆಂದು ವೈಫೈ ಇಲ್ಲದ ಊರಿಗೆ ಹೋಗುವುದು ನನ್ನ ಪ್ರಕಾರ ಪಲಾಯನ ವಾದ . ಅಲ್ಲಿಂದ ವಾಪಸು ಬಂದಮೇಲೆ ನೇಹಾ ಮೊಬೈಲ್ ಉಪಯೋಗ ಖಾಯಂ ನಿಲ್ಲಿಸುವಳೇ? ಗೂಗಲ್ ನೋಡುವುದು ಬಿಡುತ್ತಾಳೆಯೇ ? ಇಲ್ಲೇ ನೋಡು ನಾನು ಮತ್ತು ನೀನು ಸ್ಮಾರ್ಟ್ ಫೋನ್ ಮೂಲಕ ವೈಫೈ ಸವಲತಿ ಯಿಂದ ಮಾತನಾಡುತ್ತಿದ್ದೇವೆ . ವೈಫೈ ಬೇಡ,ಮೊಬೈಲ್ ಬೇಡ ಅನ್ನುವುದು ಅರ್ಥಹೀನ ವಾದ .ಆದ್ದರಿಂದ ಇಷ್ಟೊಂದು ಸುಲಭವಾಗಿ ನೇಹಾಳ ಸಮಸ್ಯೆಯನ್ನು ನಿನ್ನ ಕೈ ನಲ್ಲಿ ಪರಿಹರಿಸಲು ಸಾಧ್ಯವಿಲ್ಲವೆಂಬ ನನ್ನ ಮತ ಈ ಮೂಲಕ ತಿಳಿಸುತ್ತಿದ್ದೇನೆ .

ಬೇರೆ ಎಲ್ಲರೂ ಅಗ್ರೀಡ್ ಎಂದು ಮತ ಹಾಕಿದರು

ನಿಮ್ಮ ವಿಚಾರ ಒಂದು ಚೂರೂ ಸರಿಯಾಗಿಲ್ಲ 18ವರ್ಷದ ಕಾಲೇಜಿನ ಹುಡುಗಿಗೆ ಸ್ಮಾರ್ಟ್ ಫೋನ್ ಕೊಡದಿರುವುದು ಅಥವಾ ಅದರ ಉಪಯೋಗವನ್ನು ಕೆಲ ಗಂಟೆಗಳಿಗೆ ಮಾತ್ರ ಮಿತಿ ಮಾಡುವುದು ಒಂದು ಹುಚ್ಚತನ. ನೇಹಾ ಚುನಾವಣೆಯಲ್ಲಿ ತನ್ನ ಮತ ಕೊಡುವ ಹಕ್ಕು ಪಡೆದಿದ್ದಾಳೆ. ಹಾಗಿರುವಾಗ ಸ್ಮಾರ್ಟ್ ಫೋನ್ ಉಪಯೋಗ ಮಾಡಬೇಡ ಎಂದು ಹೇಳುವುದು ಎಷ್ಟರ ಮಟ್ಟಿಗೆ ಸರಿ? ಇದು ನನ್ನ ದೊಡ್ಡ ಮಗಳ ವಾದ.



ಎರಡನೆಯವಳು ದೊಡ್ಡವರ ನಡವಳಿಕೆಯಲ್ಲಿ ಎಷ್ಟೊಂದು ವಿಪರ್ಯಾಸ! ನೇಹಾ ಳಿಗೆ ಸ್ಮಾರ್ಟ್ ಫೋನ್ ಬೇಡ ಆದರೆ ನಮ್ಮ ಅಮ್ಮ ಅದೇ ಸ್ಮಾರ್ಟ್ ಫೋನಿನಲ್ಲಿ ವಾಟ್ಸಪ್ ಮೂಲಕ ಈ ಸಂಭಾಷಣೆ ಮಾಡುವುದು ಎಷ್ಟರ ಮಟ್ಟಿಗೆ ನ್ಯಾಯ ? ಡಿಜಿಟಲ್ ಡಿಟಾಕ್ಸ್ ಒಂದು ಹುಚ್ಚು ವಿಚಾರ . ಮುಂದುವರೆಯುತ್ತಿರುವ ಕಾಲಕ್ಕೆ ಹೊಂದಿಕೊಳ್ಳುವುದು ಎಲ್ಲರ ಕರ್ತವ್ಯ.

ಈಗ ದೊಡ್ಡ ಮಗಳ ಸ್ಟೈಲೀ !

ನಂಗೆ ತಲೆ ಚಿಟ್ಟು ಹಿಡಿದುಹೋಯಿತು .

ಸಮಸ್ಯೆ ಪರಿಹಾರ ಮಾಡಿದ್ದು ನನ್ನ ಅಣ್ಣ . ಮೊಬೈಲ್ ಇದ್ದರೂ ವೈಫೈ ನಡೆಯದ ಸಾವಿರಾರು ಜಾಗಗಳು ನಮ್ಮದೇಶದಲ್ಲಿವೆ. ಇಲ್ಲೇ 300ಕಿಲೋಮೀಟರ್ ದೂರದಲ್ಲಿರುವ ಜ್ಯೋತಿಪುರಕ್ಕೆ ಕಳಿಸು. ಅವರಿಗೆ ಸರಿಯಾದ ಹೋಟೆಲಿನ ವ್ಯವಸ್ಥೆಯಿದೆ. ಹತ್ತಿರದಲ್ಲೇ ಜಲಪಾತವಿದೆ . ಕಾಡೂ ಇದೆ . ಪುರಾತನ ದೇವಾಲಯವೂ ಇದೆ. ದೊಡ್ಡದೊಂದು ಗುಹೆಯಲ್ಲಿ ಹನುಮಂತನ ದರ್ಶನವೂ ಸಾಧ್ಯ . ಪ್ರಾಥಮಿಕ ಆರೋಗ್ಯ ಕೇಂದ್ರವೂ ಇದೆ ಮತ್ತು ಪ್ರತಿ ಗಂಟೆಗೊಮ್ಮೆ ಬಸ್ ಓಡಾಡುತ್ತದೆ .

ಅಣ್ಣ ಹೇಳಿದ ಮೇಲೆ ಮುಗಿಯಿತು . ರೇಖಾಗೆ ಫೋನಾಯಿಸಿ ಎಲ್ಲ ಮಾಹಿತಿ ಕೊಟ್ಟೆ ..ಕಾಕ ತಾಳ ನ್ಯಾಯವಂತೆ ರೇಖಾಳ ಕೆಲಸದ ಹುಡುಗಿ ಪಾರ್ವತಿಯ ಸೋದರತ್ತೆ ಅಲ್ಲೇ ಇದ್ದಾರಂತೆ. ಮೂರೇ ದಿನಗಳಲ್ಲಿ ರೇಖಾ, ಯಜಮಾನರು ಮತ್ತು ನೇಹಾ ದೊಡ್ಡ ಗಾಡಿ ಮಾಡಿಕೊಂಡು ಜ್ಯೋತಿಪುರಕ್ಕೆ ಹೊರಟರು. ನನಗೆ ಒಂದು ತರಹ ಸಾರ್ಥಕತಾ ಭಾವ . ನೇಹಾ ಈ ಉಪಾಯದಿಂದ ಸರಿಯಾದರೆ ಸಾಕು !

ಮುಂದಿನ ಎರಡು ವಾರಗಳು ಹೇಗೆ ಕಳೆದವೋ ?

ಮೂರನೆಯ ವಾರ ರೇಖಾಳ ಪೂರ್ತಿ ಪರಿವಾರ ನಮ್ಮ ಮನೆಗೆ ಹಾಜರಾಯಿತು . ನಗು ನಗುತ್ತ ನೇಹಾ ಜ್ಯೋತಿಪುರದ ನಿಸರ್ಗ ಸೌಂದರ್ಯ, ಪ್ರಾಚೀನತೆ ಅಲ್ಲಿನ, ಗುಹೆ, ದೇವಾಲಯ ಎಲ್ಲವನ್ನೂ ಬಣ್ಣಿಸಿದಳು . ಮತ್ತು ತನ್ನ ಸ್ಮಾರ್ಟ್ ಫೋನಿನಲ್ಲಿ ತೆಗೆದಿದ್ದ ಚಿತ್ರಗಳನ್ನು ತೋರಿಸಿದಳು!!!!!! ನಂದಿನಿ ಆಂಟಿ, ನೀವು ನನಗೆ ಡಿಜಿಟಲ್ ಡಿಟಾಕ್ಸ್ ಮಾಡಲು ಜ್ಯೋತಿಪುರಕ್ಕೆ ಕಳಿಸಿದಿರಿ . ಒಳ್ಳೆಯ ಹೋಟೆಲ್ ಸಿಕ್ಕಿತು .ಸುಂದರ ಪರಿಸರ .ಒಂದು ದಿನವೂ ವೈಫೈ ಇಲ್ಲ ಎನ್ನುವ ಪರಿಸ್ಥಿತಿ ಬರಲಿಲ್ಲ .ನಾವು ರಜೆಗೆ ಹೋಗುವ ಮೊದಲು ನಮ್ಮ ಪ್ರೊಫೆಸರ್ ಭಾರತೀಯ ಹಳ್ಳಿಗಳಲ್ಲಿ ಎಷ್ಟರ ಮಟ್ಟಿಗೆ ಡಿಜಿಟಲ್ ರೆವೊಲ್ಯೂಷನ್ ಆಗಿದೆ ಅದರ ಬಗ್ಗೆ ಅಸೈನ್ಮೆಂಟ್ ಕೊಟ್ಟಿದ್ದರು . ನನ್ನ ಗೆಳೆಯ ಗೆಳತಿಯರು ತಮಗೆ ತೋರಿದಂತೆ ಗೂಗಲ್ ಮೂಲಕ ಮಾಹಿತಿ ತೆಗೆದರು ಮತ್ತು ಅಸೈನ್ಮೆಂಟ್ ಮುಗಿಸಿದರು. ಎಲ್ಲರದೂ ಒಂದೇ ಮಾಹಿತಿ .ಒಂದೇ ಭಾಷೆ. ನಂಗೆ ಬೇಜಾರಾಗಿ ನಾವು ನಿಜವಾದ ಹಳ್ಳಿಗೆಹೋಗಿ ಅಲ್ಲಿ ನೋಡಿ ಯಾಕೆ ಬರೆಯಬಾರದು ಎಂದು ಕೇಳಿದೆ. ಎಲ್ಲರೂ ನಕ್ಕುಬಿಟ್ಟರು. ನಂಗೆ ಅವಮಾನವಾಗಿ ಜೀವನವೇ ಬೇಸರವಾಗಿತ್ತು. ಒಂದು ವಾರ ಮೌನವಾಚಾರಿಸಿದೆ .

ನಿಮ್ಮ ಐಡಿಯಾ ನಂಗೆ ತುಂಬಾ ಇಷ್ಟವಾಯಿತು . ವೈಫೈ ಇಲ್ಲದ ಊರು ಹೇಗಿರಬಹುದು ಎಂಬ ಕುತೂಹಲ ನಂಗೆ . ನಮ್ಮ ಪಾರ್ವತಿಯ ಸೋದರತ್ತೆ ಸಣ್ಣಮ್ಮ ನನ್ನನ್ನು ಪ್ರತಿ ದಿನ ಹಳ್ಳಿಯ ಬೇರೆ ಬೇರೆ ಭಾಗಕ್ಕೆ ಕರೆದುಕೊಂಡುಹೋಗಿ ಎಲ್ಲರ ಪರಿಚಯ ಮಾಡಿಸಿದಳು . ಮೈಕ್ರೋ ಬ್ಯಾಂಕಿಂಗ್, ಸೆಲ್ಫ್ ಹೆಲ್ಪ್ ಗ್ರೂಪ್ , ಮೈಕ್ರೋ ಇನ್ಶೂರೆನ್ಸ್ ಹೀಗೆ ನಾನಾ ಕ್ಷೇತ್ರದಲ್ಲಿ ಡಿಜಿಟಲ್ ರೆವೊಲ್ಯೂಷನ್ ನಡೆದಿದೆ . ಸಣ್ಣಮ್ಮನ ಸೊಸೆ ನಡೆಸುತ್ತಿರುವ ಸೆಲ್ಫ್ ಹೆಲ್ಪ್ ಗ್ರೂಪ್ ಮೊಬೈಲ್ ಫೋನುಗಳ ರಿಪೇರಿ ಮಾಡುತ್ತಾರೆ.



ಗ್ರಾಮ ಪಂಚಾಯತಿಯಲ್ಲಿ ಕಂಪ್ಯೂಟರ್ ಉಪಯೋಗ ಮಾಡುತ್ತಾರೆ . ಎಲ್ಲ ಮಾಹಿತಿಯೂ ಸಮ ಕಾಲೀನ . ನಾನು ಹಳ್ಳಿಯ ಜನರನ್ನು ಮಾತನಾಡಿಸಿ ಆ ವಿಡಿಯೋ ಮತ್ತು ಫೋಟೋ ಮತ್ತು ಸ್ಪ್ರೆಡ್ ಶೀಟ್‌ಗಳನ್ನು ಸೇರಿಸಿ ಅಸೈನ್ಮೆಂಟ್ ಮಾಡಿ ಅಲ್ಲಿಂದಲೇ ಯೂನಿವರ್ಸಿಟಿಗೆ ಕಳಿಸಿದೆ. ಜ್ಯೋತಿಪುರದಲ್ಲಿ ಡಿಜಿಟಲ್ ರೆವೊಲ್ಯೂಷನ್ ಎಂಬ ನನ್ನ ಪ್ರಬಂಧಕ್ಕೆ ಪುರಸ್ಕಾರ ಸಿಕ್ಕಿದೆ.

ಅಂದ ಹಾಗೆ ಆಂಟಿ ನೀವು ಅಂದುಕೊಂಡಂತೆ ನನಗೆ ಸೋಶಿಯಲ್ ಮೀಡಿಯಾ ಚಟವಿಲ್ಲ ಬೇಕಾದಷ್ಟೇ ನೋಡುತ್ತೀನಿ . ನೀವು ನನ್ನ ಬಗ್ಗೆ ತುಂಬಾ ಕಾಳಜಿ ವಹಿಸಿದಿರಿ . ತುಂಬಾ ಥ್ಯಾಂಕ್ಸ್. ಹಳ್ಳಿಯ ಸೆಲ್ಫ್ ಹೆಲ್ಪ್ ಗ್ರೂಪ್ ನವರು ತಯಾರಿಸುವ ಚೀಲಗಳಿಗೆ ನಗರದಿಂದ ಮಾರಾಟದ ಸಪೋರ್ಟ್ ಕೊಡಲು ಈಗ ಪ್ರಯತ್ನ ಮಾಡುತ್ತಿದ್ದೇನೆ . ನಿಮಗೆ ಒಳ್ಳೆಯ ಮತ್ತು ದೊಡ್ಡ ಅಂಗಡಿಗಳ ಪರಿಚಯವಿದ್ದರೆ ಹೇಳಿ ಎಂದಳು.

ನಾನು ಬೆರಗಾಗಿಹೋದೆ ! ಒಳಗಿನಿಂದ ಸ್ವಲ್ಪ ಬೇಜಾರೂ ಆಯಿತು ! ಸುಮ್ಮನೆ ಇರುವ ಬದಲು ಅತಿ ಕಾಳಜಿ ವಹಿಸಿದೆನಲ್ಲ, ಅಗತ್ಯವಿರಲಿಲ್ಲ! ನಮ್ಮ ಕಾಲ ಮುಗಿಯಿತು. ಈಗ ಬಂದಿರುವುದು ಮಕ್ಕಳ ಕಾಲ. ಡಿಜಿಟಲ್ ರೆವೊಲ್ಯೂಷನ್ ನಡೆಯುತ್ತಿದೆ . ಡಿಜಿಟಲ್ ಡಿಟಾಕ್ಸ್ ಎಷ್ಟರ ಮಟ್ಟಿಗೆ ಸರಿ ಎಂದು ನನ್ನನ್ನೇ ಕೇಳಿಕೊಂಡೆ .

ಪಾಪ ರೇಖಾ ನನ್ನ ಮನಸ್ಸನ್ನು ಅರ್ಥಮಾಡಿಕೊಂಡಳು. ನಂದಿನಿ ನಿನ್ನ ಪ್ರಯತ್ನದಿಂದ ನಮ್ಮ ಕುಟುಂಬಕ್ಕೆ ಒಂದು ಸುಂದರ ವಿರಾಮ ಮತ್ತು ವಿಹಾರ ದೊರಕಿತು. ಎನ್ನುತ್ತಾ ವಾಟ್ಸಪ್ ನಲ್ಲಿ ನಮ್ಮ ಚಿತ್ರಗಳನ್ನು ಕಳಿಸಿದ್ದೇನೆ ನೋಡು. ಎಂದಳು. ಹಳ್ಳಿಯಿಂದ ತಂದಿದ್ದ ಹಣ್ಣುಗಳನ್ನೂ ಕೊಟ್ಟಳು . ಕಾಫಿತಿಂಡಿಯ ನಂತರ ಅವರೆಲ್ಲರ ನಿರ್ಗಮನವಾಯಿತು.

ನನ್ನ ಪತಿ ದೇವರು ಯಾವಾಗಲೂ ನನಗೆ ಬುದ್ಧಿ ಹೇಳುತ್ತಾ ಜೀಸಸ್ ಕ್ರೈಸ್ಟ್ ಆಗಬೇಡಮ್ಮ . ಆದವರು ಶಿಲುಬೆಗೆ ಏರಲು ತಯಾರಾಗಿರಬೇಕು ಎನ್ನುತ್ತಾರೆ. ಬಹುಶಃ ಅವರ ಮಾತೇ ಸರಿಯೇನೋ! ■

---

ರೆಸಾರ್ಟ್‌ನಲ್ಲಿ ಕುಡಿದು ಹಲ್ಲೆ–ಸುದ್ದಿ

ಪ್ರಯಾಗ್ ರಾಜ್ ಕುಂಭ ಮೇಳ ಆರಂಭ–ಸುದ್ದಿ






# ಹೀಗೊಂದು ಕನ್ನಡ ಸಂಘ

**• ಡಿ. ಶ್ಯಾಮಲ ರವಿಶಂಕರ್**

ಇದ್ದಕ್ಕಿದ್ದಂತೆ ಒಂದಾನೊಂದು ದಿವಸ ಹತ್ತಾರು ವರುಷಗಳ ಹಿಂದೆ, ನನಗೆ ಒಂದು ಐಡಿಯಾ ಹೊಳೆದೇ ಬಿಡ್ತು! ಸುಮ್ನೆ ಎಲ್ಲೆಲ್ಲೋ, ಎರಡೋ ಮೂರೋ ವರ್ಷಕ್ಕೊಮ್ಮೆ ನಡೆಯುವ ಕನ್ನಡದ ಕಾರ್ಯಕ್ರಮಗಳಿಗೆ ಹೋಗೊ ಚಪಲ ಬೇಡ. ನಮ್ಮ ಕಾಲೊನಿಯಲ್ಲೇ ಬೇಕಾದಷ್ಟು ಕನ್ನಡಿಗರಿರೋವಾಗ (ಎಲ್ಲೆಲ್ಲಿ ಇಂಜಿನಿಯರ್‌ಗಳಿರ್ತಾರೋ ಅಲ್ಲೇ ಕನ್ನಡದ ಬೀಡು. ಅನ್ನೋ ಕಾಲ ಅದು) ನಾನೇ ಯಾಕೆ ಒಂದು ಕನ್ನಡ ಸಂಘವನ್ನು ಶುರು ಮಾಡಬಾರದು ಅಂತ. ಇದನ್ನ ಹಲವಾರು ಹಿತೈಷಿಗಳ ಮುಂದೆ ಪ್ರಸ್ತಾಪವನ್ನೂ ಮಾಡಿದೆ. ಹಿರಿಯರಾದ ನಾಗಲಕ್ಷ್ಮಮ್ಮ ಹಾಗೂ ಕಾವೇರಮ್ಮ, ''ಬೇಡಮ್ಮಾ, ಈ ತರಲೆ ತಾಪತ್ರಯಗಳು ನಿನಗ್ಯಾಕೆ ಹೇಳು. ಇರೋ ಕೆಲಸ ಮಾಡ್ಕೊಂಡು ಹಾಯಾಗಿರು' ಅಂತ ಹಿತೋಪದೇಶ ನೀಡಿದರು. 'ತಾಪತ್ರಯ ಯಾಕಾಗತ್ತೆ? ನಮ್ಮ ಛಾಕೋಲಿ ಮಾತಾಡ್ತಿದ್ರೆ ಎಂಥಾ ತರಲೆಗಳೂ ಓಡಿ ಹೋಗುತ್ತವೆ.' ಅಂತ ಏನೇನೋ ಹೇಳಿ ಸಮರ್ಥಿಸಿಕೊಂಡೆ. ಒಂದು ಹುಚ್ಚು ಅಲೆಮಾರಿ ತಲೆ ಹೊಕ್ಕ ಮೇಲೆ ಯಾವ ಉಪದೇಶಾನೂ 'ಕೋಣದ ಮುಂದೆ ಕಿಂದರಿ ಬಾರಿಸ್ದಂಗೆ.' ಎಷ್ಟೆಷ್ಟೋ ಪ್ರಯತ್ನ ಮಾಡಿದ ಹಿರಿಯರಿಗೆ ತಮ್ಮ ನಿಷ್ಪ್ರಯೋಜಕತೆಯನ್ನು ಕಂಡುಕೊಳ್ಳಲು ಹೆಚ್ಚು ಹೊತ್ತೇನೂ ಹಿಡಿಯಲಿಲ್ಲ. ''ಸರಿ, ಅನುಭವಿಸು, ನಿನ್ನ ಹಣೇಲಿ ಅದೇ ಬರೆದಿದ್ರೆ ಹರಿಹರವಿರಿಂಚಾದ್ಯರಿಗೆ ಸಾಧ್ಯವೇ, ಇನ್ನು ನಾವ್ಯಾರು'' ಅಂತಂದು ತೆಪ್ಪಗೆ ಆದರು.

ನಾನು ಮಾತ್ರ ನನ್ನ ಯೋಚನಾ ಸರಣಿಯನ್ನು ಕಾರ್ಯಗತ ಮಾಡಲು ಸನ್ನಾದ್ಧಳಾದೆ. ನನ್ನ ಉತ್ಸಾಹ ಕಂಡು ಹಿರಿಯರಿಗೆ ಒಳಗೊಳಗೇ ನಗುವೋ ನಗು. ನಿನ್ನೆ ಮೊನ್ನೆ ಮದುವೆ. ಆಗಿ ಬಂದ ಕಾರುಣ್ಯ, ರೇಖಾ ಇನ್ನಿತರ ಹುಡುಗಿಯರು ನನ್ನ ಹಿಮ್ಮೇಳ. ಅವರಿಗೆ ಕೆಲಸ ಸಿಕ್ಕೊವರೆಗೂ ಒಂದಷ್ಟು ಕಾಲಕ್ಷೇಪ ಸಾಧನ ಇದು. ಎಲ್ಲಾರನ್ನೂ ಕೂಡಿಹಾಕಿ ನನ್ನ ಕನ್ನಡ ಸಂಘಕ್ಕೆ ಸದಸ್ಯರನ್ನಾಗಿ ನೋಂದಾಯಿಸಿದೆ. ಕೆಲವರು ಇದು ಆಗೋ ಹೋಗೋ ಮಾತಲ್ಲ, ಇದೊಂದು 'ಸ್ಟಿಲ್ ಬಾರ್ನ್ ಕೇಸ್' ಆಗತ್ತೆ, ಅಂದ್ಕೊಂಡೇ ಸದಸ್ಯರಾದರು ಯಾಕೆಂದರೆ, ಸದಸ್ಯತ್ವ ಉಚಿತ! ಇನ್ನೂ ಹಲವರು ಈ ಆರಂಭ ಶೂರತ್ವ ಎಲ್ಲಿಗೆ ಕರೆದೊಯ್ಯುತ್ತೋ ನೋಡೋಣ. ಅಂದ್ಕೊಂಡೇ ಸದಸ್ಯತ್ವ ಸ್ವೀಕರಿಸಿದರು. ಮತ್ತೆ ಕೆಲವರು ಏನೂ ಕೇಳದವರಂತೆ, ಕಾಣದವರಂತೆ ಸ್ಥಿತ ಪ್ರಜ್ಞರಾಗಿದ್ದೇ ತಮ್ಮ ತಮ್ಮ ಹೆಸರುಗಳನ್ನು ನೋಂದಣಿ ಮಾಡಿದರು. ಕೆಲವು ಹೆಂಗೆಳೆಯರು ನಾವು ಕನ್ನಡದವರನ್ನು ಮದುವೆಯಾಗಿದ್ದೇವೆ (ಮರಾಠಿ/ತಮಿಳು/ತೆಲುಗು ನಮ್ಮ ಭಾಷೆ) ಆದ್ದರಿಂದ ಕನ್ನಡ ಕಂಡ್ರೆ ಆಗೋಲ್ಲ ನಮಗೆ ಅಂತ ನುಣುಚಿಕೊಂಡರು. ಆದರೂ ನನ್ನ ಉತ್ಸಾಹ ದಿನೇ ದಿನೇ ಅಭಿವೃದ್ಧಿ ಹೊಂದುತ್ತಾ ಹೋಯಿತು. ನನ್ನಂತೆ ಆರೇಳು ಸ್ನೇಹಿತೆಯರೂ ಇದ್ದದ್ದರಿಂದ ನಾವೆಲ್ಲಾ ನನ್ನ ಮನೆಯಲ್ಲೇ ಪ್ರಥಮ ಸಮಾವೇಷಣೆಗಾಗಿ ಬೆರೆತೆವು. ಅಪ್ಪಟ ತುಪ್ಪ (ಮನೆಯಲ್ಲೇ ಬೆಣ್ಣೆ ತೆಗೆದು ಕಾಯಿಸಿದದ್ದು) ದಿಂದ (ಸ್ವತಃ ನಾನೇ ಮಾಡಿದ) ಮೈಸೂರು ಪಾಕ್, ಕೋಡುಬಳೆ ಫಿಲ್ಟರ್ ಕಾಫಿ ಸಮಾರಾಧನೆಯಿಂದ ಶುರುವಾಯಿತು. ಸುದೀರ್ಘ ಸಮಾಲೋಚನೆ ಫಲಿತ: ಈ ಕೆಳಕಂಡ ನಿರ್ಧಾರಗಳು.



1. ಸದಸ್ಯರಾಗಿ ನೋಂದಾಯಿಸಿದವರು ಮಾತ್ರ ಮೀಟಿಂಗ್‌ಗೆ ಆಹ್ವಾನಿತರು.

2. ಎಲ್ಲರೂ ಕನ್ನಡದಲ್ಲೇ ಮಾತಾಡಬೇಕು. ಹಿಂದಿ/ಇಂಗ್ಲೀಷ್ ಆಗಾಗ್ಗೆ ಕಲಬೆರಕೆ ಮಾಡಿದರೂ ಕ್ರಿಯಾಪದಗಳಾದರೂ ಕನ್ನಡದ್ದು ಇರಲೇಬೇಕು.

3. ತಿಂಗಳಿಗೊಮ್ಮೆ ಈ ಸಮಾವೇಶ ಪೂರ್ವ ನಿರ್ದಿಷ್ಟ ಮಹಿಳೆಯ ಮನೆಯಲ್ಲಿ 3:30 ಇಂದ 5 ಘಂಟೆಗಳೊಳಗೆ ನಡೆಯಬೇಕು.

4. ಕಾಫಿ+ಬಿಸ್ಕತ್ತು ಬಿಟ್ಟು ಬೇರೆಲ್ಲಾ ತಿಂಡಿಗಳು ಮಾಡಿ ತಂತಮ್ಮ ಅಂತಸ್ತುಗಳ ಪ್ರದರ್ಶನ ಮಾಡಕೂಡದು. ಇದರಿಂದ ಎಲ್ಲರಿಗೂ ಆರಾಮವಾಗಿ ಪಾಲ್ಗೊಳ್ಳಬಹುದು.

5. ಕನ್ನಡ ನಾಡಿನ ವಿವಿಧ ಪ್ರಾಂತಗಳಿಂದ ಬಂದವರು ಅವರ ಕಡೆ ಪಾಲಿಸುವ ಸಂಪ್ರದಾಯ, ಆಚಾರಗಳ ಬಗ್ಗೆ ಸಣ್ಣದಾಗಿ ಓರಣವಾಗಿ ತಿಳಿಯ ಪಡಿಸುವುದು. ಸಂಪ್ರದಾಯದ ಹಾಡುಗಳನ್ನು ಮತ್ತಿತರರಿಗೆ ಹೇಳಿಕೊಡುವುದು ಹಾಗೇ ತಿಂಡಿಗಳ ರೇಸಿಪಿ ಮಾತ್ರ ತಿಳಿಯ ಪಡಿಸುವುದು.

6. ಕನ್ನಡ ಕಥೆ, ಕವನ ತಾವೇ ಬರೆದದ್ದಲ್ಲಿ ಓದುವುದು. ಹೊಸದಾಗಿ ಕಾದಂಬರಿ ಪ್ರಬಂಧಗಳನ್ನು ಓದಿದ್ದರೆ. ಅದರ ವಿಮರ್ಶೆ, ಇತ್ಯಾದಿ.

ನನಗೆ ಗೊತ್ತು, ನೀವುಗಳೂ ನಗ್ತಾ ಇದ್ದೀರಿ ಅಂತ. ''ಸೌಂಡ್ಸ್ ಟೂ ಐಡಿಯಲಿಸ್ಟಿಕ್ ಅಂದ್ರಾ?'' ಇರಿ, ಇರಿ.

ಪ್ರಿಂಟ್ ಔಟ್ ಕಾಲವಲ್ಲವಾದ್ದರಿಂದ ಈ ಶರತ್ತುಗಳನ್ನು ಅಂದವಾದ ಕೈ ಬರಹದ ಪ್ರತಿಗಳನ್ನು ಜಾರಾಕ್ಸ್ ಮಾಡಿ ಪೇಪರ್ ಹುಡುಗನ ಮೂಲಕ ಹಂಚಿದ್ದೂ ಆಯಿತು. ಬಿಟ್ಟಿ ಸದಸ್ಯತ್ವ ಎಂಬ ಕಾಳ್ಗಿಚ್ಚಿನಿಂದ, ಕಪೂರಿಣಿ, ಕೃಪಲಾಗಿಣಿ, ಮೆಹ್ರಿಣಿ, ಭಟ್ಟಾಚಾರ್ಯಿಣಿಗಳೂ ಬಂದು ಸೇರಿಸಿಕೊಳ್ಳಿ ಎಂದು ಒತ್ತಾಯಿಸಿದರು 'ನಮ್ಮ ಭಾಷೆ ನಿಮಗೆ ಅರ್ಥವಾಗೊಲ್ಲ, ಬೋರ್ ಹೊಡೆಯುತ್ತೆ. ನಮ್ಮ ಭಾಷೆ ಸ್ವಲ್ಪ ಮಟ್ಟಿಗಾದರೂ ಕಲಿತುಕೊಳ್ಳಿ. ಆಮೇಲೆ ನಿಮಗೆ ಸ್ವಾಗತ ಕೋರುತ್ತೇವೆ' ಎಂದು ಹೇಳಿ ಕನ್ನಡೇತರರನ್ನ ಸಾಗಾಕಿದ್ವಿ.

ಮೊದಲನೆಯ ಸಭೆ ನನ್ನ ಮನೆಯಲ್ಲೇ ಎಂದು ಹೇಳ ಬೇಕಿಲ್ಲವಷ್ಟೆ! ನಾನು ಶಿಸ್ತಾಗಿ ಕಾಫಿ+ಬಿಸ್ಕತ್ತುಗಳನ್ನೇ ವಿತರಣೆ ಮಾಡಿದೆ. ಎಲ್ಲರೂ ಬಹಳ ಉತ್ಸಾಹದಿಂದ ಚೆನ್ನಾಗಿ ಅಲಂಕರಿಸಿಕೊಂಡು ಬಂದರು. ನಾನೊಬ್ಬಳೇ ಎಣ್ಣೆ ಮುಖಿ (ಕೆಲಸಕ್ಕೂ ಹೋಗಿ ಹಾಗೇ ಸಭೆಗೆ ತಯಾರಿ ಮಾಡೋದ್ರಲ್ಲಿ ಎಲ್ಲರೂ ಆಗಮಿಸಿದ ಕಾರಣ). ಮೆಲ್ಲಮೆಲ್ಲಗೆ ಶುರುವಾದ ಸಂಭಾಷಣೆ ವೇಷ –ಪೋಷಾಕಿನ ಚರ್ಚೆ ತಾರಕಕ್ಕೇರಿತ್ತು. ಯಾವುದಾದ್ರೂ ಫ್ಯಾಶನ್ ಮ್ಯಾಗಜೀನ್‌ಗೆ ಬಹಳಷ್ಟು ಐಡಿಯಾಗಳನ್ನೇ ಕೊಡಬಹುದಾಗಿತ್ತು. ಮುಸಿ ಮುಸಿ ನಕ್ಕರು ನಮ್ಮ ಹಿರಿಯ ಆಂಟೀಗಳು. ಹಾಗೇ ಪಾವ್–ಭಾಜೀ, ವೀಳೆದೆಲೆ ಬೋಂಡ ಮಾಡುವ ಟೆಕ್ನಾಲಜಿ ಟ್ರಾನ್ಸ್‌ಫರ್ ಆಯಿತು. ಜಾಹ್ನವಿ ಹೊಸದೊಂದು ಕೇಶ ವಿನ್ಯಾಸ ಹೇಳಿಕೊಟ್ಟಳು. ಆಗಿನ ಕಾಲದಲ್ಲಿ ಎಲ್ಲರಿಗೂ ನನಗೂ ಸಹ–ಸಾಕಷ್ಟು ಜಡೆ ಇದ್ದದ್ದರಿಂದ, ಚೆನ್ನಾಗಿ ಕಲಿತಿದ್ದೂ ಆಯಿತು. ಸವಿತಾ ತನ್ನ ಊರಿನಲ್ಲಿ ಜೇನು ಸುರಿಸಿದ ವಿಗ್ರಹದ ಹಿಂದಿದ್ದ ರಹಸ್ಯವನ್ನು ಸವಿಸ್ತಾರವಾಗಿ ಹೇಳಿ ನಗಿಸಿದಳು. ಅಂತೂ ಒಟ್ಟಿನಲ್ಲಿ ನಮ್ಮ ಮೊದಲನೆಯ ಕನ್ನಡ ಸಂಘದ ಸಭೆ ಯಶಸ್ವಿಯಾಗಿ, ಮುಂದಿನ ತಿಂಗಳು ಎರಡನೆ ಶುಕ್ರವಾರ ಚೇತನಾ ಎಂಬಾಕೆಯ ಮನೆಯಲ್ಲಿ ಭೇಟಿ ಎಂದು ನಿರ್ಧಾರವಾಯಿತು. ಒಟ್ಟಿನಲ್ಲಿ ಚೆನ್ನಾಗಿಯೇ ಶುರುವಾಯಿತು, ಎಂದು ನಾನು ಬೀಗಿದೆ. ನಮ್ಮ ಹಿರಿಯ ಆಂಟೀಗಳು, 'ವೇಯ್ಟ್ ಅಂಡ್ ವಾಚ್' ಅಂದ್ರು ಅದಕ್ಕೆ ನಾನು 'ಕನ್ನಡದಲ್ಲಿ ಹೇಳಿ' ಎಂದು ನಕ್ಕು, ಎಲ್ಲರಿಗೂ ವಿದಾಯ ಹೇಳಿದೆ. ಹೀಗೆ ಅಷ್ಟಿಷ್ಟು ಹರಟೆ, ಅಷ್ಟಿಷ್ಟು ರಸಾಸ್ವಾದ, ಎಲ್ಲೋ ಒಂದಿಷ್ಟು ಹಾಡು, ಕಲಿಕೆ ಅರಿತ ಮೂರು ನಾಲ್ಕು ಭೇಟಿಗಳು ನಡೆದವು.



ನಾನು ಏನೇನೋ ಕಾರಣಗಳಿಂದ ವರಸೆಯಾಗಿ ನಾಲ್ಕು ಬಾರಿ ಹೋಗಲಾಗಲಿಲ್ಲ. ಮುಂದೊಂದು ಮೀಟಿಂಗ್ ನಾನು ಹೋದಾಗ ಕಾದಿದ್ದ ಆಶ್ಚರ್ಯ ಅಷ್ಟಿಷ್ಟಲ್ಲ. ಹಣ್ಣಿನ

ರಸದೊಂದಿಗೆ ಸ್ವಾಗತ (ವೆಲ್‌ಕಮ್ ಡ್ರಿಂಕ್ ಅಂತಂದ್ರು ಅದಕ್ಕೆ!) ಬಾದಾಮಿ ಹಲ್ವ, ಬೊಂಬಾಯಿ ಬೋಂಡ, ಚಾಕೊಲೇಟ್ ಫಡ್ಜ್ ಎಲ್ಲಾ ಸರಬರಾಜಾಯ್ತು. ಕೊನೆಯಲ್ಲಿ ಸೌಂದರ್ಯ ವರ್ಧಕ ಸಲಹೆಗಳು, ಹೀಗೆ ಏನೊನೋ ಹಮ್ಮಿಕೊಂಡು ಶ್ರೀಮಂತಿಕೆಯ ಪ್ರದರ್ಶನ ಹಾಗೂ ಸ್ಪರ್ಧೆ ಬಹಳ ಮುನ್ನಡೆದಿತ್ತು. ನನ್ನ 'ಬ್ರೈನ್ ಚೈಲ್ಡ್' ಆದ ಸರಳ ಕನ್ನಡ ಸಂಘ.

ಇನ್ನೊಂದು ವಿಷಯ ಎಂದರೆ ನೋಡು ನೋಡುತ್ತಿದ್ದಂತೆ, ಪಾಟ್ ಲಕ್ ಲಂಚ್, ಕಿಟ್ಟಿ-ಪಾರ್ಟಿ, ತಂಬೋಲ, ಬ್ರಿಡ್ಜ್ ಗೇಮ್‌ಗಳೂ ತಲೆ ಎತ್ತಿದವು, ಎಲ್ಲವೂ ನನಗೆ ಸುಳಿವೂ ಇಲ್ಲದಂತೆ!

ಸರಿ, ಇನ್ನು ನನ್ನ ಅವಶ್ಯಕತೆ ಈ ಸಂಘಕ್ಕೆ ಇಲ್ಲ ಎಂದೆನಿಸಿ ನಾನು ಜಾರಿಕೊಂಡೆ.

ಮೊನ್ನೆ ಭಟ್ಟಾಚಾರ್ಯಿಣಿ ಸಿಕ್ಕಿದರು ಅಂಗಡಿ ಬೀದಿಯಲ್ಲಿ. ಅವರು ಈಗ ಸದಸ್ಯರಂತೆ ಕನ್ನಡ (ಮೈನಸ್) ಸಂಘಕ್ಕೆ! ಆಕೆಯ ಪ್ರಕಾರ ಹಿರಿಯರ್‍ಯಾರೂ ಬರುವುದಿಲ್ಲವಂತೆ. ಕಿರಿಯರಿಗೆ ಕೆಲಸಗಳು ಸಿಕ್ಕಿ ಅವರಿಗೆ ಸಮಯವಿಲ್ಲವೆಂದು ನಾಪತ್ತೆಯಂತೆ. ಸೀರೆ ವ್ಯಾಪಾರಿಗಳೂ ಒಡವೆ ಹಾಗೂ ಸೌಂದರ್ಯ ವರ್ಧಕ ಹಾಗೂ, ಸಾಂಬಾರ ಪದಾರ್ಥ, ಹಾಗೂ ಪುಡಿಗಳ ವ್ಯಾಪಾರಿಗಳೂ ಬಂದು ತಮ್ಮ ಕೆಲಸ ಚಾಲೂ ಮಾಡ್ತಾರಂತೆ 'ಅದಿರಲಿ, ನೀವೆಲ್ಲಾ (ಕನ್ನಡೇತರರ ಗುಂಪು) ಕನ್ನಡ ಕಲಿತು ಬಿಟ್ಟಿರಲ್ಲಾ ಇಷ್ಟು ಬೇಗ ಅಥವಾ, ಇಂಗ್ಲಿಷ್/ಹಿಂದಿನಲ್ಲಿ ಮಾತಾಡ್ತಿದ್ದೀರಾ' ಎಂದೆ.

''ನಾವ್ಯಾಕೆ ಕಲೀಬೇಕು ಶೋಬಿತ್ರಿ ('ಸಾವಿತ್ರಿ'ಗೆ ಬಂದ ಸಾವು!), ಬೊನಿ ('ವಾಣಿ'ಗೆ ಬಂದ ಬೇಸೆ), ಬೋನಿಟಾ (ಬೋರ್ನ್‌ವಿಟಾ ಅಲ್ಲ 'ವನಿತಾ') ಅವರೆಲ್ಲ ಸುಮಾರಾಗಿ ಬಾಂಗ್ಲ ಮಾತಾಡ್ತಾರೆ. ಮಿಕ್ಕಿದವರು ಇಂಗ್ಲೀಷ್, ''ಕನ್ನಡ', ನೋಬನ್ ಶ್ಪೀಕ್ಸ್'' ಅಂದ್ರು!

ಅಲ್ಲಿಗೆ ನನ್ನ ಸಂಘ ಉದ್ಧಾರವಾಗಿ, ಕನ್ನಡಾಂಬೆಗಾಗಿ ಕಣ್ಣೊರೆಸಿಕೊಂಡು ನನ್ನ ದಾರಿ ಹಿಡಿದೆ.

ಈಗ ನಮ್ಮ ಹಿರಿಯ ಆಂಟೀಗಳನ್ನ ಸಾಕಷ್ಟು ತಪ್ಪಿಸಿಕೊಂಡು ತಿರುಗಾಡ್ತಿದ್ದೀನಿ! ■

---

## ಸಮಸ್ಯೆ ಮತ್ತು ಪರಿಹಾರ

**ಎಂಭತ್ತು ವರ್ಷದ ಸುಧಾಕರರಾಯರು ಒಬ್ಬರೇ ಇದ್ದಾರೆ. ಇತ್ತೀಚೆಗೆ ಅವರು ರಾತ್ರಿ ಮಲಗಿದಾಗ ತಮ್ಮ ಮಂಚದ ಕೆಳಗೆ ಯಾರೋ ಅವಿತುಕೊಂಡಿದ್ದಾರೆ ಅನಿಸುತ್ತದೆ. ಬಗ್ಗಿ ನೋಡುತ್ತಾರೆ, ಯಾರೂ ಇರುವುದಿಲ್ಲ. ಮತ್ತೆ ಹಾಗೇ ಅನಿಸುತ್ತದೆ. ಈ ಸಮಸ್ಯೆ ಅತಿಯಾದಾಗ ಅವರು ಒಬ್ಬ ಮನಶಾಸ್ತ್ರಜ್ಞರನ್ನು ಕಾಣಲು ಹೋಗಿ ಅವರಲ್ಲಿ ಸಮಸ್ಯೆಗಳನ್ನು ಹೇಳಿಕೊಂಡರು. ಆಗ ಮನಶಾಸ್ತ್ರಜ್ಞರು ವಾರಕ್ಕೆ ಮೂರು ದಿನದಂತೆ ಮುಂದಿನ ಆರು ತಿಂಗಳು ನೀವು ನನ್ನಲ್ಲಿಗೆ ಬನ್ನಿ ನಾನು ಕೆಲವು ಮಾನಸಿಕ ವ್ಯಾಯಾಮಗಳನ್ನು ಹೇಳಿಕೊಡುತ್ತೇನೆ. ಅದನ್ನು ಮಾಡಿ, ನಂತರ ನಿಮ್ಮ ಸಮಸ್ಯೆ ಸರಿಹೋಗಬಹುದು ಅಂದರು. ನೀವು ಎಷ್ಟು ಫೀಸ್ ತಗೋತೀರ ಅಂತ ಕೇಳಿದರೆ ಒಂದು ಭೇಟಿಗೆ ಐನೂರು ರೂಪಾಯಿ ಅಂದರು. ಅಂದರೆ ವಾರಕ್ಕೆ ಸಾವಿರದ ನೂರೈವತ್ತು ತಿಂಗಳಿಗೆ ಆರು ಸಾವಿರ. ಸರಿ ಬರ್ತಿನಿ ಅಂದು ಸುಧಾಕರರಾಯರು ಮನೆಗೆ ಬಂದರು. ಮತ್ತೆ ಅವರು ಮನಶಾಸ್ತ್ರಜ್ಞರತ್ತ ಹೋಗಲಿಲ್ಲ. ಒಂದು ದಿನ ಮನಶಾಸ್ತ್ರಜ್ಞರು ದಾರಿಯಲ್ಲಿ ಸಿಕ್ಕಿ ಯಾಕೆ ನೀವು ನನ್ನಲ್ಲಿಗೆ ಬರಲಿಲ್ಲ ಅಂತ ಕೇಳಿದರೆ, ಸುಧಾಕರರಾಯರು ನೀವು ಆರು ತಿಂಗಳಲ್ಲಿ ಪರಿಹಾರ ಆದರೂ ಆಗಬಹುದು ಅಂದ ಸಮಸ್ಯೆಯನ್ನು ಒಬ್ಬ ಬಡಗಿ ಒಂದೇ ನಿಮಿಷದಲ್ಲಿ ಪರಿಹಾರ ಮಾಡಿದ ಅಂದರು. ಮನಶಾಸ್ತ್ರಜ್ಞರು ಅದು ಹೇಗೆ ಅಂತ ಕೇಳಿದರೆ ಅವನು ನಮ್ಮ ಮನೆಗೆ ಬಂದು ಮಂಚದ ನಾಲ್ಕೂ ಕಾಲುಗಳನ್ನು ಕತ್ತರಿಸಿ ಹೋದ– ಅಂದು ಸುಧಾಕರರಾಯರು ಹೊರಟರು. ಮನಶಾಸ್ತ್ರಜ್ಞರು ಮೂಗಿನ ಮೇಲೆ ಬೆರಳಿಟ್ಟುಕೊಂಡು ನಿಂತೇ ಇದ್ದರು.**



# ಟೆಕ್ ಸ್ಯಾವಿ ಸಿಮಿ

• ಚಿತ್ರಾ ರಾಮಚಂದ್ರನ್

"ಏನದು ಘಾಟು? ಅಡುಗೆ ಮನೇಲಿ ಏನೋ ಸೀಯ್ತಾ  ಇದೆ!"

ಮೊಬೈಲ್‌ನಲ್ಲಿ ಮಗ್ನಳಾಗಿದ್ದ ಸಿಂಧು ಗಂಡನ ದನಿ ಕೇಳಿ ಬೆಚ್ಚಿ ಎದ್ದಳು.

"ಅಯ್ಯೋ! ಉಪ್ಪಿಟ್ಟು!"

ಹೊಗೆ ತುಂಬಿದ್ದ ಅಡುಗೆ ಮನೆಯಲ್ಲಿ ಧಗ ಧಗ ಉರಿಯುತ್ತಿದ್ದ ಒಲೆಯ ಮೇಲೆ ತಳ ಹಿಡಿದ ಬಾಣಲೆಯಲ್ಲಿ ಕರಗಾಗಿತ್ತು ಉಪ್ಪಿಟ್ಟು! ಅಚಾನಕ್ಕಾಗಿ ಬಾಣಲೆಯಲ್ಲಿದ್ದ ಮಗಚುಕೈಗೆ ಕೈ ಹಾಕಿ, ಕೈ ಸುಟ್ಟು, ತೊಟ್ಟಿಯತ್ತ ಜಿಗಿದು, ಸುಟ್ಟ ಕೈಯನ್ನು ನಲ್ಲಿನೀರಿನ ಕೆಳಗೆ ಹಿಡಿದು ಅವಳು ಪರದಾಡುತ್ತಿದ್ದಾಗಲೇ ಮಿತ್ರಾ ಅವರ ಪ್ರವೇಶವಾಗಬೇಕೆ?

"ಚಾರ್ಲಿ ಚಾಪ್ಲಿನ್ ಹಾಗೆ ಅಡುಗೆ ಮನೇಲಿ ಸ್ಲ್ಯಾಪ್ಸ್ಟಿಕ್ ಕಾಮೆಡಿ ಮಾಡ್ತಿದ್ದೀ? ವಾಟ್ಸಪ್?" ಎಂದು ಕುತೂಹಲದಿಂದ ವಿಚಾರಿಸಿದರು ಮಿತ್ರಾ .

"ಅಯ್ಯೋ! ಅಯ್ಯೋ! ನೀವೋ ನಿಮ್ ಹಾಸ್ಯ ಪ್ರಜ್ಞೆಯೋ! ಹಾಳಾದ ವಾಟ್ಸ್ಯಾಪ್! ಅದರಿಂದ್ಲೇ  ಉಪ್ಪಿಟ್ಟು ಸೀದು ಹೋಯಿತು! ಕೈ ಸುಟ್ಟು ಹೋಯಿತು!" ಕೈ ಒದರುತ್ತಲೇ ರೇಗಿದಳು ಸಿಂಧು.

"ಅಡುಗೆ ಮಾಡೋವಾಗ ನಿನ್ನ ಪಾಡಿಗೆ ಮೊಬೈಲ್ ಹಿಡ್ಕೊಂಡು ಕೂತುಬಿಟ್ರೆ ಇನ್ನೇನಾಗಬೇಕು!" ಎನ್ನುತ್ತಾ ಥಟ್ ಅಂತ ಸ್ಟವ್ ಆಫ್ ಮಾಡಿದರು ಮಿತ್ರಾ.

"ಎಲ್ಲ ನನ್ನ ಫ್ರೆಂಡ್ಸ್ ಮಾಡೋ ಕೆಲಸ! ಬೆಳಗಾಗೆದ್ದು 'ಗುಡ್ ಮಾರ್ನಿಂಗ್' ಅಂತ ಒಬ್ಬೊಬ್ಬಳೂ ಶುರು ಮಾಡ್ಬಿಟ್ರೆ ...! ಉಸ್! ಅಪ್ಪಪ್ಪಾ!" ಕೈಯಲ್ಲಿ ಉರಿ! ಮಾತಲ್ಲಿ ಧಗೆ!

"ಅಲ್ಲಮ್ಮ! ಬೆಳಗೆದ್ದು ಗುಡ್ ಮಾರ್ನಿಂಗ್ ಅನ್ನದೆ ಯಾರಾದ್ರೂ ಗುಡ್ ನೈಟ್ ಅಂತಾರೆಯೇ?" ಮಡದಿಯ ಕೈಗೆ ಅಕ್ಕರೆಯಿಂದ ಬರ್ನಾಲ್ ಹಚ್ಚುತ್ತಲೇ ನಿಧಾನವಾಗಿ ನುಡಿದರು ಮಿತ್ರಾ.

ಸಾಮಾನ್ಯವಾಗಿ ಹುರಿದುಂಬಿಸುವ ಅವರ ಮಾತಿನ ಕಚಗುಳಿ ಇಂದು ನಿಸ್ಸಾರವಾಗಿ ಕಂಡಿತು.

"ಥೆ! ಬೆಳಗೆದ್ದು ಕೆಲಸ ಮಾಡಗೊಡಿಸದೆ 'ಟ್ರಿಣ್ ಟ್ರಿಣ್' ಅಂತ ನೂರು ಗುಡ್ ಮಾರ್ನಿಂಗ್ ಮೆಸೇಜ್‌ಗಳು! ಯಾರಿಗೆ ಬೇಕಿತ್ತು? ಇವ್ರಿಗೆಲ್ಲ ಮಾಡೋ ಕೆಲಸ ಇಲ್ಲ ಅಂದ್ರೆ ನನಗೂ ಹಾಗೆಯೇ? ಕೈತುಂಬ ಕೆಲಸ! ಮನೆ ತುಂಬ ಮಕ್ಕಳು...."

"ಏನಂದೇ?"




"ಸರಿ! ಸರಿ! ಮೊಮ್ಮಕ್ಕಳು! ಅವರಿಗೆ ಸಮಯ ಸಮಯಕ್ಕೆ ಬೇಕಾದ ಹಾಗೆ ತಿಂಡಿ ತೀರ್ಥ ಮಾಡಿಕೊಟ್ಟು..." ಎಂದು ಹಲುಬುತ್ತಿದ್ದ ಸಿಂಧು ಇದ್ದಕ್ಕಿದ್ದಂತೆ ಜ್ಞಾಪಿಸಿಕೊಂಡು "ಅಯ್ಯಯ್ಯೋ! ಯಶು ಎಲ್ಲಿ? ಅವ್ನು ತಿಂಡಿಗೆ ಬರಲೇ ಇಲ್ವಲ್ಲ?" ಎಂದು ಹೌಹಾರಿದಳು.

"ಅವ್ನು ಆಗ್ಲೇ ಹೊರಟು ಹೋದ! ಅಜ್ಜಿ ಬ್ಯುಸಿ ಇದ್ದಾಳೆ! ಹೇಳ್ಬಿಡು ತಾತ ಅಂದ!"

"ಅಯ್ಯೋ! 'ಒಂದ್ನಾಲ್ಕು ತಿಂಗಳು ಮಕ್ಕಳನ್ನ ನೋಡಿಕೋ! ಕ್ಯಾಲಿಫೋರ್ನಿಯಾದಲ್ಲಿ ಟ್ರೈನಿಂಗ್ ಮುಗಿಸಿ ಬರ್ತೀನಿ' ಅಂತ ನನ್ನ ನಂಬಿ ಅಲ್ವೇ ವಸಿ ಮಕ್ಕಳನ್ನ ಇಲ್ಲಿ ಬಿಟ್ಟು

ಹೋಗಿದ್ದು! ಪಾಪ! ಹೊರಗೆ ಅದು ಏನು ತಿನ್ನತ್ತೋ ಏನೋ? ಮೊಟ್ಟಮೊದಲಾಗಿ ಇದೀಗ ಆಫೀಸಿಗೆ ಸೇರಿಕೊಂಡಿದೆ!" ಅಜ್ಜಿಯ ಮನಸ್ಸು ಆದ್ರವಾಗಿತ್ತು.

"ಚಿಂತೆ ಬಿಡು! ಪ್ರಪಂಚದಲ್ಲಿ ಸಿಕ್ಕಬಹುದಾದ ಎಲ್ಲ ವಿಧವಾದ ತಿಂಡಿ ತೀರ್ಥಗಳೂ ಕಾರ್ಪೊರೇಟ್ ಆಫೀಸಿನ ಫುಡ್ ಕೋರ್ಟಲ್ಲಿ ಲಭ್ಯ. ನಿನ್ನ ಸೀದ ತಿಂಡಿ ತಿನ್ನದಿದ್ರೆ ಅವನಿಗೆ ಯಾವ ನಷ್ಟವೂ ಇಲ್ಲ." ಎನ್ನುತ್ತ ಬರ್ನಾಲ್ ಮುಚ್ಚಿಟ್ಟರು ಮಿತ್ರಾ.

"ಮೊಮ್ಮಗನಿಗೆ ತಿಂಡಿ ಕೊಡಲಾರದ ಅಜ್ಜಿಯೂ ಒಬ್ಬ ಅಜ್ಜಿಯೇ? ಛೆ! ಎಲ್ಲ ಈ ವಾಟ್ಸಾಪ್ಪಿಂದ! ಈ ವರುಷದ ಅಷ್ಟು ಪ್ರಭಾತಗಳೂ ಸುಪ್ರಭಾತವಾಗಲಿ ಅಂತ ಒಂದೇ ಸತಿ ಎಲ್ಲರಿಗೂ ಮೆಸೇಜ್ ಮಾಡ್ಬಿಡ್ತೀನಿ! ದಿನ ನಿತ್ಯದ ತಾಪತ್ರಯ ತಪ್ಪತ್ತೆ! ಇನ್ಮುಂದೆ ಮೊಬೈಲನ್ನು ಕೈಗೆ ಎತ್ತಿದರೆ ನಾನು ನಾನೇ ಅಲ್ಲ!" ವೀರ ಘೋಷಣೆ ಮಾಡಿದಳು ಸಿಂಧು.

"ನೀನು ಅಸಡ್ಡೆಯಾಗಿದ್ದು ಅವರನ್ನೇಕೆ ಬೈತಿಯ?"

"ಸರಿ! ಏನೋ ಆಯಿತು ಬಿಡಿ! ಉಸ್ ಅಪ್ಪ! ಏನು ಉರಿಯಪ್ಪ! ಮಕ್ಕಳಿಗೇ ಅಂತ ತುಪ್ಪ ಗೋಡಂಬಿ ಸುರಿದು ಮಾಡಿದ್ದು! ನಾವಿಬ್ರೂ ಹೇಗಾದ್ರೂ ಆ ಉಪ್ಪಿಟ್ಟಿನ ಮೇಲ್ಭಾಗವನ್ನ ಬಾಯಿ ಮುಚ್ಕೊಂಡು ತಿನ್ನಬೋದು...."

"ಬಾಯಿ ಮುಚ್ಕೊಂಡು ಹೇಗೆ ತಿನ್ನೋದು?"

"ಸರಿ! ಮೂಗು ಮುಚ್ಕೊಂಡು ತಿನ್ನೋಣ! ಐಶು ಹೊರಡೋದ್ರಲ್ಲಿ ಅವಳಿಗಾದ್ರೂ ಹೊಸ ತಿಂಡಿ ರೆಡಿ ಮಾಡ್ಬಿಡ್ತೀನಿ!"

"ಬೇಡ ಸಿಮಿ! ರಿಲ್ಯಾಕ್ಸ್!" ಎನ್ನುತ್ತ ತನ್ನ ಪ್ರೀತಿಯ 'ಸಿಮಿ'ಯ ಕೊರಳಿಗೆ ಜೋತು ಬಿದ್ದಳು ಮೊಮ್ಮಗಳು ಐಶು.

"ನೀನು ರೆಸ್ಟ್ ತಗೋ! ನಾನು ಇವತ್ತು ಕಾಲೇಜಿಗೆ ಹೋಗಲ್ಲ! ಆಮೇಲೆ, ನಮ್ಮ 'ಸಿಮಿ ಯಶು ಐಶು' ವಾಟ್ಸಾಪ್ ಗ್ರೂಪಲ್ಲಿ ಫುಡ್ ಕೋರ್ಟ್ ತಿಂಡಿಗಳ ಫೋಟೋ ಹಾಕಿದ್ದಾನೆ ನೋಡು ನಿನ್ನ ಬಕಾಸುರ ಮೊಮ್ಮಗ ಯಶು! ಯಮ್ಮ್!" ಎಂದು ಜೊಲ್ಲು ಸುರಿಸಿದಳು ಐಶು.

"ನಾನು ತಿಂಡಿಗೆ ಆನ್‌ಲೈನ್ ಆರ್ಡರ್ ಮಾಡ್ತೀನಿ! ನಿನಗೇನು ಬೇಕು? ತಾತನಿಗೇನು ಬೇಕು? ಇಡ್ಲಿ, ದೋಸೆ, ಇಲ್ಲ ಪೂರಿ ಸಾಗು? ಸ್ವೀಟ್? ನಮಗೂ ಏನೂ ಕಡಿಮೆ ಆಗಿಲ್ಲಾ ಅನ್ನೋದನ್ನ ಯಶುಗೆ ಫೋಟೋ ತೆಗೆದು ಕಳಿಸಿ ತೋರಿಸೋಣ."

ಅಜ್ಜಿ ತಾತನಿಗೆ ಬೇಕಾದ ತಿಂಡಿಗಳನ್ನೆಲ್ಲ ಇಪ್ಪತ್ತೇ ನಿಮಿಷಗಳಲ್ಲಿ ಉತ್ಸಾಹದಿಂದ ತರಿಸಿದಳು ಐಶು.

"ಅಬ್ಬ! ಇಂದಿನ ಟೆಕ್ನಾಲಜಿಯಿಂದ ಅದೆಷ್ಟೆಲ್ಲ ಅನುಕೂಲಗಳು!" ಟೆಕ್ನಾಲಜಿಯ ಗುಣಗಾನ ಮಾಡುತ್ತಾ ತಿಂಡಿಗಳನ್ನು ಸವಿಯುತ್ತಿದ್ದ ಹಾಗೆಯೇ ಯಾರದ್ದೋ ಮೊಬೈಲ್ 'ಟ್ರಿಣ್' ಗುಟ್ಟಿತು! ಮೆಸೇಜ್!



"ಸಿಮಿ! ನಿನ್ನ ಮೊಬೈಲ್..." ಐಶು ಅಜ್ಜಿಯ ಕೈಗೆ ಮೊಬೈಲ್ ಕೊಟ್ಟಳು.

ಸಿಂಧು ಇದ್ದಲ್ಲಿಂದ ಎಗರಿ ಮೆಸೇಜ್ ವೀಕ್ಷಿಸಿದಳು.

"ಓ! ಸುಜಾತಾಳ ಮೆಸೇಜ್!" ಮೊಬೈಲ್ ಹಸ್ತಾಂತರವಾಯಿತು.

"ಸಿಮಿ ಇದೀಗತಾನೆ ಏನೋ ಶಪಥ ಮಾಡಿದ್ದಳು!" ಎಂದು ಕೀಟಲೆಯಾಗಿ ನಕ್ಕಳು ಐಶು.

"ಹೊಸತಾಗಿ ಡಾಬರ್ ವ್ಯಾನ್ ಕೊಂಡವರು, ಹೊಸತಾಗಿ ಗಂಡನನ್ನ ಕಟ್ಟಿಕೊಂಡವರು, ಹೊಸ ಮೊಬೈಲ್ ಖರೀದಿಸಿದವರು ಎಲ್ರೂ ಒಂದೇ ರೀತಿ! ಅವರೆಲ್ಲ ಆಡೋದೇ ಹೀಗೇ!" ಎಂದು ಪಿಸುಗುಟ್ಟಿದರು ಮಿತ್ರಾ.

"ಐಶು ನೀನು ಸ್ವೀಟ್ ಆರ್ಡರ್ ಮಾಡಿದ್ದು ಸಾರ್ಥಕವಾಯಿತು! ಸುಜಾತಾ ಅತ್ತೆಯ ಮಗಳಿಗೆ ಮದುವೆ ಗೊತ್ತಾಗಿದೆಯಂತೆ! ಮ್ಯಾಟ್ರಿಮೋನಿ. ಇನ್ ಮೂಲಕ ಸಿಕ್ಕಿದ ವರನಂತೆ!"

ಮೊಬೈಲ್ ಪಕ್ಕಕ್ಕಿಟ್ಟು ಸಂತೋಷದಿಂದ ನುಡಿದಳು ಸಿಂಧು.

"ಸರಿಯಾಗಿ ವಿಚಾರಿಸಿದ್ದಾರೆ ತಾನೇ? ಕೆಲವು ಮ್ಯಾಟ್ರಿಮೋನಿಯಲ್ ಸೈಟ್ಗಳನ್ನ ನಂಬಿ ಅನೇಕ ಮುಗ್ಧ ಜನ ಮೋಸ ಹೋಗಿದ್ದಾರೆ." ಸಾವಕಾಶವಾಗಿ ಎಚ್ಚರಿಸುವಂತೆ ನುಡಿದರು ಮಿತ್ರಾ.

"ಬಿಡ್ತು ಅನ್ನಿ! ಎಲ್ಲ ವಿಚಾರಿಸಿದ್ದಾರಂತೆ. ಹುಡುಗನ ಫೋಟೋ ಮತ್ತಿತರ ವಿವರಗಳನ್ನ ಮೇಲ್ ಮಾಡಿದ್ದಾಳಂತೆ ಸುಜಾತ." ಎಂದ ಸಿಂಧು "ನಿಮಗೆ ಎಲ್ಲದ್ರಲ್ಲೂ ಸಂಶಯವೇ!" ಎಂದು ಖಂಡನೆಯನ್ನೂ ಮಾಡಿದಳು.

"ನನ್ನ ಮೇಲೆ ಯಾಕೆ ರೇಗುತ್ತೀ? ನಿನ್ನ ಮೊಬೈಲ್ನಲ್ಲಿ ಸ್ಪ್ಯಾಮ್ ಕರೆಗಳು ಬರಲ್ವೇನು? ಅದೇ ರೀತಿ ವೆಬ್ ಸೈಟ್ ಸ್ಕ್ಯಾಮ್ಗಳೂ ಇವೆ ಅಂತ ಎಚ್ಚರಿಸಿದೆ! ಅಷ್ಟೇ!"

"ತಾತ! ಈ ಬ್ಯಾಂಕಿಂದ ಆ ಬ್ಯಾಂಕಿಂದ ಅಂತ ಸಿಮಿಗೆ ದಿನಕ್ಕೆ ಹತ್ತು ಕರೆಗಳು ಬರ್ತಿದ್ವಲ್ಲ? ಅದಕ್ಕೇ ನಾನು ಅವಳ ಮೊಬೈಲ್‌ನಲ್ಲಿ ಟ್ರೂ ಕಾಲರ್ ಸ್ಥಾಪಿಸಿದ್ದೀನಿ! ಇತ್ತೀಚಿಗೆ ಫಿಶಿಂಗ್ ಜಾಸ್ತಿಯಾಗ್ಬಿಟ್ಟಿದೆ! ಅದ್ರಲ್ಲೂ ವಯಸ್ಸಾದವರಿಗೆ ಫೋನ್ ಮಾಡಿ ಕುಲ ಗೋತ್ರ, ಕಡೆಗೆ ಬ್ಯಾಂಕ್ ಅಕೌಂಟ್ ನಂಬರ್, ಕ್ರೆಡಿಟ್ ಕಾರ್ಡ್ ವಿವರ ಎಲ್ಲ ಕೇಳ್ಕೊಂಡು ಮೋಸ ಮಾಡೋದು ಹೆಚ್ಚಾಗಿಬಿಟ್ಟಿದೆ. ಸ್ಪ್ಯಾಮ್ ಕರೆಗಳನ್ನ ಹೇಗೆ ತಡೆಗಟ್ಟಬೇಕು ಅನ್ನೋದನ್ನ ಸಿಮಿಗೆ ಹೇಳ್ಕೊಟ್ಟಿದ್ದೀನಿ!" ಎಂದಳು ಐಶು.

"ಅದೇನು ಹೇಳಿಕೊಟ್ಟಿದ್ದೀಯೋ ಏನೋ! ಪಾಪ! ಆವತ್ತು ನಾನು ಸಿಕ್ಲಿಲ್ಲ ಅಂತ, ಪಾಂಡು ನಿನ್ನ ಸಿಮಿಯ ಮೊಬೈಲ್ಗೆ ಕರೆ ಮಾಡಿದ್ರೆ, ಅವನನ್ನ ಗದರಿಸಿ ಜೀವ ಉಡಾಯಿಸಿ ಬಿಟ್ಟಳು ನಿನ್ನಜ್ಜಿ! ಯಾರು ಮಾತಾಡೋದು ಏನು ಅಂತ ವಿಚಾರಿಸದೆ ಏಕ್ ದಂ ಬಯ್ಯಲು ಶುರು ಮಾಡೋದೇ? ಪಾಪ ಪಾಂಡು, ಬೆದರಿಹೋದ!" ಎಂದು ಪಶ್ಚಾತಾಪದಿಂದ ನುಡಿದರು ಮಿತ್ರಾ.

ಮಿತ್ರಾ ಮತ್ತು ಪಾಂಡು ಇಬ್ಬರೂ ಚೆಡ್ಡಿ ಸ್ನೇಹಿತರು. ಈ ಆನ್ ಲೈನ್ ಬ್ಯಾಂಕಿಂಗ್ ಎಲ್ಲ ಬರೋ ಮೊದಲೇ ಪಾಂಡು ಸ್ಟೇಟ್ ಬ್ಯಾಂಕ್ ಮ್ಯಾನೇಜರಾಗಿದ್ದು ನಿವೃತ್ತಿ ಹೊಂದಿದ್ದರು. ಸರಳ ಸ್ವಭಾವದ ಪಾಂಡುವನ್ನ ಎಲ್ಲರೂ 'ಬ್ಯಾಂಕ್ ಪಾಂಡು' ಎಂದೇ ಕರೆಯುತ್ತಿದ್ದರು. ಪಾಪ ಪಾಂಡು! ಅವರ ಮುಖ ನೋಡಿಯೇ ಸೀರಿಯಲ್ಗೆ ಆ ಹೆಸರಿಟ್ಟರೋ ಏನೋ ಅಂದುಕೊಳ್ಳುವಷ್ಟು ಪಾಪವಾದ ಮೊಗ ಹೊತ್ತಿದ್ದರು ಅವರು! ಅವರನ್ನ ಹೋಗಿ......



“...ಏನಂದ್ಕೊಂಡಿದ್ದೀರಿ ನೀವೆಲ್ಲ? ಸೀನಿಯರ್ ಸಿಟಿಜನ್ಸ್ ಅಂದ್ರೆ ಮೋಸ ಮಾಡೋದು ಲೇಸು, ಹೇಗೂ ಅವೆಲ್ಲಾ ಬೆಪ್ಪು ಮುಂಡೇವು ಅಂದುಕೊಂಡ್ರೇನು? ನನ್ನ ತಾತ ಆ ಕಾಲದಲ್ಲಿ ನ್ಯಾಯಾಧೀಶರಾಗಿದ್ದರು! ನನ್ನ ಮುತ್ತಾತ ಬ್ರಿಟಿಷರ ಕಾಲದಲ್ಲೇ ರಾಜ್ಯದ ಡಿ. ಐ. ಜಿ. ಆಗಿದ್ದರು! ನನ್ನ ಅಳಿಯ ಸೈಬರ್ ಕ್ರೈಂ ಪೊಲೀಸ್ ಇಲಾಖೆಯಲ್ಲಿ ದೊಡ್ಡ ಆಫೀಸರ್! ಅವರಿಗೆ ಪುಕಾರು ಮಾಡಿದ್ರೆ ನಿಮ್ಮನ್ನೆಲ್ಲ ರಸ್ತೆಯಲ್ಲಿ ದರ ದರ ಎಳಕೊಂಡು ಹೋಗಿ.....“

‘ಪಾಪ! ಅವರನ್ನ ಏನೆಲ್ಲಾ ಅಂದುಬಿಟ್ಟೆ!’ ಎಂದು ಮನಸ್ಸಲ್ಲಿ ಮರುಗಿದರೂ ಬಿಗುಮಾನ ಬಿಟ್ಟುಕೊಡಲು ಸಿಂಧು ತಯಾರಿಲ್ಲ.

“ವಿಚಾರಿಸದೆ ಇರುತ್ತೇನೆಯೇ? ಎರಡೆರಡು ಬಾರಿ ಕೇಳಿದೆ. ಅವರು ಬ್ಯಾಂಕ್ ಪಾಂಡು ಅಂದರೋ ಏನೋ? ನನಗೆ ಕೇಳಿಸಿದ್ದು ಬರಿ ಬ್ಯಾಂಕ್ ಮಾತ್ರ..” ಎಂದು ವಾದ ಮಾಡಿದಳು ಸಿಂಧು.

“ಸರಿಯಾಗಿ ಕೇಳಿಸ್ಲಿಲ್ಲಾ ಅಂದ್ರೆ ಕಾಲ್ ಕಟ್ ಮಾಡಬೋದಿತ್ತು! ಐಶು ಸ್ಥಾಪಿಸಿರೋ ಟ್ರೂ ಕಾಲ್ ಮೂಲಕ ಬ್ಲಾಕ್ ಮಾಡಬೋದಿತ್ತು!“

‘ಮಾಡಬೋದಿತ್ತು! ಆದರೆ ಅದೇಕೋ ಬ್ಯಾಂಕ್ ಅನ್ನೋ ಪದ ಕೇಳಿಸಿದೊಡನೆ ಕೋಪ ಕೆರಳಿಬಿಡ್ತು!’

ಸಿಂಧು ಮನಸ್ಸೊಳಗೇ ಮರುಗಿದಳು.

“ಐಶು! ನಿನ್ನ ಸಿಮಿಯಿಂದಾಗಿ ಇನ್ನು ಮುಂದೆ ಪಾಂಡು ನಮ್ಮ ಮನೆಯ ಕಡೆ ತಲೆ ಇಟ್ಟೂ ಮಲಗಲ್ಲ ಅನ್ಸತ್ತೆ!” ಎಂದು ಗಡುಸಾಗಿ ನುಡಿದರು ಮಿತ್ರಾ.

“ಹುಮ್! ಆಗೋ ಅನಾಹುತವೆಲ್ಲ ನನ್ನಿಂದಲೇ ಅನ್ನಿ!” ಸಿಂಧು ಕರುಬಿದಳು.

”ಸಿಮಿ ಬಾ! ಸುಜಾತ ಅತ್ತೆಯ ಮೇಲ್ ನೋಡೋಣ. ಹಾಗೆಯೇ ನಿನ್ನ ‘ಸಿಮಿಸ್ ಕಿಚೆನ್’ಗೆ ಬಂದಿರೋ ಮೇಲ್ಗಳನ್ನೂ ನೋಡೋಣ. ಆಗಿಂದಾಗ್ಯೆ ಚೆಕ್ ಮಾಡಿ ನಿನ್ನ ಫ್ಯಾನ್ಗಳಿಗೆ ಉತ್ತರ ಬರೀದಿದ್ರೆ ನೀನು ಫೇಮಸ್ ಆಗೋದು ಹೇಗೆ?“

ಒಂದು ಮಿನಿ ಸಿಮಿ ಯುದ್ಧ ಶುರುವಾಗೋ ಸೂಚನೆಗಳು ಕಂಡುಬಂದ ಕೂಡಲೇ ಅಜ್ಜಿಯನ್ನು ದಬ್ಬಿಕೊಂಡು ಕಂಪ್ಯೂಟರ್ ಇದ್ದ ಕೋಣೆ ಸೇರಿದಳು ಐಶು.

“ನಿನ್ನ ಬ್ಲಾಗ್ ತುಂಬ ಸುಂದರವಾಗಿ ಕಾಣ್ಸತ್ತೆ ಸಿಮಿ!”

“ನೀನು ಶುರು ಮಾಡಿ ಕೊಟ್ಟ ಬ್ಲಾಗ್ ಅಲ್ವೇ? ‘ಸಿಂಧುಮಿತ್ರಾಸ್ ಕಿಚನ್’ ಓಬಿರಾಯನ ಕಾಲದ ಹೆಸರಾಗಿದೆ ಅಂತ, ಅದನ್ನೇ ‘ಸಿಮಿಸ್ ಕಿಚನ್’ ಅಂತ ಚುಟಕ ಮಾಡಿ, ಬ್ಲಾಗಿಗೆ ಫ್ಯಾಷನಾಗಿ ಹೆಸರಿಟ್ಟವಳೂ ನೀನೇ ಅಲ್ವೇ!”



“ಬರುಬರುತ್ತ ಒಳ್ಳೊಳ್ಳೆ ಮನೆ ಅಡುಗೆಯ ಪಾಕ ವಿಧಾನಗಳನ್ನ ಅಚ್ಚುಕಟ್ಟಾಗಿ ಟೈಪ್ ಮಾಡಿ ಪೋಸ್ಟ್ ಮಾಡಕ್ಕೂ ಕಲಿತುಬಿಟ್ಟೆ. ನೀನು ಮೊಬೈಲಲ್ಲಿ ತೆಗೆಯೋ ಚಿತ್ರಗಳೂ ಸೂಪರ್! ಇಷ್ಟೆಲ್ಲಾ ಮಾಡ್ತಿ! ಮೇಲ್ಗಳಿಗೆ ಮಾತ್ರ ಯಾಕೆ ಉತ್ತರ ಬರೆಯಲ್ಲ?”

ಮೇಲ್ಗಳ ಮೇಲೆ ಕಣ್ಣಾಡಿಸುತ್ತಲೇ ಕೇಳಿದಳು ಐಶು.

“ಇನ್ನೂ ಅದಕ್ಕೆಲ್ಲ ಧೈರ್ಯ ಬಂದಿಲ್ಲ ಐಶು! ಏನೋ ಬರೆಯಕ್ಕೆ ಹೋಗಿ ಅದೇನೋ

ಆಗ್ಬಿಟ್ರೆ? ಪರಿಚಯವಿಲ್ಲದವರಿಗೆಲ್ಲ ಹೇಗೆ ಬರೆಯೋದು?"

ಒಂದೊಂದೇ ಮೇಲನ್ನು ಅಜ್ಜಿಗೆ ಓದಿ ತೋರಿಸುತ್ತಿದ್ದ ಐಶು "ಅಯ್ಯೋ! ಇದು ಎಷ್ಟು ತಮಾಷೆಯಾಗಿದೆ ಕೇಳು ಸಿಮಿ!" ಎಂದು ಉತ್ಸಾಹದಿಂದ ಚಪ್ಪಾಳೆ ತಟ್ಟಿ ಮುಂದುವರೆದಳು.

"ಡಿಯರ್ ಸಿಮಿ, ನಾನು ಪಂಜಾಬಿ ಹುಡುಗಿ. ನನ್ನ ಗಂಡ ಅಚ್ಚ ಕನ್ನಡಿಗ. ನಿಮ್ಮ ಬ್ಲಾಗ್ ನೋಡಿ ನಾನು ಮಾಡಿದ ಕಾಳು ಹುಳಿ ತಿಂದು 'ಏಳೇಳು ಜನುಮಕ್ಕೂ ನೀನೆ ನನ್ನ ಹೆಂಡತಿ' ಎಂದು ಆತ ಕುಣಿದಾಡಿಬಿಟ್ಟ. ನಮ್ಮ ವಿವಾಹ ಬಂಧನವನ್ನು ಬಲಪಡಿಸಿದ ನಿಮಗೆ ನನ್ನ ಹೃತ್ಪೂರ್ವಕ ವಂದನೆಗಳು. ರೇಷ್ಮಾ."

"ಎಲ್ಲ ಮೆಚ್ಚುಗೆಯ ಮೇಲ್ಗಳೇ! ಓ ಸಿಮಿ! ನಿನ್ನ ಬ್ಲಾಗ್ ಎಷ್ಟು ಜನರ ಸಂತೋಷಕ್ಕೆ ಕಾರಣವಾಗಿದೆ ನೋಡು! ಈ ಹುಡುಗಿಗೆ ಏನಾದರೂ ಒಳ್ಳೆ ಉತ್ತರವನ್ನ ಬರಿ!" ಕುಣಿದಾಡಿದ ಐಶು ಸಿಂಧುವಿನ ಕೆನ್ನೆಗೆ ಸಿಹಿ ಮುತ್ತನ್ನಿಟ್ಟಳು. ಸಿಂಧುವಿಗೆ ಎದೆಯುಬ್ಬುವಷ್ಟು ಸಂತೋಷ. ಒಂದು ಕಾಳು ಹುಳಿಗೆ ಇಷ್ಟೊಂದು ಪ್ರಭಾವವೇ? ಏನು ಉತ್ತರ ಬರೆಯುವುದು ಎಂದು ಯೋಚಿಸುತ್ತಿದ್ದಾಗ ಫೇಸ್ ಟೈಮಲ್ಲಿ ಆನಂದ ಕರೆ ಮಾಡಿದ.

ಕಾಲ್ ತೆಗೆದುಕೊಂಡ ಐಶು "ಹಾಯ್ ಮಾವ! ಸಿಮಿ ವಿವಾಹ ಬಂಧನಗಳನ್ನು ಬಲಪಡಿಸುವ ಕಾರ್ಯದಲ್ಲಿ ತೊಡಗಿದ್ದಾಳೆ! ಇರು ಅವಳ ಕೈಗೆ ಕೊಟ್ಟೆ!" ಎನ್ನುತ್ತ ಸಿಂಧು ಕೈಗೆ ಮೊಬೈಲ್ ಕೊಟ್ಟಳು.

"ಏನಮ್ಮಾ ಹೇಳ್ತಿದ್ದಾಳೆ ಐಶು?" ಆಶ್ಚರ್ಯದಿಂದ ವಿಚಾರಿಸಿದ ಮಗನಿಗೆ ಮೇಲ್ ವಿವರಗಳನ್ನು ಹೇಳಿದಳು ಸಿಂಧು. ಅದೂ ಇದೂ ಮಾತನಾಡುತ್ತ ಸಮಯ ಕಳೆಯಿತು.

"ನಾಳೆ ಶನಿವಾರ ಥ್ಯಾಂಕ್ಸ್ ಗಿವಿಂಗ್ ಔತಣ ಇದೆ! ಪಾಟ್ ಲಕ್ ಪಾರ್ಟಿ. ನಮ್ಮ ಮನೆಯಿಂದ ಕುಂಬಳಕಾಯಿ ಹಲ್ವಾ! ವೆಜಿಟಬಲ್ ಬಿರಿಯಾನಿ! 'ಸಿಮಿಸ್ ಕಿಚನ್' ನೋಡಿ ಆಗಲೇ ಎಲ್ಲ ರೆಡಿ ಮಾಡಿಯಾಯಿತು!" ಎಂದ ಆನಂದ.

"ಓ! ವೆರಿ ಗುಡ್! ನಾಳೆ ಇಲ್ಲಿ ಕಾರ್ತಿಕ ಹಬ್ಬ! ದೀಪದ ಸಾಲನ್ನ ಹಚ್ಚಿ ಪುರಿ ಉಂಡೆ ಮಾಡಿ ದೇವರಿಗೆ ಕೈ ಮುಗೀಬೇಕು! ನಿಮ್ಮೆಲ್ಲರ ಜೊತೆ ಹಬ್ಬ ಮಾಡಿ ಎಷ್ಟು ವರುಷಗಳಾಗಿ ಹೋದವು! ಈ ಹಬ್ಬಕ್ಕೆ ಯಶು ಐಶು ಜೊತೆಗಿರೋದು ತುಂಬ ಸಂತೋಷವಾಗಿದೆ! ಅದ್ಸರಿ ಪಾಪು ಹೇಗಿದೆ? ಅದರ ಹುಟ್ಟು ಹಬ್ಬಕ್ಕೆ ವಾಟ್ಸಾಪ್ನಲ್ಲಿ ಮೆಸೇಜ್ ಕಳಿಸಿದ್ದೆ. ಅದಕ್ಕೆ ತೋರಿಸಿದೆಯಾ?"

ಆನಂದ ಯಾಕೋ ಜೋರಾಗಿ ನಕ್ಕ.

"ಹೂಂ! ಮಿಡಿಯೋ ಕೆಂಪು ಹೃದಯ! ಹೂ ಗೊಂಚಲು! ಎಲ್ಲ ಎಮೋಜಿಗಳನ್ನೂ ತೋರಿಸಿದೆ. ಮೂರನೆಯ ಎಮೋಜಿ ನೋಡಿ 'ಅಜ್ಜಿ ಯಾಕೆ ಪೂ ಕಳಿಸಿದ್ದಾಳೆ' ಅಂತ ಕೇಳ್ತು!" ಮತ್ತೆ ನಗ ತೊಡಗಿದ ಆನಂದ.

"ಪೂನಾ? ಒಳ್ಳೆ ಕೋನ್ ಐಸ್ ಕ್ರೀಮ್ ಎಮೋಜಿ ಅಲ್ವೇ ನಾನು ಕಳಿಸಿದ್ದು?" ಸಿಂಧು ಆಶ್ಚರ್ಯದಿಂದ ಕೇಳಿದಳು.

ಹಿಂದೆ ಹಾಸಿಗೆಯ ಮೇಲೆ ಕುಳಿತಿದ್ದ ಐಶು ಬಿದ್ದು ಬಿದ್ದು ನಗಲಾರಂಭಿಸಿದಳು.

"ನೀನು ಕಳಿಸಿದ ಎಮೋಜಿ ಏನನ್ನ ಸೂಚಿಸತ್ತೆ ಅಂತ ಐಶೂನ ಕೇಳು! ಮತ್ತೆ



ಮಾತಾಡ್ತೀನಿ ಅಮ್ಮ! ಬೈ!" ಎಂದು ಕತ್ತರಿಸಿದ ಆನಂದ.

"ಸಿಮಿ! ನೀನಿನ್ನೂ ಕಲಿಯೋದು ಬೇಕಾದಷ್ಟಿದೆ! ಮೊದ್ಲು ಗೂಗಲ್ ಮಾಡಿ ಒಂದೊಂದೇ ಎಮೋಜಿಯ ಅರ್ಥ ತಿಳಿದುಕೋ. ಆಮೇಲೆ ಯೂಸ್ ಮಾಡು. ಇಲ್ದಿದ್ರೆ ಯಾರಿಗಾದ್ರೂ ಏನಾದ್ರೂ ಕಳಿಸಕ್ಕೆ ಹೋಗಿ ರಾದ್ಧಾಂತ ಆದೀತು!" ಇನ್ನೂ ಗುಳು ಗುಳು ನಗುತ್ತಲೇ ಉಪದೇಶ ಮಾಡಿದಳು ಐಶು.

"ಐಶು ಅಷ್ಟು ನಗೋದು ಏಕೆ?" ಎನ್ನುತ್ತಾ ಕಾಫಿ ಲೋಟಗಳ ಸಹಿತ ಹಾಜರಾದರು ಮಿತ್ರಾ.

"ತಾತ! ಮಾವ ಫೇಸ್ ಟೈಮಲ್ಲಿ ಬಂದಿದ್ರು. ಪಾಪು ಸಿಮಿ ಕಳಿಸಿದ ಎಮೋಜಿ ನೋಡಿ ಅಜ್ಜಿ ಏಕೆ ಪೂ ಕಳಿಸಿದೆ ಅಂತ ಕೇಳ್ತಂತೆ!"

ಸಿಂಧು ಮಿಕ ಮಿಕ ನೋಡುತ್ತಿರಲು ಮಿತ್ರಾ ಸಹ ಜೋರಾಗಿ ನಗಲಾರಂಭಿಸಿದರು. ಅವಳಿಗೆ ಇನ್ನಷ್ಟು ರೇಗಿತು.

ಅದೇ ಸಮಯ ಸುಮಿಯಿಂದ ಸ್ಕೈಪ್ ಕರೆ ಬಂದಿತು.

"ಸಿಮಿ! ಬ್ಯುಸಿ ಇದ್ದೀಯಾ?" ಎಂದಳು ಅವಸರವಸರವಾಗಿ. ಐಶೂಳ ದಯೆಯಿಂದ ಎಲ್ಲರಿಗೂ ಸಿಮಿ ಆಗಿಹೋಗಿದ್ದಳು ಸಿಂಧು.

"ಅದೆಲ್ಲ ಏನೂ ಇಲ್ಲ! ಏನು ಹೇಳು!"

"ನನಗೆ ಇನ್ನು ಹತ್ತು ನಿಮಿಷಗಳಲ್ಲಿ ಒಂದು ತುರ್ತಾದ ಆಫೀಸ್ ಕಾಲ್ ಇದೆ. ಆದ್ವಿಗೆ ಈ ಬೌಲಲ್ಲಿ ಅನ್ನ ಕಲಸಿ ಇಟ್ಟಿದ್ದೀನಿ. ಪೂರ್ತಿ ಊಟ ಮಾಡಿ ಖಾಲಿ ಬಟ್ಟಲು ತೋರಿಸಿದರೆ ಸಿಮಿ ಕಥೆ ಹೇಳ್ತಾಳೆ ಅಂತ ಪ್ರಾಮಿಸ್ ಮಾಡಿದ್ದೀನಿ. ಒಂದು ಮುಕ್ಕಾಲು ಘಂಟೆ ಕಾಲ ಅವಳನ್ನ ನಿನ್ನ ಮುಂದೆ ಕೂರಿಸ್ಕೊಂಡು ನೋಡ್ಕೊಳಕ್ಕೆ ಆಗತ್ತಾ?"

ಇದಕ್ಕಿಂತ ಖುಷಿ ಕೊಡುವ ಕೆಲಸ ಏನಿರಬೇಕು? ಲಾಂಗ್ ಡಿಸ್ಟೆನ್ಸ್ ಬೇಬಿ ಸಿಟ್ಟಿಂಗ್ ಮಾಡಲು ಖುಷಿಯಿಂದ ಒಪ್ಪಿದಳು ಸಿಂಧು! ದೂರದೇಶದಲ್ಲಿರುವ ಮೊಮ್ಮಕ್ಕಳನ್ನ ನೋಡಿಕೊಳ್ಳಲು ಅನುಕೂಲ ಮಾಡಿಕೊಟ್ಟ ಇಂಟರ್‌ನೆಟ್ಟಿಗೆ ನಮೋನಮಃ ಎಂದಿತು ಮನಸ್ಸು!

"ಆದ್ವಿ! ನೀನು ಬೇಗ ಬೇಗ ಊಟ ಮಾಡಿ ಮುಗಿಸಿದರೆ ಒಳ್ಳೆ ಕಥೆ ಹೇಳ್ತೀನಿ!"

ಒಂದು ಚಮಚ ಅನ್ನವನ್ನು ತಿಂದು "ಯಾವ ಕಥೆ? ಐಶು ಅಕ್ಕಾನೂ ಕೇಳ್ತಾಳಾ?" ಎಂದಿತು ಆದ್ವಿ. ತಾತ, ಅಜ್ಜಿ, ಐಶು ಅಕ್ಕ ಎಲ್ಲರೊಂದಿಗೆ ಮಾತನಾಡುತ್ತ ಆಡುತ್ತ ಖಾಲಿ ಮಾಡಿದ ಬಟ್ಟಲನ್ನು ತೋರಿಸಿತು.

"ಒಂದಾನೊಂದು ಕಾಲದಲ್ಲಿ ಒಂದು ಸುಂದರವಾದ ರೋಬೊ ಇತ್ತು! ಅದರ ಹೆಸರು.. ಹೂಂ! ಮುಂದೆ ಏನಾಯಿತು? ಹೇಳು ಸಿಮಿ!" ಆದ್ವಿ ತೆಗೆದುಕೊಟ್ಟ ವಾಕ್ಯದಿಂದ ಕಥೆಯನ್ನು ಬೆಳೆಸ ತೊಡಗಿದ ಸಿಂಧುವಿಗೆ ಮುಕ್ಕಾಲು ಗಂಟೆ ಕಾಲ ಕಳೆದದ್ದೇ ತಿಳಿಯಲಿಲ್ಲ.

"ಕಾಲ್ ಮುಗೀತು! ಥ್ಯಾಂಕ್ಸ್ ಸಿಮಿ! ಐ ಲವ್ ಯೂ!" ಎಂದು ಸುಮಿ ವಿದಾಯ ಹೇಳಿದಳು.

"ಸೂಪರ್ ಕಥೆ ಸಿಮಿ!" ಎಂದು ಫ್ಲೈಯಿಂಗ್ ಕಿಸ್ ಕೊಟ್ಟ ಅದ್ವಿಗೆ ಟಾಟಾ ಹೇಳಿದಾಗ



ಊಟದ ಹೊತ್ತು ಆಗಿಹೋಗಿತ್ತು.

"ಅನ್ನ ಸಾರು ರೆಡಿ! ಊಟಕ್ಕೆ ಏಳಿ!" ಎಂದು ಸಿಂಧು ಮತ್ತು ಐಶು ಇಬ್ಬರನ್ನೂ ಮಿತ್ರಾ ಅವರು ಎಬ್ಬಿಸಿದಾಗ ಮನಸ್ತಾಪವೆಲ್ಲ ಮಾಯವಾಗಿತ್ತು.

"ಸಿಮಿ! ಇನ್ನೂ 'ಸಿಮಿಸ್ ಕಿಚನ್' ಫೇಸ್ಬುಕ್ ನೋಡೇ ಇಲ್ಲ. ತುಂಬ ಕಾಮೆಂಟ್ಸ್, ಲೈಕ್ಸ್, ಬಂದಿವೆ ಅಂತ ನೋಟಿಫಿಕೇಷನ್ಸ್ ಬಂದಿವೆ! ಎಲ್ಲ ನೋಡೋಣ ನಡಿ!" ಎಂದು ಊಟದನಂತರ ಅಜ್ಜಿಯನ್ನು ಮತ್ತೆ ಕಂಪ್ಯೂಟರ್ ಬಳಿ ಎಬ್ಬಿಸಿಕೊಂಡು ಹೋದಳು ಐಶು.

ಫೇಸ್ಬುಕ್ ಪುಟದಲ್ಲಿ ಸಿಂಧು ನಿನ್ನೆತಾನೆ ಮೈಸೂರ್ ಪಾಕ್ ಮಾಡಿ ಫೋಟೋ ತೆಗೆದು 'ಗೋಲ್ಡನ್ ಬಾರ್ಸ್ ಆಫ್ ಮೈಸೂರ್' ಎಂದು ಶಿರೋನಾಮೆ ಕೊಟ್ಟು ಪ್ರಕಟಿಸಿದ್ದಳು.

"ಸೂಪರ್ ಸಿಮಿ ಸೂಪರ್! ನಿನ್ನ 'ಸಿಮಿಸ್ ಕಿಚನ್' ಫೇಸ್ ಬುಕ್ಕಲ್ಲಿ ಇವತ್ತು ಒಂದೇ ದಿನಕ್ಕೆ ಐವತ್ತು ಲೈಕ್ಗಳು ಬಂದಿವೆ! ಆಮೇಲೆ ಇಪ್ಪತ್ತು ಕಾಮೆಂಟ್ಗಳು! ತಡಿ ತಡಿ ಯಾವಳೆ ಇವಳು.." ಎಂದು ಹುಬ್ಬು ಗಂಟಿಕ್ಕಿಕೊಂಡು ಕಾಮೆಂಟ್ಗಳ ಮೇಲೆ ತೀಕ್ಷ್ಣವಾಗಿ ಕಣ್ಣಾಡಿಸಿದಳು ಐಶು.

"ಏನಾಯಿತು ಐಶು? ಯಾರು ಏನು ಬರೆದಿದ್ದಾರೆ?" ಕನ್ನಡಕ ತಂದು ಮೂಗಿನ ಮೇಲೇರಿಸಿಕೊಂಡು ನೋಡಿದಳು ಸಿಂಧು.

"ನಿಮ್ಮದ್ದು ಮೈಸೂರ್ ಪಾಕೋ ಇಲ್ಲ ಹಿಂದಿನಕಾಲದ ಮೈಸೂರ್ ಬಾರ್ ಸೋಪೋ ಎಂದು ನನಗೆ ಅನುಮಾನ! ಮೈಸೂರ್ ಪಾಕು ಎಂದರೆ ಹೀಗಿರಬೇಕು!" ಜೊತೆಯಲ್ಲೇ 'ನನ್ನ ಮೈಸೂರ್ ಪಾಕು' ಎಂದು ಒಂದು ಚಿತ್ರವನ್ನೂ ಪ್ರಕಟಿಸಿದ್ದಳು ಲೇಖ ಎಂಬ ಮಹಿಳೆ.

ಸಿಂಧುವಿಗೆ ಆಘಾತವಾಯಿತು. ಯಾರೋ ಕೆನ್ನೆಗೆ ಜಾಡಿಸಿ ಹೊಡೆದ ಹಾಗೆ ಅನ್ನಿಸಿತು. ಗಂಟಲಲ್ಲಿ ಏನೋ ಸಿಕ್ಕಿಕೊಂಡಂತೆ ಕಂಠ ಬಿಗಿದುಕೊಂಡಿತು. ಈ ಎಪ್ಪತ್ತು ವರುಷಗಳ ಜೀವನದಲ್ಲಿ ಇಷ್ಟು ಕಟುವಾಗಿ ಯಾರೂ ಅವಳನ್ನು ವಿಮರ್ಶೆ ಮಾಡಿರಲಿಲ್ಲ.

"ಸಿಮಿ! ಯಾಕೆ ಇಷ್ಟು ಸಪ್ಪಗಾಗಿಬಿಟ್ಟೆ? ಯಾವಳೋ ಒಬ್ಬಳು ಏನೋ ಅಂದ್ರೆ ಅದಕ್ಕೆಲ್ಲ ದುಃಖ ಪಡ್ತಾರೆಯೇ?" ಐಶು ಸಮಾಧಾನ ಮಾಡಲು ಹೊರಟಾಗ ಕಣ್ಣು ತುಂಬಿಬಂದು ಎರಡು ತೊಟ್ಟು ನೀರು ಕೆನ್ನೆಗಳ ಮೇಲೆ ಉರುಳಿದವು.

"ಛೆ! ಈಗಲೇ ಅವಳಿಗೆ ಪ್ರತಿಯುತ್ತರ ಬರೀತಿನಿ ಇರು. ಗೂಗಲ್ ಚಿತ್ರ ಕದ್ದು ಹಾಕಿ ತನ್ನ ಮೈಸೂರ್ ಪಾಕು ಅಂತ ಜಂಬ ಕೊಚ್ತಾಳೆ! ನಮಗೇನು ಗೊತ್ತಾಗಲ್ವೇನು? ನಿನ್ನನ್ನ ಹೋಗಿ ಅಳಿಸಿದಳಲ್ಲ ರಾಕ್ಷಸಿ!" ಐಶು ರೋಷಗೊಂಡು ಕೀ ಪ್ಯಾಡನ್ನು ಕುಟ್ಟ ತೊಡಗಿದಳು.

"ಏ ಐಶು! ಸುಮ್ನಿರು! ಇದಕ್ಕೆಲ್ಲ ರಿಯಾಕ್ಟ್ ಮಾಡಬಾರದು! ಸುಂಸುಮ್ನೆ ವಾಗ್ವಾದ ಬೆಳೆಸಬಾರದು." ಧಾವಿಸಿ ಬಂದು ಸಮಾಧಾನ ಹೇಳಿದರು ಮಿತ್ರಾ.

ಸಂಜೆ ಆಫೀಸಿನಿಂದ ಹಿಂದಿರುಗಿದ ಯಶು ಗೆಲುವಿಲ್ಲದ ಮನೆಯ ವಾತಾವರಣ ಕಂಡು ಚಕಿತಗೊಂಡ. ಕಾರಣವನ್ನು ಐಶು ವಿವರಿಸಿದಾಗ ಸೀದ ಅಜ್ಜಿಯ ಬಳಿ ಬಂದು ಕುಳಿತು ಸಮಾಧಾನ ಹೇಳಿದ.



"ನನ್ನನ್ನೇಕೋ ಹೀಗೆ ಅನ್ನಬೇಕು? ಐವತ್ತು ಜನ ಲೈಕ್ ಮಾಡಿರೋದೆಲ್ಲ ಸುಳ್ಳೇ? ನನ್ನ ಮೈಸೂರ್ ಪಾಕನ್ನ ಸೋಪ್ ಅಂತ ಕರೆದಳಲ್ಲ! ನಾನೇನು ಹಾಗೆಲ್ಲ ಸುಳ್ಸುಳ್ಳು ಪಿಕ್ಚರ್ ಹಾಕ್ತೀನಾ? ನೀವೆಲ್ಲ ಮೆಚ್ಕೊಂಡಿದ್ದಕ್ಕೆ ಅಲ್ವೇ ನಾನು ಪಿಕ್ಚರ್ ತೆಗೆದು ಪೋಸ್ಟ್ ಮಾಡಿದ್ದು?" ಗದ್ಗದಿತ ದನಿಯಲ್ಲಿ ಸಿಂಧು ತನ್ನ ದುಃಖವನ್ನು ತೋಡಿಕೊಂಡಳು.

"ಅಜ್ಜಿ! ಇದಕ್ಕೆಲ್ಲ ಬೇಜಾರು ಮಾಡ್ಕೊಬಾರದು. ಕೆಲವರಿಗೆ ತಾವೇ ಹೆಚ್ಚು ಅಂತ ತೋರಿಸ್ಕೊಳ್ಳೋದು ಇಷ್ಟ. ಅದಕ್ಕಾಗಿ ಉಳಿದವರನ್ನ ವಿಮರ್ಶೆ ಮಾಡಿ ಮಟ್ಟ ಹಾಕ್ತಾರೆ. ನೀನೆ ಹೇಳಿದ ಹಾಗೆ ನಿನಗೆ ಐವತ್ತು ಲೈಕ್ ಬಂದಿರೋದು ನೋಡಿ ಅವಳಿಗೆ ಹೊಟ್ಟೆಕಿಚ್ಚು ಆಗಿರಬಹುದು." ಎಂದ ಯಶು ಸಾಮಾಜಿಕ ಮಾಧ್ಯಮಗಳ ಬಗ್ಗೆಗಿನ ಸಾಧಕ ಬಾಧಕಗಳನ್ನು ಅಜ್ಜಿಗೆ ಮನದಟ್ಟು ಮಾಡಲೆತ್ನಿಸಿದ.

"ಸಾಮಾಜಿಕ ಮಾಧ್ಯಮಗಳಲ್ಲಿ ದ್ವೇಷ ಕಾರೋದು, ಹಳಿಯೋದು, ಒಬ್ಬರ ಚಾರಿತ್ರ್ಯ ಹತ್ಯೆ ಮಾಡೋದು ಎಲ್ಲ ಸಹಜವಾಗಿವೆ! ಇದೆಲ್ಲ ಕೆಟ್ಟ ಕೆಲಸಗಳನ್ನ ಮಾಡೋ ಟ್ರೋಲ್‌ಗಳಿಗೆ ಪ್ರತ್ಯುತ್ತರ ಕೊಡೋದು ಅವರನ್ನ ಪ್ರೋತ್ಸಾಹಿಸಿದ ಹಾಗೆ. ಅಜ್ಜಿ! ಈ ಕಾಮೆಂಟನ್ನ ಲಕ್ಷ್ಯ ಮಾಡಬೇಡ. ಪಾಸಿಟಿವ್ ಸೈಡ್ ಮಾತ್ರ ನೋಡು! ನಿನ್ನ ಬ್ಲಾಗ್ ವಿವಾಹ ಬಂಧನಗಳನ್ನು ಬಲಪಡಿಸೋ ಸಾಧನ ಅನ್ನೋದು ಎಷ್ಟು ಹೆಮ್ಮೆಯ ವಿಷಯ?"

ಸಿಂಧು ಮುಖ ತೊಳೆದುಕೊಂಡು ದಿನ ನಿತ್ಯದ ಕೆಲಸಗಳಲ್ಲಿ ತೊಡಗಿಕೊಂಡರೂ ಮನಸ್ಸಲ್ಲಿದ್ದ ಕಹಿ ಹಾಗೆಯೇ ಉಳಿದಿತ್ತು.

ಮರು ದಿನ ಸಂಜೆ ಕಾರ್ತಿಕ ಹಬ್ಬ. ಯಾಂತ್ರಿಕವಾಗಿ ಮಣ್ಣಿನ ಹಣತೆಗಳನ್ನು ಹಚ್ಚಿ, ಪುರಿ ಉಂಡೆ ಮಾಡಿಟ್ಟು ದೇವರಿಗೆ ಕೈ ಮುಗಿದಾಗಲೂ ಸಿಂಧುವಿನ ಮೊಗದಲ್ಲಿ ಗೆಲುವಿಲ್ಲ. ಈ ವಯಸ್ಸಲ್ಲಿ ತನಗೆ ಈ ಸಾಮಾಜಿಕ ಮಾಧ್ಯಮದ ಸಹವಾಸ ಏಕೆ ಬೇಕಿತ್ತೋ ಅನ್ನಿಸಿತು. ಒಂದೇ ಸಮ 'ಟ್ರಿಣ್ ಟ್ರಿಣ್' ಶಬ್ದಗಳನ್ನು ಎಬ್ಬಿಸಿ ಮೆಸೇಜ್ಗಳ ಪ್ರವಾಹವೇ ಬರುತ್ತಿರುವುದನ್ನು ಸೂಚಿಸುತ್ತಿದ್ದ ಅವಳ ಮೊಬೈಲ್ ತಬ್ಬಲಿಯಾಗಿ ಬಿದ್ದುಕೊಂಡಿತ್ತು.

"ಓಹೋಹೊ! ಸಿಂಧು! ಎಷ್ಟೊಂದು ವಾಟ್ಸಾಪ್ ಮೆಸೇಜ್ಗಳು! ಬೇಗ ಬಾ! ಪ್ರಪಂಚದಾದ್ಯಂತ ಚದುರಿ ಹೋಗಿರೋ ನಮ್ಮ ವಂಶದ ಕುಡಿಗಳೆಲ್ಲಾ ತಮ್ಮ ತಮ್ಮ ಮನೆಗಳಲ್ಲಿ ದೀಪ ಹಚ್ಚಿ, ಪುರಿಯುಂಡೆಯೂ ಮಾಡಿ ದೇವರಿಗೆ ಕೈ ಮುಗಿದಿದ್ದಾರೆ! ಎಷ್ಟೊಂದು ಫೋಟೋಗಳು! ಬಂದು ನೋಡು ಬಾ!" ಉತ್ಸಾಹದಿಂದ ಕರೆದರು ಮಿತ್ರಾ.

ಸಿಂಧು ಥಟ್ಟನೆ ಎದ್ದು ಓಡುತ್ತ ಹೋಗಿ ತನ್ನ ಮೊಬೈಲ್ ಕೈಗೆತ್ತಿಕೊಂಡಳು.

ಅಮೆರಿಕದಿಂದ ಆನಂದ ಮತ್ತು ಅವನ ಹೆಂಡತಿ ಭಾರತೀಯ ಶೈಲಿಯ ಬಟ್ಟೆ ತೊಟ್ಟು ದೇವರ ಮುಂದೆ ದೀಪಗಳನ್ನು ಹಚ್ಚಿ ಪುರಿಯುಂಡೆಯನ್ನೂ ಇಟ್ಟು ಸೆಲ್ಫಿ ಚಿತ್ರ ತೆಗೆದು ಒಂದು ದಿವಸ ಮುಂಚಿತವಾಗಿಯೇ ಕಳುಹಿಸಿದ್ದರು. ಫೋಟೋದ ಕೆಳಗೆ 'ಪುರಿಯುಂಡೆ – 'ಸಿಮಿಸ್ ಕಿಚನ್' ಕೃಪೆಯಿಂದ'– ಎಂದು ಟೈಪ್ ಮಾಡಲೂ ಮರೆತಿರಲಿಲ್ಲ. ಜೊತೆಗೆ ಇನ್ನೂ ಅನೇಕ ಫೋಟೋಗಳು.



ನಮ್ಮ ದೇಶಕ್ಕಿಂತ ನಾಲ್ಕು ಗಂಟೆ ಕಾಲ ಮುಂದಿದ್ದ ಆಸ್ಟ್ರೇಲಿಯಾದಿಂದ ತನ್ನ ಮನೆಯಲ್ಲಿ ದೇವರ ಮುಂದೆ ದೀಪಗಳು ಮತ್ತು ಪುರಿಯುಂಡೆ ಇಟ್ಟಿದ್ದ ಚಿತ್ರವನ್ನು ಕಳಿಸಿದ್ದಳು ಸುಮಿ. ಆದ್ವಿ ಬಾಯಿ ತುಂಬ ಪುರಿಯುಂಡೆ ಪ್ರಸಾದವನ್ನು ತುಂಬಿಕೊಂಡಿದ್ದ ಫೋಟೋ ಕೆಳಗೆ 'ಥ್ಯಾಂಕ್ ಯೂ ಸಿಮಿ! ಲವ್ ಯೂ!' ಎಂಬ ಸಂದೇಶ!

ವಸಿ ಸಹ ತಾನು ತಂಗಿದ್ದ ಹೋಟೆಲಿನಲ್ಲಿಯ ಕೋಣೆಯಲ್ಲಿ ಮೇಣದ ಬತ್ತಿಗಳನ್ನು ಹಚ್ಚಿ, ಚಾಕಲೇಟ್ ಉಂಡೆಗಳನ್ನಿಟ್ಟು ಫೋಟೋ ತೆಗೆದು 'ಹ್ಯಾಪಿ ಕಾರ್ತಿಕ ಹಬ್ಬ ಟು ಡಿಯರ್ ಫ್ಯಾಮಿಲಿ' ಎಂದು ಶುಭಾಶಯಗಳನ್ನು ಕಳುಹಿಸಿದ್ದಳು.

"ನೋಡಿದೆಯಾ ಸಿಂಧು! ಯೂ ಸೆಟ್ ದ ಪುರಿ ಬಾಲ್ ರೋಲಿಂಗ್! ಇಂದು ಲೋಕದಾದ್ಯಂತ ಅದು ಎಷ್ಟು ಸಿಹಿಯಾಗಿ ಉರುಳುತ್ತಿದೆ!" ಎಂದು ಮಿತ್ರಾ ನಕ್ಕಾಗ ಐಶು ಮತ್ತು ಯಶು ಜೊತೆಗೂಡಿ ಸಿಂಧು ಸಹ ಮನಸ್ಪೂರ್ತಿಯಾಗಿ ನಕ್ಕಳು. ಎಲ್ಲೆಲ್ಲೋ ನೆಲೆಯೂರಿದ್ದ ಕುಟುಂಬದ ಸದಸ್ಯರೆಲ್ಲ ಒಂದುಗೂಡಿ ಹಬ್ಬ ಆಚರಿಸಿ ಫೋಟೋಗಳನ್ನೂ ಹಂಚಿಕೊಳ್ಳಲು ಅವಕಾಶ ಒದಗಿಸಿಕೊಟ್ಟ ಸಾಮಾಜಿಕ ಮಾಧ್ಯಮಕ್ಕೆ ವಂದನೆ ಹೇಳಿತು ಮನಸ್ಸು. ಕಾರ್ತಿಕ ದೀಪಗಳ ಜ್ಯೋತಿಯಲ್ಲಿ ಸಿಂಧುವಿನ ಸಂತೋಷದ ಮುಖ ಪ್ರಕಾಶವಾಗಿ ಬೆಳಗಿತು.

■

---

## ಸೀರೆ ಅಂಗಡಿಯಲ್ಲಿ

ಸೀರೆ ಅಂಗಡಿಯಲ್ಲಿ ಒಬ್ಬನೇ ನಿಂತು
ಬೆದರಿದ್ದಾನೆ, ಬೆವರಿದ್ದಾನೆ ಗಂಡು
ತಲೆ ಕೆಡಿಸಿದೆ ಸೀರೆ ಆರಿಸುವ ಕೆಲಸ
ಗೊಂದಲದಲಿ ಮನ ಆಗಿದೆ ಬೆಂಡು

ಜಾರ್ಜೆಟ್ಟೇ, ರೇಷ್ಮೆಯೇ, ಕೈ ಮಗ್ಗವೇ
ಸೀರೆಗಳು ದುಬಾರಿಯೇ ಅಗ್ಗವೇ
ಯಾವುದಾದರೊಂದನ್ನು ಕೊಂಡು ಮನೆಗೆ ಹೋದರೆ
ನನ್ನ ಕೊರಳಿಗೆ ಹಗ್ಗವೇ

ಒಬ್ಬನೇ ಬರಬಾರದು ಸೀರೆಯನ್ನು ಆರಿಸಲು
ಒಬ್ಬನೇ ಹೋಗಬಾರದು ನೀರೆಯನ್ನು ಆರಿಸಲು
ನೀರೆಗೂ ಸೀರೆಗೂ ಇರುವ ನಂಟು
ಅದು ಗಂಡಿಗಂತೂ ಇಂದಿಗೂ ತಿಳಿಯದ ಗಂಟು



# ಮಾರಾಟಕ್ಕಿವೆ

• ಸಿ.ಆರ್. ಸತ್ಯ

ಮನೆಯಲ್ಲಿ ಸ್ವಲ್ಪ ದುಡ್ಡಿನ ಅಭಾವ ಇರೋದರಿಂದ ನನ್ನ ಹತ್ತಿರ ಇರೋ ಕೆಲವು ''ವಿಂಟೇಜ್'' ವಸ್ತುಗಳನ್ನು ಮಾರುತ್ತಾ ಇದೀನಿ. ನಿಮಗೇನಾದರೂ ಕೊಂಡುಕೊಳ್ಳೋಕ್ಕೆ ಇಷ್ಟವಾದರೆ ದಯವಿಟ್ಟು ನನ್ನನ್ನು ಸಂಪರ್ಕಿಸಿ. ಅವುಗಳ ಪಟ್ಟಿ ಹೀಗಿದೆ:

**ನಶ್ಯದ ಡಬ್ಬಿ:** ಇದು ನಮ್ಮ ತಾತನ ಕಾಲದ್ದು. ಯಾರ ಕಣ್ಣಿಗೂ ಬೀಳದ ಹಾಗೆ ಸೊಂಟದಲ್ಲಿ ಪಂಚೆ ತುದಿಯಲ್ಲಿ ಕಟ್ಟಿಕೊಂಡು ಉಪಯೋಗಿಸುತ್ತಿದ್ದರು. ಒಳ್ಳೇ ಕ್ವಾಲಿಟಿ ತಗಡಿನಲ್ಲಿ ಮಾಡಿದ್ದು ತುಕ್ಕು ಹಿಡಿದಿಲ್ಲ, ನೀವು ಉಪಯೋಗಿಸಬಹುದು. ಆದರೆ ಈಗ ನಶ್ಯ ಎಲ್ಲಿ ಸಿಗುತ್ತೆ ಅಂತ ನನಗೆ ಗೊತ್ತಿಲ್ಲ. ಬೆಲೆ : ರೂ. 10/-

**ಒನಕೆ :** ಇದು ನಮ್ಮ ಅಜ್ಜಿ ಕಾಲದ್ದು. ಒಳ್ಳೇ ಮರದಲ್ಲಿ ಮಾಡಿರೋದು. ನೀವು ಇದನ್ನ ನೋಡಿದರೆ ನಿಮಗೆ ಒನಕೆ ಓಬವ್ವ ಜ್ಞಾಪಕ ಬರೋದು ಗ್ಯಾರಂಟಿ. ಸದ್ಯಕ್ಕೆ ನನ್ನ ಹೆಂಡತಿಯ ಕಣ್ಣಿಗೆ ಬೀಳದ ಹಾಗೆ ಅಟ್ಟದ ಮೇಲೆ ಬಚ್ಚಿಟ್ಟಿದ್ದೀನಿ. ಬೇಕು ಅಂದರೆ ತೆಗೀತೀನಿ. ಬೆಲೆ : ರೂ. 50/-

**ಗಾಂಧಿ ಟೋಪಿ :** ಇದು ನನ್ನ ಕಾಲದ್ದು. ನ್ಯಾಷನಲ್ ಮಿಡಲ್ ಸ್ಕೂಲ್‌ನಲ್ಲಿ ಕಡ್ಡಾಯವಾಗಿ ಹಾಕ್ಕೋಬೇಕಿತ್ತು. ಈಗ ಟೋಪಿ ಹಾಕೋವರೇ ಇದ್ದು, ಟೋಪಿ ಕೊಂಡುಕೊಳ್ಳವವರೇ ಇಲ್ಲ. ನೀವು ನಿಮ್ಮ ಮೊಮ್ಮಕ್ಕಳಿಗೆ ಫ್ಯಾನ್ಸಿ ಡ್ರೆಸ್‌ಗೆ ಅಂತ ಕೊಡಬಹುದು. ಸ್ವಲ್ಪ ಮಣ್ಣು ಬಣ್ಣದಲ್ಲಿದೆ. ಉಪಯೋಗಿಸುವುದಕ್ಕೆ ಮುಂಚೆ ದೋಭಿಗೆ ಕೊಡಿ. ಬೆಲೆ : ರೂ. 5/-

**ಜಿ.ಇ.ಬ್ರ್ಯಾಂಡ್ ರೇಡಿಯೋ :** ಇದು ಎಪ್ಪತ್ತು ವರುಷ ಹಳೆಯದು. ಆನ್ ಮಾಡಿದ್ರೆ ಮುಂಚೆಯೆಲ್ಲಾ ರೇಡಿಯೋ ಸಿಲೋನ್ ಬಿನಾಕ ಗೀತಮಾಲಾ ಮಾತ್ರ ಬರೋದು. ಬೇರೆ ಏನೂ ಬಿತ್ತರಿಸೋಕ್ಕೆ ಅದಕ್ಕೆ ಗೊತ್ತಿಲ್ಲ. ಇದನ್ನ ನಿಮ್ಮ ಶೋ ಕೇಸ್‌ನಲ್ಲಿ, ಜಾಗ ಇದ್ದರೆ, ಇಡಬಹುದು. ಬೆಲೆ ರೂ. 50/-

**ಸೀಮೆ ಎಣ್ಣೆ ಲ್ಯಾಂಟರ್ನ್ :** ಎಲೆಕ್ಟ್ರಿಕ್ ದೀಪದ ಕೆಳಗೆ ಓದಿದರೂ ನಾನೇನೋ ಸ್ಕೂಲು ಕಾಲೇಜಿನಲ್ಲಿ ನಾಪಾಸ್ ಆದೆ. ಆದರೆ, ಇಂತಹ ಲ್ಯಾಂಟರ್ನ್ ಇಟ್ಟುಕೊಂಡು ಓದಿದವರು ಒಂದು ಕಾಲದಲ್ಲಿ ಮೇಧಾವಿ ಸ್ಟೂಡೆಂಟ್ಸ್ ಆಗಿದ್ದರು. ನಿಮ್ಮ ಮೊಮ್ಮಕಳ ಮೇಲೆ ನೀವು ಇದನ್ನ ಪ್ರಯೋಗಿಸಬಹುದು. ಬೆಲೆ : (ಬತ್ತಿ ಸಮೇತ) ರೂ. 100/- (ಸೀಮೆ ಎಣ್ಣೆ ನಿಮ್ಮ ಜವಾಬ್ದಾರಿ)



**ಸ್ಲೇಟು - ಬಳಪ :** ಕರ್ನಾಟಕ ರಾಜ್ಯದಲ್ಲಿ ಸದ್ಯಕ್ಕೆ ಇರೋದು ಅಂದರೆ ಇದೊಂದೇ ಸ್ಲೇಟು-ಬಳಪ ಜೊತೆ. ಸ್ಲೇಟು ಸ್ವಲ್ಪ ಬಿರುಕು ಬಿಟ್ಟಿದೆ ಆದರೆ ಬರೆಯಬಹುದು. ಒಂದೇ ಚೂರು ಬಳಪ ಇರೋದು. ಈಗಿನ ಮಕ್ಕಳಿಗೆ ತೋರಿಸಿ ಇದೇನು ಅಂತ ಕ್ವಿಜ್ಜ್ ಪ್ರೋಗ್ರಾಮ್ನಲ್ಲಿ ಪ್ರಶ್ನೆ ಕೇಳೋಕ್ಕೆ ಚೆನ್ನಾಗಿರುತ್ತೆ. ಬೆಲೆ : ರೂ. 50/-

**ಸೊಳ್ಳೆ ಸಾಯಿಸೋ ಮಿಶಿನ್ :** ಇದು ನಮ್ಮ ತಂದೆಯವರು ಅವರ ಕಾಲದಲ್ಲಿ

ಜಲಂಧರ್‌ಗೆ ಮನಿ ಆರ್ಡರ್ ಮಾಡಿ ಪಾರ್ಸೆಲ್ ಮೂಲಕ ತರಿಸ್ಕೊಂಡಿದ್ದ ಮಿಶಿನ್. ವಿದ್ಯುತ್ ಶಕ್ತಿ ಏನೂ ಬೇಡ. ಇದರಲ್ಲಿ ಎರಡು ಮೊನಚಾದ ಕಲ್ಲುಗಳಿವೆ. ಸೊಳ್ಳೆಯನ್ನ ಇವೆರಡು ಕಲ್ಲುಗಳ ಮಧ್ಯೆ ಬರೋದಿಕ್ಕೆ ಹೇಳಿ ಅದು ಬಂದಾಗ ತಕ್ಷಣ ಚಚ್ಚಬೇಕು. ಸೊಳ್ಳೆ ಸಾಯೋದು ಗ್ಯಾರಂಟಿ (ಗ್ಯಾರಂಟಿ ಕಾರ್ಡ್ ಈಗ ಇಲ್ಲ). ಚಚ್ಚೋವಾಗ ಬೆರಳು ಹುಷಾರು. ಬೆಲೆ : ರೂ. 25/–

**ಮಡಿ ಕೋಲು :** ಇದನ್ನ ನನ್ನ ಚಿಕ್ಕ ವಯಸ್ಸಿನಲ್ಲಿ ಮನೆಯ ಒಳಗಡೆ ಸೀರೆ, ಪಂಚೆ ಹರವಿ ಹಾಕೋದಿಕ್ಕೆ ಉಪಯೋಗಿಸುತ್ತಿದ್ದರು. ಒಮ್ಮೊಮ್ಮೆ ಮನೆ ಒಳಗೆ ಹಾವು, ಚೇಳೂ ಕಾಣಿಸಿದಾಗ್ಯೂ, ಇದರಿಂದ ಹೊಡೆದು ಸಾಯಿಸ್ತಿದ್ದರು. ಈಗ ನಿಮಗೆ ಮನೆ ಹಿಂದೆ ಕೋತಿ ಹಾವಳಿ ಆದರೆ ಅವನ್ನ ಓಡಿಸೋಕ್ಕೆ ಇದು ಒಳ್ಳೆ ಸಾಧನ. ಒಳ್ಳೇ ಕ್ವಾಲಿಟಿ ಬೊಂಬು. ಬೆಲೆ : ರೂ. 25/–

**ಇಂಕ್ ಪೆನ್ :** ಇದು ಇಂಕ್ ತುಂಬಿಸಿ ಬರೆಯೋ ಪೆನ್ನು. ಅರ್ಧ ಇಂಕ್ ಬಾಟ್ಲಿ ಮತ್ತು ಒಂದು ಫಿಲ್ಲರ್ ಜೊತೆ ಕೊಡ್ತೀನಿ. ಇದರಲ್ಲೇ ನಾವೆಲ್ಲಾ ಚಿಕ್ಕ ವಯಸ್ಸಿನಲ್ಲಿ ಬರೀತಾ ಇದ್ದುದ್ದು. ನಿಬ್ ಹತ್ತಿರ ಸ್ವಲ್ಪ ಲೀಕ್ ಆಗುತ್ತೆ. ಆಗ ನೀವು ಬೆರಳನ್ನು ತಲೆ ಕೂದಲಿಗೆ ಒರಸಿಕೊಂಡರೆ, ಮಸಿ ಹೊರಟು ಹೋಗುತ್ತೆ. ಬೊಕ್ಕ ತಲೆಯವರು ಸೋಪ್ ಹಾಕಿ ಬೆರಳು ತೊಳೆದುಕೊಳ್ಳಬೇಕು. ಬೆಲೆ : ರೂ. 5/–

**ಎಚ್.ಎಮ್.ಟಿ ವಾಚ್ :** ಇದು ಎಚ್.ಎಮ್.ಟಿ ಅವರ ಮೊದಲನೆಯ ಮಾಡಲ್. ಏನಾದರೂ ಕೆಡಲ್ಲ. ಈ ವಾಚ್ ಮೇಲೆ ಟ್ರ್ಯಾಕ್ಟರ್ ಅಥವಾ ರೋಡ್ ರೋಲರ್ ಹೋದರೂ, ಟಿಕ್ ಟಿಕ್ ಅಂತ ನಡೀತಾನೇ ಇರುತ್ತೆ. ಆದರೆ ಅದರ ಕೀಲಿ ತಿರುಗಿಸೋದು ಸ್ವಲ್ಪ ಕಷ್ಟ. ಕಟ್ಟಿಂಗ್ ಪ್ಲೈಯರ್‌ನಲ್ಲಿ ಹಿಡಿದು ಕೊಂಡು ತಿರುಗಿಸಬೇಕು. ನಮ್ಮ ಕಾಲದಲ್ಲಿ ಭಾವಿ ಅಳಿಯನಿಗೆ, ಹುಡುಗಿ ತಂದೆ ಇದನ್ನ ಮದುವೇಗಿಂತ ಮುಂಚೆ ಕೊಡ್ತಿದ್ದರು. ಎಚ್.ಎಮ್.ಟಿ ನವರೇ ನನಗೆ ಅನೇಕ ಬಾರಿ ವಾಪಸ್ಸು ಕೊಡಿ, ದುಡ್ಡು ಕೊಡ್ತೀವಿ ಅಂತ ಹೇಳಿದ್ದರೂ ನಾನು ಕೊಟ್ಟಿಲ್ಲ. ಯಾಕೆ ಅಂದರೆ ಇದು ನನಗೆ ನನ್ನ ಮಾವನವರು ಕೊಟ್ಟ ವಾಚ್. ಆದರೆ ಈಗ ನನಗೆ ದುಡ್ಡು ಬೇಕಿದೆ. ಬೆಲೆ : ರೂ. 25/–

**ಪ್ಯಾಂಟ್ ಕ್ಲಿಪ್(ಒಂದು ಜೊತೆ) :** ನಮ್ಮ ತಾತನ ಕಾಲದಲ್ಲಿ ಸೈಕಲ್ ಹೊಡೆಯೋವಾಗ ದೊಗಲೆ ಪ್ಯಾಂಟ್ ಸೈಕಲ್ ಚೈನ್‌ಗೆ ಸಿಕ್ಕಿ ಹಾಕ್ಕೊಳ್ಳಬಾರದು ಅಂತ ಪ್ಯಾಂಟ್ ಬಾಟಮ್‌ನ ಸುತ್ತಿ ಕ್ಲಿಪ್‌ನಲ್ಲಿ ಕೂರಿಸ್ತಿದ್ದರು. ಒಳ್ಳೇ ಸ್ಟೀಲ್–ಜರ್ಮನೀದು. ಈಗ ಸೈಕಲ್ ಹೊಡೆಯೋರೂ ಇಲ್ಲ, ದೊಗಲೆ ಪ್ಯಾಂಟ್‌ನವರೂ ಇಲ್ಲ. ಆದ್ರೆ ನಿಮ್ಮ ಕಡೇ ಮಗನಿಗೋ ಅಥವಾ ಮೊಮ್ಮಗನಿಗೋ ಹೊಸ ಹೇರ್ ಸ್ಟೈಲ್ ಅಂತ ಕೂದಲನ್ನ ಮೇಲಕ್ಕೆ ಎತ್ತಿ ಕಟ್ಟಿಕೊಂಡು ಹಾಗೇ ನಿಲ್ಲಿಸಿಕೊಳ್ಳೋಕ್ಕೆ ಈ ಕ್ಲಿಪ್‌ಗಳು ಉಪಯೋಗವಾಗುತ್ತವೆ. ಬೆಲೆ : ರೂ. 10/–

**ರೇಶನ್ ಬ್ಯಾಗುಗಳು :** ಎರಡಿವೆ. ಒಂದು ಖಾಕಿ ಬಣ್ಣ, ಇನ್ನೊಂದು ಬಿಳಿ ಬಣ್ಣ, ಪ್ಯೂರ್ ಕಾಟನ್. ಈಗಿನ ಕಾಲದಲ್ಲಿ ಇರೋ ಹಾಗೆ ಆಗ ಪ್ಲಾಸ್ಟಿಕ್ ಬ್ಯಾಗುಗಳು ಇರಲಿಲ್ಲ. ಖಾಕಿ ಬಣ್ಣದ್ದು ರೇಶನ್ ಅಕ್ಕಿಗೆ, ಬಿಳಿ ಬ್ಯಾಗು ರೇಶನ್ ಸಕ್ಕರೆಗೆ ಅಂತ ಉಪಯೋಗದಲ್ಲಿದ್ದವು. ಹ್ಯಾಂಡಲುಗಳು



ಈಗಲೂ ಗಟ್ಟಿಗಿವೆ. ನೀವು ಈಗ್ ರೇಶನ್ ಶಾಪ್ ಕಡೆ ಕಾಲು ಹಾಕದಿದ್ದರೂ ನಿಮ್ಮ ಆರ್ಗೇನಿಕ್ ಗಾರ್ಡನ್‌ಗೆ ಕೆಂಪು ಮಣ್ಣು, ಸಗಣಿ ಇವನ್ನು ತರೋದಕ್ಕೆ ಈಗ ಉಪಯೋಗಿಸಬಹುದು. ಎಕೋ ಫ್ರೆಂಡ್ಲಿ, ಜೊತೆ ಬೆಲೆ : ರೂ. 15/-

ಸದ್ಯಕ್ಕೆ ಇಷ್ಟನ್ನು ಮಾರುತ್ತಾ ಇದೀನಿ. ಬೇಕು ಅಂದರೆ ಬೇಗ ನಿರ್ಧಾರ ಮಾಡಿ ನನಗೆ ತಿಳಿಸಿ. ಇಲ್ಲಾ ಅಂದರೆ, ನಾನು ಇವನ್ನು ಬ್ರಿಟಿಷ್ ಮ್ಯೂಸಿಯಮ್‌ಗೆ ಕೊಡೋಣಾ ಅಂತ ಇದೀನಿ. ನನಗೇನೋ ಚೆನ್ನಾಗಿ ದುಡ್ಡು ಸಿಗುತ್ತೆ. ಆದರೆ ಆಮೇಲೆ ಅವರಿಂದ ನೀವು ಮತ್ತೆ ಕೊಂಡುಕೊಳ್ಳಬೇಕು ಅಂದರೆ ನೀವು ಲಕ್ಷಾಂತರ ರೂಪಾಯಿಗಳನ್ನು ತೆತ್ತಬೇಕಾಗುತ್ತೆ. (ಯಾರೋ ಶ್ರೀಮಂತರು ಕೋಟಿ ರೂಪಾಯಿ ಕೊಟ್ಟು ಟಿಪ್ಪೂ ಖಡ್ಗವನ್ನು ಖರೀದಿ ಮಾಡಿದರಲ್ಲಾ, ಹಾಗೆ) ■

---






# ಬೆಳ್ಳುಳ್ಳಿ, ಚಳ್ಳೆ ಹಣ್ಣು ಮತ್ತು ಕಾಶಿಯೂ

• ವಾಣಿ ಸುರೇಶ್

ಕುಂಭಮೇಳ ಹೇಗಿರತ್ತೆ ಅನ್ನೋ ಅನುಭವ ನನಗೂ ದಕ್ಕಬಹುದು ಎಂಬ ಕಲ್ಪನೆ ಸಹಾ ನಾವಲ್ಲಿಗೆ ಹೊರಟ ಒಂದು ನಾಲ್ಕೈದು ದಿನಗಳ ಹಿಂದಿನವರೆಗೂ ನನಗೆ ಇತ್ತಿಲ್ಲ ಅಂದರೆ ನಂಬೋ ಮಾತಲ್ಲ ಅಲ್ವೇ? ನಿಮಗಿರಲಿ, ನನಗೇ ನಂಬಕ್ಕೆ ಕಷ್ಟವಾಗ್ತಿದೆ!

ಕಳೆದ ಸುಮಾರು ಇಪ್ಪತ್ತು ಇಪ್ಪತ್ತೈದು ವರ್ಷಗಳಿಂದಲೂ ನಡೆದ ಒಂದು ಕುಂಭಮೇಳವನ್ನೂ ತಪ್ಪಿಸದ ಸ್ನೇಹಿತೆ ರತ್ನನ ಮಾತನ್ನು ಕೇಳಿ ಇದ್ದಕ್ಕಿದ್ದಂತೆ ನನಗೂ ಹುಚ್ಚು ಕೆರಳಿ ಪ್ರಯಾಗಕ್ಕೆ ಫ್ಲೈಟ್ ಟಿಕೆಟ್ ಬುಕ್ ಮಾಡಕ್ಕೆ ಹೊರಟೆ. ಆಗಲೇ ಗೊತ್ತಾಗಿದ್ದು, ಹೀಗೆ, ಆಗ ಹುಟ್ಟಿಸಿ–ಆಗಲೇ ಬೆಳೆಸುವ ನಮ್ಮ ಸಂಸಾರದ ಎಂದಿನಂತಿನ ಯುದ್ಧಕಾಲದಲ್ಲಿ ಶಸ್ತ್ರಾಭ್ಯಾಸ ಮಾಡುವ ಪರಿಪಾಠ ಈ ಕೇಸಲ್ಲಿ ವರ್ಕ್‌ಗಲ್ಲಾನೋದು. ಯಾಕೇಂದ್ರೆ ಸಾಮಾನ್ಯವಾಗಿ ನಾಲ್ಕು ಸಾವಿರ ರೂನಷ್ಟಿರೋ ಟಿಕೆಟ್ಟಿನ ಬೆಲೆ ಅದರ ನಾಲ್ಕರಷ್ಟಾಗಿತ್ತು! ಅಯ್ಯೋ ಹೋಗಿಬರಕ್ಕೆ ಮೂವತ್ತು ಮೂವತ್ತೆರಡು ಸಾವಿರ ಅಂದ್ರೇನು? ನಂಗಂತೂ ಅದೇ ಬೆಲೆಗೆ ಎರಡು ಒಳ್ಳೆಯ ಮೈಸೂರು ಸಿಲ್ಕ್ ಸೀರೆ ಬರುತ್ತಲ್ಲಾಂತನ್ನಿಸಿ ವರಿಯಾಗಿದ್ದಂತೂ ನಿಜ. ಆದರೆ ಗೀತೆಯಲ್ಲಿ ಕೃಷ್ಣ ವರ್ಣಿಸುವ ಸ್ಥಿತಪ್ರಜ್ಞನ ತಮ್ಮನೇ ಇವರಿರಬಹುದೇ ಅಂತ ಸದಾ ಅನ್ನಿಸುವ ನನ್ನ ಪತಿ ಮಾತ್ರಾ – ಹನ್ನೆರಡು ವರ್ಷಗಳಿಗೊಂದ್ಸಲ ಬರೋ ಕುಂಭಮೇಳದ ಪ್ರಯೋಜನ ಪಡೆಯಬೇಡವೇ ಏರ್ಲೈನ್ಸಿನವರೂ ಪಾಪ, ಹೋಗಲೀ ಬಿಡು – ಅಂದರು! ಕಾರಣವಿರಲಿ ಬಿಡಲಿ ತಲೆಗೆ ಹುಳ ಬಿಟ್ಟುಕೊಳ್ಳುವ ಜಾಯಮಾನದವಳಾದ ನಾನು ಅಷ್ಟು ಬೇಗ ಸೋಲನ್ನೊಪ್ಪಿಕೊಳ್ಳುವುದೂಂದ್ರೇನು? ಇದ್ದ ಬದ್ದ ಬುದ್ಧಿಯೆಲ್ಲಾ ಉಪಯೋಗಿಸಿ ಏನು ಮಾಡೋದೂ ಅಂತ ತಲೆ ಕೆರಕೊಂಡಿದ್ದಕ್ಕೆ ಹೊಳೀತು – ಪ್ರಯಾಗಕ್ಕೆ ಹತ್ತಿರ ಇರೋ ಲಕ್ನೋಗೋ ಕಾಶೀಗೋ ಹೋಗಿ, ಅಲ್ಲಿಂದ ಕುಂಭಮೇಳದ ಸ್ಥಳಕ್ಕೆ ರಸ್ತೆಯ ಮೂಲಕ ಹೋದ್ರೆ ಹೇಗೇಂತ. ಅಲ್ಲಿ ನೋಡಿದರೆ ನಿಜವಾಗಲೂ ಕಾಶೀಗೆ ಹೋಗುವ ಫ್ಲೈಟಿನ ಟಿಕೆಟ್ಟು ಸುಲಭವಾಗಿ, ಚೀಪಾಗಿ ಸಿಕ್ಕೇ ಬಿಡೋದೇ! ನೋಡಿದರೆ ಪ್ರಯಾಗದಲ್ಲಿ ಎರಡು ದಿನ ಕಳೆಯಲು ಟೆಂಟೂ ಸಹಾ ತಕ್ಷಣವೇ ಸಿಕ್ಕಿಬಿಡ್ತು! ಎಲ್ಲೋ ಕಾಶಿ ವಿಶ್ವನಾಥನೇ ನನ್ನ ಪರ ನಿಂತಿರಬೇಕು.

ಇಲ್ಲಿ ಇನ್ನೊಂದು ವಿಷಯ ಹೇಳಲೇಬೇಕು. ಹೀಗೆ ನಾನು ನನ್ನ ಮೆಚ್ಚಿನ ಇಂಟರ್ನ್ಯಾಷನಲ್ ಫಿಲ್ಮ್ ಫೆಸ್ಟಿವಲ್ಲನ್ನೂ ಅರ್ಧದಲ್ಲೇ ಕೈಬಿಟ್ಟು ಕಾಶೀಯಾತ್ರೆಗೆ ಹೊರಟಿದ್ದು ಮೊದಲೇ ಹಾಸ್ಯಪ್ರವೃತ್ತಿಗೆ ಹೆಸರಾದ ನಮ್ಮ ಅಪರಂಜಿ ಬಳಗದ ವಾಟ್ಸಾಪ್ ಗ್ರೂಪಿನ ಗೆಳತಿಯರಿಗೆಲ್ಲ ಕಚಗುಳಿಯಿಟ್ಟಂತಾಯ್ತು. ಭುವನೇಶ್ವರಿ ಹೆಗ್ಗಡೆಯವರು ಮೊದಲಿಗೆ ಕ್ಯಾತೆ ತೆಗೆದರು – ಇಷ್ಟು ದಿಢೀರಂತ ಹೊರಟಹಾಗಲ್ಲ, ಅಲ್ಲಿ ಹೋಗಿ ನೀವು ಒದ್ದಾಡಬಾರದೂ ಅಂತ ಕೇಳ್ತಿದ್ದೀನಿ – ಕಾಶೀಲಿ ಏನು ಬಿಟ್ಟು ಬರೋದೂನ್ತ ಡಿಸೈಡ್ ಮಾಡಿದ್ದೀರಾ? ಮೊದಲೇ ಯೋಚಿಸಿ ರೆಡಿಯಾಗಿರಿ ಅಂತ. ಸರಿ ತೊಗೊಳ್ಳಿ, ನನಗಿಂತಾ ಹೆಚ್ಚಾಗಿ ಅವರೆಲ್ಲರಿಗೂ ಕಾಶಿಯಲ್ಲಿ ನಾನು ಏನನ್ನು ಬಿಟ್ಟುಬರಬೇಕೂಂತ ಜಿಜ್ಞಾಸೆ ಶುರುವಾಯ್ತು. ನಾವು ಹೊರಡಲು ಇದ್ದ ಎರಡು ದಿನಗಳಲ್ಲೇ ಎಲ್ಲರೂ ಪುಂಖಾನುಪುಂಖವಾಗಿ ತಮ್ಮ ಅಮೂಲ್ಯವಾದ ಉಚಿತ ಸಲಹೆಗಳನ್ನು ನೀಡಿ ಕೃತಾರ್ಥರಾದರು. ಭುವನೇಶ್ವರಿಯವರು, ಕಂಡು ಕೇಳಿರದ ಅಂಬಾರದಹಣ್ಣು ಅಂಥವನ್ನು ಬಿಟ್ಟು ಬನ್ನಿ ಎಂದು ಸಲಹೆ ನೀಡಿದರೆ, ಶ್ಯಾಮಲಾ ತಮಗೆ ಕಂಡರಾಗದ ಎಲಚೀಹಣ್ಣು, ಕೆಸುವಿನ ದಂಟು ಬಿಟ್ಟು



ಬಂದಿರೋದನ್ನ ಹೇಳಿದರು. ನಿರ್ಮಲ ತಾವು ಏನನ್ನೋ ಬಿಟ್ಟು ಅದನ್ನು ಬಿಟ್ಟು ಬಂದೇಂತನ್ನೋದನ್ನೇ ಮರೆತು ಬಿಟ್ಟು ಬಂದೇಂತ ಹೇಳಿದ್ದರಿಂದ ಹಿಡಿದು, ಪ್ರಾಣಪ್ರಿಯವಾದದ್ದನ್ನು ಬಿಟ್ಟು ಬರಬೇಕೂಂತ ಅನ್ನುತ್ತಾರೆ ಅಂತ ನಿಮ್ಮ ಮನೆಯಾತನನ್ನೇ ಎಲ್ಲಾದರೂ ಬಿಟ್ಟು ಬಂದೀರಾ – ಅಂತ ಕುಮುದಾ ಎಚ್ಚರಿಸುವವರೆಗೂ ಹೋಯಿತು – ಎರಡು ದಿನ ನಾನ್ಸ್ಟಾಪಾಗಿ ನಡೆದ ವಾಟ್ಸಾಪ್ ಚರ್ಚೆ! ಕೊನೆಗೆ ನನಗೆ ಕಂಡರಾಗದ ಒಂದು ಕೇಜಿ ಬೆಳ್ಳುಳ್ಳಿಯನ್ನು ತೊಗೊಂಡು ಹೋಗಿ ಅಲ್ಲಿ ಬಿಟ್ಟು ಬರ್ತೀನೀಂತ ನಾನು ಡಿಸೈಡ್ ಮಾಡಿ ಹೇಳಿದ್ದಕ್ಕೆ ಗಾಯತ್ರಿ – ಖಂಡಿತಾ ಕೂಡದು. ಆಗ ಹೋಟೆಲ್ಲಿನಲ್ಲಿ ಚಾಟ್ ತಿನ್ನುವುದೇ ನಿಲ್ಲಿಸಬೇಕಾಗುತ್ತೆ ನಾನು ಅಂತ ಹೆದರಿಸಿದ್ದರಿಂದ, ಚರ್ಚೆ ತಾತ್ಕಾಲಿಕವಾಗಿ ಮತ್ತೇನೂ ದಿಕ್ಕು ತೋಚದೇ ದಾರಿತಪ್ಪಿತು. ಎಲ್ಲಾ ವೆಜಿಟೇರಿಯನ್ ತಿಂಡಿತಿನಿಸುಗಳು, ಹಾಗೂ ಎಲ್ಲಾ ಹಣ್ಣುಹಂಪಲು, ತರಕಾರಿಗಳಲ್ಲಿ ಪಂಚಪ್ರಾಣಗಳನ್ನು ಇಟ್ಟಿರುವ ನಾನು ಏನನ್ನು ತಾನೇ ಬಿಟ್ಟು ಬರಲಿ ವಿಶ್ವನಾಥನೇ –ಅಂತ ದುಃಖಿಸುತ್ತಿರುವಾಗ ಕೊನೆಗೆ ಶ್ಯಾಮಲಾ ನನಗಾಗಿ ಮತ್ತೆಮತ್ತೆ ಯೋಚಿಸಿ – ನಾನು ಚಳ್ಳೆ ಹಣ್ಣನ್ನು ಬಿಟ್ಟು ಬರಬೇಕೂಂತ ಠರಾವು ಪಾಸು ಮಾಡಿ, ನನ್ನಂಥಾ ತಿಂಡಿಪೋತಿಯೊಬ್ಬಳ ಜೀವವುಳಿಸಿ ಪುಣ್ಯ ಕಟ್ಟಿಕೊಂಡರು!

ಫಿಲ್ಮ್ ಫೆಸ್ಟಿವಲ್ನಲ್ಲಿ ನಾಲಕ್ಕು ದಿನಗಳಲ್ಲಿ ಹದಿನೈದೇ ಸಿನೆಮಾ ನೋಡಿದ್ದ ನನ್ನ ಪತಿ, ಅದರ ಮಧ್ಯದಲ್ಲೇ ಅನಿರೀಕ್ಷಿತವಾಗಿ ಹೊರಡಬೇಕಾದ್ದಕ್ಕೆ ಹೇಗೋ ಹೊಂದಿಕೊಂಡರೂ ಸ್ವಲ್ಪಗೊಣಗುಟ್ತಾನೇ ಬಟ್ಟೆಬರೆ ಎತ್ತಿಟ್ಟುಕೊಂಡರು. ವರ್ಷಾನುಗಟ್ಟಲೆಯಿಂದ ಈ ತರದ ಅನಿರೀಕ್ಷಿತಗಳಿಂದ ಆಗಿರುವ ಅಭ್ಯಾಸಬಲದಿಂದ ನಾನೂ ಬೇಗ ಬೇಗಲೇ ಒಂದು ರಾಶಿ ಸೊಳ್ಳೆ ಪರದೇನ ಸೂಟ್ಕೇಸಿಗೆ ತುರುಕಿ ರೆಡಿಯಾದೆ, ಆಕಾಶದಲ್ಲಿ ಹಾರೋ ಕಬ್ಬಿಣದ ದೋಣೀಲಿ ಹೋಗಿ ರಾಶಿ ರಾಶಿ ಗಂಗೆ ತರಕ್ಕೆ ಬೇಕಲ್ಲಾಂತ, ಆಫ್ ಕೋರ್ಸ್– ಕೈಲಾಸಂ ಅವರ ಕ್ಷಮೆ ಕೋರಿ! ಅಂತೂ ಮುಂಜಾನೆಯ ಒಂದು ಶುಭಮುಹೂರ್ತದಲ್ಲಿ ವಿಶ್ವನಾಥನ ಕಾಶಿಗೆ ಕಾಲಿಟ್ಟೆವು. ದೇವಸ್ಥಾನಕ್ಕೆ ಹಲವಾರು ಕಿಲೋಮೀಟರುಗಳ ಮೊದಲಿಂದಲೇ ಅವನ ದರ್ಶನ ಭಾಗ್ಯಕ್ಕಾಗಿ, ಆ ಬಿರುಬಿಸಿಲಿನಲ್ಲಿ ಆ ಪ್ರಾಚೀನವಾದ ಪುಣ್ಯಕ್ಷೇತ್ರದ ಸಂದಿಗೊಂದಿಯಂತಿರುವ ರಸ್ತೆಗಳ ಟ್ರಾಫಿಕ್ಕಿನ ಕಿಷ್ಕಿಂಧೆಯನ್ನೂ ಲೆಕ್ಕಿಸದೇ, ತಾಳ್ಮೆಯಿಂದ ಶಿಸ್ತಾಗಿ ಸಾಲಲ್ಲಿ ನಿಂತಿದ್ದ ಜನರ ಭಕ್ತಿ ಶ್ರದ್ಧೆಗಳನ್ನು ನೋಡಿ ಬೆರಗಾದೆವು. ಅಂತೂ ಮೊದಲದಿನವೇ ವಿಶ್ವನಾಥನ ದರ್ಶನ, ನಾವೇ ಕೈಯ್ಯಾರೆ ಮಾಡಿದ ಅಭಿಷೇಕ ಇತ್ಯಾದಿಗಳೆಲ್ಲಾ ಪಂಡಾಗಳ ಮಾಮೂಲೀ ತರಲೆಗಳೊಂದಿಗೆ ಸಾಂಗವಾಗಿ ನಡೆಯಿತು. ಸಂಜೆ ಗಂಗೆಯ ತೆರೆಗಳ ಮೇಲೆ ದೋಣಿಯಲ್ಲಿ ಕುಳಿತು ಅತ್ಯಂತ ಮನೋಹರವಾದ ಜಗತ್ಪ್ರಸಿದ್ಧ ಗಂಗಾ ಆರತಿಯನ್ನೂ ನೋಡಿ ಖುಷಿಪಟ್ಟೆವು. ಹರಿಶ್ಚಂದ್ರಘಾಟಿನ ಪಕ್ಕದ ಕೇದಾರಘಾಟಿನಿಂದ ಹೊರಟ ನಮ್ಮ ದೋಣಿ ಸುಮಾರು ಒಂದೂವರೆ ಘಂಟೆಗಳಷ್ಟು ಯಾನದ ನಂತರ, ನಲ್ವತ್ತಮೂರು ಘಾಟುಗಳನ್ನು ದಾಟಿಪ್ರಯಾಣಿಸಿ ವಾಪಸ್ ಬಂದಿತು. ಹರಿಶ್ಚಂದ್ರ ಮತ್ತು ಮಣಿಕರ್ಣಿಕಾ ಘಾಟುಗಳಲ್ಲಿ ಧಗಧಗಾಂತ ಉರಿಯುತ್ತಿದ್ದ ಚಿತೆಗಳು, ಅದರ ಪರಿವೆಯಿಲ್ಲದಂತೆ ನಡೆಯುತ್ತಿದ್ದ ಗಂಗಾ ಪೂಜೆ ಮತ್ತು ಗಂಗಾ ಆರತಿಗಳು ಜೀವನದ ವಿರೋಧಾಭಾಸವನ್ನು ಎತ್ತಿ ತೋರುವಂತಿದ್ದವು! ನೆರೆದ ಜನಸ್ತೋಮವಂತೂ ಅವುಗಳಿಗೆ ಹೆಚ್ಚಿನ ಗಮನವನ್ನೇ ಕೊಡದೇ ಭಕ್ತಿ ಶ್ರದ್ಧೆಗಳಿಂದ ಪುಟ್ಟ ಪುಟ್ಟ ದೀಪದ ದೊನ್ನೆಗಳನ್ನು ಗಂಗೆಯಲ್ಲಿ ತೇಲಿಬಿಡುವುದರಲ್ಲಿ ನಿರತವಾಗಿತ್ತು. ನಾನೂ ಸಹಾ ಅದರಿಂದ ಜೀವನದ ಒಂದು ಅಮೂಲ್ಯ ಪಾಠ ಕಲಿತು ಅವರನ್ನೇ ಅನುಸರಿಸಿದೆ ಬಿಡಿ. ಅಲ್ಲದೇ



ನಮಗೆ ಸರಿಯಾಗಿ ಸಿಕ್ಕಿದ್ದ ಯುವ ಅಂಬಿಗ ಚಿಂಟುವಂತೂ ಮಹಾ ವಾಚಾಳಿ! ಆತ ಪ್ರತಿಯೊಂದು ಘಾಟಿನ ಸ್ಥಳಪುರಾಣವನ್ನು ಸವಿವರವಾಗಿ ಹೇಳಿ ಯಾತ್ರಿಕರ ಮನಸ್ಸನ್ನು ಪ್ರಫುಲ್ಲವಾಗಿಡುವುದರ ಎಕ್ಸ್‌ಪರ್ಟ್ ಅವೆಲ್ಲದರ ಮತ್ತು ಕುಂಭಮೇಳದ ವಿವರಗಳೆಲ್ಲಾ ಮತ್ತೊಮ್ಮೆ..

ಮಾರನೆಯ ದಿನ ಕಾಶಿಯಿಂದ ಪ್ರಯಾಗಕ್ಕೆ ತೆರಳಿ ಅಲ್ಲಿದ್ದ ಅಭೂತಪೂರ್ವ ಕುಂಭಮೇಳದ ಮಿಲಿಯನ್ನುಗಟ್ಟಲೆ ಯಾತ್ರಿಗಳಲ್ಲೊಬ್ಬರಾದೆವು! ಉತ್ಪ್ರೇಕ್ಷೆಯಲ್ಲ, ಅಲ್ಲಿಯ ನೈರ್ಮಲ್ಯ, ಅಚ್ಚುಕಟ್ಟಾದ ವ್ಯವಸ್ಥೆ, ತ್ರಿವೇಣಿ ಸಂಗಮದಲ್ಲಿ ಹರಿಯುತ್ತಿದ್ದ ಗಂಗೆ-ಯಮುನೆ-ಗುಪ್ತಗಾಮಿನಿಯಾದ ಸರಸ್ವತಿಯರ ಶುಭ್ರತೆ, ಆನಾಡಿ ಜನಜಂಗುಳಿಯಿದ್ದರೂ ಹೊಡೆದೆದ್ದು ಕಾಣುತ್ತಿದ್ದ ಎಲ್ಲರ ಸಂಯಮ, ಸಭ್ಯತೆ, ಅಸಾಧ್ಯ ಶ್ರದ್ಧೆ, ಭಕ್ತಿ, ಸಂಭ್ರಮಗಳನ್ನು ಕಣ್ಣಾರೆ ನೋಡಿ ಸವಿದರಷ್ಟೇ ಕುಂಭದ ಭವ್ಯತೆ ಸರಿಯಾಗಿ ಅಂದಾಜಾಗಲು ಸಾಧ್ಯ ಅನ್ನಿಸುತ್ತದೆ. ಇನ್ನು ಯಾತ್ರಿಗಳ ವಾಸ್ತವ್ಯಕ್ಕಾಗಿ ನಿರ್ಮಿಸಿದ್ದ ಅಸಂಖ್ಯ ಟೆಂಟುಗಳ ಬಗ್ಗೆ ಬರೆಯುವುದೇ ಒಂದು ಪ್ರತ್ಯೇಕ ಲೇಖನಕ್ಕಾಗುವಷ್ಟು ಗ್ರಾಸವುಳ್ಳದ್ದು ಅನ್ನಬಹುದು. ಈ ಮಟ್ಟದ ವ್ಯವಸ್ಥೆಯ ಅದ್ಭುತ ನಿರ್ವಹಣೆಗಾಗಿ ನಮ್ಮ ನೆಚ್ಚಿನ ಪ್ರಧಾನಿ ಹಾಗೂ ಅವರೊಂದಿಗೆ ಕೈಜೋಡಿಸಿ ಸಹಕರಿಸಿದ ಉತ್ತರಪ್ರದೇಶದ ಮುಖ್ಯಮಂತ್ರಿಗಳನ್ನು, ಅಲ್ಲಿದ್ದ ಪ್ರತೀ ಯಾತ್ರಿಯೂ, ಅಂಬಿಗರೂ, ಇತರರೂ ಪ್ರಶಂಸಿದ್ದನ್ನು ಕೇಳಿಕೇಳಿ ಕಿವಿ ತೂತಾದಂತಾಯಿತು. ಉತ್ತರಪ್ರದೇಶದಲ್ಲಂತೂ ಅವರಿಬ್ಬರೂ ಈ ಬಾರಿ ಜನಮನವನ್ನು ಸೂರೆಗೊಂಡಿರುವುದಂತೂ ನಿಸ್ಸಂಶಯ. ಅಂದಹಾಗೇ, ಅದರ ಮುಖ್ಯ ಉಸ್ತುವಾರಿಯನ್ನು ನೋಡಿಕೊಂಡವರು ನಮ್ಮ ಕರ್ನಾಟಕದವರೇಂತ ಸಹಾ ಸುದ್ದಿ! ಇರಲಿ.

ಎರಡು ದಿನಗಳ ನಂತರ ಕಾಶಿಗೆ ಪುನಃ ಬಂದು ಅಲ್ಲಿ ಸುತ್ತಮುತ್ತಲಿನ ಅಸಂಖ್ಯ ದೇವಾಲಯಗಳಲ್ಲಿ ಕೆಲವು ಮತ್ತು ಬೌದ್ಧ ಯಾತ್ರಾ ಸ್ಥಳವಾದ ಅತಿ ಸುಂದರ ಸಾರಾನಾಥ ಇತ್ಯಾದಿಗಳನ್ನೆಲ್ಲಾ ನೋಡುವುದರಲ್ಲಿ ಕಾಶಿ ಆಶೆ ನಾಶವಾಗಿ ಮೀಶೆ ಉಳಿದಿದ್ದೆಷ್ಟೋ ವಾಶೀ ಅಂತ ಖಂಡಿತವಾಗಿ ಅನ್ನಿಸದೇ, ಆರೇ ಆರು ಬೆನಾರಸ್ ಸೀರೆಗಳು ಮತ್ತು ಹತ್ತು ಕೇಜೀಗಿಂತ ಕಮ್ಮಿ ತೂಕದ ನೆನಪುಗಳ ಮೂಟೆಯನ್ನು ಹೊತ್ತು ಬೆಂಗಳೂರಿಗೆ ಹಿಂದಿರುಗಿದೆವು (ಮೊದಲೇ ಇವರು ತಾಕೀತು ಮಾಡಿದ್ರಲ್ಲ - ಎಕ್ಸೆಸ್ ಬ್ಯಾಗೇಜನ್ನಂತೂ ಖಂಡಿತಾ ಕೊಡಲ್ಲಾಂತ, ಅದಕ್ಕೇ ಹತ್ತು ಕೇಜಿ ಮಾತ್ರ ಹೊತ್ತಿದ್ದು!).

ಆದರೆ ನೋಡಿ, ಬಿಟ್ಟು ಬರಕ್ಕೆ ಅಂತ ಅಲ್ಲಿ ಎಷ್ಟು ಹುಡುಕಿದರೂ ಒಂದರ್ಧ ಕೇಜೀಯಷ್ಟಾದರೂ ಚಳ್ಳೇ ಹಣ್ಣು ಸಿಗಬೇಡವೇ! ಹೋಗಲೀ ಅಂದರೆ ಅಲ್ಲಿ ಭಾಷೆಯ ತೊಂದರೆ ಬೇರೆ! ಪ್ರಾಣಪ್ರಿಯವಾದದ್ದನ್ನೇನಾದರೂ ಬಿಟ್ಟು ಬರಲೇಬೇಕಂತಲ್ಲ ಅನ್ನೋ ಪ್ರತೀತಿಗೆ ಹೆದರಿ ನಾನಂತೂ ನಿದ್ದೆಗೆಟ್ಟು ಯೋಚಿಸೀ ಯೋಚಿಸೀ ಕೊನೆಗೆ ನನ್ನ ಸೆಲ್ ಫೋನಿನ ಚಾರ್ಜರನ್ನೇ ಬಿಟ್ಟುಬಂದುಬಿಟ್ಟೆ! ಕಾಶೀವಿಶ್ವನಾಥ ಮೆಚ್ಚಿರಲೇಬೇಕು ನನ್ನ ಪ್ರಾಣಪ್ರಿಯವಾದದ್ದನ್ನ ಪರಿತ್ಯಜಿಸಿ ಬಂದಿದ್ದಕ್ಕೆ ಅಂತ ನನಗೇನೋ ಧೃಢವಾದ ನಂಬಿಕೆಯಿದೆ. ಅಷ್ಟಲ್ಲದೇ ಇನ್ನೇನು ಅಲ್ವೇ? ■

---

## ಸೆರೆ

**ಜೋಯಿಸರು: ನಾನು ತೋರಿಸಿದ ಹುಡುಗಿಯನ್ನು ಮದುವೆಯಾಗಿ ಅವರಿಗೆ ಕನ್ಯಾಸೆರೆ ಬಿಡಿಸಯ್ಯಾ**

**ಯುವಕ: ಆಗ ಅವರಿಗೆ ಕನ್ಯಾಸೆರೆಯಿಂದ ಬಿಡುಗಡೆ-ನನಗೆ ಸೆರೆಮನೆ ವಾಸ.**



# ಪಕ್ಷಾಂತರ

**ಪಾಲಹಳ್ಳಿ ವಿಶ್ವನಾಥ್**

ಬಹಳ ಹಿಂದಿನಿಂದಲೂ ನಮ್ಮ ರಾಜ್ಯವನ್ನು ಎರಡು ರಾಜಕೀಯ ಪಕ್ಷಗಳು ನಡೆಸಿಕೊಂಡು ಬರುತ್ತಿವೆ: ಒಂದು ಸಂಪಿಗೆ ಪಕ್ಷ, ಇನ್ನೊಂದು ಬೇವಿನ ಪಕ್ಷ. ಹೆಸರುಗಳ ಬಗ್ಗೆ ಅಂತಹ ರಹಸ್ಯವೇನಿಲ್ಲ, ಸಂಪಿಗೆ ಪಕ್ಷದ ಪ್ರಧಾನ ಕಛೇರಿ ಸಂಪಿಗೆ ರಸ್ತೆಯಲ್ಲಿ ಮತ್ತು ಉಳಿದದ್ದನ್ನು ನೀವೆ ಊಹಿಸಿಕೊಳ್ಳಬಲ್ಲಿರಿ.

ರಾಜಕಾರಣಿಗಳ ಜೀವನ ಸಾಮಾನ್ಯ ಜನರ ಜೀವನದಂತಲ್ಲ; ಆತನ (ಆಕೆಯ) ಬಾಲ್ಯ ಮತ್ತು ಯೌವನದಿಂದ ಆತ ಅನೇಕ ತ್ಯಾಗಗಳನ್ನು ಮಾಡುತ್ತ ಹೋಗಬೇಕಾಗುತ್ತದೆ. ಪಕ್ಕದ ಮನೆಯ ಹುಡುಗರೆಲ್ಲಾ ಇಂಜನಿಯರೋ, ಡಾಕ್ಟರೋ ಆಗುತ್ತಿದ್ದರೆ ಈತ ಶಾಲೆಗೆ ಹೋಗದೆ (ಅಥವಾ ಸ್ವಲ್ಪ ಹೋಗಿ ಬಂದು) ನೇರ ದೇಶಸೇವೆಗೆ ತಯಾರಿ ತೆಗೆದುಕೊಳ್ಳಬೇಕಾಗುತ್ತದೆ. ಈತ ತನ್ನ ಸುತ್ತಲ ಸಣ್ಣಪುಟ್ಟ ವಿವಾದಗಳನ್ನು ಹೇಗಾದರೂ ಬಗೆಹರಿಸಿ ಬೀದಿಯ ಮತ್ತು ನಿಧಾನವಾಗಿ ಮೊಹಲ್ಲಾದ ನಾಯಕನಾಗಬೇಕಾಗುತ್ತದೆ. ಆದರೂ ಅದು ಸಾಲದಾಗುತ್ತದೆ. ಮೇಲೆ ಬರಲು ಯಾರಾದರೂ ಒಬ್ಬ ಪ್ರಮುಖ ನಾಯಕನನ್ನು ಆಲೈಸಲೇ ಬೇಕಾಗುತ್ತದೆ. ಗುರುಕುಲದಲ್ಲಿ ಕಷ್ಟಪಡುವ ಯಾವ ಬಾಲಕನ ಶ್ರಮಕ್ಕೂ ಇದು ಕಡಿಮೆ ಇಲ್ಲ. ನಾಯಕನ ಬೇಕು ಬೇಡಗಳನ್ನೆಲ್ಲ ಚೆನ್ನಾಗಿ ತಿಳಿದುಕೊಂಡು ನಿಧಾನವಾಗಿ ಆ ನಾಯಕನ ಹಲವಾರು ಶಿಷ್ಯರ ಪೈಪೋಟಿಯನ್ನು ಮೀರಿ ಮೇಲೆ ಬರಬೇಕಾಗುತ್ತದೆ. ತಾವಾಗಿಯೇ ಮೇಲೆ ಹೋದವರು ಇಲ್ಲ ಎಂದಲ್ಲ; ಆದರೆ ಅವರ ಸಂಖ್ಯೆ ಕಡಿಮೆ. ಇಷ್ಟೆಲ್ಲ ಆದ ನಂತರ ಚುನಾವಣೆಯನ್ನು ಎದುರಿಸಬೇಕಾಗುತ್ತದೆ. ಅದರಲ್ಲಿ ಗೆಲ್ಲದೆ ಇದ್ದರೆ ಅದು ಅವನ ರಾಜಕೀಯ ಜೀವನದ ಕೊನೆ.

ಇಷ್ಟೆಲ್ಲ ಮಾಡಿ ವಿಧಾನಸಭೆಯ ಸದಸ್ಯನಾದ ವ್ಯಕ್ತಿ ತನ್ನ ಓರಗೆಯವರನ್ನೆಲ್ಲಾ ನೋಡಿದಾಗ ಅವರುಗಳಲ್ಲಿ ಒಬ್ಬ ಲಾಯರಾಗಿಯೋ, ಡಾಕ್ಟರಾಗಿಯೋ, ಇಂಜನಿಯರಾಗಿಯೋ ಒಳ್ಳೆಯ ಹಣ ಸಂಪಾದಿಸುತ್ತಿರುತ್ತಾರೆ. ನಮ್ಮ ರಾಜಕಾರಣಿಗೆ ಅಷ್ಟಾದರೂ ಬೇಡವೇ? ಅಗ ಆತ ತಾನು ಮಾಡಿದ 'ಸೇವೆ' ಗಳಿಗೆಲ್ಲಾ ಪ್ರತಿಫಲವನ್ನು ಅಪೇಕ್ಷಿಸುತ್ತಾನೆ. ನಿಜವಾದ ಪ್ರತಿಫಲವೆಂದರೆ ಮಂತ್ರಿ ಹುದ್ದೆ; ಅದು ಸಿಕ್ಕಿದರೆ ಮಾತ್ರ ಅವನು ತನ್ನನ್ನು ಆರಿಸಿದ ಜನರಿಗೆ ಸರಿಯಾಗಿ ಸೇವೆಮಾಡಲು ಆಗುವುದು ಎಂದು ತಿಳಿದಿರುತ್ತಾನೆ. ಆ ಮಂತ್ರಿ ಹುದ್ದೆ ಸಿಗಲು ಪಕ್ಷದಲ್ಲಿ ಅನೇಕ ವರ್ಷಗಳ ದುಡಿಮೆ ಅಥವಾ ಯಾವುದೋ ಅದ್ವಿತೀಯ ಸಾಮರ್ಥ್ಯ ಬೇಕಾಗುತ್ತದೆ. ಆದರೆ ಸಾಮಾನ್ಯ ಸದಸ್ಯರಿಗೆ, ಅದೂ ಹೊಸಬರಿಗೆ, ಇರುವ ಒಂದೇ ಅವಕಾಶವೆಂದರೆ ಪಕ್ಷಾಂತರ ಮಾಡುವುದು. ನಮ್ಮ ರಾಜ್ಯದ ವಿಧಾನಸಭೆಯಲ್ಲಂತೂ ಇರುವ ಸ್ಥಾನಗಳು ಸಾಮಾನ್ಯವಾಗಿ ಎರಡೂ ಪಕ್ಷಗಳಲ್ಲಿ ಸಮನಾಗಿ ಹಂಚಿಹೋಗುವುದರಿಂದ ಈ ಅವಕಾಶ ಇದ್ದೇ ಇರುತ್ತದೆ. ಪ್ರತಿ ಚುನಾವಣೆಯಲ್ಲಿಯೂ ಒಂದಿಬ್ಬರು ಆ ಕಡೆಗೂ ಒಂದಿಬ್ಬರು ಈ ಕಡೆಗೂ ಹೋಗುತ್ತಾರೆ, ತಮ್ಮನ್ನು ಬೆಳೆಸಿದ ಪಕ್ಷವನ್ನು ತ್ಯಜಿಸುವುದು ಸುಲಭವೇನಲ್ಲ, ಹಾಗೂ ರಾಜಕಾರಣಿ ಅಂತಿಮ ತ್ಯಾಗ ಮಾಡಿ ತನ್ನವರನ್ನು ಬಿಟ್ಟು ವಿರೋಧಿ ಪಕ್ಷವನ್ನು ಒಪ್ಪಿಕೊಳ್ಳುತ್ತಾನೆ. ಹೀಗೆಯೆ ನಡೆಯುತ್ತ ಬಂದು ಒಬ್ಬ ಸದಸ್ಯನಿಗೆ ಅವನಿಗೇ ತಾನು ಯಾವ ಸಮಯದಲ್ಲಿ ಯಾವ ಪಕ್ಷದಲ್ಲಿದ್ದೇನೆ ಎಂದು ಹೇಳುವುದು ಕಷ್ಟವಾಗುತ್ತದೆ.



ಈ ಪಕ್ಷಾಂತರಕ್ಕೆ ಇತ್ತೀಚೆಗೆ ನಡೆದ ಚುನಾವಣೆ ಸ್ವಾರಸ್ಯಕರ ಉದಾಹರಣೆ. ಚುನಾವಣೆಯ ಫಲಿತಾಂಶಗಳು ಬಂದ ತಕ್ಷಣವೇ ಒಂದು ರೀತಿಯ ಕಣ್ಣಾ ಮುಚ್ಚಾಲೆ ಆಟ ನಡೆಯುತ್ತದೆ: ಕಣ್ಣಾ ಮುಚ್ಚೆ ಕಾಡೆ ಗೂಡೆ..ನಿಮ್ಮಯ ಹಕ್ಕಿ ಬಚ್ಚಿಟ್ಟ್ ಕೊಳ್ಳಿ .. ಆದ್ದರಿಂದ ಎರಡು ಪಕ್ಷದ ಹಿರಿಯರು

ತಮ್ಮತಮ್ಮ ಸದಸ್ಯರನ್ನು ಊರಿನಿಂದ ಮತ್ತು ಮಾಧ್ಯಮಗಳಿಂದ ಯಾವುದಾದರೂ ದೂರದ ವಿಶ್ರಾಮಧಾಮದಲ್ಲಿ ಇರಿಸುವುದು ವಾಡಿಕೆ. ಆದರೆ ಈ ಬಾರಿ ಮನರಂಜನೆಯ ಬದಲು ಪಕ್ಷಗಳು ಭಗವದ್ಗೀತೆ ಮತ್ತು ಇತರ ಉಪನ್ಯಾಸಗಳನ್ನು ನಡೆಸುವ ಯೋಜನೆಯನ್ನಿಟ್ಟುಕೊಂಡವು. ಸೂಕ್ತ ಸ್ಥಳಕ್ಕೆ ಹುಡುಕಿದಾಗ ಸಂಪಿಗೆ ಪಕ್ಷಕ್ಕೆ ದಾಂಡೇಲಿಯಲ್ಲಿ ಕಾಳಿ ನದಿಯ ಎಡ ದಂಡೆಯಲ್ಲಿ ಒಂದು ಮಠವೂ ಮತ್ತು ಕಾಕತಾಳಿಯವಾಗಿ ಬೇವಿನ ಪಕ್ಷಕ್ಕೆ ಬಲ ದಂಡೆಯ ಆಶ್ರಮವೂ ಸಿಕ್ಕಿತು. ಹಲವಾರು ದಿನಗಳು ಸಾತ್ವಿಕ ಆಹಾರದ ಜೊತೆ ಸದಸ್ಯರಿಗೆ ಮಠಗಳಲ್ಲಿ ರಾಮಾಯಣ, ಮಹಾಭಾರತಗಳ ಬಗ್ಗೆ ದೀರ್ಘ ಉಪನ್ಯಾಸಗಳಿದ್ದು ಭೀಷ್ಮ, ಕೃಷ್ಣ ವಿದುರರ ಹಿತೋಪದೇಶಗಳನ್ನು ಕೇಳಿಸಿಕೊಂಡರು. ಆದರೆ ಎಲ್ಲಕ್ಕಿಂತ ಹೆಚ್ಚಾಗಿ ವಿಭೀಷಣ ತನ್ನ ಅಣ್ಣನನ್ನೆ ಬಿಟ್ಟು ರಾಮನ ಪಕ್ಷ ಸೇರಿದ್ದರ ಬಗ್ಗೆ ಕೇಳಿ ಸಮಾಜದ ಒಳ್ಳೆಯದಕ್ಕಾಗಿ ಪಕ್ಷಾಂತರದ ಅನಿವಾರ್ಯತೆ ಹೊಸ ಸದಸ್ಯರ ಮೇಲೆ ಬಹಳ ಪ್ರಭಾವ ಬೀರಿತು. ಇದರಿಂದಾಗಿ ರಾತ್ರಿಯ ಸಮಯದಲ್ಲಿ ಎರಡೂ ದಡಗಳ ಮಧ್ಯೆ ದೋಣಿಗಳು ಓಡಾಡಲು ಪ್ರಾರಂಭವಾಯಿತು. ಹೀಗೆ ನಡೆದು ಒಂದು ವಾರದ ನಂತರ ಮಾಧ್ಯಮಗಳಿಗೆ ಬೇವಿನ ಪಕ್ಷದಿಂದ ಹಲವಾರು ಮಂದಿ ಸಂಪಿಗೆ ಪಕ್ಷವನ್ನು ಸೇರುತ್ತಾರೆ ಎಂಬ ಸುದ್ದಿ ಹೋಯಿತು. ಆದರೆ ಆ ಸುದ್ದಿ ತಣ್ಣಗಾಗುವ ಮೊದಲೆ ಸಂಪಿಗೆ ಪಕ್ಷದಿಂದ ಹಲವಾರು ಮಂದಿ ಬೇವಿನ ಪಕ್ಷವನ್ನು ಸೇರುತ್ತಾರೆ ಎಂಬ ಬ್ರೇಕಿಂಗ್ ನ್ಯೂಸ್ ಮಾಧ್ಯಮಗಳಲ್ಲಿ ಹೊರಬಂದಿತು. ಹಲವಾರು ಎನ್ನುವುದು ಸ್ವಲ್ಪ ದೊಡ್ಡ ಸಂಖ್ಯೆಯೇ ಇದ್ದು ನಿನ್ನೆಯ ಬೇವು ಇಂದಿನ ಸಂಪಿಗೆ ಮತ್ತು ನಿನ್ನೆಯ ಸಂಪಿಗೆ ಇಂದಿನ ಬೇವು ಎಂದಾಯಿತು. ಅದರೂ ಸರ್ಕಾರ ರಚಿಸಲು ಆಗಲಿಲ್ಲವಾದ್ದರಿಂದ ರಾಜ್ಯಪಾಲರ ಆಡಳಿತ ಜಾರಿಗೆ ಬಂದಿತು.

ಬಿಡಿ, ಹಿಂದೆಯೂ ಪಕ್ಷಾಂತರ ನಡೆದಿತ್ತು, ಮುಂದಿನ ವರ್ಷ ಮತ್ತೆ ಚುನಾವಣೆ ನಡೆಯುತ್ತದೆ. ಪ್ರಜಾಪ್ರಭುತ್ವ ಎಂದರೆ ಇದೇ ಅಲ್ಲವೆ ? ■






# ಟಾಪ್ ಟೆನ್ ಕಾಯಿಲೆ

• ಭುವನೇಶ್ವರಿ ಹೆಗಡೆ

ಜಗತ್ತಿನ ಚರಾಚರ, ಜೀವಾಜೀವ ಕೋಟಿಗಳನ್ನೆಲ್ಲ ಪ್ರತ್ಯೇಕ ಪ್ರತ್ಯೇಕವಾಗಿ 'ಯಾರಲ್ಲಿ? ಏನು ನಡೆಸಿದ್ದೀರಿ?' ಎಂದು ಕೇಳಿ ನೋಡಿ. ನಂಬರ್ ಒನ್ ಸ್ಥಾನಕ್ಕಾಗಿ ಪೈಪೋಟಿ ನಡೆಸಿದ್ದೇವೆ ಎಂದೇ ಉತ್ತರ ಬರುತ್ತದೆ. ಎರಡು, ಮೂರನೇ ನಂಬರುಗಳೆಂದರೆ ಯಾರಿಗೂ ಸಮಾಧಾನವಿಲ್ಲ. ಟಾಪ್ ಟೆನ್ನಲ್ಲಿ ಹೆಸರು ಬರದಿದ್ದರಂತೂ ಸೀದಾ ನರಕಕ್ಕೇ.

ಸಿನಿಮಾ ನಟರು, ಸಿನಿಮಾ ಹಾಡುಗಳೆಂಬ ಕರ್ಣಕಠೋರ ವಾದ್ಯಾಘಾತಗಳು, ಸೀರಿಯಲ್ ಅರಚುಕೋರರು, ಬ್ಯಾಂಕ್‌ಗಳು, ಕಾಲೇಜುಗಳು, ಲಾಯರುಗಳು, ಬಿಲ್ಡರುಗಳು.... ಯಾರನ್ನೇ ಕೇಳಿ ಇಡೀ ನಗರದಲ್ಲಿ ನಾವು ನಂಬರ್ ಒನ್ ಎಂದಾದರೂ ಹೇಳಿಕೊಳ್ಳಬೇಕು. ಹಾಗೆ ನಂಬರ್ ಒನ್ ಎನಿಸಿಕೊಳ್ಳಲು ಮಾಡುವ ಸಾಹಸಗಳು, ಪ್ರಚಾರಗಳು ಇವನ್ನೆಲ್ಲ ನೋಡಿದರೆ ನಮಗೆಲ್ಲರಿಗೂ 'ನಂಬರ್ ಒನ್ ಕಾಯಿಲೆ' ಹತ್ತಿದ ಹಾಗೆ ಕಾಣುತ್ತದೆ.

ನಮ್ಮ ಮುಂದಿನ ತಲೆಮಾರಿನ ಕಂಬಗಳು, ಕಾನ್ವೆಂಟು ಸಸಿಗಳು ಈ ಜಾಡ್ಯದಿಂದ ಬಳಲುವ ಪರಿಯನ್ನು ಮನಗಂಡು ಈಗ ಶಾಲೆಗಳಲ್ಲಿ ನಂಬರುಗಳನ್ನು (ರ್‍ಯಾಂಕು) ತೆಗೆದು ಗ್ರೇಡುಗಳನ್ನು ಕೊಡಹತ್ತಿದ್ದಾರೆ. ಎಷ್ಟೋ ನಂಬರ್ ಒನ್ ವಂಚಿತ ಮಕ್ಕಳ ತಾಯ್ತಂದೆಗಳು ಉಸಿರು ಬಿಡುವಂತಾಗಿದೆ. ಆದರೆ ಕೆಲವರಿಗೆ ಇದು ನುಂಗಲಾಗದ ಬಿಸಿ ತುಪ್ಪ. ಹಗಲು, ರಾತ್ರಿ ಓದಿ ತೊಂಬತ್ತು ತೆಗೆದ ತಮ್ಮ ಮಗನಿಗೂ 'ಎ' ಗ್ರೇಡು, ದಿನವಿಡೀ ಆಟವಾಡಿ ಎಪ್ಪತ್ತೈದು ತೆಗೆದ ಪಕ್ಕದ ಮನೆ ಕಿಡಿಗೇಡಿಗೂ 'ಎ' ಗ್ರೇಡು–ಇದು ತಪ್ಪಲ್ಲವೆ ಎಂಬುದು ಅವರ ಕೊರ ಕೊರ.

ಭೂತ, ಭವಿಷ್ಯಗಳ ಗೊಡವೆಯಿಲ್ಲದ ಮಕ್ಕಳಿಗೆ ಮಾತ್ರ ಈ ಗ್ರೇಡು, ಗ್ರೇನೈಡು ಯಾವುದೂ ಲೆಕ್ಕಕ್ಕಿಲ್ಲ. ಶಾಲೆ ಶಿಕ್ಷೆ; ಆಟ ರಕ್ಷೆ ಎಂಬ ಪಾಲಿಸಿಯನ್ನು ಪಾಲಿಸಿಕೊಂಡು ಬರುತ್ತಿದ್ದಾರೆ. ಒಂದು ದಿನ ಫ್ಯಾನಿನಡಿ ಕೂತ ನನಗೆ ಅಜ್ಜ ನೆಟ್ಟ ಆಲದ ಮರಕ್ಕೆ ನೇತು ಬೀಳಬೇಕೋ ಬೇಡವೋ ಎಂಬ ಸಂದಿಗ್ಧ ಕಾಡತೊಡಗಿತು. ಕಾಣದ ಭವಿಷ್ಯ ಅಂಜಿಸತೊಡಗಿತು. ಇವೆರಡರಿಂದ ಮುಕ್ತಿಪಡೆದು ಕಣ್ಣಿಗೆ ಕಾಣುವ, ಕೈಗೆಟಕುವ ವರ್ತಮಾನವೆಂಬ ಹುಳಿ ದ್ರಾಕ್ಷಿಯನ್ನು ತಿಂದು ಕೊಂಡಿದ್ದರಾಯ್ತು ಎಂದು ನಿರ್ಣಯಿಸಿಕೊಂಡ ಬಳಿಕವೇ ಜೀವ ಹದಕ್ಕೆ ಬಂತು.

ನಂಬರ್ ವನ್ ಸ್ಥಾನ ಇನ್ಯಾವುದಕ್ಕೆ? ನಮ್ಮ ಮನೆಯವರೆಲ್ಲರನ್ನೂ ಒಲಿಸಿಕೊಂಡಿರುವ ಮಾಯಾಂಗನೆ (ಮಾಯಾಸುರ) ಟಿ.ವಿ.ಗೇ ದಕ್ಕಿತು. ನಮ್ಮ ಮನೆ ಮಂದಿಯನ್ನೆಲ್ಲ ಮೂರ್ಖರನ್ನಾಗಿಸಿದ ಈ ಮೂರ್ಖರ ಪೆಟ್ಟಿಗೆ ಅವತರಿಸುವ ಮೊದಲು ನಮ್ಮ ಮನೆಯಲ್ಲಿ ಎಂತಹ 'ಶಾಂತ ಗದ್ದಲ'ವಿರುತ್ತಿತ್ತು! ಆ ಮಾನವ (ಸಹಜ) ನಿರ್ಮಿತ ಗದ್ದಲದಲ್ಲಿ ನಮ್ಮೆಲ್ಲರಲ್ಲೂ ಹೊಸ ಉತ್ಸಾಹ ತುಂಬುವ ಜಗಳಗಳಿರುತ್ತಿದ್ದವು. ಜೋರಾಗಿ ನಕ್ಕು ಬಿಡುವಂಥ ದುಃಖ ತೋಡುವಿಕೆಯಿರುತ್ತಿತ್ತು. ಸಡಗರ, ಸಂಭ್ರಮದಲ್ಲಿ ಮೈ ಮರೆತು ಕಿರುಚುವುದು, ಸಿಳ್ಳೆ ಹಾಕುವುದು.... ಎಲ್ಲರಿಗೂ ಸಮಾನ ಅವಕಾಶ, ಸಮಾನ ಸ್ವಾತಂತ್ರ್ಯವಿತ್ತು.



ಈ ಮೂರ್ಖರ ಪೆಟ್ಟಿಗೆ ನಮ್ಮ ಮನೆಯೊಳಗೆ ಪ್ರವೇಶಿಸಿದ್ದೇ ಮೊದಲು ಮಾಡಿದ ಕೆಲಸ ನಮ್ಮೆಲ್ಲರ ವಾಕ್ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿದ್ದು, ತಲೆಬುಡವಿಲ್ಲದ ಹರಟೆಯಿಂದ ಹಗುರಾಗುತ್ತಿದ್ದ ನಮ್ಮ ಮನೆಯಲ್ಲಿ ಎಲ್ಲರ ಬಾಯಿಗೂ ಬೀಗ, ಚಾನೆಲ್ಲುಗಳ ಜಗಳ,

ಸೀರಿಯಲ್ಲಿನ ಕುರಿತ ಚರ್ಚೆ, ದಿನಭವಿಷ್ಯ, ಹೊಸ ರುಚಿ, ವ್ಯಾಯಾಮಗಳ ಮನೋರಂಜನೆ ಕೊನೆಗೊಮ್ಮೆ ಹೆಣ ದರ್ಶನ.... ಯಾವುದರಿಂದಲೂ ತಪ್ಪಿಸಿಕೊಳ್ಳುವ ಅವಕಾಶ ಯಾರಿಗೂ ಇಲ್ಲ. ಎಲ್ಲರೂ ಸಮಾನ ಶೋಷಿತರು, ಪೀಡಿತರು. ಅಂದ ಬಳಿಕ ನಂಬರ್ ಒನ್ ಸ್ಥಾನವೇನಿದ್ದರೂ ನಮ್ಮ ಈ ಮಾಯಾಪೆಟ್ಟಿಗೆಗೇ ಸಲ್ಲಬೇಕು. ಈ ನಂಬರ್ ಒನ್ ಸ್ಥಾನಕ್ಕಾಗಿ ತೀವ್ರ ಪೈಪೋಟಿ ನಡೆಸಿರುವ ವಸ್ತುವೆಂದರೆ ಮೊಬೈಲ್ ಫೋನ್. ಆದರೆ ಈ ಚಲಿಸುವ ದೂರವಾಣಿ ಯನ್ನು ದೂರವೇ ಇಡಬೇಕೆಂಬ ನಿರ್ಣಯಕ್ಕೆ ನಮ್ಮ ಮನೆಯ ಎಡ–ಬಲ ಪಕ್ಷಗಳೆಲ್ಲ ಬೆಂಬಲ ಕೊಟ್ಟು ನಂಬರ್ ಒನ್ ಹತ್ತಿರವೂ ಸುಳಿಯದ ಹಾಗೆ ನೋಡಿಕೊಂಡಿದ್ದೇವೆ.

ಎರಡನೇ ಸ್ಥಾನ ನಮ್ಮ ಮನೆಯ ಫೋನಿಗೆ. ಹೊತ್ತಲ್ಲದ ಹೊತ್ತಲ್ಲಿ ಬರುವ ಫೋನು ಕರೆಗಳೆಲ್ಲ ಯೋಗಕ್ಷೇಮ ವಿಚಾರಿಸಲೇ ಬಂದವುಗಳಲ್ಲ. ಊರಲ್ಲಿ ಅಡಿಕೆಗೆ ಕೊಳೆ ರೋಗ ಬಂದು ತಲಾ ಆದಾಯ ತಳ ಕಂಡ ಸುದ್ದಿ, ಹಾಲು ಕರೆಯುವ ಎಮ್ಮೆಗಳೆಲ್ಲ ಮುಷ್ಕರ ಹೂಡಿದ ಸುದ್ದಿಗಳು ಬರುವುದೇ ದೂರವಾಣಿಯಿಂದ. ಕಾಲೇಜಿಗೆ ಲೇಟಾಯ್ತು ಎಂದು ನಾನೇ ಆಚೀಚೆ ಜಿಗಿಯುತ್ತಿರುವಾಗ ಬಂದ ಫೋನು ಕರೆಯೊಂದು 'ಹನುಮಂತಪ್ನೋರು ಇದಾರಾ?' ಎಂದಿತು.  ಮನುಷ್ಯ ಸಹಜ ತಾಳ್ಮೆ ಶಿಷ್ಟಾಚಾರ ಎಲ್ಲ ಮರೆಯಾಗಿ 'ಹನುಮಂತಪ್ನೋರು ಇರಲಿಕ್ಕೇನೋ ಇದ್ದಾರೆ, ಆದರೆ ಮರ ಹತ್ತಿ ಕೂತಿದಾರೆ, ಫೋನ್ಹತ್ರ ಬರೋ ಹಾಗಿಲ್ಲ.... ಎಂದು ಹೇಳಿಹೋಯಿತು. ಫೋನು ಕಟ್ಟಾಯ್ತು.

ಇನ್ನು ಮೂರನೇ ಸ್ಥಾನ ನಮ್ಮ 'ತಂಗಳ ಪೆಟ್ಟಿಗೆಗೆ', ಹಸಿದವರಿಗೆ ಅನ್ನ, ಬಾಯಾರಿದವರಿಗೆ ಜ್ಯೂಸು, ದಣಿದಿದ್ದೇನೆ ಅಡುಗೆ ಮಾಡಲಾರೆ ಎಂದವರಿಗೆ ಇಗೋ ನಿನ್ನೆಯ ಪಲ್ಯ–ಸಾರು ಬಿಸಿ ಮಾಡು, ಊಟ ನೀಡು.... ಎಂದು ಸಾಂತ್ವನ ನೀಡುವ 'ತಂಗಳನ್ನಪೂರ್ಣೆ' ನಮ್ಮೀ ಫ್ರಿಜ್ಜು!  ಚ್ಯೂಯಿಂಗ್ಗಮ್, ಚೀಸು, ಲೇಸು ಚಾಕ್ಲೇಟುಗಳಂಥ ಅಂಟು ಪದಾರ್ಥಗಳಿಗೂ ಫ್ರಿಜ್ಜಿಗೂ ಅಂಟಿದ ನಂಟಿದೆ. ಭೂತಕಾಲವನ್ನೇ ವರ್ತಮಾನವನ್ನಾಗಿಸುವ ಈ ತಣ್ಣಗಿನ ಲೋಕದೊಳಗೆ ಒಮ್ಮೆ ಹಣಕಿ ಹಾಕಿದರೂ ಸಾಕು ಹೊಟ್ಟೆ ತುಂಬಿದಂತಾಗುತ್ತದೆ. ಮುಂದಿನ ಸ್ಥಾನ ಕೊಡುವುದಾದರೆ ಅದು ನಮ್ಮ ಬಾಗಿಲ ಬೆಲ್ಲಿಗೇ ಹೋಗಬೇಕು. ಊಟ ಮಾಡುವಾಗ, ನಿದ್ರಿಸಿದಾಗ ಟಿಣೋ ಟಣ್ ಬೆಲ್ಲಾಯಿತೆಂದರೆ ನಮ್ಮನ್ನೇ ಹುಡುಕಿಕೊಂಡು ಬಂದ ಜನವಾಗಬೇಕಿಲ್ಲ. ಪಕ್ಕದ ಮನೇವ್ರಿಲ್ವಾ? ಎಂಬ ಪ್ರಶ್ನೆ. 'ನೀನು ಬೆಲ್ಲು ಮಾಡಿದ್ರೂ ಅವರು ತೆಗಿಲಿಲ್ಲಾಂದ್ರೆ ಇಲ್ಲಾ ಅಂತಲೇ ಅರ್ಥ' ಎಂದು ಹೇಳಲಾಗುತ್ತದೆಯೇ? ಇಲ್ಲಾ ಕಾಣ್ತದೆ ಅಂತ್ಲೋ, ಗೊತ್ತಿಲ್ಲ ಎಂದೋ ಏನೋ ಒಂದು ಹೇಳಿ ಬಾಗಿಲು ಹಾಕಬೇಕಾಗುತ್ತದೆ. ಒಂದು ಸಲ ನಮ್ಮ ಬಾಗಿಲ ಗಂಟೆಗೆ ನಮ್ಮ ಮೇಲೆ ಪೂರ್ವಜನ್ಮದ ದ್ವೇಷ ಕೆರಳಿ ಬಿಟ್ಟಿತ್ತು. ಐದು ನಿಮಿಷಕ್ಕೊಮ್ಮೆ ಸುಮ್ಮನೆ ಒಂದು ಬೆಲ್ಲಾಗುವುದು ಹೋಗಿ ನೋಡಿದರೆ ಮಿಸ್ಟರ್ ನೋ ಬಡಿ. ಬಡಿದು ಹಾಕುವಾ ಎಂಬ ಸಿಟ್ಟಿನಲ್ಲಿ ಹೋಗಿ ಬಾಗಿಲು ತೆರೆದರೆ ಯಾರೂ ಇಲ್ಲದಿದ್ದರೆ ಯಾರನ್ನು ಬಡಿಯುವುದು? ಸೇಲ್ಸ ಬಾಯ್, ತರಕಾರಿಯಮ್ಮ, ನಮ್ಮ ಬ್ಯಾಂಕಿನಲ್ಲಿ ಸಾಲ ತೆಗಿತೀರೋ ಇಲ್ಲವೋ ಎಂದು ಗನ್ ಹಿಡಿಯುವುದೊಂದು ಬಾಕಿ ಎಂಬಂತಿರುವ ಈಚೀಚಿನ ಸಾಲಿಗರು (ಹಳೇ ಅರ್ಥ ಈಗ ಬದಲಾಗಿದೆ. ಸಾಲ ಕೊಡುವವನೇ ಸಾಲಿಗ ಎಂಬಂತೆ.)

ಇವರನ್ನೆಲ್ಲ ಬೇಡೆಂದರೂ ದರ್ಶನ ಕರುಣಿಸುವ ಬಾಗಿಲ ಬೆಲ್ಲಿಗೆ ಶರಣೆಂದು ನನ್ನೀ ಟಾಪ್ ರ್ಯಾಂಕ್ ಲಿಸ್ಟಿಂಗ್ ಸದ್ಯಕ್ಕೆ ನಿಲ್ಲಿಸುತ್ತೇನೆ. ನಿಮ್ಮ ನಿಮ್ಮ ಮನೆಯಲ್ಲಿ ನಂಬರ್ ಒನ್...ಸ್ಥಾನ ಯಾವುದಕ್ಕೆ? ಲೆಕ್ಕಾಚಾರ ಶುರುವಾಗಿರಬೇಕಲ್ಲ? ■



# ಮಂದಹಾಸದ ಪ್ರಭುಶಂಕರರು

**• ಬೇಲೂರು ರಾಮಮೂರ್ತಿ**

ಫೆಬ್ರವರಿ 15, 1929ರಂದು ಚಾಮರಾಜನಗರದಲ್ಲಿ ಜನಿಸಿದ ಡಾ. ಪ್ರಭುಶಂಕರ ಅವರು ಪ್ರಾರಂಭದಿಂದಲೂ ರಾಮಕೃಷ್ಣ ಪರಮಹಂಸ ಮತ್ತು ವಿವೇಕಾನಂದ ಅವರ ಜೀವನ, ಸಾಧನೆ ಮತ್ತು ಬೋಧನೆಗಳಿಂದ ಪ್ರಭಾವಿತರಾದವರು. ಅವರು ಕಾಲೇಜು ಶಿಕ್ಷಣ ಮುಗಿಸಿದ್ದು ಬೆಂಗಳೂರಿನಲ್ಲಿ. ನಂತರ ಅವರು ಕುವೆಂಪು, ದೇಜಗೌ, ಕ.ವೆಂ. ರಾಘವಾಚಾರ್ ಮುಂತಾದವರ ಸೆಳೆತದಿಂದ ಮೈಸೂರು ಕಾಲೇಜಿಗೆ ಸೇರಿ ಬಿ.ಎ. ಆನರ್ಸ್ ಮತ್ತು ಎಂ.ಎ. ಪದವಿಯನ್ನು ಪಡೆದರು. ಅವರು ತೀ.ನಂ. ಶ್ರೀಕಂಠಯ್ಯ, ಜಿ.ಪಿ ರಾಜರತ್ನಂ, ಎಂ.ವಿ.ಸೀತಾರಾಮಯ್ಯ, ಡಿ.ಎಲ್.ನರಸಿಂಹಾಚಾರ್ ಮುಂತಾದ ಶ್ರೇಷ್ಠ ವಿದ್ವಾಂಸರಿಂದ ಕನ್ನಡ ಕಲಿತರು. ಹಾಗೆಯೇ ಆರ್. ಗುರುರಾಜರಾವ್, ಎಂ.ರಾಮರಾವ್ ಎಸ್, ಅನಂತನಾರಾಯಣ ಅವರುಗಳಿಂದ ಇಂಗ್ಲಿಷ್ ಕಲಿತರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಮುಂದೆ ಸುಮಾರು 17 ವರ್ಷ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ನಿರ್ದೇಶಕರಾಗಿದ್ದರು. ಒಂದು ವರ್ಷ ಅವರು ಬನಾರಸ್ ಹಿಂದೂ ವಿಶ್ವವಿದ್ಯಾನಿಲಯದ ಸಂದರ್ಶನ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ರಾಷ್ಟ್ರ ಕವಿ ಕುವೆಂಪು ಅವರ ನೇರ ಶಿಷ್ಯರಾಗಿದ್ದ ಪ್ರಭುಶಂಕರ ಅವರು ಕನ್ನಡದಲ್ಲಿ ಡಾಕ್ಟರೇಟ್ ಪಡೆದ ಪ್ರಥಮರು. ಅವರು ರಚಿಸಿದ ಕನ್ನಡದಲ್ಲಿ ಭಾವಗೀತೆ ಪ್ರೌಢ ಪ್ರಬಂಧಕ್ಕೆ ಕುವೆಂಪು ಅವರೇ ಮಾರ್ಗದರ್ಶಕರಾಗಿದ್ದರು.

ಡಾ. ಪ್ರಭುಶಂಕರರಿಗೆ ಸಾಹಿತ್ಯ ಪ್ರೇರಣೆ ದೊರೆತದ್ದು ನಾ. ಕಸ್ತೂರಿಯವರಿಂದ. ಕೇರಳದಲ್ಲಿ ಹುಟ್ಟಿ, ಮದರಾಸಿನಲ್ಲಿ ಶಿಕ್ಷಣ ಮುಗಿಸಿ ಮೈಸೂರಿಗೆ ಬಂದ ಕಸ್ತೂರಿಯವರಿಗೆ ಕನ್ನಡ ಬರುತ್ತಿರಲಿಲ್ಲ. ಅವರು ಕನ್ನಡವನ್ನು ಕನ್ನಡಿಗರಿಗಿಂತ ಅದ್ಭುತವಾಗಿ ಮತ್ತು ಅತಿ ಶೀಘ್ರವಾಗಿ ಕಲಿತರು. ರಾ.ಶಿ. ನಾಮಾಂಕಿತ ಡಾ. ಎಸ್. ಶಿವರಾಂ ಅವರು ಪ್ರಾರಂಬಿಸಿದ ಕೊರವಂಜಿ ಪತ್ರಿಕೆಗೆ ಮತ್ತು ಸುಬೋಧ ರಾಮರಾಯರು ಪ್ರಾರಂಭಿಸಿದ ನಗುವ ನಂದ ಪತ್ರಿಕೆಗಳಿಗೆ ಅವರು ಲೇಖನಗಳನ್ನು ಬರೆಯಲಾರಂಭಿಸಿದರು.

ಮೈಸೂರಿನಲ್ಲಿ ಇರುವಾಗ ಕುವೆಂಪು ಅವರ ಮೆಚ್ಚಿನ ಶಿಷ್ಯರಾಗಿ ಜೀವಿತದ ಬಹುಬಾಗವನ್ನು ಕುವೆಂಪು ಅವರೊಂದಿಗೆ ಕಳೆದರು. ಕನ್ನಡದಲ್ಲಿ ಕುವೆಂಪು ಅವರ ಸಮಗ್ರ ಕೃತಿಗಳನ್ನು ಅಧ್ಯಯನ ಮಾಡಿ ಕೃತಿಗಳನ್ನು ರಚಿಸಿದರು. ನಾ. ಕಸ್ತೂರಿಯವರ ಶಿಷ್ಯರೂ ಆಗಿದ್ದ ಪ್ರಭುಶಂಕರರು ಕಸ್ತೂರಿಯವರ ಗರಡಿಯಲ್ಲಿ ಪಳಗಿ ಸಮರ್ಥವಾಗಿ ಹಾಸ್ಯ ಹೊಮ್ಮಿಸುತ್ತಿದ್ದರು. ಅವರು ರಚಿಸಿರುವ ಮಂದಹಾಸ ಮೀಮಾಂಸೆ ಕನ್ನಡದ ಅತ್ಯುತ್ತಮ ಪ್ರಬಂಧ ಗ್ರಂಥಗಳಲ್ಲೊಂದು. ಇದರ ಜೊತೆಗೆ ಬೆರಗು, ವಿವೇಕಾನಂದ, ಎತ್ತಿಗೆ ಜ್ವರ ಎಮ್ಮೆಗೆ ಬರೆ, ( ಪ್ರಬಂಧ ) ಜೀವಜೀವದ ನಂಟು, ( ಕಾದಂಬರಿ ) ಅಂಗುಲಿಮಾಲ, ಅಮ್ರಪಾಲಿ ( ನಾಟಕಗಳು ) ಅಮೆರಿಕಾದಲ್ಲಿ ನಾನು ಮತ್ತು ಶಾಂತಿ, (ಪ್ರವಾಸ ಕಥನ), ಶ್ರೀಸಾಮಾನ್ಯರ ಶ್ರೀ ರಾಮಾಯಣ ದರ್ಶನಂ, ಕಾವ್ಯಯೋಗ ( ವಿಮರ್ಶಾ ಲೇಖನಗಳು ) ಕುವೆಂಪು, ಅಲ್ಲಮಪ್ರಭು ಪು.ತಿ.ನ. ( ಜೀವನ ಚರಿತ್ರೆ ) ಮುಂತಾದ 30 ಕೃತಿಗಳನ್ನು ರಚಿಸಿದ್ದಾರೆ. ಅಮೆರಿಕಾದಲ್ಲಿ ನಾನು ಮತ್ತು ಶಾಂತಿ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಜೊತೆಗೆ ಕುವೆಂಪು ವಿದ್ಯಾವರ್ಧಕ ಟ್ರಸ್ಟಿನ ವಿಶ್ವಮಾನವ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಗೊರೂರು ಸಾಹಿತ್ಯ



ಪ್ರಶಸ್ತಿ ಮುಂತಾದುವು ಪ್ರಭುಶಂಕರ ಅವರನ್ನು ಹುಡುಕಿಕೊಂಡು ಬಂದಿವೆ. ವಿವೇಕಾನಂದ ಕೃತಿ ಶ್ರೇಣಿ ಕನ್ನಡದಲ್ಲಿ ಪ್ರಕಟವಾಗಲು ಪ್ರಭುಶಂಕರರ ಶ್ರಮ ಸಾಕಷ್ಟಿದೆ. ಗೌತಮ ಬುದ್ಧನ ಕುರಿತಾದ ಪ್ರೇಮಭಿಕ್ಷು ಕೃತಿ ಹಲವಾರು ವರ್ಷ ಕಾಲೇಜುಗಳ ಪಠ್ಯ ಪುಸ್ತಕವಾಗಿತ್ತು. ಕೆಲವು ವರ್ಷಗಳ ಹಿಂದೆ ಪ್ರಭುಶಂಕರರ ಸಮಗ್ರ ಕೃತಿಗಳ ಸೂಕ್ಷ್ಮಾವಲೋಕನವೆನ್ನುವಂತೆ ಅವರ ಬೆಸ್ಟ್ ಆಫ್ ಪ್ರಭುಶಂಕರ ಕೃತಿ ಬೆಳಕು ಕಂಡು ಪ್ರಸಿದ್ಧಿ ಪಡೆದಿದೆ.

ಸದಾ ಹಸನ್ಮುಖಿ ಪ್ರಭುಶಂಕರರು ಬಾಯಿ ಬಿಟ್ಟರೆ ನಗೆ ಬಾಣಗಳು ಹೊರಹೊಮ್ಮುತ್ತಿದ್ದವು. ಅವರು ಎಂದೂ ಮುಖವನ್ನು ಗಂಟಿಕ್ಕಿಕೊಂಡವರಲ್ಲ. ನಾ. ಕಸ್ತೂರಿಯವರು ನಿಂತ ಕಡೆ, ಕೂತ ಕಡೆ, ಹಾಸ್ಯವನ್ನು ಹೊಮ್ಮಿಸುತ್ತಿದ್ದವರು. ಅವರ ಗರಡಿಯಲ್ಲಿ ಪಳಗಿದ ಪ್ರಭುಶಂಕರರು ಕಸ್ತೂರಿಯವರನ್ನೂ ಮೀರಿಸುವ ನಗೆಗಾರರಾಗಿದ್ದು ಒಂದು ವಿಶೇಷ. ಪ್ರಭುಶಂಕರರೇ ಹೇಳುವ ಕೆಲವು ನಗೆ ತುಣುಕುಗಳು ಹೀಗಿವೆ.

ಒಮ್ಮೆ ಕಸ್ತೂರಿಯವರು ಕ್ಲಾಸಿನಲ್ಲಿ ಪಾಠ ಮಾಡುತ್ತಿದ್ದರು. ಪ್ರಭುಶಂಕರ ಅವರೂ ಒಬ್ಬ ವಿದ್ಯಾರ್ಥಿ. ಕಸ್ತೂರಿಯವರು ಕ್ಲಾಸಿನ ಕಡೆ ನೋಡಿಕೊಂಡು ಪಾಠ ಮಾಡುವಾಗ ಒಬ್ಬ ವಿದ್ಯಾರ್ಥಿ ತೂಕಡಿಸುತ್ತಿರುವುದು ಕಸ್ತೂರಿಯವರ ಗಮನಕ್ಕೆ ಬಂದು ಪ್ರಭುಶಂಕರ ಅವರ ಕಡೆ ನೋಡಿ, ಏಯ್ ಪ್ರಭುಶಂಕರ ಅವನನ್ನು ಎಬ್ಬೋ ಅಂದರು. ಅದಕ್ಕೆ ಪ್ರಭುಶಂಕರ ಅವರು ನಾನು ಎಬ್ಬಲ್ಲ ಸರ್, ಅವನು ಇಷ್ಟು ಚನ್ನಾಗಿ ನಿದ್ದೆ ಮಾಡುವಂತೆ ಪಾಠ ಮಾಡಿದವರು ನೀವು, ನೀವೇ ಎಬ್ಬಿಸಿ ಎಂದಾಗ ಇಡೀ ಕ್ಲಾಸಿನಲ್ಲಿ ನಗೆ ಚಿಮ್ಮಿತ್ತು.

ಒಬ್ಬ ಕುಡುಕನಿಗೆ ಕುಡಿಯಲು ದುಡ್ಡು ಸಿಗದೇ ನಿರಾಶನಾಗಿ ಹೋಗುತ್ತಿದ್ದಾಗ ಒಂದು ಕಡೆ ದೇವಸ್ಥಾನವೊಂದು ಕಂಡಿತು. ಅಲ್ಲಿಗೆ ಹೋಗಿ ನೋಡಿದಾಗ ರಾಮ ದೇವರ ಹಣೆಯ ಮೇಲೆ ಬೆಳ್ಳಿಯ ನಾಮವಿದ್ದಿತು. ಯಾರೂ ಇಲ್ಲ ಅಂದು ಖಚಿತಪಡಿಸಿಕೊಂಡು ಕುಡುಕ ಆ ಬೆಳ್ಳಿಯ ನಾಮವನ್ನು ಕದ್ದುಕೊಂಡು ಹೋಗಿ ಅಂಗಡಿಗೆ ಮಾರಿ ಅದರಿಂದ ಬಂದ ದುಡ್ಡಿನಿಂದ ಕಂಠ ಪೂರ್ತಿ ಕುಡಿದ. ಕುಡಿದವನು ಹಾಡಿದ ಏನಂತ. ಓ ರಾಮ, ನೀ ನಾಮಮು ಎಂಥಾ ರುಚಿರಾ

ಒಮ್ಮೆ ಹೊರದೇಶದಲ್ಲಿ ಒಂದು ಹೆಣ್ಣಿಗೆ ಹೆರಿಗೆ ಆಗಬೇಕಿತ್ತು. ಆಸ್ಪತ್ರೆಗೆ ಸೇರಿಸಿದಾಗ ಅಲ್ಲಿದ್ದದ್ದು ಅನನುಭವಿ ವೈದ್ಯರು. ಅವರೇ ಧೈರ್ಯದಿಂದ ನಾನು ಹೆರಿಗೆ ಮಾಡಿಸುತ್ತೇನೆ ಎಂದರು. ಅಂತೂ ಇಂತೂ ಹೆರಿಗೆ ಆಯಿತು. ಅವಳಿ ಜವಳಿ ಮಕ್ಕಳು. ಆದರೆ ಒಂದು ಮಗು ತೀರ ಬಿಳುಪು ಇನ್ನೊಂದು ಮಗು ಅಷ್ಟೇ ಕಪ್ಪು. ತಾಯಿ ಅಚ್ಚರಿಯಿಂದ ಇದೇಕೆಂದು ಕೇಳಿದಳು. ಡಾಕ್ಟರಲ್ಲಿ ಉತ್ತರ ಇರಲಿಲ್ಲ. ಇದರಲ್ಲಿ ನನ್ನ ತಪ್ಪು ಏನಾದರೂ ಇರಬಹುದು ಅಂತ ಗಾಬರಿಗೊಂಡ. ಆಕೆಯ ನೆಂಟರಿಷ್ಟರೆಲ್ಲಾ ಬಂದು ಒಂದೇ ಉಸಿರಿನಲ್ಲಿ ಇದೇಕೆ ಹೀಗೆ ಎಂದು ಕೇಳಿದಾಗ ಡಾಕ್ಟರಿಗೆ ಏನೂ ಬದಲಿ ಉತ್ತರ ಕೊಡಲು ಆಗದೇ ಕಡೆಗೆ ನೋಡಿ ಒಂದು ಒರಿಜಿನಲ್ಲು ಇನ್ನೊಂದು ಕಾರ್ಬನ್ ಕಾಪಿ ಅಂದುಬಿಟ್ಟರು.

ಒಂದು ಸಾರಿ ನಾ. ಕಸ್ತೂರಿಯವರು ಪ್ರಭುಶಂಕರರನ್ನು ಕರೆದು ಪ್ರಭುಶಂಕರ ಇವತ್ತು ಪೇಪರಿನಲ್ಲಿ ನನ್ನ ಹೆಸರು ಬಂದಿದೆ ಎಂದರು. ಪ್ರಭುಶಂಕರ ಅವರು ನಾನು ಇವತ್ತು ಪೇಪರು ಓದಿದೆ. ನಿಮ್ಮ ಹೆಸರು ಕಾಣಲಿಲ್ವಲ್ಲ ಅಂದರೆ ಎಲ್ಲಿ ಪೇಪರ್ ತಗೊಂಡು ಬಾ. ಐದನೇ ಪುಟ ನಾಲ್ಕನೇ ಕಾಲಂ ಓದು ಅಂದರು. ಪ್ರಭುಶಂಕರ ಅವರು ಓದುತ್ತಾ, ನೆನ್ನೆ ಮಹಾರಾಜಾ ಕಾಲೇಜಿನಲ್ಲಿ ಒಂದು ಸುಂದರ ಸಮಾರಂಭ ನಡೆಯಿತು. ಅದರಲ್ಲಿ ಕುವೆಂಪು, ತೀ.ನಂ. ಶ್ರೀಕಂಠಯ್ಯನವರು, ಬಿ.ಎಂ. ಶ್ರೀಕಂಠಯ್ಯನವರು, ಹಾಗೂ ಇನ್ನೂ ಮುಂತಾದವರು ಅಂತ ಪ್ರಭುಶಂಕರ ಅವರು ಓದುತ್ತಿದ್ದಂತೆ ಕಸ್ತೂರಿಯವರು ಗಟ್ಟಿಯಾಗಿ



ಇನ್ನೂ ಮುಂತಾದವರು ಅಂದ್ಯಲ್ಲ ಅದು ನಾನೇ ಅಂದರು.

ಒಂದು ಸಾರಿ ಅಮೆರಿಕಾದಲ್ಲಿ ಒಬ್ಬಳು ಮಹಿಳೆ ತನ್ನ ಗಂಡನ ಮೇಲೆ ದೂರು ಕೊಟ್ಟಳು. ಏನೆಂದರೆ ನನ್ನ ಗಂಡ ನನ್ನನ್ನು ಹೇಸರಗತ್ತೆ ಅಂತ ಕರೆದ ಅಂತ. ಯಾವಾಗ ಅಂತ ಕೇಳಿದರೆ ಇಪ್ಪತ್ತು ವರ್ಷಗಳ ಹಿಂದೆ ಅಂದಳು. ಸ್ಟೇಷನ್ನಿನವರು ಏನ್ ಮೇಡಂ ಇಪ್ಪತ್ತು ವರ್ಷಗಳ ಹಿಂದೆ ಹೇಸರಗತ್ತೆ ಅಂತ ಕರೆದಿದ್ದಕ್ಕೆ ಇವತ್ತು ಬಂದು ದೂರು ಕೊಡ್ತಿದೀರ ಅಂತ ಕೇಳಿದ್ದಕ್ಕೆ ಆ ಮಹಿಳೆ ಹೌದು, ಆದರೆ ನಾನು ಹೇಸರಗತ್ತೆ ನೋಡಿದ್ದು ಇವತ್ತೇ ಅಂದಳು.

ಒಬ್ಬ ಜಿಪುಣ ಇದ್ದ. ಅವನು ಒಂದು ದಿವಸ ಹೆಂಡತಿಯೊಂದಿಗೆ ಮಾರ್ಕೆಟ್ಟಿಗೆ ಹೋಗಿದ್ದ. ಅಲ್ಲಿ ಒಂದು ಅಂಗಡಿ ಮುಂದೆ ಇಟ್ಟಿದ್ದ ಷೋಕೇಸಿನಲ್ಲಿ ಒಂದು ಹೆಣ್ಣು ಬೊಂಬೆಗೆ ಉಡಿಸಿದ್ದ ರೇಷ್ಮೆ ಸೀರೆ ಕಂಡು ಹೆಂಡತಿಗೆ ಆಸೆಯಾಗಿ ನನಗೆ ಆ ಸೀರೆ ಕೊಡಿಸಿ ಎಂದಳು. ಈಗ ನನ್ನ ಕುತ್ತಿಗೆಗೆ ಬಂತು ಅಂತ ಜಿಪುಣ ಗಾಬರಿಯಿಂದ ನೋಡು ಸಾರ್ವಜನಿಕವಾಗಿ ಚನ್ನಾಗಿ ಕಾಣೋ ವಸ್ತುಗಳನ್ನು ನಾವು ತಗೊಂಡು ಹೋಗಿ ಮನೇಲಿ ಇಟ್ಕೊಬಾರದು. ಈ ಸೀರೆನೂ ಹಾಗೇನೇ. ಯಾಕೆಂದರೆ ಚಾಮುಂಡಿ ಬೆಟ್ಟ, ಲಲಿತ ಮಹಲ್ ತರಹ ಈ ಸೀರೆ ಕೂಡಾ ನೋಡೋಕೆ ಎಲ್ರಿಗೂ ಸಿಗಬೇಕು ಅಂದು ಮೆತ್ತಗೆ ಹೆಂಡತಿಯನ್ನು ಅಲ್ಲಿಂದ ಹೊರಡಿಸಿಕೊಂಡು ಬಂದ.

ಕುತೂಹಲ ಎನ್ನೋದು ಮಹಿಳೆಯರಲ್ಲಿ ಹೆಚ್ಚು ಎನ್ನುತ್ತಾರೆ ಪ್ರಭುಶಂಕರರು. ಅದಕ್ಕೆ ಒಂದು ಉದಾಹರಣೆಯನ್ನೂ ಕೊಡುತ್ತಾರೆ. ಒಮ್ಮೆ ಅಮೆರಿಕನ್ ಮಹಿಳೆಯೊಬ್ಬರು ಮೃಗಾಲಯಕ್ಕೆ ಹೋಗಿದ್ದರು. ಅಲ್ಲಿ ಒಂದು ನೀರಾನೆಯನ್ನು (ಹಿಪ್ಪೋಪಟಮಸ್) ತೀವ್ರ ಕುತೂಹಲದಿಂದ ನೋಡುತ್ತಾ ನಿಂತಿದ್ದರು. ಅವರಿಗೆ ಎಷ್ಟೊಂದು ಅಚ್ಚರಿಯಾಗಿತ್ತು ಎಂದರೆ ಅಲ್ಲಿದ್ದ ಕಾವಲುಗಾರನನ್ನು ಕರೆದು ಅಯ್ಯಾ ಇದರ ತೂಕ ಎಷ್ಟಿರಬಹುದು ಅಂತ ಕೇಳಿದರು. ಕಾವಲುಗಾರ ಈಯಮ್ಮನಿಗೆ ಏಕೆ ಅಂತ ತಿರಸ್ಕಾರದ ಧ್ವನಿಯಿಂದ ಇರಬಹುದು ಒಂದು ಎರಡು ಸಾವಿರ ಕೆಜಿ ಅಂದ. ಮಹಿಳೆ ಹುಬ್ಬೇರಿಸಿ ಇನ್ನೊಂದು ಪ್ರಶ್ನೆ ಹಾಕಿದಳು. ಅಪ್ಪಾ ಇದು ಗಂಡೋ ಹೆಣ್ಣೋ. ಕಾವಲುಗಾರ ಮಹಿಳೆ ಕಡೆ ಮತ್ತೆ ಬೇಜಾರಿನಿಂದ ನೋಡಿ ಈ ಕುತೂಹಲ ಇರಬೇಕಾದದ್ದು ಇನ್ನೊಂದು ನೀರಾನೆಗೇ ಹೊರತು ನಿಮಗಲ್ಲ ಅಂದು ಹೊರಟುಹೋದ.

ಜಿಪುಣರ ದಾನ. ಅತ್ಯಂತ ದಾನಿಗಳು ಯಾರು ಎಂದರೆ ಜಿಪುಣರು ಅಂತ ಹೇಳಬಹುದು ಅಂದು ಪ್ರಭುಶಂಕರರು ಈ ಪ್ರಸಂಗವನ್ನು ವಿವರಿಸುತ್ತಾರೆ. ಒಮ್ಮೆ ಮದನ ಮೋಹನ ಮಾಳವೀಯರು ಒಬ್ಬ ಶೇಠ್‌ಜೀ ಮನೆಗೆ ದಾನ ಬೇಡಲು ಹೋದರು. ಮಾಳವೀಯರು ಮಾಡುತ್ತಿರುವ ಕೆಲಸ ಉದಾತ್ತವಾದದ್ದು ಅನಿಸಿ ಶೇಠ್ ತನ್ನ ಮಗನನ್ನು ಕರೆದು ಚೆಕ್ ಬುಕ್ಕ ತರಲು ಹೇಳಿದರು. ಆಗ ಮನೆಯಲ್ಲಿ ಮಂದ ಬೆಳಕಿತ್ತು. ಮಗ ಮೇಣದ ಬತ್ತಿ ಹೊತ್ತಿಸಿದ. ಶೇಠ್ ಮಗನ ಕಡೆ ನೋಡಿ ಇನ್ನೂ ಬೆಳಕಿರುವಾಗಲೇ ಮೇಣದ ಬತ್ತಿ ಹೊತ್ತಿಸಿ ದಂಡ ಮಾಡುತ್ತೀಯ. ಅದನ್ನು ಆರಿಸು ಎಂದರು. ಮಗ ಆರಿಸಿದ. ಚೆಕ್ ತೆಗೆದುಕೊಂಡು ಹೊರಡುವ ಮುನ್ನ ಮಾಳವೀಯರು ಶೇಠ್‌ಜೀ ನೀವು ನನಗೆ ಕೊಟ್ಟಿದ್ದು ಒಂದು ಲಕ್ಷ ರೂಪಾಯಿಗಳು. ಆದರೆ ಮೇಣದ ಬತ್ತಿ ಹೊತ್ತಿಸಿದ್ದಕ್ಕೆ ಮಗನನ್ನು ಬೈದಿರಲ್ಲ, ಎಷ್ಟು ಮಹಾ ಖರ್ಚು ಆಗಿದ್ದೀತು ಅಂತ ಕೇಳಿದಾಗ ಶೇಠು, ನಾನು ಹಾಗೆ ಉಳಿಸಿದ್ದಕ್ಕೇ ಇಂದು ನಿಮಗೆ ಒಂದು ಲಕ್ಷ ರೂಪಾಯಿ ಕೊಡೋಕೆ ಆಗಿದ್ದು ಎಂದನಂತೆ.



ಕಪ್ಪು ಜನಾಂಗಕ್ಕೆ ಸೇರಿದ ಒಬ್ಬ ಟ್ಯಾಕ್ಸಿ ಡ್ರೈವರ್ ಸದಾ ಮಂದಹಾಸದಿಂದಿರುತ್ತಿದ್ದ. ಏನಿದರ ಗುಟ್ಟು ಅಂತ ಕೇಳಿದರೆ ನಾನು ಆನಂದದ ಸ್ಥಿತಿಯನ್ನು ಮುಟ್ಟಿದ್ದೇನೆ. ನನ್ನ ಪಾಲಿಗೆ ಏನು ಉದ್ಯೋಗ ಬಂದಿದೆಯೋ ಅದರಿಂದ ನನಗೆ ತೃಪ್ತಿ ಇದೆ. ಅದು ನನಗೆ ಸುಖ ಸಂತೋಷ ಎಲ್ಲವನ್ನೂ ನೀಡಿದೆ. ನಾನು ಏನಾಗಿದ್ದೇನೆಯೋ ಅದು ನನಗೆ ಅತ್ಯಂತ ತೃಪ್ತಿ ತಂದಿದೆ ಹೀಗಾಗಿ ಮಂದಹಾಸ ನನ್ನ ಮುಖದಲ್ಲಿ ಶಾಶ್ವತವಾಗಿ ಮನೆ ಮಾಡಿದೆ.

ಮದರ್ ತೆರೇಸಾ ಮುಖದಲ್ಲಿ ಎಂಥಾ ನಗುವಿತ್ತು. ಮಗುವನ್ನು ಎತ್ತಿಕೊಳ್ಳುವಾಗ, ಅನಾಥರನ್ನು ಸಂರಕ್ಷಿಸುವಾಗ, ಬಡಬಗ್ಗರಲ್ಲಿ ಮಾತಾಡುವಾಗ ಆಕೆ ಸೂಸುತ್ತಿದ್ದ ನಗೆ ಎಂಥದು. ಅವರ ಆಶ್ರಮ ಇದ್ದುದು ಗ್ವಾಟೆಮಾಲದ ಅಂಗಡಿ ಬೀದಿಯಲ್ಲಿ. ಅಲ್ಲಿನ ಮೇಯರ್ ಒಂದು ಸಾರಿ ಈ ಅಂಗಡಿ ಬೀದಿ ತುಂಬಾ ಜನನಿಬಿಡ. ಅದಕ್ಕೆ ನಿಮಗೆ ವಿಶಾಲವಾದ ಜಾಗ ಕೊಡುತ್ತೇನೆ. ಅಲ್ಲಿ ನಿಮ್ಮ ಆಶ್ರಮ ಕಟ್ಟಿಕೊಳ್ಳಬಹುದು ಎಂದರೆ ತೆರೇಸಾ ಇದು ಅಂಗಡಿ ಬೀದಿ, ನಮ್ಮದೂ ಅಂಗಡಿಯೇ ನಾವು ಇಲ್ಲಿ ಪ್ರೀತಿ, ಪ್ರೇಮ, ಶಾಂತಿ, ನೆಮ್ಮದಿ, ಸುಖ ಮಾರುತ್ತೇವೆ ಎಂದರು.

ಸ್ಕಾಟ್‌ಲ್ಯಾಂಡಿನ ಜನ ತುಂಬಾ ಜಿಪುಣರಂತೆ. ಒಂದು ಸಾರಿ ಒಬ್ಬ ಜಿಪುಣನಿಗೆ ವಿಮಾನದಲ್ಲಿ ಹಾರಾಡಬೇಕು ಅಂತ ಆಸೆಯಾಯಿತಂತೆ. ಆದರೆ ದುಡ್ಡು ಖರ್ಚಾಗುತ್ತಲ್ಲ ಅಂತ ಯೋಚನೆ. ಒಬ್ಬ ಸ್ಕಾಚ್‌ಮೆನ್ ತನ್ನ ಕಲಿಕೆಯ ವಿಮಾನದಲ್ಲಿ ದಿನಾ ಹಾರಾಟ ನಡೆಸುತ್ತಿದ್ದ. ಅವನ ಬಳಿ ಜಿಪುಣ ತನ್ನ ಆಸೆಯನ್ನು ತೋಡಿಕೊಂಡ. ಅವನು ನೋಡಪ್ಪಾ ನನ್ನದು ಕಲಿಕೆಯ ವಿಮಾನ ಹುಷಾರಾಗಿರಬೇಕು. ನಾಳೆ ಬೆಳಗ್ಗೆ ಬಾ ಅಂದ. ಜಿಪುಣನಿಗೆ ಖುಷಿಯಾಯಿತು. ಮೆತ್ತಗೆ ನನ್ನ ಹೆಂಡತಿಯನ್ನೂ ಕರೆತರಲೇ ಅಂದ. ಸ್ಕಾಚ್ ಮೆನ್ ಕರ್‍ಕೊಂಡು ಬಾ ಅಂದ. ಮರುದಿನ ಜಿಪುಣ ದಂಪತಿಗಳು ವಿಮಾನ ಹಾರಾಟಕ್ಕೆ ಸಿದ್ಧವಾದರು. ಹಾರಾಟಕ್ಕೆ ಮುನ್ನ ಸ್ಕಾಚ್‌ಮೆನ್ ನೋಡಪ್ಪಾ ನನ್ನದು ಕಲಿಕೆಯ ವಿಮಾನ. ಅದು ಹಾರುವಾಗ ತುಂಬಾ ಜೋಲಾಡುತ್ತದೆ, ವಾಲಾಡುತ್ತದೆ, ಮೇಲೆ ಹೋಗಿ ಸರಕ್ಕನೆ ಕೆಳಗಿಳಿಯುತ್ತದೆ. ಜೋಲಿ ಹೊಡೆಯುತ್ತದೆ. ಆಗ ನೀನಾಗಲೀ ನಿನ್ನ ಹೆಂಡತಿಯಾಗಲೀ ಕಿರುಚಿ ಗಲಾಟೆ ಮಾಡಬಾರದು. ಹಾಗೆ ಮಾಡಿದರೆ 25 ಪೌಂಡ್ ದಂಡ ಕೊಡಬೇಕಾಗುತ್ತದೆ ಅಂದ. ಜಿಪುಣ ಒಪ್ಪಿದ. ಸುಖವಾದ ವಿಮಾನ ಹಾರಾಟ ನಡೆಯಿತು. ಸ್ಕಾಚ್‌ಮೆನ್ ಪರವಾಗಿಲ್ಲಯ್ಯ ಬಹಳ ಧೈರ್ಯವಾಗಿ ಕೂತಿದ್ದೆ ಎಂದ. ಅದಕ್ಕೆ ಜಿಪುಣ ಧೈರ್ಯ ಅಲ್ಲ ಸ್ವಾಮಿ ಭಯ. ಸ್ವಲ್ಪ ಚೀರಿದರೂ 25 ಪೌಂಡ್ ದಂಡ ಕೊಡಬೇಕಾಗುತ್ತದೆ ಎಂದಿದ್ದರಲ್ಲ ಅದಕ್ಕೆ ನನ್ನ ಹೆಂಡತಿ ವಿಮಾನದಿಂದ ಬಿದ್ದಾಗಲೂ ನಾನು ಬಾಯಿ ಮುಚ್ಚಿಕೊಂಡಿದ್ದೆ ಎಂದ. ಜಿಪುಣ ತನ ಹೀಗೆ ಇರಬಹುದೇ

ಒಬ್ಬ ಫೋಟೋಗ್ರಾಫರ್ ತನ್ನ ಸ್ಟುಡಿಯೋದಲ್ಲಿ ನಾಲ್ಕು ಜನರ ಒಂದು ಗುಂಪಿನ ಫೋಟೋ ಹಾಕಿಕೊಂಡಿದ್ದ. ಇವರು ಯಾರು ಎಂತ ಕೇಳಿದರೆ ನನಗೆ ಕೆಲಸ ಕೊಡದೇ ಉಪಕಾರ ಮಾಡಿದವರು. ಅವರು ಕೆಲಸ ಕೊಟ್ಟಿದ್ದರೆ ನಾನು ಎಲ್ಲೋ ಒಂದು ಸರ್ಕಾರಿ ಕಛೇರಿಯಲ್ಲಿ ಗುಮಾಸ್ತನಾಗಿ ಇರಬೇಕಾಗಿತ್ತು. ಅವರು ಕೆಲಸ ಕೊಡದೇ ನನಗೆ ಉಪಕಾರ ಮಾಡಿದ್ದಾರೆ ಎಂದ. ಸಂದರ್ಶನಕ್ಕೆ ಹೋದಾಗ ನೀವು ಬ್ರಾಹ್ಮಣರೇ ಅಂತ ಕೇಳಿ ನಂತರ ಈ ಕೆಲಸ ನಿಮಗೆ ಸಿಗೋದಿಲ್ಲ ಅಂದರು. ಸಿಂಗಣ್ಣ ಹೊರಗೆ ಬಂದು ನಿಮ್ಮ ಫೋಟೋ ತೆಗೆಯಬಹುದೇ ಅಂತ ಅನುಮತಿ ಪಡೆದು ಫೋಟೋ ತೆಗೆದು ಬಂದ.

ಇಂಥಾ ಪ್ರಖಾಂಡ ಹಾಸ್ಯ ಸಾಹಿತಿ ಪ್ರಭುಶಂಕರರು ನಮ್ಮನ್ನಗಲಿದ್ದು 8.4.2018 ರಂದು



# ಪ್ರಭುಶಂಕರರ ನುಡಿಗಳು

ಪ್ರಪಂಚದಲ್ಲಿ ದು:ಖ ಇದೆ. ನೀನಿಲ್ಲದೆಯೂ ಇದೆ. ನೀನಿದ್ದಿದ್ದರಿಂದಲೂ ಇದೆ. ಆದರೆ ಈ ದು:ಖವನ್ನು ಹೆಚ್ಚಿಸುವ ಹಕ್ಕು ನಿನಗಿಲ್ಲ. ಅದನ್ನು ಕಡಿಮೆ ಮಾಡುವ ಯೋಗ್ಯತೆ ನಿನಗೆ ಇದೆಯೋ ಇಲ್ಲವೋ ಅನುಮಾನ. ಆದರೆ ಅದನ್ನು ಹೆಚ್ಚಿಸದೇ ಇರುವ ಶಕ್ತಿ ನಿನಗಿದೆ. ಅದಕ್ಕೇ ನಿನ್ನ ಮುಖಕ್ಕೆ ಮಂದಹಾಸವನ್ನು ಅಂಟಿಸಿಕೋ

ಒಬ್ಬಳು ವಿಧವೆ ಕ್ಷೌರದ ನಾಗನಿಗೆ ಬರಹೇಳಿದಳಂತೆ. ಒಬ್ಬರಾದ ಮೇಲೊಬ್ಬರಂತೆ ಆರು ಜನ ಹೋಗಿ ಕರೆದರೂ ನಾಗ ಬರಲಿಲ್ಲವಂತೆ. ಆಗ ವಿಧವೆ ಬೇಜಾರು ಮಾಡಿಕೊಂಡು ಯಾರು ಕರೆದರೂ ನಾಗ ಬರುತ್ತಿಲ್ಲ. ನಮ್ಮ ಯಜಮಾನರು ಇದ್ದಿದ್ದರೆ ಎರಡೇ ನಿಮಿಷದಲ್ಲಿ ಕರೆದುಕೊಂಡು ಬರುತ್ತಿದ್ದರು ಎಂದು ಕೊಂಡರಂತೆ.

ಒಬ್ಬರ ಮನೆಯಲ್ಲಿ ಅಸಂಖ್ಯ ಪಾದರಕ್ಷೆಗಳನ್ನು ಕಂಡು ಪ್ರಭುಶಂಕರರು ಹೇಳಿದ್ದು. ಅಲ್ಲಯ್ಯಾ ನಿಮ್ಮ ಮನೆ ಪಕ್ಕದಲ್ಲಿ ರಾಘವೇಂದ್ರ ಸ್ವಾಮಿ ದೇವಸ್ಥಾನ ಪ್ರಾರಂಭವಾಗಿ ಇನ್ನೂ ಎರಡು ತಿಂಗಳಾಗಿಲ್ಲ. ಆಗಲೇ ಇಷ್ಟೊಂದು ಜೊತೆ ಚಪ್ಪಲಿಗಳನ್ನು ಹೇಗೆ ಸಂಗ್ರಹ ಮಾಡಿದೆ.

ದೇವರು ಮೂಗನ್ನು ಮಾಡಿದ ಮನುಷ್ಯ ನಷ್ಯವನ್ನು ಮಾಡಿದ. ನಶ್ಯವನ್ನು ಮನುಷ್ಯ ಸೃಷ್ಟಿಸುವವರೆಗೂ ಮೂಗಿರುವುದು ಉಸಿರಾಡುವುದಕ್ಕೆ ಮಾತ್ರ ಎಂದು ಮನುಷ್ಯ ಭ್ರಮಿಸಿದ್ದ.

ಮನುಷ್ಯನ ಅತ್ಯಂತ ಪ್ರಾಚೀನ ವಿದ್ಯೆ ನಿಂದೆ. ಬೇರೆ ಯಾವುದೇ ಉದ್ಯೋಗವಾದರೂ ಕಾಲಾಂತರದಲ್ಲಿ ಬೇಸರ ತರಬಹುದು. ಆದರೆ ನಿಂದೋದ್ಯೋಗದಲ್ಲಿ ಎಂದೂ ಬೇಸರವಿಲ್ಲ. ಅದು ಮನುಷ್ಯನಿಗೆ ಅತ್ಯಂತ ಉತ್ಸಾಹದಾಯಕವಾದ ಟಾನಿಕ್.

ನಿಮ್ಮ ಮುಖವನ್ನು ಆಕರ್ಷಕವಾಗಿ ಕಾಣಲು ಇರುವ ಅತ್ಯಂತ ಸುಲಭವಾದ ದಾರಿ ಎಂದರೆ ಮುಖದಲ್ಲಿ ನಗು ಧರಿಸುವುದು ■






# ಹನಿ ಮನಿ ಮತ್ತು ಮಿನಿ

● ಎಚ್. ಡುಂಡಿರಾಜ್

**ಉಕ್ಕಿನ ಮನುಷ್ಯ**

---

ಪ್ರಿಯೆ! ನನ್ನನ್ನೂ ಸಹ
ಉಕ್ಕಿನ ಮನುಷ್ಯ
ಅನ್ನಬಹುದು
ನಿನ್ನನು ಕಂಡಾಗಲೆಲ್ಲಾ
ನನ್ನ ಹೃದಯದಲ್ಲಿ
ಪ್ರೀತಿ ಉಕ್ಕುವುದು

**ಸಾಕು**

---

ಧನ ಆದರೂ ಅಷ್ಟೆ
ಜನ ಆದರೂ ಅಷ್ಟೆ
ಒಂದೇ ಲಾಜಿಕ್ಕು
ಲಾಭ ಇರುವವರೆಗೂ
ಸಾಕು
ಆಮೇಲೆ ಬಿಸಾಕು

**ಮೂಕ ಸಾಕ್ಷಿ**

---

ಸರ್ಕಾರೀ ಕಛೇರಿಗಳಲ್ಲಿ
ಕಡ್ಡಾಯವಾಗಿ
ಬಸವಣ್ಣನ ಚಿತ್ರ ಅಳವಡಿಕೆ
ಗಾಂಧಿ ಅಂಬೇಡ್ಕರ್ ಜೊತೆಗೆ
ಅವರೂ ಸಾಕ್ಷಿಯಾಗಬೇಕಿದೆ
ಭ್ರಷ್ಟಾಚಾರಕೆ

**ಸುತ್ತು**

---

ಕೆಲವರದ್ದು ಎರಡೇ ಸುತ್ತು
ಇನ್ನು ಕೆವರು ಮೂರು ಸುತ್ತು
ನಾಲ್ಕು ಸುತ್ತು ಐದು ಸುತ್ತು
ಪಾರ್ಕಿನಲ್ಲಿ ರೌಂಡು
ಬಾರಿನಲ್ಲಿ ಗುಂಡು
ಅವರವರ ತಾಕತ್ತು



**ಆಧಾರ**

------------

ಎಲ್ಲದಕ್ಕೂ ಆಧಾರ
ಕಡ್ಡಾಯ ಮಾಡಿದ್ದೀರಾ
ಒಂದು ಅಪವಾದ ಇಲ್ಲಿದೆ
ಸಮಸ್ಯೆಗಳಿಗೆಲ್ಲಾ ಪತಿಯೇ
ಕಾರಣ ಎನ್ನುವಳು ಸತಿ
ಯಾವುದೇ ಆಧಾರ ಇಲ್ಲದೇ

**ಡಿಜಿಟಲ್ ಯುಗ**

--------------

ಡಿಜಿಟಲ್ ಯುಗದಲ್ಲಿ
ವ್ಯವಹಾರ ಕ್ಯಾಷ್‌ಲೆಸ್
ಜೀವನ ರೆಸ್ಟ್‌ಲೆಸ್
ಪ್ರೀತಿ ಪ್ರೇಮಕೂ ಟೈಮಿಲ್ಲ
ಮೊಬೈಲಿಗೇ
ಕಿಸ್

**ಅಂಜಿಕೆ**

------------

ಭಾಷಣ ಅಂದರೆ
ನನ್ನಾಕೆಗೆ ಭಯ
ಏರುವುದಿಲ್ಲ ಆಕೆ ವೇದಿಕೆ
ನಮಗೆ ಸ್ವಲ್ಪವೂ
ಸಭಾ ಕಂಪವಿಲ್ಲ
ಮನೆಯಲ್ಲಿ ಮಾತಾಡಲು
ಹೆದರಿಕೆ

**ಪ್ರತಿಕ್ರಿಯೆ**

------------

ಮಧುಮಾಸ ಬಂದಿದೆ
ಮಾಮರ ಚಿಗುರಿದೆ
ಕೋಗಿಲೆ ಹಾಡಿದೆ
ಪ್ರೀತಿಸೋಣ ಬಾ ನಲ್ಲೆ
ಎಂದರೆ ನನ್ನ ಶಕುಂತಲೆ
ಅಯ್ಯೋ ಬೇಡಾರಿ
ತುಂಬಾ ಶೆಖೆ ಅಂತಾಳೆ

■



# ಕೆಂಪಣ್ಣನ ಕಿಡ್ನಿ ಸ್ಟೋನ್

• ಡಾ. ಸಿ.ಕೆ. ರೇಣುಕಾರ್ಯ

ಕೆಂಪಣ್ಣ, ನಮ್ಮ ಮನೆಗೆ ಪ್ರತಿ ತಿಂಗಳು ಹಸುನ ಬೆಣ್ಣೆ ತಂದು ಕೊಡುವವನು. ಅವನು ಗ್ರಾಮ ಮತ್ತು ಪಟ್ಟಣ ಎರಡರ ಕನ್ನಡವನ್ನೂ ಮಾತನಾಡುತ್ತಾನೆ. ನಂಜನಗೂಡಿನ ಹತ್ತಿರದ ಒಂದು ಹಳ್ಳಿ ಅವನ ಊರು. ಪ್ರತಿ ತಿಂಗಳೂ ತಪ್ಪದೆ ಮೊದಲ ವಾರ, ವರ್ತನೆ ಮನೆಯವರಿಗೆ ಶುದ್ಧವಾದ ಹಸುನ ಬೆಣ್ಣೆ ತಂದುಕೊಡುವುದು ಅವನ ಕಾರ್ಯ. ನಿಯತ್ತಿನಲ್ಲಿ, ನಿಯತ್ತಿನ ಮನುಷ್ಯ. ತೂಕ ಅಳತೆಯಲ್ಲಿ ಕರಾರುವಾಕ್ಕು. ಬೆಲೆ ತುಂಬಾ ರೀಜನಬಲ್. ಆದರೆ ಈ ಸೇವೆ ವರ್ತನೆಯವರಿಗೆ ಮಾತ್ರ ಮೀಸಲು. ತುಂಬಾ ವರ್ಷಗಳಿಂದ ಅವನಿಂದ ಬೆಣ್ಣೆ ತೆಗೆದುಕೊಳ್ಳುವವರು ಮಾತ್ರ ಅವನ ಗಿರಾಕಿಗಳು. ಹೊಸ ಗಿರಾಕಿಗಳ ಬಗ್ಗೆ ಅವನಿಗೆ ಆಸಕ್ತಿ ಇಲ್ಲ. ಎರಡು ಸ್ಟೀಲ್ ಪಾತ್ರೆಗಳಲ್ಲಿ ತೇಲುತ್ತಿರುವ ಬೆಣ್ಣೆ ಸರಬರಾಜು ಮಾಡುವ ಕೆಂಪಣ್ಣ ಎಲ್ಲ ಗಿರಾಕಿಗಳ ಪ್ರೀತಿ ಪಾತ್ರ ಸಹ. ಒಂದು ಪಾತ್ರೆಯಲ್ಲಿ ಹಸುನ ಹಾಲಿನ ಬೆಣ್ಣೆ, ಇನ್ನೊಂದರಲ್ಲಿ ಎಮ್ಮೆ ಹಾಲಿನ ಬೆಣ್ಣೆ. ಎಮ್ಮೆ ಹಾಲಿನ ಬೆಣ್ಣೆಗೆ ಕಿ.ಲೊ.ಗೆ 3 ರೂ. ಹೆಚ್ಚು. ಸುಮಾರು 15-20 ಗಿರಾಕಿಗಳು ಅವನಿಗೆ ಖಾಯಂ ಆದವರು.

ಸುಮಾರು 2 ತಿಂಗಳು ಕೆಂಪಣ್ಣ ಪತ್ತೆಯೇ ಇಲ್ಲ. ಫೋನೂ ಇಲ್ಲ. ನಮಗೆ ಪತಂಜಲಿ ಹಸುನ ತುಪ್ಪವೇ ಗತಿ. 2 ತಿಂಗಳ ನಂತರ ಕೆಂಪಣ್ಣ ಮತ್ತೆ ಪ್ರತ್ಯಕ್ಷನಾದ. ಅವನು ಏನಾದನೋ ಎಂದು ಚಿಂತಿಸುತ್ತಿದ್ದ ನಮಗೆ ಸ್ವಲ್ಪ ಸಮಾಧಾನ. ನನ್ನ ಮತ್ತು ಕೆಂಪಣ್ಣನ ನಡುವಿನ ಕೆಳಗಿನ ಸಂಭಾಷಣೆಯೇ ಮೇಲಿನ ಶೀರ್ಷಿಕೆಯ ರಸ ಕವಳ.

ನಾನು : ಏನು ಕೆಂಪಣ್ಣ 2 ತಿಂಗಳಿನಿಂದ ಪತ್ತೆಯೇ ಇಲ್ಲ. ನೀನು ಏನಾದಿಯೋ ಎಂದು ನಮಗೆಲ್ಲ ಚಿಂತೆಯಾಗಿತ್ತು. ಒಂದು ಫೋನ್ ಸಹ ಇಲ್ಲ?

ಕೆಂಪಣ್ಣ : ಅಯ್ಯೋ ನನ್ನ ಕಥೆ ಏನು ಹೇಳಲಿ ಸ್ವಾಮಿ. ಅದೊಂದು ದೊಡ್ಡ ಕಥೆ. ಸದ್ಯ ದೇವರೇ ನನ್ನನ್ನು ಕಾಪಾಡಿದ.

ನಾನು : ಯಾಕೆ ಏನಾಯಿತು?

ಕೆಂಪಣ್ಣ : ಆಚೆ ತಿಂಗಳು ನಿಮ್ಮ ಮನೆಗೆ ಬೆಣ್ಣೆ ಹಾಕಿ ಹೋದೆನಾ. ಎರಡನೇ ದಿನವೇ ನನಗೆ ತುಂಬಾ ಹೊಟ್ಟೆ ನೋವು ಶುರುವಾಯಿತು. ನಾನು ಅಲ್ಲಿ ಡಾಕ್ಟರ್‌ಗೆ ತೋರಿಸಿದೆ. ಅವರು ಇದು ಅಜೀರ್ಣ ಅಂದರು. ರೂ.50/- ತೆಗೆದುಕೊಂಡು ಒಂದು ಇಂಜೆಕ್ಷನ್ 4 ಮಾತ್ರ ಕೊಟ್ಟರು.

ನಾನು : ಆಮೇಲೆ?

ಕೆಂಪಣ್ಣ : 3 ದಿನ ಹೊಟ್ಟೆ ನೋವು ಬರಲಿಲ್ಲ, ಮಾಮೂಲು ಹಾಲು ಕರೆಯುವುದು, ಮನೆ ಕೆಲಸ ಮಾಡ್ತಾ ಇದ್ದೆ. ತಕ್ಕಳ್ಳಿ ಎರಡು ದಿನ ಆದ ಮೇಲೆ ಮತ್ತೆ ಹೊಟ್ಟೆ ನೋವು. ಅದೇ ಡಾಕ್ಟರ್‌ಗೆ ತೋರಿಸಿದೆ. ಅವರು ಇದನ್ನು ಇಲ್ಲಿ ವಾಸಿ ಮಾಡಕ್ಕಾಗಕಿಲ್ಲ ಮೈಸೂರು ದೊಡ್ಡಾಸ್ಪತ್ರೆಗೆ ತೋರಿಸು ಅಂದರು. ನಾನು ಮಗಳನ್ನು ಕರ್ಕಕೊಂಡು (ಅವನಿಗೆ 16-18 ವರ್ಷದ ಒಬ್ಬಳೇ ಮಗಳು) ಮೈಸೂರಿನ ದೊಡ್ಡಾಸ್ಪತ್ರೆಗೆ ಬಂದೆ. ಏನ್‌ಸ್ವಾಮಿ ಜನ, ಆ ಆಸ್ಪತ್ರೆದಾಗ. ನಾನು ಯಾವಾಗಲೂ ಆ ಆಸ್ಪತ್ರೆಗೆ ಹೋಗಿರಲಿಲ್ಲ. ಸಾಲ್ನಲ್ಲಿ ನಾನು ನಿತ್ಕಂಡು ಒಂದು ಗಂಟೆ ಆದ್ಮೇಲೆ ಡಾಕ್ಟರ್‌ಗೆ ತೋರಸ್ದೆ. ಅವರು ನಿನ್ನ ಹೊಟ್ಟೆನೋಗೆ ಕಾರಣ ಕಂಡ್‌ಡಿಬೇಕಾದ್ರೆ ಸ್ಕ್ಯಾನ್ ಮಾಡಬೇಕೂಂದ್ರು. ಮಾಡಿ ಸ್ವಾಮಿ ಅಂದೆ. ಇಲ್ಲಿ ಆಸ್ಪತ್ರೆಲೀ ಸ್ಕ್ಯಾನಿಂಗ್ ಮೆಷೀನ್ ಕೆಟ್ಟೋಗದೆ. ಆಚೆ ಕಡೆ ಸ್ಕ್ಯಾನ್ ಮಾಡಸ್ಕಂಡ್ ಬಾ ಅಂದ್ರು. ಎಲ್ಲಿ ಅಂದೆ? ಇಲ್ಲೇ ಎದುರುಗಡೆ ಲ್ಯಾಬ್ ಇದೆ. ಅಲ್ಲಿ ಮಾಡಸ್ಕಂಡ್ ಇಲ್ಲಿ ಬರ್ಬೇಡ. ಇಲ್ಲೇ 5 ನೇ ಕ್ರಾಸ್‌ಲಿ ನನ್ನ ಕ್ಲಿನಿಕ್



ಇದೆ. ಸಾಯಂಕಾಲ ಅಲ್ಲಿಗೆ ಬಾ ಅಂದ್ರು.

ನಾನೂ, ಮಗಳೂ ಲ್ಯಾಬ್‌ಗೆ ಹೋಗಿ ರೂ.750/- ಕೊಟ್ಟು ಸ್ಕ್ಯಾನ್ ಮಾಡ್ಸಿ, ಸಾಯಂಕಾಲ ಡಾಕ್ಟರ್ ಕ್ಲಿನಿಕ್‌ಗೆ ಹೋದ್ವು.

(ಡಾಕ್ಟರ್ ಮತ್ತು ಕೆಂಪಣ್ಣನ ನಡುವೆ ನಡೆದ ಸಂಭಾಷಣೆ)

ಡಾಕ್ಟರು : (ಸ್ಕ್ಯಾನಿಂಗ್ ರಿಪೋರ್ಟ್ ನೋಡಿ) ನಿನಗೆ ಕಿಡ್ನಿಯಲ್ಲಿ 20 ಎಂ.ಎಂ. ಕಲ್ಲಿದೆ. ಅದರಿಂದಾನೆ ಹೊಟ್ಟೆನೋವು.

ಕೆಂಪಣ್ಣ : ಸರಿ, ಅದಕ್ಕೆ ಔಷಧಿ ಕೊಡಿ.

ಡಾಕ್ಟರು : ಅದು ಔಷಧೀಲಿ ಹೋಗಲ್ಲ, ಆಪರೇಷನ್ ಮಾಡಬೇಕು.

ಕೆಂಪಣ್ಣ : ಆಪರೇಷನ್ನಾ ? ಎಷ್ಟಾಯ್ತದೆ ಡಾಕ್ಟರೆ?

ಡಾಕ್ಟರು : ಸುಮಾರು ರೂ.25,000/- ಆಸ್ಪತ್ರೆ ಖರ್ಚು ಬೇರೆ. ಒಟ್ಟು ರೂ.35,000/- ಆಗಬಹುದು. ಈ ಆಪರೇಷನ್ ದೊಡ್ಡಾಸ್ಪತ್ರೆಲಿ ಆಗಲ್ಲ, ಪ್ರೈವೇಟ್ ನರ್ಸಿಂಗ್ ಹೋಂಲೀ ಮಾಡ್ಬೇಕು. ಅಲ್ಲೇ ಆಪರೇಷನ್‌ಗೆ ಎಲ್ಲಾ ಅನುಕೂಲ ಇರೋದು.

ಕೆಂಪಣ್ಣ : ಅಷ್ಟು ದುಡ್ಡು ನನ್ ಹತ್ರ ಸದ್ಯಕ್ಕಿಲ್ಲ ಡಾಕ್ಟರೆ. ದುಡ್ಡು ಹೊಂದಸ್ಕಂಡು 1ತಿಂಗಳಲ್ಬರ್ತೀನಿ

ಡಾಕ್ಟರು : ಸರಿ ಹಾಗೇ ಮಾಡು. ನನ್ನ ಹತ್ರಾನೆ ಬಾ. ಸರಿಯಾಗಿ ಆಪರೇಷನ್ ಮಾಡಿ ವಾಸಿ ಮಾಡ್ತೀನಿ. ಬೇಗ ಆಪರೇಷನ್ ಮಾಡಸ್‌ಕೊಳ್ದೇ ಇದ್ರೆ, ತುಂಬಾ ಕಷ್ಟ ಆಗುತ್ತೆ.

ಕೆಂಪಣ್ಣ : ಸರಿ ಡಾಕ್ಟರೆ

ಕೆಂಪಣ್ಣ (ನನಗೆ) : ದುಡ್ಡಿಗೆ ಏನ್ಮಾಡದೂ ಅಂತ ಒಂದು ಚಿಂತೆ ಆದ್ರೆ, ವರ್ತನೆ ಗಿರಾಕಿಗಳು ಬೇರೆಯವರಿಂದ ಬೆಣ್ಣೆ ತಗಳಕ್ಕೆ ಶುರು ಮಾಡ್ಬುಟ್ರೆ ಏನ್ಮಾಡಾದು ಅಂತ ಇನ್ನೊಂದು ಚಿಂತೆ ಆಯ್ತು ಸಾರ್ ನನಗೆ.

ನೋಡೋಣಾ ಅಂತ ನಾನು ನನ್ನಮಗಳು ರೈಲ್ವೆ ಸ್ಟೇಷನ್ ಕಡೆ ನಡ್ಕಂಡು ಬರ್ತಾ ಇದ್ವಿ. ನನ್ನ ಮಗಳು ಒಂದು ಬೋರ್ಡ್ ತೋರಿಸಿದಳು. ಅದರಲ್ಲಿ ೀಗೆ ಬರೆದಿತ್ತು.

ಇಲ್ಲಿ ಕಿಡ್ನಿ ಸ್ಟೋನನ್ನು ಯಾವ ಆಪರೇಷನ್ನೂ ಇಲ್ಲದೆ ಗುಣ ಪಡಿಸಲಾಗುತ್ತದೆ. ಸರಿ, ನಾನು ನನ್ನ ಮಗಳು ಆ ಕ್ಲಿನಿಕ್ ಒಳಗಡೆ ಹೋದ್ವಿ. ಅಲ್ಲಿ ಮತ್ತೆ ಕಾಯುವ ಸರದಿ. ಒಂದು ಗಂಟೆ ನಂತರ ಡಾಕ್ಟರ್ ಹತ್ರ ಹೋದ್ವಿ.

ಡಾಕ್ಟರ್ : ಸ್ಕ್ಯಾನ್ ಮಾಡಿಸಿದ್ದೀರಾ?

ಕೆಂಪಣ್ಣ : ಹೌದು ತಗಳಿ ರಿಪೋರ್ಟ್ ಅದೆ.

ಡಾಕ್ಟರ್ : ಹೋ! 20 ಎಂ.ಎಂ. ಕಲ್ಲಿದೆ. ಚಿಂತಿಲ್ಲ, ನಮ್ಮಲ್ಲಿ ಲೇಸರ್ ಮೆಷೀನ್ ಇದೆ. ಆಪರೇಷನ್ ಬೇಕಾಗಿಲ್ಲ, ಹಾಗೇ ಮಲಗಿಸಿ, ಲೇಸರ್ ಮೆಷೀನ್‌ನಿಂದ ಕಲ್ಲನ್ನು ಚೂರು ಚೂರು ಮಾಡಿ ಬಿಡುತ್ತೇವೆ. ಅದು ಮೂತ್ರದಲ್ಲಿ ಹೊರಟು ಹೋಗುತ್ತದೆ. ಹೊಟ್ಟೆ ನೋವೂ ಹೊರಟು ಹೋಗುತ್ತದೆ.



ಕೆಂಪಣ್ಣ : ಎಷ್ಟಾಗುತ್ತೆ ಡಾಕ್ಟರೆ?

ಡಾಕ್ಟರ್ : ರೂ. 20,000/-

ಕೆಂಪಣ್ಣ : ಸರಿ ಡಾಕ್ಟರೆ. 15 ದಿನದಲ್ಲಿ ಬರ್ತೀನಿ.

ಸರಿ, ಊರಿಗೆ ವಾಪಸ್ಸೋದ್ವ ಸಾರ್. ಹಣ ಹೇಗೆ ಹೊಂದಿಸುವುದು ಎನ್ನುವ ಚಿಂತೆಯಲ್ಲೇ ಇದ್ದೆ ಸಾರ್. ಹೊಟ್ಟೆ ನೋವು ಮಾತ್ರ ಬಿಡಲೇ ಇಲ್ಲ. ಇನ್ನೇನು ಇಂದು ಬಿಡ್ತು ಅಂದ್ರೆ, ಇನ್ನೊಂದಿನ ಬರದು ಸಾರ್. ಬೆಣ್ಣೆ ಕೊಡಕ್ಕೂ ಮೈಸೂರಿಗೆ ಬರಕ್ಕಾಗ್ತಾ ಇರಲಿಲ್ಲ ಸಾರ್, ಹಾಳು ಹೊಟ್ಟೆ ನೋವು. ಮನೆಯವರು ಬೆಣ್ಣೆ ಮಾಡದೆ ಹಾಲ್ನ ಡೈರಿಗೆ ಹಾಕ್ಬುಡ್ತಾ ಇದ್ರು ಸಾರ್.

ನಾನು : ಸರಿ, ಆಮೇಲೇನಾಯ್ತು ಕೆಂಪಣ್ಣ

ಕೆಂಪಣ್ಣ : ನಮ್ಮ ಪಕ್ಕದ ಮನೇಲಿ ಕುಮಾರ ಅಂತ ಒಬ್ಬ ಹುಡುಗ ಸಾರ್. ಅವನು ಡ್ರೈವರ್ ಕೆಲಸ ಮಾಡ್ತಾನೆ. ಬಾಡಿಗೆಗೆ ಕಾರ್ ಹೊಡೀತಾನೆ. ಅವನ್ ಹೇಳಿದೆ.

ಕುಮಾರ : ಕೆಂಪಣ್ಣ, ನೆನ್ನೆ ಬೆಳಗ್ಗೆ ಒಂದು ತಮಾಷೆ ಆಯ್ತು. ಅಮೆರಿಕಾದಿಂದ ಬಂದಿದ್ದ ಒಬ್ಬರು ನನ್ನ ಗಿರಾಕಿ ಆಗಿದ್ದರು. ಅವರು ಮೈಸೂರ್‌ನವ್ರೆ, ಆದ್ರೆ ಅಮೆರಿಕಾದಲ್ಲವ್ರೆ. ಅವರಿಗೆ 4 ದಿನದಿಂದ ಜ್ವರ ಇತ್ತಂತೆ. ಏನು ಮಾಡಿದರೂ ಹೋಗಲಿಲ್ವಂತೆ. ಆದ್ರೆ, 'ಮಹೇಂದ್ರ ಪ್ರಸಾದ್' ಹೋಟಲ್‌ತ್ರ ಒಬ್ರು ಡಾಕ್ಟರವರಂತೆ, ಅವರತ್ತರ ಅವರು ಹೋಗಿದ್ದರಂತೆ. ಅವರು ಸುಮ್ನೆ ಇವರ ಕೈ ಮುಟ್ನೋಡಿ ಔಷಧಿ ಕೊಟ್ರಂತೆ. ಜ್ವರ ಒಂದೇ ದಿನದಲ್ಲಿ ಹೊರಟು ಹೋಯಿತಂತೆ. ನಾನು ಅವರನ್ನು ಡಾಕ್ಟರ್ ಹತ್ತಿರ ಕರ್ಕೊಂಡು ಹೋಗಿದ್ದೆ. ನೂರಾರು ಜನ ಪೇಷಂಟ್ಸು. ಬರೀ ನೂರು ರೂಪಾಯಿ ಚಾರ್ಜು. ನೀನು ಅವರಿಗೆ ತೋರ್ಸು. ಯಾವ್ದಕ್ಕೂ ಒಳ್ಳೆದಾಗ್ಬೋದು.

ಕೆಂಪಣ್ಣ : ಸರಿ ಕುಮಾರ, ತೋರ್ಸಕೇನಂತೆ ಇವತ್ತೇ ತೋರ್‌ಸ್ತೀನಿ ಸದ್ಯ ಹೊಟ್ಟೆ ನೋವು ಹೋದರೆ ಸಾಕು.

ನಾನು ಮಗಳ್ನ ಕರ್ಕೊಂಡು ಮೈಸೂರ್ಗೋದೆ. ಚಾಮರಾಜಪುರಂ ಸ್ಟೇಷನ್ ಹತ್ತಿರ ಮಹೇಂದ್ರ ಪ್ರಸಾದ್ ಹೋಟ್ಲು, ನಾವು ಅಲ್ಲಿಗೆ ಹೋಗಿ, ಅಲ್ಲಿ ಡಾಕ್ಟರ್ ವಿಷಯ ಕೇಳದ್ರ. ಅಲ್ಲಿ ಎಲ್ಲರಿಗೂ ಆ ಡಾಕ್ಟರ್ ವಿಷಯ ಗೊತ್ತು. ಅವರ್ ಹೆಸರು ಶ್ರೀನಿವಾಸ ಜೋಯ್ಸಪ್ಪ. ಎಲ್ಲರೂ ಜೋಯ್ಸಪ್ಪ ಡಾಕ್ಟರ್ ಅಂತಾರೆ. ನಾನೂ, ಮಗಳೂ, ಕ್ಲಿನಿಕ್ ಹತ್ರ ಹೋದ್ವು. ಜನವೋ ಜನ. ನನ್ನ ಸರದಿ ಬರಾಕ್ಕೆ 3 ಗಂಟೆ ಕಾಯ್ಬೇಕಾಯ್ತು. ಶ್ಯಾನೆ ಚಿಕ್ಕ ಕ್ಲಿನಿಕ್ಕು ಸ್ವಾಮಿ. ನಮ್ಮ ಕೊಟ್ಟಿಗೆ ಕಾಲುಭಾಗನೂ ಇಲ್ಲ. ಸರಿ ನಾನು ಒಳಗೆ ಹೋದೆ.

ಒಳಗೆ ಸ್ವಾಮಿ, ಜೋಯ್ಸಪ್ಪ ಡಾಕ್ಟ್ರು, ಅವರ ಎದುರಿಗೆ ಒಬ್ಬಳು ಹುಡುಗಿ. ಹುಡುಗಿ ಏನ್ಸಾರ್, ತುಂಬಾ ಚೆಂದಾಕಿದ್ಲು ಸ್ವಾಮಿ, ಎರಡೆರಡು ಸಾರಿ ನೋಡ್ಬೇಕು ಅನ್ಸಾಂತ ಹುಡುಗಿ, ಅವಳ ನೋಡ್ದೋರ್ಗೆ ಕಾಯ್ಲೆ ಅರ್ಧ ಕಯ್ಮಯಾಗೋಯ್ತದೆ, ಅಷ್ಟು ಚೆನ್ನಾಗಿದ್ಲು. ಜೋಯ್ಸಪ್ಪ ಏನ್ ಹೇಳ್ತಾರೆ, ಅದ್ನ ಬರ್ಕಳ್ತಾ ಹೋಯ್ತಳೆ. ಅದೇ ಅವಳ ಕೆಲಸ.

ಡಾಕ್ಟರು : ಏನು ತೊಂದರೆ?

ಕೆಂಪಣ್ಣ : ತುಂಬಾ ಹೊಟ್ಟೆ ನೋವು

ಡಾಕ್ಟರು : ಎಷ್ಟು ದಿನದಿಂದ?

ಕೆಂಪಣ್ಣ : 1 ತಿಂಗಳಿಂದ ಬಿಟ್ಟು – ಬಿಟ್ಟು ಬರ್ತದೆ

ಡಾಕ್ಟರು : ತುಂಬಾ ನೋವೆ?

ಕೆಂಪಣ್ಣ : ಪ್ರಾಣ ಹೋಗಾಷ್ಟು ನೋವು



ಡಾಕ್ಟರು : ಎಡಗೈ ಟೇಬಲ್ ಮೇಲೆ ಇಡಿ.

ಸಾರ್, ಡಾಕ್ಟರ್ ಎಡಗೈ ನಾಡಿ ಮೇಲೆ ಕೈ ಮಡಗಿ ಹೇಳಕ್ಕೆ ಷುರು ಮಾಡಿದ್ರು ಸಾರ್. ಆ ಹುಡ್ಗಿ ಬರ್ಕಳಕ್ಕೆ ಶುರು ಮಾಡದ್ಲು.

ಡಾಕ್ಟರು (ಹುಡುಗಿಗೆ) : ಬಿ.ಪಿ. 125 / 85

ಷುಗರ್ : 102 P P @ T

ಕಿಡ್ನಿ ಸ್ಟೋನ್ 20 p p

ಮತ್ತೆಲ್ಲಾ ನಾರ್ಮಲ್

ಡಾಕ್ಟರ್ (ಕೆಂಪಣ್ಣನಿಗೆ) : ಕಿಡ್ನಿಯಲ್ಲಿ ಕಲ್ಲಿದೆ.

ಕೆಂಪಣ್ಣ : ನಾನೇ ಹೇಳುವ ಅಂತಿದ್ದೆ ಸಾರ್. ಆಪರೇಷನ್ ಮಾಡಸ್ಬೇಕು ಅಂತಾರೆ

ಡಾಕ್ಟರ್ : ಅಗತ್ಯ ಇಲ್ಲ, ನಾನು ಹೇಳುವ ಹಾಗೆ ನಡೆದುಕೊಂಡರೆ ಹೊಟ್ಟೆ ನೋವು ಪೂರ್ತಿ ವಾಸಿಯಾಗತ್ತೆ.

ಕೆಂಪಣ್ಣ : ಹೇಳಿ ಡಾಕ್ಟರೆ. ಹಂಗೇ ಮಾಡ್ತೀನಿ.

ಡಾಕ್ಟರ್ : ಒಂದು ತಿಂಗಳು ತುಂಬಾ ಪಥ್ಯವಾಗಿರಬೇಕು. ನಾನು ಹೇಳಿದಂತೆಯೇ ನಡೆಕೊಳ್ಳಬೇಕು.

ಕೆಂಪಣ್ಣ : ಸರಿ ಡಾಕ್ಟರೆ. ಹೊಟ್ಟೆ ನೋವು ಬಿಟ್ಟರೆ ಸಾಕು.

ಡಾಕ್ಟರ್ : ಒಂದು ತಿಂಗಳು, ಎಳೆ ಬಾಳೇದಿಂಡಿನ ಸಾರು ಮತ್ತು ಹುರಳೀ ಪಲ್ಯ ಪ್ರತಿದಿನ. ಬೇಜಾರಾದರೆ ಹುರಳೀ ಸಾರು. ಎಳೆ ಬಾಳೆ ದಿಂಡಿನ ಪಲ್ಯ. ಬೆಳಗ್ಗೆ ರಾತ್ರಿ ಇದೇ ಊಟ. ಇನ್ನೇನು ತೆಗೆದುಕೊಳ್ಳಬಾರದು. ಎಣ್ಣೆ ಉಪಯೋಗಿಸುವ ಪೂರಿ, ಪಲ್ಯ ಮುಟ್ಟಬಾರದು. ಆಲೂಗಡ್ಡೆ ಉಪಯೋಗಿಸಲೇಬಾರದು.

ಹಾಲು, ಮೊಸರು, ಕಾಫಿ, ಟೀ ಮುಟ್ಟುವ ಹಾಗಿಲ್ಲ. ಮಜ್ಜಿಗೆ ಎಷ್ಟು ಬೇಕಾದರೂ ತೆಗೆದುಕೊಳ್ಳಬಹುದು. ರಾಗಿಮುದ್ದೆ ಮುಟ್ಟುವ ಹಾಗಿಲ್ಲ. ಈ ಪಥ್ಯ ಮಾಡಿ ಸರಿಯಾಗಿ ಒಂದು ತಿಂಗಳಿಗೆ ನನ್ನನ್ನು ಬಂದು ನೋಡಬೇಕು. ಪ್ರತಿದಿನ ಬೆಳಗ್ಗೆ ಶಿವ-ಪಾರ್ವತಿಯರನ್ನು ಜ್ಞಾಪಿಸಿಕೊಂಡು ಅವರಿಗೆ ನಮಸ್ಕಾರ ಮಾಡಬೇಕು. ರಾತ್ರಿ ಮಲಗುವುದಕ್ಕೆ ಮುಂಚೆ, ಶಿವ-ಪಾರ್ವತಿಯರನ್ನು ಜ್ಞಾಪಿಸಿಕೊಂಡು ಹೊಟ್ಟೆನೋವು ವಾಸಿಯಾಗಲಿ ಎಂದು ಪ್ರಾರ್ಥಿಸಬೇಕು. ಒಂದು ತಿಂಗಳು ಬೇರೆ ಯಾವ ಊರಿಗೂ ಹೋಗಬಾರದು. ಹೊರಗಡೆ ಏನಾದರೂ ತಿಂದರೆ ಖಾಯಿಲೆ ವಾಸಿಯಾಗುವುದಿಲ್ಲ.

ಕೆಂಪಣ್ಣ : ಸರಿ ಡಾಕ್ಟರೆ, ಫೀಸು

ಡಾಕ್ಟರ್ : ರೂ. 100

ಕೆಂಪಣ್ಣ : ತೆಗೆದುಕೊಳ್ಳಿ



ಡಾಕ್ಟರ್ : ನಾನು ಹಣ ಮುಟ್ಟುವುದಿಲ್ಲ. ಹಣ ತೆಗೆದುಕೊಂಡರೆ ಖಾಯಿಲೆ ವಾಸಿಯಾಗುವುದಿಲ್ಲ. ದುಡ್ಡು ಆ ಹುಡುಗಿಗೆ ಕೊಡಿ.

ಕೆಂಪಣ್ಣ : ಸರಿ ಡಾಕ್ಟರೆ

ಕೆಂಪಣ್ಣ : (ನನ್ನನ್ನು ನೋಡುತ್ತಾ) ಏನ್ ಸಾರ್ ಹುಡ್ಗಿ, ಪದೇ ಪದೇ ನೋಡ್ಬೇಕು, ಅನ್ಸ್ತಿತ್ತು ಸಾರ್.

ಅಷ್ಟು ಚೆಲುವೆ ಸಾರ್. ನಾನು ರೂ.100 ಕೊಟ್ಟು ಹೊರಗೆ ಬಂದೆ ಸಾರ್.

ಅಲ್ಲಿಂದ ಬಂದ ಮೇಲೆ ಡಾಕ್ಟರ್ ಹೇಳ್ದಂಗೆ ಕಟ್ ನಿಟ್ಟಾಗಿ ಪಥ್ಯ ಮಾಡ್ದೆ ಸಾರ್. ನನ್ನ ವರ್ತನೆ ಗಿರಾಕಿಗಳಿಗೆಲ್ಲಾ ಒಂದು ತಿಂಗಳು ಬರಲ್ಲ ಅಂತ ಫೋನ್ ಮಾಡ್ದೆ ಸಾರ್. ನಿಮ್ಗೂ ಮಾಡ್ದೆ ಸಾರ್, ನೀವು ತಗಳ್ಳಿಲ್ಲ.

ನಾನು : ಅಯ್ಯೋ ನಾನು ಫೋನು ಕಳೆದುಕೊಂಡು ಬಿಟ್ಟಿದ್ದೆ. ಈಗ ಹೊಸ ಫೋನ್, ಬೇರೆ ನಂಬರ್. ನಿನಗೆ ನಂಬರ್ ಕೊಡ್ತೀನಿ ಕೆಂಪಣ್ಣ, ಅಂಗಡಿ ಬೆಣ್ಣೆ ತುಪ್ಪ ಬೇಜಾರಾಗೋಗಿದೆ. ಆಮೇಲೆ ನಿನ್ನ ಹೊಟ್ಟೆನೋವು

ಕೆಂಪಣ್ಣ : ಸಾರ್ ಏನ್ ಸಾರ್ ಮ್ಯಾಜಿಕ್ಕು. ಜೋಯ್ಸಪ್ಪನೋರ್ನ ನೋಡ್ಕಂಡು ಬಂದ ಮೇಲೆ ಪಥ್ಯ ಶುರು ಮಾಡ್ದೆ ಸಾರ್. 3 ದಿನ ಹೊಟ್ಟೆನೋವು ಅಷ್ಟೇ ಸಾರ್. ಆಮೇಲೆ ಅದೆಲ್ಲೋಯ್ತೋ ಏನೋ ಸಾರ್. ಒಂದ್ಸಾರಿನೂ ಹೊಟ್ಟೆನೋವು ಬರ್ಲಿಲ್ಲ ಸಾರ್.

ಒಂದು ತಿಂಗಳ ನಂತರ ಮೈಸೂರಿಗೆ ಹೋಗಿ ಜೋಯ್ಸಪ್ಪ ಡಾಕ್ಟರ್‌ನ ನೋಡ್ದೆ ಸಾರ್. ಅವರು ಸ್ಕ್ಯಾನ್ ಮಾಡಸ್ಕಂಡು ಬಾ ಅಂದ್ರು ಸಾರ್. ಕ್ಲಿನಿಕ್‌ಗೆ ಹೋಗಿ ರೂ.750 ಕೊಟ್ಟು ಸ್ಕ್ಯಾನ್ ಮಾಡಸ್ಕಂಡ್ಬಂದೆ ಸಾರ್. ಜೋಯ್ಸಪ್ಪನವರು ಯಥಾ ಪ್ರಕಾರ ಟೇಬಲ್ ಮೇಲೆ ಕೈ ಮಡಗು ಅಂದ್ರು ಸಾರ್. ನಾಡಿ ಹಿಡಕ್ಕೊಂಡು ಹೇಳ್ತಾ ಹೋದ್ರು ಸಾರ್. ಅದೆ ಚೆಲುವೆ ಬರ್ಕಳ್ತಾ ಹೋದ್ಲು ಸಾರ್

ಡಾಕ್ಟರು : ಬಿ.ಪಿ. : 126 / 82

ಷುಗರ್ : 103 PPT

ಕಿಡ್ನಿಸ್ಟೋನ್ : ಗಾಯಬ್

ಉಳಿದಿದ್ದೆಲ್ಲಾ : ನಾರ್ಮಲ್

ಡಾಕ್ಟರ್ (ನನ್ನ ಕಡೆ ನೋಡಿ) : ನೀನು ತುಂಬಾ ಚೆನ್ನಾಗಿ ಪಥ್ಯ ಮಾಡಿದ್ದೀಯ. ಕಿಡ್ನಿ ಸ್ಟೋನ್ ಹೊರ್ಟು ಹೋಗಿದೆ. ಇನ್ನೇನು ಚಿಂತಿಲ್ಲ. ಚೆನ್ನಾಗಿ ನೀರು ಕುಡಿಯಬೇಕು. ತುಂಬಾ ನೀರು ಕುಡಿಯಬೇಕು. ತುಂಬಾ ಮಜ್ಜಿಗೆ ಉಪಯೋಗಿಸು. ಇನ್ನು ಹೊಟ್ಟೆನೋವು ಬರುವುದಿಲ್ಲ ಅಂದರು. ಕೆಲವರು ಪಥ್ಯ ಮಾಡುವುದಿಲ್ಲ, ಅವರಿಗೆ ಆಪರೇಷನ್ನೇ ಗತಿ ಅಂದರು.

ಕೆಂಪಣ್ಣ : ನೀವು ನನ್ನ ಪಾಲಿನ ದೇವರು. ಇನ್ನು ನನಗೆ ಏನೇ ಖಾಯಿಲೆ ಬಂದರೂ ನಿಮ್ಮ ತಾವೆ ಬರ್ತೀನಿ. ಫೀಸು

ಡಾಕ್ಟರು : ಫೀಸೇನು ಇಲ್ಲ, ನಾನು ಹಣ ಮುಟ್ಟುವುದಿಲ್ಲ.

ಸಾರ್, ನಾನು ಇನ್ನೊಂದಫ ಆ ಹುಡ್ಗೀನೇ ನೋಡ್ಕಂಡು ಆಚೆಗೆ ಬಂದೆ ಸಾರ್. ಇನ್ಮೇಲೆ ವರ್ತನೆಯಾಗಿ ಬೆಣ್ಣೆ ಹಾಕ್ತೀನಿ ಸಾರ್. ಬೇಜಾರು ಮಾಡ್ಕೊಳ್ಬೇಡಿ ಸಾರ್. ಏನಾದ್ರು ಇದ್ರೆ ಫೋನ್ ಮಾಡ್ತೀನಿ ಸಾರ್.

ನಾನು : ಒಳ್ಳೇದು ಕೆಂಪಣ್ಣ ■

---

***ಶಿಕ್ಷಕರು :*** *ನಾನು ಪಾಠ ಮಾಡುವಾಗ ಬೇರೆ ಯಾರೂ ಮಾತಾಡಬಾರದು ಇದಕ್ಕೆ ಒಂದು ಉದಾಹರಣೆ ಕೊಡಿ.*
***ವಿದ್ಯಾರ್ಥಿ :*** *ದೇವಸ್ಥಾನದ ಗಂಟೆ ಮೊಳಗುತ್ತಿರುವಾಗ ಯಾರೂ ಮಾತಾಡಬಾರದು*





# ಹೀಗೊಂದು ರಾಜ್ಯೋತ್ಸವ

• ಪ್ರಭಣ್ಣ

ನವೆಂಬರ್ ತಿಂಗಳು ಬಂದ ತಕ್ಷಣ ಕನ್ನಡ ಗಾಳಿ ಬೀಸತೊಡಗುತ್ತದೆ. ಎಂಥವರಿಗೂ ಕನ್ನಡ ನಾಡು-ನುಡಿಗಳ ಬಗೆಗೆ ಅಭಿಮಾನ ಉಕ್ಕುತ್ತದೆ. ಎಲ್ಲೆಡೆ ರಾಜ್ಯೋತ್ಸವ. ಬರೆಹಗಾರರಿಗೆ ಸನ್ಮಾನ. ಉಜ್ವಲ ವಾಗ್ಮಿಗಳಿಗೆ ಕರೆ. ಮುಖ್ಯ ಅತಿಥಿಯಾಗಿ ಬರಬೇಕೆಂದು ಅಕ್ಕರೆಯ ಕರೆ. ಕವಿಗೋಷ್ಠಿ.

ಹೀಗೊಂದು ಸಮಾರಂಭಕ್ಕೆ ನನ್ನನ್ನು ಮುಖ್ಯ ಅತಿಥಿಯನ್ನಾಗಿ ಕರೆಯಲು ಬಂದಿದ್ದರು. ದಣಿವಿನಿಂದ ತೇಕುತ್ತ ಏದುಸಿರು ಬಿಡುತ್ತಿದ್ದರು. ಬೆವರುತ್ತಿದ್ದರು. ''ನಮಸ್ಕಾರ, ಏನು ಬಂದಿರಿ. ಹದುಳವಿದ್ದಿರೇ?'' ಎಂದು ಕೇಳಿದೆ. ನೆಲ ಕುಸಿಯಲಿಲ್ಲ ''ಇಂಥಾ ದಿನ, ಇಷ್ಟು ಹೊತ್ತಿಗೆ, ಇಂಥಾ ಸಭಾಂಗಣದಲ್ಲಿ ರಾಜ್ಯೋತ್ಸವ ಇಟ್ಟುಕೊಂಡಿದ್ದೇವೆ. ತಾವು ದಯವಿಟ್ಟು ಒಪ್ಪಿ ಮುಖ್ಯ ಅತಿಥಿಯಾಗಿ ಬರಬೇಕು.'' ಎಂದರು.

ನಾನು, ''ಸಂತೋಷ. ಆದರೆ ನಾನು ಬರುವುದಕ್ಕಾಗುವುದಿಲ್ಲ...'' ಹೇಳಿ ಮುಗಿಸುತ್ತಿದ್ದಂತೆ ಅವರು ದೈನ್ಯತೆಯನ್ನೆಲ್ಲ ವ್ಯಕ್ತಪಡಿಸುತ್ತ, ''ಸಾರ್ ಹಾಗನ್ನಬೇಡಿ ದಯವಿಟ್ಟು, ನೀವು ಖಂಡಿತಾ ಫ್ರೀ ಆಗಿರುತ್ತೀರಿ, (ನಿವೃತ್ತರಾದ ಮೇಲೆ ಕೆಲಸವೇನಿದೆ?) ಬರುತ್ತೀರಿ ಎಂಬ ಭರವಸೆಯಲ್ಲಿ ಬಂದಿದೇವೆ. ಹೇಗೂ ನಿವೃತ್ತರಾಗಿದ್ದೀರಿ,'' (ಕ್ಲಾಸ್ ಲೆಕ್ಚರ್ ಮಾಡುವ ಗೋಜಿಲ್ಲದೆ, ಅವಕಾಶಗಳಿಗೆ ಕಾಯ್ತಿರ್ತೀರಿ ಎಂಬ ಟಾಂಟ್ ದನಿಯಲ್ಲಿದ್ದ ಹಾಗೆ).

''ನಿವೃತ್ತನಾಗಿದ್ದರೇನು, ಏನೇನೊ ಕೆಲಸಗಳು.....''

''ದಯವಿಟ್ಟು ಒಪ್ಪಿಕೊಳ್ಳಿ ಸಾರ್. ನೀವು ಒಪ್ಪಿಕೊಳ್ಳಲೇಬೇಕು. ಮೂರು-ನಾಲ್ಕು ಜನರನ್ನು ಕೇಳಿದೆವು. ಅವರೂ ಹೀಗೆ ಹೇಳಿ ತಪ್ಪಿಸಿಕೊಂಡರು. ತಾವು ಇಲ್ಲ ಎನ್ನುವುದಿಲ್ಲ ಎಂದು ನಂಬಿ ಬಂದಿದೇವೆ....''

(ಓ, ಯಾರೂ ಸಿಕ್ಕಲಿಲ್ಲ -ಇಲ್ಲೊಂದು ಮಿಕ ಕೆಲಸವಿಲ್ಲದೆ ಕಾಲ ಹಾಕ್ತಿದೆ ಅಂತ ಬಂದಿದ್ದಾರೆ. ಹಿಂಜರಿಕೆ ಇಲ್ಲದೆ ಇದನ್ನು ಹೇಳ್ತಿದಾರಲ್ಲಾ..'' ಎಂದು ಮನಸ್ಸಿನಲ್ಲೆ ಅಂದುಕೊಂಡೆ.)

.....ಅಂತೂ ಒಪ್ಪಿಕೊಳ್ಳಬೇಕಾಯಿತು. ಒಪ್ಪಿಕೊಂಡೆ. ಅವರಿಗೆ ಖುಷಿಯಾಯಿತು. (ಮುಂದಿನ ವೃಥಾಯಾತ್ರೆಯ ಆಯಾಸ ಸದ್ಯ ತಪ್ಪಿತಲ್ಲಾ ಎಂದು.)

ಬಯೊಡೇಟಾ ಕೇಳಿದರು. ಏನೂ ಇಲ್ಲ, ಅದೇನೂ ಹೇಳಬೇಡಿ, ಎಂದು ಹೇಳಬೇಕೆಂದವನು ಹಿಂದಿನ ಅನುಭವ ನೆನೆದು, ನಾಲ್ಕು ಮಾತು ಬರೆದು ಕೊಟ್ಟೆ. ಇಲ್ಲದಿದ್ದರೆ ಸಭೆಯ ಮುಂದೇನೆ, ಅನೇಕ ಮೌಲಿಕ ಕೃತಿಗಳನ್ನು ಬರೆದಿದ್ದಾರೆ ಅಂತ ತಪ್ಪು ತಪ್ಪು ಪುಸ್ತಕ ಶೀರ್ಷಿಕೆಗಳನ್ನು ಹೇಳಿದಂತೆ ಇಲ್ಲಾ ಅಲ್ಲೇ ಎಲ್ಲರೆದುರು - ಅದು ಯಾವ ಪುಸ್ತಕ ಸಾರ್ ಅಂತ ನನ್ನನ್ನೇ ಕೇಳಿಬಿಡುವಂತೆ - ಎರಡು ನಿಮಿಷಗಳಲ್ಲಿ ಮುಗಿಸಲು ಸಾಕು - ಹಾಗೆ ಬರೆದುಕೊಟ್ಟೆ.



ಸರಿ ಬೆವರೊರೆಸಿಕೊಂಡು, ನಗು ಮುಖ ಮಾಡಿಕೊಂಡು, ತುಂಬಾ ಥ್ಯಾಂಕ್ಸು ಸಾರ್, ಆಹ್ವಾನ ಪತ್ರಿಕೆ ಪ್ರಿಂಟಾದ ಕೂಡಲೆ ಕಳಿಸುತ್ತೇವೆ,'' ಎಂದು ಹೇಳಿ ಹೊರಟರು. ಆಹ್ವಾನ ಪತ್ರಿಕೆ

ಬಂತು. ಅದರಲ್ಲಿ ಕೆ.ಬಿ. ಬದಲು ಬಿ.ಕೆ. ಅಂತ ಅಚ್ಚಾಗಿತ್ತು.... ಹೆಸರೂ... ಸ್ವಾಮಿ ಅಂತ ತಪ್ಪಾಗಿ ಅಚ್ಚಾಗಿತ್ತು. ಹೆಸರಿನ ಕೆಳಗೆ ನಿವೃತ್ತ ಪ್ರಾಂಶುಪಾಲರು. ಸುಪ್ರಸಿದ್ಧ ಸಾಹಿತಿಗಳು ಎಂದು ಮುದ್ರಿಸಿದ್ದರು. ನಿಗದಿತ ಸಮಯಕ್ಕೆ 2 ನಿಮಿಷ ಮುಂಚೆ ಹೋದೆ. ಸಭಾಂಗಣ ಚೆನ್ನಾಗಿ ಅಲಂಕೃತವಾಗಿತ್ತು. ಆದರೆ ಜನರೇ ಇರಲಿಲ್ಲ. ಸ್ವಾಗತಿಸಲು ಕಾರ್ಯದರ್ಶಿಯೂ ನಾಪತ್ತೆ. ಅರ್ಧಗಂಟೆ ನಂತರ ಕೆಲವರು ನಿಧಾನವಾಗಿ ಬರತೊಡಗಿದರು. ಆರಕ್ಕೆ-ಅರ್ಧಗಂಟೆ ತಡವಾಗಿ -ಷುರು ಮಾಡಿದರು. ಸೆಕ್ರೆಟರಿ ಎಲ್ಲರಿಗೂ ನಮಸ್ಕಾರ ಎಂದು ''ಈ ಸುಂದರ ಶುಭ ಸಂಜೆ ಎಲ್ಲರಿಗೂ ಸ್ವಾಗತ, ಸುಸ್ವಾಗತ,'' ಎಂದು ಹೇಳಿ ''ಕುಮಾರಿ.... ಇವರಿಂದ ಪ್ರಾರ್ಥನೆ'' ಎಂದು ಹೇಳಿದರು. ಪ್ರಾರ್ಥನೆ ಮುಗಿಸಿದ ಕೂಡಲೆ ಎಲ್ಲರೂ ಜೋರಾಗಿ ಚಪ್ಪಾಳೆ ತಟಿದರು, ಗಾಯನ ಕಛೇರಿಯಲ್ಲಿ ಮಾಡುವಂತೆ. ನಿರೂಪಕರು ''ಸುಶ್ರಾವ್ಯವಾಗಿ ಹಾಡಿ ಕಾರ್ಯಕ್ರಮಕ್ಕೆ ಚಾಲನೆ ಕೊಟ್ಟ ಕು....ರಿಗೆ ಧನ್ಯವಾದಗಳು. ಈಗ ಕಾರ್ಯದರ್ಶಿ ಶ್ರೀಗು ಸ್ವಾಗತ ಬಯಸಿ ಅತಿಥಿ ಪರಿಚಯ ಮಾಡಿಕೊಡುತ್ತಾರೆ,'' ಎನ್ನುತ್ತಿದ್ದ ಹಾಗೆ ಮೈಕಾಸುರ ಕರ್ಕಶವಾಗಿ ಹೂಂಕಾರ ಮಾಡಿದ. ಅದು ಸರಿಹೋದ ಮೇಲೆ, ಮೌತ್ ಪೀಸ್ ಮೇಲೆ 2-3 ಬಾರಿ ಕುಟ್ಟಿ ಸರಿಯಾಗಿದೆ ಎಂದು ಖಚಿತ ಪಡಿಸಿಕೊಂಡು ''ವೇದಿಕೆಯ ಮೇಲಿರುವ ಗಣ್ಯರೇ (ಸದ್ಯ ಅಲ್ಲಿ ಕೂತಿದ್ದ ಐದಾರು ಜನಗಣ್ಯರ ಹೆಸರನ್ನು ಹೇಳಹೋಗದೆ) ವೇದಿಕೆಯ ಮುಂದಿರುವ ಹಿರಿಯರೇ, ಸನ್ಮಾನ್ಯ ಸಭಿಕರೆ'' ಎಂದು ಆರಂಭಿಸಿ ''ಸಂಖ್ಯಾ ದೃಷ್ಟಿಯಿಂದ ನಾವು ನಿರೀಕ್ಷಿಸಿದಷ್ಟು ಜನ ಬಂದಿಲ್ಲವಾದರೂ ಗುಣದ ದೃಷ್ಟಿಯಿಂದ ಎಲ್ಲ ತೂಕದ ವ್ಯಕ್ತಿಗಳೇ ಇಲ್ಲಿ ಆಗಮಿಸಿರುವುದು ಮುಖ್ಯ. ಶ್ರೀ... ಸ್ವಾಮಿಯವರು (ಸ್ವಾಮಿ ಅಲ್ಲ ಪ್ರಸಾದ್ ಎಂದು ಯಾರೊ ತಿದ್ದಿದ ಮೇಲೆ) ಸಾರಿ, ಪ್ರಸಾದರು ತಮ್ಮ ಬಿಡುವಿಲ್ಲದ ಕಾರ್ಯಕ್ರಮಗಳಲ್ಲೂ ಬಿಡುವು ಮಾಡಿಕೊಂಡು ನಮ್ಮ ಕರೆಗೆ ಓಗೊಟ್ಟು ಬಂದಿರುತ್ತಾರೆ. ಅವರಿಗೆ ಹೃದಯ ಪೂರ್ವಕ ಸ್ವಾಗತ (ಅಷ್ಟು ಹೊತ್ತಿಗೆ ಮೈಕು ಮತ್ತೆ ತಕರಾರು ಮಾಡಿತು). ಎಲ್ಲರೂ ಜೋರಾಗಿ ಚಪ್ಪಾಳೆ ತಟ್ಟುವುದರ ಮೂಲಕ ಸ್ವಾಗತಿಸಿರಿ. ''ಅವರನ್ನು ಪರಿಚಯ ಮಾಡಿಕೊಡುವುದು ಎಂದರೆ ಸೂರ್ಯನನ್ನು ಪರಿಚಯ ಮಾಡಿಕೊಟ್ಟಂತೆ. ಅವರು ಎಲ್ಲರಿಗೂ ಚಿರಪರಿಚಿತರು. ಕನ್ನಡದ ಸುಪ್ರಸಿದ್ಧ ಸಾಹಿತಿಗಳು. ಅವರು ....ಯಾತ್ರೆಯ ಹಾದಿಯಲ್ಲಿ ಎಂಬ ಪುಸ್ತಕವನ್ನು ಓದದವರೇ ಇಲ್ಲ.'' ಹಾದಿಯಲ್ಲಿ ಅಲ್ಲ ದಾರಿಯಲ್ಲಿ'' ಎಂದು ತಿದ್ದಿದೆ. ಅವರು ''ಸಾರಿ ಸಾರ್, ಅದೇ... ದಾರಿಯಲ್ಲಿ ಅವರಿಗೆ ಸಂದ ಪ್ರಶಸ್ತಿಗಳು ಸನ್ಮಾನಗಳು- ಹೇಳುತ್ತಾ ಹೋದರೆ ಇಡೀ ದಿನ ಸಾಲುವುದಿಲ್ಲ. ಶ್ರೀಯುತರು ಉಜ್ವಲ ವಾಗ್ಮಿಗಳು. ಗಂಟೆಗಟ್ಟಲೆ ನಿರರ್ಗಳವಾಗಿ ಮಾತಾಡುತ್ತಾರೆ. (ಇದನ್ನು ಕೇಳುತ್ತಿದ್ದಂತೆ ಇಬ್ಬರು ಮೂವರು ಶ್ರೋತೃಗಳ - ಹಿಂದೆ ಕುಳಿತಿದ್ದವರು - ಬದುಕಿದೆಯಾ ಬಡಜೀವವೆ ಎಂದು ಎದ್ದು ಹೊರಟು ಬಿಟ್ಟರು. ಹೀಗೆ 20 ನಿಮಿಷ ತಾವು ಕರೆದಿರುವುದು ಸಾಮಾನ್ಯ ವ್ಯಕ್ತಿಯಲ್ಲ ಎಂಬುದನ್ನು ಸಾಬೀತು ಪಡಿಸಿಯೆ 'ಪರಿಚಯ' ಮಾಡಿ ಮುಗಿಸಿದರು. ನಂತರ ''ದೀಪವನ್ನು ಬೆಳಗಿಸುವ ಮೂಲಕ'' ಆಗ ಗಣ್ಯರೆಲ್ಲ ಹತ್ತಲು ಪ್ರತಿಭಟಿಸಿದ ಬತ್ತಿಗಳಿಗೆ ದೀಪ ಹೊತ್ತಿಸಿ - ಫೋಟೋಗೆ ಪೋಸು ಕೊಟ್ಟರು. ಸ್ವಾಗತ ಹಾಗೂ ವಂದನಾರ್ಪಣೆಯಲ್ಲಿ ಮರೆಯದೆ ನೆನೆದುಕೊಂಡ ಮಾಧ್ಯಮ ಮಿತ್ರ ದೀಪ ಬೆಳಗಿಸಿದ್ದನ್ನು ಕ್ಲಿಕ್ಕಿಸಿ ಅಲ್ಲಿಂದ ಹೊರಟು ಹೋಗಿದ್ದರು.

ಜನರಿನ್ನೂ ಎದ್ದು ಹೋಗದೆ (ಏಕೆಂದರೆ ಅಪರೂಪಕ್ಕೆ ಸಿಕ್ಕ ಮಿತ್ರರೊಡನೆ ಎಷ್ಟೊ ದಿನಗಳ ಸುದ್ದಿಗಳನ್ನು ನೆನಪುಮಾಡಿಕೊಂಡು ಮುಗಿಸಬೇಕಲ್ಲ) ಪರಸ್ಪರ ಮಾತಾಡುತ್ತಲಿದ ಗಿಜಿಬಿಜಿ ಸದ್ದುಗದ್ದಲ ಇರುವಾಗಲೆ, ಹತ್ತು ನಿಮಿಷ ಉಪನ್ಯಾಸ ಮಾಡಿ ಮುಗಿಸಿದೆ. ನಾನು ಮುಗಿಸಿದ್ದೇ



ಗೊತ್ತಾಗಲಿಲ್ಲ ತಮ್ಮ ತಮ್ಮ ಮಾತುಗಳಲ್ಲಿ ಮಗ್ನರಾಗಿದ್ದವರಿಗೆ. ಅಧ್ಯಕ್ಷರ ಮಾತು ಆಯಿತು. ಕೊನೆಯಲ್ಲಿ ವಂದನಾರ್ಪಣೆ ಮಾಡಿದ ಸಹಕಾರ್ಯದರ್ಶಿ ಬರಿ ವಂದನೆ ಅಲ್ಲ ಒಂದು ಕಿರುಭಾಷಣವನ್ನೆ ಮಾಡಿದರು. ನಮ್ಮ ಇಂದಿನ ಮುಖ್ಯ ಅತಿಥಿಗಳು ಉಜ್ವಲವಾಗಿ ವಿಚಾರ ಪ್ರಚೋದಕವಾಗಿ ಮಾತಾಡಿದರು ಎಂದು ನಾನು ಹೇಳಿದ್ದು ಹೇಳದಿದ್ದದ್ದೂ ಎಲ್ಲ ಸೇರಿಸಿ ಕಿರುಭಾಷಣ ಮಾಡಿ ''ಕನ್ನಡ ಸಂಘದ ಪರವಾಗಿ ನಿಮ್ಮೆಲ್ಲರ ಪರವಾಗಿ ಮತ್ತು ವೈಯಕ್ತಿಕವಾಗಿ ಶ್ರೀಯುತರಿಗೆ ವಂದನಾರ್ಪಣೆ ಅರ್ಪಿಸುತ್ತೇನೆ,'' ಎಂದಾಗ ಪ್ರಚಂಡ ಕರತಾಡನ (ಸಭಿಕರು ಸಧ್ಯ ಮುಗಿಯಿತಲ್ಲಾ ಎಂದು ಭರ್ಜರಿ ಖುಷಿಯಾಗಿ) ಮಾಡಿದರು.

ಗೌರವ ಸಮರ್ಪಣೆ ಅಂತ ಶಾಲು, ಮಣಿಸರ, ಮೈಸೂರು ಪೇಟಾ ಹಾಕಿ ನೆನಪಿನ ಕಾಣಿಕೆ (ಗಂಧದ ಮರದ್ದು ಎಂದು ಭಾವಿಸಿರುವ ಮರದಲ್ಲಿ ಕೆತ್ತಿದ) ಸರಸ್ವತಿ ವಿಗ್ರಹ ಪೀಠ-ಪ್ರಭಾವಳಿ ಸಹಿತ, ಹಣ್ಣಿನ ಪ್ಲಾಸ್ಟಿಕ್ ಬುಟ್ಟಿ ಎಲ್ಲವನ್ನೂ ಕೈಲಿರಿಸಿ ಆಮೇಲೆ ಅವೆಲ್ಲವನ್ನು ಒಂದು ದೊಡ್ಡ ಬ್ಯಾಗಲ್ಲಿಟ್ಟು ಕಾರ್ಯಕರ್ತರೊಬ್ಬರು ನನ್ನ ಜೊತೆಗೇ ಬಂದು ಬೀಳ್ಕೊಟ್ಟು ಹೋದರು.

*(ಈ ಲೇಖನದಲ್ಲಿ ಎಷ್ಟು ಕ್ಲೀಷೆಗಳಿವೆ ಎಂಬುದನ್ನು ಓದುಗರೇ ಹೇಳಲಿ. ಅತ್ಯಂತ ಹೆಚ್ಚು ಕ್ಲೀಷ್‌ಗಳನ್ನು ಪತ್ತೆ ಮಾಡಿದವರಿಗೆ ಗ್ರೇಡ್ A+)*

■

---

# ಹೊಸ ಆಟ

**ಒಂದೂ ಎರಡು**
**ಆಫೀಸಿಗೆ ಹೊರಡು**

**ಮೂರೂ ನಾಲ್ಕು**
**ಸಂಬಳ ತಂದ್ ಹಾಕು**

**ಐದೂ ಆರು**
**ಹೆಂಡತಿ ಜೋರು**

**ಏಳೂ ಎಂಟು**
**ಜಗಳದ ಅಂಟು**

**ಒಂಭತ್ತೂ ಹತ್ತು**
**ಸುಸ್ತು ಸಂಸಾರದ ನೊಗ ಹೊತ್ತು**

**ಸಂಸಾರದ ಆಟವು ಮುಗಿದಿತ್ತು**
**ಗಂಡಿನ ಶಕ್ತಿಯು ಉಡುಗಿತ್ತು**



# ಪುರುಷೋತ್ತಮನ ಪತ್ತೇದಾರಿಕೆ . .

• ಎಚ್. ಗೋಪಾಲಕೃಷ್ಣ

ಇದು ಇನ್ನೂ ನಾವೆಲ್ಲಾ ರೇಡಿಯೋ ಜಮಾನದಲ್ಲಿಯೇ ಇದ್ದ ಕಾಲದ ಕಥೆ. ಆಗಿನ್ನೂ ಬೆಂಗಳೂರಿನಲ್ಲಿ ಸರಗಳ್ಳರು ಹುಟ್ಟಿರಲಿಲ್ಲ ಮತ್ತು ಬರೇ ಪಿಕ್ ಪಾಕೆಟ್ಟು, ಬೀಗ ಮುರಿದು ಕಳ್ಳತನ ಮತ್ತು ಘೋರ ಕೊಲೆಗಳ ಸುದ್ದಿ ಮಾತ್ರ ಪತ್ರಿಕೆಗಳಲ್ಲಿ ಬರುತ್ತಿದ್ದ ಕಾಲ. ಅಂದರೆ ಅರವತ್ತರ ದಶಕಕ್ಕೆ ನೀವು ಬರಬೇಕು, ಆಗಿನ ಈ ರಸವತ್ತಾದ ಕಥೆಯನ್ನು ಕೇಳಿ ಆಹಾ ಅನ್ನಬೇಕು! ಬನ್ನಿ ನಿಮ್ಮನ್ನ ಅಲ್ಲೀಗೆ ಕರೆದೊಯ್ಯುತ್ತೇನೆ. ನನ್ನ ಅಲ್ಲ ನಮ್ಮ ಮೊದಲ ಪತ್ತೇದಾರಿಕೆಯ ರೋಚಕ ಕಥೆ ಇದು.

ಓದುಗ ಮಹಾಶಯಾ, ಅರವತ್ತರ ದಶಕ ಅಂದೆ, ಆಗಿನ್ನೂ ಬೆಂಗಳೂರು ಘೊರಕೆ ಹೊಡೆದು ನಿದ್ದೆ ಮಾಡುತ್ತಿದ್ದ ಜಾಯಮಾನದ್ದು. ಆಗ ತಾನೇ ಕೆಲವು ಕಾರ್ಖಾನೆಗಳು ಶುರುವಾಗಿದ್ದೋ ಮತ್ತು ಹೊರ ಊರುಗಳಿಂದ ಬಂದು ಇಲ್ಲಿ ಕೆಲಸ ದಕ್ಕಿಸಿಕೊಂಡಿದ್ದ ಯುವಕರು ಮದುವೆ ಮಾಡಿಕೊಂಡು ಸಂಸಾರ ಸಮೇತ ಬಾಡಿಗೆ ಮನೆಗಳಲ್ಲಿ ವಠಾರಗಳಲ್ಲಿ ವಾಸ ಮಾಡುತ್ತಿದ್ದ ಕಾಲವು. ವಠಾರದ ಮನೆಗಳೂ ಹೇಗಿರುತ್ತಿದ್ದವು ಎಂದರೆ ಸಂಪೂರ್ಣ ಹೆಂಚು ಮನೆಗಳು. ಓರೆಯಾಗಿ ಜೋಡಿಸಿ ಇರೋವು. ಮುಂಬಾಗಿಲು ತೆರೆದ ಹಾಗೆ ಒಂದು ಪುಟ್ಟ ಹಾಲು, ಅದರ ಒಂದು ಬದಿಗೆ ಅಡುಗೆ ಮನೆ, ಮತ್ತೊಂದು ಬದಿಗೆ ಒಂದು ರೂಮು, ಒಂದು ಅಥವಾ ಎರಡು ಮಂಚ ಹಾಕುವಷ್ಟು ಅಗಲ. ಅಡುಗೆ ಮನೆಯೋ ಒಬ್ಬರು ಸಣ್ಣಗಿರುವವರು ಕೂತು ಅಡುಗೆ ತಯಾರಿಸುವ ಹಾಗೆ. ಬಚ್ಚಲು ಮನೆ ಇಡೀ ವಠಾರಕ್ಕೆ ಒಂದು ಮತ್ತು ಬಚ್ಚಲು ದಾಟಿ ಹೋದರೆ ಒಂದು ಕಕ್ಕಸ್ ರೂಮು. ಅದೂ ಇಡೀ ವಠಾರಕ್ಕೆ ಒಂದು. ಬೆಳಿಗ್ಗೆ ಎದ್ದು ವಠಾರ ವಾಸಿಗಳು ಅಲ್ಲಿ ಕ್ಯೂ ನಿಲ್ಲುವ ನಿಂತು ಒದ್ದಾಡುವದನ್ನೂ ನೋಡುವುದೇ ಒಂದು ಸೊಗಸು. ಆಗಿನ್ನೂ ಮಧ್ಯಮ ವರ್ಗದವರಿಗೆ ಅಟ್ಯಾಚ್‌ಡ್ ಟಾಯ್ಲೆಟ್ಟಿನ, ಬಾತ್ ರೂಮಿನ ಕಲ್ಪನೆ ಬಂದಿರಲಿಲ್ಲ. ಅದು ಬಂದಿದ್ದು ತೊಂಬತ್ತರ ಮೇಲೆ. ಅಂಡರ್ ಗ್ರೌಂಡ್ ಸೂಯರೇಜು ಲೈನಿನ ವ್ಯವಸ್ಥೆ ಇರಲಿಲ್ಲ, ಬದಲಿಗೆ ತಲೆ ಮೇಲೆ ಮಲ ಹೊರುವ ವ್ಯವಸ್ಥೆ ರೂಢಿಯಲ್ಲಿತ್ತು. ಜನ ಈ ಎಲ್ಲಾ ವ್ಯವಸ್ಥೆಗಳಿಗೆ ಹೊಂದಿಕೊಂಡು ಬಿಟ್ಟಿದ್ದರು ಮತ್ತು ಆಗ ಇದ್ಯಾವುದೂ ಶೋಷಣೆ ಅನಿಸಿರಲಿಲ್ಲ. ಆಗ ಇನ್ನೂ ಗ್ಯಾಸು ಪಾಸು ಬಂದಿರಲಿಲ್ಲ ಬೆಂಗಳೂರಿಗರಿಗೆ. ಇದ್ದಿಲಿನ ಒಲೆ ಅಥವಾ ಸೌದೆ ಒಲೆ ಅಡುಗೆಗೆ ಸರ್ವೇ ಸಾಮಾನ್ಯ ಎಲ್ಲರ ಮನೆಯಲ್ಲೂ. ಕೆಲವು ಸುಧಾರಿತ ಕುಟುಂಬಗಳಲ್ಲಿ ಸ್ನಾನದ ಮನೆಯಲ್ಲಿ ಸೌದೆ ಒಲೆಯೂ ಅಡುಗೆ ಮನೆಯಲ್ಲಿ ಇದ್ದಿಲಿನ ಒಲೆಯೂ ಇರುತ್ತಿತ್ತು. ಎಲೆಕ್ಟ್ರಿಕ್ ಒಲೆಗಳು ನಂತರ ಬಂದವು. ಗ್ಯಾಸ್ ಒಲೆ ಅಂತೂ ಬಂದಿದ್ದು ಆರನೇ ದಶಕದ ಮಧ್ಯದಲ್ಲಿ. ಕಾಂಗ್ರೆಸ್ ಎಕ್ಸಿಬಿಷನ್ ಅಂತ ಒಂದು ಪ್ರದರ್ಶನ ಈಗಿನ ಬೆಂಗಳೂರು ಬಸ್ ಸ್ಟಾಂಡ್ ಇದೆ ನೋಡಿ ಅಲ್ಲಿ ಆಗುತ್ತಿತ್ತು. ಅಲ್ಲಿಗೆ ಐದೇ ನಿಮಿಷದಲ್ಲಿ ಅಡುಗೆ ಮಾಡುವ ಗ್ಯಾಸ್ ಬಂದಿದೆಯಂತೆ ಅಂತ ಸುದ್ದಿ ಹರಡಿತು. ಊರಿನ ಹೆಂಗಸರು, ಗಂಡಸರು, ಮಕ್ಕಳು, ದೊಡ್ಡವರು. ಹೀಗೆ ಎಲ್ಲರೂ ಅದನ್ನು ನೋಡೋದಿಕ್ಕೆ ಹೋಗಿದ್ದೋ... ಅಲ್ಲಿ ಒಬ್ಬ ಹಿಂದಿ ಅವನು ಸ್ಟೋವು ಹಚ್ಚಿ ಅದರ ಮೇಲೆ ಕುಕ್ಕರ್ ಮಡಗಿ ಅನ್ನ ಮಾಡಿ ತೋರಿಸುತ್ತಾ ಇದ್ದ. ನಾಲ್ಕೇ ನಿಮಿಷದಲ್ಲಿ ಬಿಸಿ ಬಿಸಿ ಅನ್ನ ಹಬೆಯಾಡಿಕೊಂಡು ತಟ್ಟೆ ಮೇಲೆ ಸುರಿಸಿಕೊಳ್ಳುತ್ತಿತ್ತು. ಆಗಲೇ ಮೊದಲನೇ ಸಲ ನಾವು ಗ್ಯಾಸ್ ಒಲೆ ನೋಡಿದ್ದು ಹಂಗೇಯ ಕುಕ್ಕರ್



ನೋಡಿದ್ದೂ ಸಹ! ಇದೆಲ್ಲಾ ಯಾಕೆ ಹೇಳುಕ್ಕೆ ಬಂದೆ ಅಂದರೆ ಆಗ ನಾವು ಮಿಡಲ್ ಕ್ಲಾಸು ಜನ ಪೂರ್ತಿ ಡಿಪೆಂಡಾಗಿದ್ದು ಸೌದೆ ಹಾಗೂ ಇದ್ದಲ ಮೇಲೇಯ ಅಂತ ಹೇಳೋದಿಕ್ಕೆ ಪೀಠಿಕೆ ಇದು. ಆಗ ಸೌದೆ ಏನೋ ಬೆಂಗಳೂರಿನಾಗೆ ಸಿಕ್ತಾ ಇತ್ತು. ಪ್ರತಿ ರಸ್ತೆಲೂ ಒಂದು ಸೌದೆ ಅಂಗಡಿ ಇರ್ತಿತ್ತು. ಇದ್ದಲು ಸಾಧಾರಣ ಒಂದು ಅಂಗಡಿ ಹತ್ತು ಸೌದೆ ಅಂಗಡಿ ಇದ್ದ ಕಡೆ ಅಂದರೆ ಒನ್ ಟು ಟೆನ್ ಲೆಕ್ಕ. ಇದ್ದಿಲು ಮೂಟೇಲಿ ತುಂಬಿ ಮಾರ್ತಾ ಇದ್ದರು. ಪಲ್ಲ (ನೂರು ಸೇರು) ಹಿಡಿಯೋ ಮೂಟೆ ನೋಡಿದೀರೋ ಅದರಲ್ಲಿ ಇದ್ದಿಲು ತುಂಬಿ ಮಾರಾಟಕ್ಕೆ ಇಡೋರು. ನಾಲ್ಕು ರೂಪಾಯಿಗೆ ಒಂದು ಮೂಟೆ ಇದ್ದಿಲು. ಸಾಮಾನ್ಯವಾಗಿ ಇದ್ದಿಲು ಅಂಗಡೀಗೆ ಹೋಗಿ ಮನೆಗೆ ಇದ್ದಿಲು ಕಳಿಸಿ ಅಂತ ಹೇಳಿದರೆ ಸಾಕು ಮೂಟೆ ಮನೇಗೆ ಬರ್ತಿತ್ತು ಮತ್ತು ಕ್ಯಾಷ್ ಆನ್ ಡೆಲಿವರಿ ಸೌಲಭ್ಯ ಇತ್ತು. ಸುಮಾರು ಸಲ ಉದ್ರಿ ಸೌಲಭ್ಯಗಳೂ ಇದ್ದವು. ಸೌದೆ ಇಲ್ಲೇ ಮರ ಕಡಿದು ಮಾರುವವರು. ಸೌದೆ ಕತೆ ಹೀಗಾದರೆ ಇದ್ದಿಲು ಕಾನಕಾನ ಹಳ್ಳಿಯಿಂದ ಬರುತ್ತೆ ಅಂತ ದೊಡ್ಡವರು ನಮಗೆ ಪಾಠ ಹೇಳುತ್ತಿದ್ದರು. ಕಾನಕಾನಹಳ್ಳಿ ಅಂದರೆ ಈಗಿನ ಕನಕಪುರ ಅಂತ ನಮಗೆ ಅದೆಷ್ಟೋ ವರ್ಷ ಆದಮೇಲೆ ಗೊತ್ತಾಗಿದ್ದು.

ಓದುಗ ಮಹಾಶಯಾ, ಜೀವನ ಹೀಗೆ ನಡೆದುಕೊಂಡು ಆರಕ್ಕೆ ಏರದೇ ಮೂರಕ್ಕೆ ಇಳಿಯದೇ ಹೋಗುತ್ತಿರುವಾಗ ಒಂದು ಸಲ ನಮ್ಮ ವಠಾರದಲ್ಲಿ ಅದೇನಾಯಿತು ಅಂದರೆ ಒಟ್ಟಿಗೆ ಮೂರು ಮನೆಗಳಲ್ಲಿ ಇದ್ದಿಲು ಮುಗಿದಿತ್ತು ಮತ್ತು ಮೂರೂ ಮನೆಯ ಯಜಮಾನರುಗಳು ಪರ ಊರಿಗೆ ಅವರವರ ಕೆಲಸದ ಮೇಲೆ ಹೋಗಿದ್ದರು. ಇಂತಹ ಸಮಯದಲ್ಲಿ ಮನೆಯ ಸಣ್ಣಪುಟ್ಟ ಕೆಲಸಗಳಿಗೆ ಗೃಹಿಣಿಯರು ಅಕ್ಕಪಕ್ಕದ ಮನೆಯ ಚುಲ್ಟಾರಿಗಳ ಸಹಾಯ ಪಡೆಯುತ್ತಿದ್ದರು. ಅಂದ ಹಾಗೇ ಇಡೀ ವಠಾರದಲ್ಲಿ ಈ ಅತ್ತೆಯರ ಸಣ್ಣ ಪುಟ್ಟ ಕೆಲಸಗಳಿಗೆ ಇದ್ದವನು ನಾನೊಬ್ಬನೇ, ಆಗಿನ್ನೂ ಆಂಟಿ ಪದ ಕನ್ನಡಕ್ಕೆ ನುಗ್ಗಿರಲಿಲ್ಲ.

ಪಕ್ಕದ ಮನೆ ಅತ್ತೆ ಗೋಪಿ ಬಾರೋ ಇಲ್ಲೀ ಅಂತ ಅವರ ಮನೇಗೆ ಕರೆದರು. ಅವರ ಮನೇಲಿ ದೋಸೆ ಮಾಡಿದರೆ, ಉಪ್ಪಿಟ್ಟು ಮಾಡಿದರೆ, ರಾಗಿ ಮುದ್ದೆ ಮಾಡಿದರೆ ಪ್ರೀತಿಯಿಂದ ನನ್ನನ್ನು ಕೂಗಿ ಎಲ್ಲರಿಗಿಂತ ಮೊದಲೇ ನನಗೆ ತಿನ್ನಲು ಕೊಡೋರು. ಖುಷಿಯಿಂದ ತಿಂದುಕೊಂಡೂ ಬರ್ತಾಇದ್ದೆ. ನಿನಗೆ ಮೊದಲು ತಿನ್ನಿಸಿ ನಿನಗೇನೂ ಆಗಿಲ್ಲ ಅಂದರೆ ಆಮೇಲೆ ಅವರ ಮನೆ ಅವರಿಗೆ ಕೊಡ್ತಾರೋ ಪೆದ್ದ ಅಂತ ವಠಾರದ ಇನ್ನೊಂದು ಅತ್ತೆ ನನಗೆ ತಮಾಷೆ ಮಾಡೋರು.

ಅತ್ತೆ ಕೂಗಿದರಾ, ಅವರ ಮನೇಗೆ ಹೋದೆ. ಏನತ್ತೇ.... ಅಂದೆ.

ಬಾರೋ ಗೋಪಿ, ಒಂದು ಕೆಲಸ ಮಾಡ್ತೀಯಾ? ಅಂತ ಕೇಳಿದರು.

ಏನು ರಾತ್ರೀದು ಉಪ್ಪಿಟ್ಟು ಇದೆಯಾ, ಕೊಡಿ ಅದಕ್ಕೇನಂತೆ ಅಂದೆ!



ಉಪ್ಪಿಟ್ಟು ಅಮೇಲೆ ಬಿಸಿಯಾಗೇ ಮಾಡಿಕೊಡ್ತೀನಿ. ಪಕ್ಕದ ರಸ್ತೆ ಇದ್ದಿಲಂಗಡೀಗೆ ಹೋಗಿ ಇದ್ದಿಲಿಗೆ ಹೇಳಿ ಬರ್ತೀಯಾ? ಮನೇಲಿ ಇದ್ದಿಲು ಮುಗಿದುಹೋಗಿದೆ, ಅದು ನೋಡಿಕೊಂಡೇ ಇಲ್ಲ. ಊರಿಗೆ ಬೇರೆ ಹೋಗಿ ಕೂತಿದೆ....

ಅದು ಅಂದರೆ ಅತ್ತೆ ಗಂಡ!

ಆಗಲಿ ಅತ್ತೆ ಉಪ್ಪಿಟ್ಟು ಬೇಡ, ಕೋಡುಬಳೆ ಮಾಡಿಕೊಡಿ ಆಮೇಲೆ.... ಅಂದೆ.

ನನಗೆ ಈ ಎಲ್ಲರ ಮನೇಲೂ ತುಂಬಾ ಸದರ, ಸಲೀಸು.

ಅವರ ಮನೆಯಿಂದ ಆಚೆ ಬಂದನಾ? ಎದುರು ಸಾಲಿನ ವಿಶಾಲಿ ಅತ್ತೆ ಎಲ್ಲಿ ಹೊರಟೆಯೋ ಅಂದರು.

ನರಸತ್ತೆ ಮನೇಲಿ ಇಧ್ದಿಲು ಮುಗಿದಿದೆ, ಅಂಗಡೀಗೆ ಹೇಳೋದಿಕ್ಕೆ ಹೋಗ್ತಿದೀನಿ.. ಅಂದೆ.

ಹೋ ಜಾಣ ನಿನಗೇ ಕಾಯ್ತಿದ್ದೆ. ನಮ್ಮನೇಗೂ ಒಂದು ಮೂಟೆ ಹೇಳ್ಬಿಡು ಅಂದರು. ಸರಿ ಅಂತ ತಲೆಯಾಡಿಸಿದೆ.

ವಠಾರದ ಕಾಂಪೌಂಡ್ ಹತ್ತಿರ ಬಂದೆನಾ? ಮೊದಲನೇ ಮನೆ ಅಜ್ಜಿ ಅಜ್ಜಿ ಆಚೆ ಬಂದರು. ಏನೋ ಮುಂಡೇದೇ, ಏನೋ ಕಿಲಿಕಿಲಿ ಬಂಕ್ತಿದ್ದೆ... ಅಂತ ಕೇಳಿತು.

ಅವರ ಮನೇಗೆ ಇಧ್ದಿಲು ಬೇಕಂತೆ, ಎರಡು ಅತ್ತೆ ಮನೇಗೂ ಅದು ಹೇಳೋದಕ್ಕೆ ಹೋಗ್ತಾ ಇದೀನಿ. ನಿಮಗೂ ಇಧ್ದಿಲು ಬೇಕಾ ಅಜ್ಜೀ? ಅಂತ ಕೇಳಿದೆ.

ಅಯ್ಯೋ ಮುಂಡೇದೇ ಅದೇನು ಬುಧ್ಧೀನೋ ನಿನಗೆ? ನಮ್ಮನೇಲೂ ಅದು ಮುಗಿದಿದೆ ಅಂತ ಅದು ಹೇಗೋ ಗೊತ್ತಾಯ್ತು ನಿನಗೆ? ನಮಗೂ ಹೇಳಿಬಿಡು. ಮನೇಗೆ ಹೋಗೋದಿಕ್ಕೆ ಮೊದಲು ಬಾ, ಗುಲಪಾವಟೆ ಕೊಡ್ತೀನಿ... ಅಂದರು ಅಜ್ಜಿ ಅಜ್ಜಿ.

ಅಜ್ಜಿ ಅಜ್ಜಿ ಮನೆ ಗುಲಪಾವಟೆ, ರವೆ ಉಂಡೆ, ತಂಬಿಟ್ಟು ಅಂದರೆ ನನಗೆ ಪಂಚಪ್ರಾಣ. ಇದು ಹಾಗಿರಲಿ ಬಿಡಿ.

ಇಧ್ದಿಲು ಅಂಗಡೀಗೆ ಹೋದ್ನಾ? ಮೂರು ಮೂಟೆ ಇಧ್ದಿಲು ಹೇಳಿದ್ನಾ? ಸೀದಾ ಮನೇಗೆ ಬಂಧ್ಬಿಟ್ನಾ? ನಿದ್ದೆ ಬಂತು ರೂಮಲ್ಲಿ ಹಾಸಿಗೆ ಮೇಲೆ ಬಿದಕಂಡು ನಿದ್ದೇನೂ ಹೋದ್ನಾ? ಗುಲಪಾವಟೆ ಕನಸು ಕಾಣ್ತಾ ಇದ್ನಾ?

ಯಾರೋ ಗೋಪೀ ಏಳೋ ಮೇಲೇಳೋ ಏಳೋ.... ಅಂತ ಅಲುಗಾಡಿಸಿ ನನ್ನನ್ನ ಎಬ್ಬಿಸಿದರು. ಎದ್ದು ನೋಡಿದರೆ ನಮ್ಮ ಪಕ್ಕದ ಮನೆ ಸುಶೀಲತ್ತೆ ಗಾಬರಿಯಿಂದ ನಿಂತಿದ್ದಾರೆ, ಅವರ ಪಕ್ಕ ಸುಶೀಲ ಮಾವ (ಸುಶೀಲತ್ತೆ ಗಂಡ) ಪಟ್ಟೆ ಪಟ್ಟೆ ನಿಕ್ಕರು ಹಾಕ್ಕೊಂಡು ಅವರೂ ಗಾಬರಿಯಿಂದ ನಿಂತಿದಾರೆ. ಅವರಿಬ್ಬರ ಮಧ್ಯೆ ನಮ್ಮ ಸೋದರ ಮಾವ ಪ್ರಾಣೇಶಿ ತಲೆಗೊಂದು ಮುಂಡಾಸು ಸುತ್ಕೊಂಡು ಅವನೂ ಪಟ್ಟೆ ಪಟ್ಟೆ ಚೆಡ್ಡೀಲಿ ನಿಂತಿದಾನೆ. ಸುಶೀಲತ್ತೆ ಕೈಲಿ ಒಂದು ಮುಗಚೇಕಾಯಿ, ಸುಶೀಲಮಾವನ ಕೈಲಿ ಒಂದು ವಿಕೆಟ್ಟು, ಸೋದರಮಾವ ಪ್ರಾಣೇಶಿ ಕೈಲಿ ಒಂದು ಸೌದೆ ತುಂಡು, ಅವರ ಪಕ್ಕ ಇದ್ದೋರ ಕೈಲಿ ಒಂದು ಸೀಮೆ ಎಣ್ಣೆಬುಡ್ಡಿ.... ಹೀಗೆ ಎಲ್ಲರ ಕೈಲೂ ಏನೇನೋ ಸಾಮಾನುಗಳಿವೆ.

ಪ್ರಾಣೇಶಿ ಮಾವ ಹೋಗು ಮುಖ ತೊಳಕೊಂಡು ಬಾ ಅಂದ.

ಏಕೆ ಅಂದೆ.

ಮೊದಲು ಹೇಳಿದ ಕೆಲಸ ಮಾಡು ಅಂತ ಬಚ್ಚಲು ಮನೇಗೆ ನನ್ನ ದೂಡಿದ.

ನನ್ನನ್ನು ದೂಡಬೇಕು ಅಂದರೆ ಅವನಿಗೆ ಮೊದಲಿಂದಲೂ ಒಂದುರೀತಿ ಖುಷಿ. ಯಾವುದೇ ಅವಕಾಶ ಸಿಗಲಿ ಅವನು ದೂಡಲು ಒಂಟಿ ಕಾಲಮೇಲೆ ನಿಂತಿರ್ತಾನೆ.

ಮನೆಯ ಹೊರಗಡೆ ಗುಂಪಿನ ಗುಜು ಗುಜು ಕೇಳಿಸ್ತಾ ಇತ್ತು.



ಎಲ್ಲರೂ ಗಾಬರಿ ಗಾಬರಿಯಾಗಿದಾರೆ ಯಾರೋ ನೇಣು ಗೀಣು ಹಾಕ್ಕೊಂಡು ಸತ್ತೋಗಿರಬೋದು ಅಂತ ಯೋಚಿಸುತ್ತಲೆ ಬಚ್ಚಲಿಗೆ ಹೋದೆ. ಮುಖಕ್ಕೆ ನೀರು ಸವರಿಕೊಂಡು ಆಚೆ ಬಂದೆ.

ಸೈಕಲ್ ಹೊಡಿಯೋಕ್ಕೆ ಬರುತ್ತೆ ಅಲ್ವೇನೋ ನಿನಗೆ ಅಂತ ಸುಶೀಲ ಮಾವ ಕೇಳಿದ.

ಸೀಟು ಬರೋಲ್ಲ, ಕತ್ರಿ ಹೊಡೀತೀನಿ ಅಂದೆ. ಹೊರಗಡೆ ಗುಂಪಿನ ಗುಜು ಗುಜು ಈಗ ಹೆಚ್ಚಾಗಿ ಕೇಳಿಸ್ತಾ ಇತ್ತು.

ಬಾಗಿಲ ಹತ್ರ ಯಾರಾದರೂ ನಿಲ್ಲಿ, ಒಂದು ಕಣ್ಣು ಅಲ್ಲಿರಲಿ ಅಂತ ಸುಶೀಲ ಮಾವ ಆರ್ಡರು ಮಾಡುವ ದನಿಯಲ್ಲಿ ಹೇಳಿದ.

ಏನಾಯ್ತು ಸುಶೀಲ ಮಾವ? ಅಂದೆ.

ಏನಿಲ್ಲ. ಯಾರೋ ಕಳ್ಳ ಅಚ್ಚಿ ಅಜ್ಜಿ ಮನೆ ಸೇರಿಕೊಂಡಿದಾನೆ ಅಷ್ಟೇ... ಅಂದ ಸುಶೀಲ ಮಾವ.

ಹೌದಾ? ಅಂತ ನಾನು ಕೇಳೋ ಅಷ್ಟರಲ್ಲಿ ಬೇಗ ಒಂದು ಕೆಲಸ ಮಾಡ್ತೀಯಾ? ಅಂತ ಕೇಳಿದ.

ಏನು.... ಅಂದೆ.

ಮೂರು ರಸ್ತೆ ಆಚೆ ಇದೆಯಲ್ಲಾ ಪೋಲಿಸ್ ಸ್ಟೇಷನ್ ಅಲ್ಲೀಗೆ ಸೈಕಲ್ ತಗೊಂಡು ಹೋಗಿ ನಮ್ಮ ಮನೇಲಿ ಕಳ್ಳ ಸೇರಿಕೊಂಡಿದಾನೆ ಅಂತ ಹೇಳಿ ಪೋಲಿಸ್ನೋರ್ನ ಕರ್ಕೊಂಬಾ.. ಅಂದ. ನಾನು ಹೇಳಿದೆ ಅಂತ ಹೇಳು ಅಂತ ಸೇರಿಸಿದ.

ಚಿಕ್ಕ ಹುಡುಗನ್ನ ಕಳಿಸೋದೇ... ಅಂತ ಅಚ್ಚಿ ಅಜ್ಜಿ ಹೇಳ್ತಾ ಇದ್ದರೂ ಹೋಗೋ ಸೈಕಲ್ ತಗೋ ಗೋಡೆಗೆ ಒರಗಿಸಿ ಇಟ್ಟಿದೀನಿ ನೋಡು... ಅಂತ ಸುಶೀಲ ಮಾವ ಬಲವಂತ ಮಾಡಿದ. ಸೈಕಲ್ ಹೊಡೆಯೋದಕ್ಕೆ ಕೊಟ್ಟನಲ್ಲಾ ಬೇರೆ ಟೈಮಿನಲ್ಲಿ ಗೋಗರೆದರೂ ಕೊಡಲ್ಲ ಇವನು ಅಂತ ಖುಷಿ ಪಟ್ಟುಕೊಂಡೇ ಸೈಕಲ್ ತಗೊಂಡು ಕಾಂಪೌಂಡಿನಿಂದ ಆಚೆ ಬಂದೆ.

ಹತ್ತು ನಿಮಿಷ ಅಲ್ಲಿ ಇಲ್ಲಿ ಕತ್ರಿ ಹೊಡೆದು ಆಮೇಲೆ ಪೋಲಿಸ್ ಸ್ಟೇಷನ್ನಿಗೆ ಹೋದೆ. ಅಲ್ಲಿ ಯಾರೋ ತೂಕಡಿಸುತ್ತಾ ಕೂತಿದ್ದರು. ಅವರನ್ನ ಎಬ್ಬಿಸಿದೆ. ಸಾರ್ ಹೀಗೆ ಸುಶೀಲ ಮಾವ ಹೇಳಿದ, ನಮ್ಮ ವಠಾರಕ್ಕೆ ಕಳ್ಳ ಬಂದಿದ್ದಾನೆ. ನೀವು ಬರಬೇಕಂತೆ.... ಅಂದೆ.

ಅವರು ಇನ್ಯಾರನ್ನೋ ಕೂಗಿದರು. ನಿಮ್ಮನೆ ಎಲ್ಲೋ ಅಂತ ಕೇಳಿದರು, ಹೇಳಿದೆ.

ಒಬ್ಬ ಪೋಲಿಸು ಅವನ ಸೈಕಲ್ ಹತ್ತಿದ, ಇನ್ನೊಬ್ಬ ನನ್ನನ್ನ ನಾನು ತೆಗೆದುಕೊಂಡು ಹೋಗಿದ್ದ ಸೈಕಲ್ ಮುಂದೆ ಬಾರ್ ಮೇಲೆ ಕೂಡಿಸಿಕೊಂಡು ವಠಾರಕ್ಕೆ ಬಂದೆವು. ವಠಾರದ ಯಾವ ಮನೇಲಿ ಕಳ್ಳ ಸೇರಿಕೊಂಡಿರೋದು ಅಂತ ಕೇಳಿದರು. ಅಚ್ಚಿ ಅಜ್ಜಿ ಮನೇಲಿ ಸೇರಿಕೊಂಡಿದಾನೆ ಅಂತ ಮಾವ ಹೇಳಿದ.



ಯಾರು ನೋಡಿದೀರಿ ಕಳ್ಳನ್ನ ಅಂತ ಪೋಲಿಸು ಸುಶೀಲ ಮಾವನ್ನ ಕೇಳಿದ.

ನಾವು ನೋಡಿಲ್ಲ, ಅಚ್ಚಿ ಅಜ್ಜಿ ಬಚ್ಚಲು ಮನೆಗೆ ಅಂತ ರಾತ್ರಿ ಎದ್ದು ಬಂದಿದಾರೆ, ಯಾವುದೋ ನೆರಳು ಹೋದ ಹಾಗೆ ಅನಿಸಿತಂತೆ. ಇವರು ವಾಪಸ್ಸು ಹೋಗಿ ಬಾಗಿಲು ತಳ್ಳಿದರೆ ತೆಗೆದುಕೊಳ್ತಾ ಇಲ್ಲ.... ಕಳ್ಳ ಹೋಗಿ ಚಿಲಕ ಹಾಕ್ಕೊಂಡಿದಾನೆ, ಎಷ್ಟು ಕೂಗಿದರೂ

ಬರ್ತಿಲ್ಲ. ಒಳಗೇ ಇದಾನೆ.... ಅಂದ ಮಾವ. ಪೋಲೀಸೋರು ಒಂದು ನಿಮಿಷ ಯೋಚನೆ ಮಾಡಿದರು.

ಏಣಿ ಐತಾ...?

ಪ್ರಾಣೇಶ ಮಾವ ಏಣಿ ತಂದುಕೊಟ್ಟ. ಒಂದು ದೊಡ್ಡ ದೊಣ್ಣೆ ಕೊಡಿ ಅಂತ ಕೇಳಿದರು. ಪ್ರಾಣೇಶ ಮಾವ ಒಳಗೆ ಹೋಗಿ ಒಂದು ದೊಣ್ಣೆ ತಂದ ಅವನು ಆರೆಸ್ಸೆಸ್‌ಗೆ ತಗೊಂಡು ಹೋಗ್ತಾ ಇದ್ದದ್ದು. ಇದು ಸಾಲದು, ಇನ್ನೂ ಉದ್ದ ಬೇಕು ಅಂದರು.

ಸುಶೀಲತ್ತೆ ಮನೆಯಿಂದ ದೊಡ್ಡ ಮಡಿಕೋಲು ಬಂತು.

ಎಂಚು ತೆಗೆಯೋಕ್ಕೆ ಮೊದಲು ಒಳ್ಳೇ ಮಾತಲ್ಲಿ ಅವನನ್ನ ಆಚೆ ಕರೆಯೋಣ ಅಂತ ಪೋಲೀಸೋರು ಮಾತಾಡಿಕೊಂಡರು.

ನೋಡಿ ನಾವು ಇವಾಗ ಆಯಪ್ಪ ಕಳ್ಳ ಮುಂಬಾಗಿಲು ತೆಗೆದು ಆಚೆ ಬರೋ ಹಾಗೆ ಮನೊಲಿಸ್ತೀವಿ. ಆಯಪ್ಪ ಬಂದ ಕೂಡಲೇ ನೀವು ಅವನನ್ನ ಗಟ್ಟಿಯಾಗಿ ಅವಚ್ಕೋಬೇಕು, ಯಾತಕ್ಕೂ ಬಿಡಬಾರದು....

ಪ್ರಾಣೇಶಿ ಮಾವ ತಲೆಯಾಡಿಸಿ ಕೈಯಲ್ಲಿ ದೊಣ್ಣೆ ರೆಡಿ ಮಾಡ್ಕೊಂಡ ಬಾಗಿಲ ಪಕ್ಕ ನಿಂತ.

ಪೋಲೀಸೋರು ಬಾಗಿಲ ಪಕ್ಕ ನಿಂತರು.

ನೋಡಪ್ಪ ಏನೋ ಆಗಿದ್ದು ಆತು ಹೊರಕ್ಕೆ ಬಾ, ಸುಮ್ನೆ ಬಿಟ್ ಬಿಡ್ತೀವಿ, ಬಾ ಆಚೆಗೆ ಅಂತ ಒಳಗಿರೋ ಕಳ್ಳನ ಕಿವಿಗೆ ಕೇಳುವ ಹಾಗೆ ಪ್ರೀತಿಯಿಂದ ಕರೆದರು. ಒಳಗಿಂದ ಅದೇನು ಶಬ್ದವೂ ಇಲ್ಲ.

ಒಳ್ಳೇ ಮಾತಲ್ಲಿ ಬರಬೇಕು ಸುಮ್ಕೆ ಕೋಪ ತರಿಸ್ಬೇಢ, ಕೋಪ ಬಂದ್ರೆ ನಾವು ಮನಸ್ರೇ ಅಲ್ಲ ಅಂತ ಒಂದು ಪೋಲೀಸು ಮತ್ತೆ ಕಳ್ಳನ ಮನೊಲಿಸಲು ಯತ್ನಿಸಿದ. ಇಲ್ಲ ಕಳ್ಳ ಜಪ್ಪಯ್ಯ ಅನ್ನಲಿಲ್ಲ.

ಕೋಪ ಬರಿಸ್ಬೇಡೋ ಬೆಂಡ್ ಎತ್ ಬಿಡ್ತೀನಿ ಅಂತ ಪೋಲೀಸು ರೇಗಿದ. ಊಹೂಂ ರೆಸ್ಪಾನ್ಸೇ ಇಲ್ಲ.

ಒಂದು ಪೋಲೀಸು ಕೊಂಚ ದೂರ ನಿಂತು ಲಾಠಿಯಿಂದ ಬಾಗಿಲು ನೂಕಿದ. ಬಾಗಿಲು ಕೊಂಚ ಅಲ್ಲಾಡಿದ ಹಾಗೆ ಆಗಿ ಮುಚ್ಕೋತು.

ಕಳ್ಳ ಒಬ್ನೇ ಅಲ್ಲ ಇಬ್ಬರವ್ರೆ ಅಂತ ಕಾಣುತ್ತೆ ಅಂದ ಹಿರೀ ಪೋಲೀಸು. ಇರಬೋದಣ್ಣ ಬಾಗಿಲು ಎಂಗೆ ತಳ್ಳಿದರು ನೋಡು.... ಇನ್ನೊಬ್ಬ ಪೋಲೀಸು ಮಾರುತ್ತರ ಕೊಟ್ಟ.

ಮಧ್ಯರಾತ್ರಿ ಸರಿದು ಅದೆಷ್ಟೋ ಹೊತ್ತು ಆಗಿತ್ತು. ಕಗ್ಗತ್ತಲು ಬೇರೆ. ನಮ್ಮ ವಠಾರವೇ ಅಲ್ಲದೇ ಸುತ್ತಮುತ್ತಲಿನ ವಠಾರಗಳ ಜನರೂ ಸೇರಿದ್ದರು. ಒಬ್ಬೊಬ್ಬರು ಒಂದೊಂದು ಐಡಿಯಾ ಕೊಡ್ತಾ ಇದ್ದರು.

ಪೋಲೀಸ್ನೋರು ಕಳ್ಳರಿಗೆ ಹೊರಗೆ ಬರಲು ಬೇಡಿಕೊಂಡಿದ್ದು ಫಲ ನೀಡಲಿಲ್ಲ.

ಬಡ್ಡಿಮಕ್ಕಳು ಒಳ್ಳೇ ಮಾತಿಗೆ ಜಗ್ಗೋಲ್ಲ. ಹೆಂಚು ತೆಗೆದು ಹಿಡಿಯಾಣ ಬಾರ್ಲಾ ಅಂತ ಹಿರೀ ಪೋಲೀಸು ಕಿರಿಯನ್ನ ಕರೆದ.



ಆಗಲೇ ಏಣಿ ಒತ್ತರಿಸಿ ಇಟ್ಟದ್ದರು. ಅದರ ಮೂಲಕ ಭಾವಣಿ ಏರಿದ ಒಂದು ಪೋಲೀಸು. ನಾಲ್ಕು ಹೆಂಚು ತೆಗೆದು ಅತ್ತ ಸರಿಸಿದರು. ದೀಪ ತನ್ರಾ ಅಂದರು. ಸೀಮೆ ಎಣ್ಣೆಬುಡ್ಡಿ ಮೇಲಕ್ಕೆ ಹೋಯಿತು. ಎಲ್ರೂ ದೂರ ಇರಿ, ಕಟ್ಮಸ್ತಾಗಿರೋರು ಬಾಗಿಲ ತಾವ ನಿಲ್ಲಿ ಅವರು ಆಚೆ ಬಂದಕೂಡಲೇ ಗಟ್ಟಿಯಾಗಿ ತಬ್ಬಿ ಹಿಡ್ಕೋಬೇಕು.... ಅಂತ ಬಾರಿ ಬಾರಿಗೂ ಸೂಚನೆ ನೀಡುತ್ತಾ ಮೇಲಿದ್ದ ಪೋಲೀಸು ದಬ್ಬೆಯಿಂದ ಒಳಗೆ ಚುಚ್ಚಿದ ಮತ್ತು ಸುತ್ತಲೂ ದಬ್ಬೆ ಆಡಿಸಿದ, ಹಿಟ್ಟು ತಿರುವ ಹಾಗೆ. ಕಳ್ಳನ ಬಾಡಿ ಟಚ್ ಆಗ್ತಾ ಅದೆ ಅಂತ ಮತ್ತೆ ಆಡಿಸಿದ. ಎಲ್ಲೋ ಪಕ್ಕಕ್ಕೆ ಹೋಗಿಬಿಟ್ಟವನೆ ಅಂತ ಸುತ್ತಲೂ ಆಡಿಸಿದ. ಮೇಲಿಂದ ಚುಚ್ಚಿ ನೋಡಿದ. ಊಹೂಂ ಕಳ್ಳ ಬಗ್ಗಲಿಲ್ಲ.

ಭಾವಣಿಯಿಂದ ಇಳಿದರು. ಇಬ್ಬರು ಪೋಲೀಸರಿಗೂ ಬೆವರು ಕಿತ್ತುಕೊಂಡು ಬರುತ್ತಿತ್ತು. ಜತೆಗೆ ಇಷ್ಟು ಜನರೆದುರು ಕಳ್ಳ ಆಟ ಆಡಿಸುತ್ತಿರುವ ಅವಮಾನ ಬೇರೆ.

ಬಾಗಿಲ ಹತ್ರ ನಿಂತ್ಕೋಳ್ರಿ. ಕೈಯಲ್ಲಿ ದೊಣ್ಣೆ ಇಟ್ಕೊಳ್ರೀ, ಅವನು ಆಚೆ ಬಂದ ಕೂಡಲೇ ಧಬಾರ್ ಅಂತ ಅವನ ತಲೆಗೋ ಮೈಗೋ ಬಾರಿಸಿ ಬಿಡ್ರೀ, ಮಿಕ್ಕಿದ್ದು ನಾವು ನೋಡ್ಕೋತೀವಿ... ಕಟ್ಟುಮಸ್ತಾಗಿರೋ ಕೆಲವರನ್ನ ಬಾಗಿಲ ಸುತ್ತಲೂ ನಿಲ್ಲಿಸಿದರು. ಒಬ್ಬ ಪೋಲೀಸು ತಲೇಗೆ ಪೂರ್ತಿ ಮಫ್ಲರು ಸುತ್ತಿಕೊಂಡ. ಕಳ್ಳ ದೊಣ್ಣೇಲಿ ಬಾರಿಸಿದರೆ ಮುಖಕ್ಕೆ ಪೆಟ್ಟು ಬೀಳದೇ ಇರಲಿ ಅಂತನಂತೆ. ಮತ್ತೊಬ್ಬ ಪೋಲೀಸು ಅವನ ಹಿಂದೆ ನಿಂತ, ಅವನೂ ಮುಖದ ತುಂಬ ಮಫ್ಲರು, ಕೈಯಲ್ಲಿ ದಪ್ಪನೇ ದೊಣ್ಣೆ.

ಬಾರ್ಲಾ ಆಚೆ, ಬಾರ್ಲಾ ಆಚೆ ಏನೂ ಮಾಡಾಕಿಲ್ಲ ಬಾರ್ಲಾ.... ಅಂತ ಸುಮಾರು ಸಲ ಗೋಗರೆದರೂ ಕಳ್ಳರು ತುಟಿಪಿಟಕ್ ಅನ್ನಲಿಲ್ಲ. ಪೋಲೀಸಿಗೆ ಈಗ ರೋಷ ಪರಾಕಾಷ್ಠೆ ಮುಟ್ಟಿತ್ತು.

ಅವರಲ್ಲೇ ಮೈಕೈ ತುಂಬಿಕೊಂಡು ಸ್ವಲ್ಪ ಗಡವಾ ಆಗಿದ್ದ ಪೋಲೀಸು ಬಾಗಿಲ ಮುಂದೆ ಎರಡೂ ಕೈ ಅಗಲಿಸಿ ನಿಂತ. ಸುತ್ತ ಮುತ್ತ ಒಮ್ಮೆ ನೋಡಿದ. ಉಸಿರು ದೀರ್ಘವಾಗಿ ಒಳಗೆ ಎಳೆದುಕೊಂಡ. ಹದಿನಾಲ್ಕು ಹೆಜ್ಜೆ ಹಿಂದೆ ಬಂದು ಫಾಸ್ಟ್ ಬೋಲಿಂಗ್ ಮಾಡುವವರ ರೀತಿ ನಿಂತ. ಕೈ ಎರಡನ್ನೂ ಮುಂದೆ ಚಾಚಿ ಜತೆಯ ಪೋಲೀಸನಿಗೆ ರೈಯಾ ರೈಯಾ ಹೇಳುತ್ತಾ ರಭಸದಿಂದ ಮುಂದೆ ನುಗ್ಗಿದ. ವೇಗವಾಗಿ ಬಂದು ಬಾಗಿಲಿಗೆ ಒಂದು ಛ್ಯಾಷ್ ಹೊಡೆದ. ಬಾಗಿಲು ಇವನು ಬಾರಿಸಿದ ವೇಗಕ್ಕೆ ತೆಗೆದುಕೊಂಡವು. ಅದರ ಸಂಗಡವೇ ದೊಫ್ ಎಂದು ಅದೇನೋ ಬಿದ್ದ ಶಬ್ದವೂ ಸಹ ಕೇಳಿಸಿತು. ಆಚೆ ಕಳ್ಳರನ್ನು ಹಿಡಿಯಲು ಕಾದಿದ್ದ ಯೋಧ ಪಡೆ ಕಳ್ಳ ಆಚೆ ಬರಲಿ ಎಂದು ಕಾದರು. ಕಳ್ಳ ಆಚೆ ಬರಲಿಲ್ಲ! ಬಾಗಿಲು ನೂಕಿದ್ದ ಪೋಲೀಸು ಎಚ್ಚರಿಕೆಯಿಂದ ಕೈಲಿ ಲಾಠಿ ಹಿಡಿದು ತಿರುವುತ್ತಾ ಇನ್ನೊಬ್ಬ ಪೋಲೀಸೊಂದಿಗೆ ಮನೆ ಒಳಗೆ ಹೋದ. ತಪ್ಪಿಸಿಕೊಂಡರೆ ಚಮಡಾ ನಿಕಾಲ್ ಮಾಡಿಬಿಡ್ತೀನಿ, ಹುಷಾರ್... ಅಂತ ಹೇಳುತ್ತಾ ಒಳಗೆ ಹೋದವನು ಕತ್ತಲೆಯಲ್ಲಿ ಅದೇನೋ ಎಡವಿ ಬಿದ್ದ. ಯೋಧ ಪಡೆ ದೊಣ್ಣೆ ಹಿಡಿದು ಒಳಗೆ ನುಗ್ಗಿದರು.



ಲಾಟೀನು ದೀಪದ ಬೆಳಕಿನಲ್ಲಿ ಕಾಣಿಸಿದ್ದು ಏನು? ಎರಡು ಇದ್ದಲಿನ ಮೂಟೆ ಅಡ್ಡ ಅಡ್ಡವಾಗಿ ಬಿದ್ದಿದ್ದು ಅವರಿಗೆ ಕತ್ತಲೆಯಲ್ಲಿ ಅಸ್ಪಷ್ಟವಾಗಿ ಕಾಣಿಸಿತು. ಯಾವ ಕಳ್ಳನೂ ಆಚೆ ಓಡಿಬರಲಿಲ್ಲ ಮತ್ತು ಯೋಧರಿಗೆ ಬಾರೀ ನಿರಾಸೆ ಆಯಿತು.

ಅಚ್ಚಜ್ಜಿ ಸಂಜೆ ಎಲ್ಲೋ ಹೋಗಿತ್ತು. ಅವರ ಮನೆ ಬೀಗದ ಕೈ ನಮ್ಮ ಮನೇಲೇ

ಇತ್ತಲ್ಲಾ, ಇದ್ದಿಲು ಮೂಟೆ ತಂದವನಿಗೆ ಅಲ್ಲೇ ಇಡು ಅಂತ ನಾನು ಹೇಳಿ ಇರಿಸ್ದೆ. ಮೂರು ಮೂಟೆ ತಂದಿದ್ದ, ಒಂದು ಮೂಟೆ ಇವರ ಮನೇಲಿ ಇಟ್ಟ, ಇನ್ನೊಂದು ಸುಶೀಲಮ್ಮನ ಮನೇಲಿ ಇಟ್ಟ. ಇನ್ನೊಂದು ಮನೆ ಬೀಗ ಹಾಕಿದೆ ಅಂದ ಅದನ್ನೂ ಇಲ್ಲೇ ಇಡು ಅಂದೆ. ಅವನು ಬಾಗಿಲ ಹಿಂದೆ ಎರಡೂ ಇಟ್ಟು ಬಿಟ್ಟಿದಾನೆ ಅದು ಜರುಗಿ ಬಾಗಿಲಿಗೆ ಅಡ್ಡ ಆಯ್ತು ಅಂತ ಕಾಣುತ್ತೆ.... ಅಂತ ಪ್ರಾಣೇಶ ಮಾವ ಕಥೆ ಹೇಳುತ್ತಾನಿಂತ.

ಸುಳ್ಳು ಸುಳ್ಳೇ ಕಳ್ಳ ಇದಾನೆ ಅಂತ ದೂರು ಕೊಟ್ಟು ನಮ್ಮನ್ನ ಆಟ ಆಡಿಸಿದ್ರಾ ಅಂತ ಆಮೇಲೆ ಪೋಲೀಸ್ನೋರು ವಠಾರದವರಿಗೆಲ್ಲಾ ಹೆದರಿಸಿ ಲಾಕಪ್ ಹಾಕ್ತೀವಿ ಅಂತ ದಬಾಯಿಸಿ ಆಗಾಗ್ಗೆ ವಠಾರಕ್ಕೆ ಬಂದು ಸಾಕಷ್ಟು ವಸೂಲು ಮಾಡಿಕೊಂಡಿದ್ದು ಇನ್ನೂ ಯಾರೂ ಮರೆತಿಲ್ಲ.

ಮೊದಲನೇ ಪತ್ತೇದಾರಿಕೆ ಹೀಗೆ ಠುಸ್ ಪಟಾಕಿ ಆಯ್ತಲ್ಲಾ ಅಂತ ನನಗೂ ನಮ್ಮ ವಠಾರದವರಿಗೂ ನಮ್ಮ ಯೋಧರಿಗೂ ಸುಮಾರು ವರ್ಷ ನೋವು ಕಾಡುತ್ತಿತ್ತು! ■

---

*ಪತ್ತೇದಾರಿ ಸಾಹಿತಿ ದಿ. ಎನ್. ನರಸಿಂಹಯ್ಯ ಅವರ ಪತ್ತೇದಾರನ ಹೆಸರು – ಪುರುಷೋತ್ತಮ. ನಾವೆಲ್ಲಾ ಅವನ ಸಾಹಸ ಓದಿಯೇ ಬೆಳೆದವರು.*

## ಕುಡಿತ ಮತ್ತು ಉಳಿತಾಯ

**ಒಂದು ಬಾರ್‌ನಲ್ಲಿ ಒಬ್ಬ ಕುಡಿಯುತ್ತಾ ಕುಳಿತಿದ್ದ. ಅವನನ್ನೇ ನೋಡುತ್ತಿದ್ದ ಒಬ್ಬ ಹೆಂಗಸು ಅವನ ಬಳಿಗೆ ಬಂದಳು. ಅವರ ನಡುವಿನ ಸಂಭಾಷಣೆ ಹೀಗಿತ್ತು.**

**ಹೆಂಗಸು : ನಿಮಗೆ ಕುಡಿಯುವ ಅಭ್ಯಾಸ ಇದೆಯೇ?**

**ಆತ : ಇದೆ**

**ಹೆಂಗಸು : ನೀವು ದಿನಾ ಕುಡಿಯುತ್ತೀರ ?**

**ಆತ : ಹೌದು**

**ಹೆಂಗಸು : ದಿನಕ್ಕೆ ಎಷ್ಟು ಕುಡಿಯುತ್ತೀರ?**

**ಆತ : ಒಂದು ಬಾಟಲು**

**ಹೆಂಗಸು : ಎಷ್ಟು ವರ್ಷದಿಂದ ಕುಡಿಯುತ್ತಿದ್ದೀರ ?**

**ಆತ : ಸುಮಾರು ಇಪ್ಪತ್ತು ವರ್ಷಗಳಿಂದ**

**ಹೆಂಗಸು : ಸುಮ್ನೆ ಒಂದು ಅಂದಾಜು ಅಂದ್ರೆ ದಿನಕ್ಕೆ ಎರಡು ಸಾವಿರ ರೂಪಾಯಿಗಳು ಅಂದ್ರೆ ತಿಂಗಳಿಗೆ ಅರವತ್ತು ಸಾವಿರ ರೂಪಾಯಿಗಳು, ಒಂದು ವರ್ಷಕ್ಕೆ ಏಳು ಲಕ್ಷ ಇಪ್ಪತ್ತು ಸಾವಿರ ರೂಪಾಯಿಗಳು, ಇಪತ್ತು ವರ್ಷಕ್ಕೆ ಒಂದು ಕೋಟಿ ನಲವತ್ತ ನಾಲ್ಕು ಲಕ್ಷ ರೂಪಾಯಿಗಳು. ಅಷ್ಟು ಹಣದಲ್ಲಿ ಒಂದು ಬಂಗಲೆ ಮತ್ತು ಒಂದು ದೊಡ್ಡ ಕಾರು ತಗೋಬಹುದಾಗಿತ್ತು**

**ಆತ : ನೀವು ಕುಡಿಯುತ್ತೀರ?**

**ಹೆಂಗಸು : ಛೆ ಛೆ ಇಲ್ಲಪ್ಪ**

**ಆತ : ಹಾಗಾದರೆ ನನಗೆ ನಿಮ್ಮ ಬಂಗಲೆ ಮತ್ತು ದೊಡ್ಡ ಕಾರು ತೋರಿಸಿ!**



# ಸೀರಿಯಲ್ ಪ್ರಭಾವ

• ಎಂ.ಎಸ್.ನರಸಿಂಹಮೂರ್ತಿ

ಒಂದು ಭಾನುವಾರ ದಿನಪತ್ರಿಕೆ ಓದುತ್ತಾ ಕುಳಿತಿದ್ದೆ. 6 ವರ್ಷದ ಒಬ್ಬ ಪುಟ್ಟ ಹುಡುಗ ಬಂದ. "ಯಾರು ಪುಟ್ಟಾ ನೀನು ?" ಎಂದೆ.

ಅವನು ವಿಲನ್ ರೀತಿ ನಿಂತು ಡೈಲಾಗ್ ಹೊಡೆದ.

"ನಾನು ಬಂದಿರೋದೇ ನಿನ್ನ ಮನೆ ಸರ್ವನಾಶ ಮಾಡೋಕೆ. ನಿನ್ನಂಥ ನರಾಧಮ, ಗುಡ್ ಫಾರ್ ನಥಿಂಗ್ ಗೂಬೆ ಈ ಭೂಮಿ ಮೇಲೆ ಬದುಕಿರಬಾರದು. ನಿನ್ನ ಹುಚ್ಚಾಟಗಳನ್ನು ಬಯಲಿಗೆ ಎಳೆದು ಈ ಮನೆಗೆ ಬೆಂಕಿ ಹಚ್ಚಿ ಬೂದಿ ಮಾಡಿ ತರ್ಪಣ ಕೊಡ್ಲಿಲ್ಲಾಂದ್ರೆ ನಾನು ಬಿನ್ನಿಪೇಟೆಯ ಬಾಲೂನೇ ಅಲ್ಲ..."

ನನಗೆ ಗಾಬರಿಯಾಗೋಯ್ತು. ನನ್ನ ವಿರೋಧಿಸೋ ಈ ಚೋಟಾ ವಿಲನ್ ಎಲ್ಲಿಂದ ಹುಟ್ಟಿಕೊಂಡ. ಯಾಕೆ ಇವನು ಬಂದ ಎಂದು. ಅಷ್ಟರಲ್ಲಿ ಅವನ ತಂದೆ ತಾಯಿಗಳಾದ ಸೋಮು ಮತ್ತು ಸುಶೀಲಾ ಅವನ ಹಿಂದೆ ಬಂದರು.

"ಹೆದರಿಕೆ ಆಯ್ತಾ? ನನ್ನ ಮಗನಿಗೆ ಟೀವಿ ಸೀರಿಯಲ್ಸ್ ಹುಚ್ಚು. ಸದಾ ನೋಡ್ತಿರ್ತಾನೆ. ಡೈಲಾಗ್ಸ್ ಉರುಹಚ್ಚಿ ಹೇಳ್ತಾನೆ. ನರಾಧಮ ಅಂತ ನಿಮಗೆ ಹೇಳಿದ್ದಲ್ಲ. ಅವನು ಕಲಿತಿರೋ ಸೀರಿಯಲ್ ಡೈಲಾಗು..." ಎಂದರು.

ಕೂಡಲೇ ಅವನು ತನ್ನ ಡೈಲಾಗನ್ನು ತನ್ನ ತಾಯಿ ಮೇಲೆ ಮುಂದುವರೆಸಿದ.

"ಮುಚ್ಚು ಬಾಯ್, ನಾನೇನು, ನನ್ನ ಅಂತಸ್ತು ಏನು, ನನ್ನ ಘನತೆ ಏನು ಅಂತ ಗೊತ್ತಿಲ್ಲದೆ ನೀನು ಮಾತಾಡೋಕೆ ಹೋಗಬೇಡ. ನಿನಗೆ ಗೊತ್ತಿಲ್ಲದೇ ಇರೋ ಎಷ್ಟೋ ಸತ್ಯಗಳು ನನಗೆ ಗೊತ್ತಿದೆ. ನಿನ್ನ ಕಣ್ಣಲ್ಲಿ ಬೆರಳಾಡಿಸಿ ನಿನ್ನ ಕರುಳು ಬಗೆದು ಬಿಡುವೆ.."

ನನಗೆ ಗಾಬರಿ ಆಯಿತು. ಕರುಳಕುಡಿ ಇಂಥ ಮಾತಾಡಿದಾಗ ಅವರಮ್ಮ ನಗುತ್ತಾ ಇದ್ದಳು.

"ಯಾಕೆ ಹೀಗೆ ಈ ಹುಡುಗನಿಗೆ ಇಂಥಾ ಕೆಟ್ಟ ಮಾತುಗಳೆಲ್ಲಾ ಕಲಿಸಿದ್ದೀರ?" ಎಂದೆ.

"ಕೆಟ್ಟ ಮಾತುಗಳಲ್ಲ, ಇವು ಒಳ್ಳೆಯ ಸೀರಿಯಲ್ ಪಂಚ್ ಡೈಲಾಗ್ಸ್. ಅದೇ ಸ್ಟೈಲಲ್ಲಿ ಹಾಗೇನೇ ಹೇಳ್ತಾನೆ. ಮುಂದೆ ಬಹಳ ದೊಡ್ಡ ನಟ ಆಗ್ತಾನೆ ಅನ್ನೋ ಭರವಸೆ ನಮಗಿದೆ" ಎಂದು ತಂದೆ ಹೇಳಿದ.

ಆರು ವರ್ಷದ ಪುಟ್ಟ ಮಗುವಿಗೆ ಸಂಸ್ಕಾರ, ಸಂಪ್ರದಾಯ ಕಲಿಸೋ ಬದಲು ಮನೆಗೆ ಬೆಂಕಿ ಹಚ್ಚುವ ಡೈಲಾಗುಗಳು ಹೇಳಿಕೊಟ್ಟರೆ ಮುಂದೆ ಏನಪ್ಪಾ ಗತಿ ಎಂದು ಕಳವಳಗೊಂಡೆ.



ಸೋಮು ಮತ್ತು ಸುಶೀಲಾ ಹರಟುತ್ತಾ ಕೂತರು.

ಸೀರಿಯಲ್‌ಗೆ ಸಂಬಂಧಿಸಿದ ವಿಷಯವನ್ನೇ ಪ್ರಸ್ತಾಪ ಮಾಡಿದೆ.

"ಇತ್ತೀಚೆಗೆ ಮದರಾಸು ಹೈಕೋರ್ಟು ಒಂದು ವಿಷಯಾನ ಪ್ರಸ್ತಾಪಿಸಿದೆ. ಸೀರಿಯಲ್‌ಗಳು ನೋಡಿದ ಪ್ರೇಕ್ಷಕರು ವಿವಾಹೇತರ ಸಂಬಂಧಗಳನ್ನ ಬೆಳೆಸ್ತಾರೆ ಎಂಬ ಮಾತಿದೆ. ಇದು ನಿಜವೇ" ಎಂದು ಕೇಳಿದೆ..

"ಹದಿಹರೆಯದವರ ವಿಚಿತ್ರ ಗೆಟಪ್‌ಗಳಿಂದ 'ಸೆಟಪ್'ಗಳು ಜಾಸ್ತಿ ಆಗುತ್ತಿದೆ." ಎಂದ ಸೋಮು.

"ಸೋಮೂ, ಇದರ ಬಗ್ಗೆ ನಿನಗೆ ಯಾಕೆ ಜಾಸ್ತಿ ಆಸಕ್ತಿ? ನಿನಗೆ ಯಾವುದಾದ್ರೂ ಸೆಟಪ್ ಇದೆಯಾ?" ಎಂದೆ.

ಸುಶೀಲಾ ಗಂಡನತ್ತ ದುರುಗುಟ್ಟಿಕೊಂಡು ನೋಡಿದಳು.

"ಹೇಳ್ರೀ, ಸಾಯಂಕಾಲದ ಹೊತ್ತು ಲೇಟಾಗಿ ಬರ್‍ತೀರಲ್ಲ, ಆಫೀಸು, ಫಂಕ್ಷನ್ನು ಬರ್ತ್‌ಡೇ ಅಂತ ಹೋಗ್ತೀರಲ್ಲ...? ಎಲ್ಲಿಗೆ ಹೋಗ್ತೀರ ಅಂತ ನಿಮ್ಮ ಫ್ರೆಂಡ್‌ಗಾದರೂ ಹೇಳಿ..." ಎಂದು ದಬಾಯಿಸಿದಳು.

"ಇಲ್ಲಮ್ಮಾ ನಾನು ಎಲ್ಲೂ ಹೋಗ್ತಾ ಇಲ್ಲ. ನನಗೆ ಕೋರ್ಟು ತಿಳಿಸಿದಂತೆ ಯಾವ ಹೆಚ್ಚುವರಿ ಸಂಬಂಧಗಳೂ ಇಲ್ಲಾ..." ಎಂದ ಸೋಮು.

ಸುಶೀಲಾ ಒಪ್ಪಲು ತಯಾರಿರಲಿಲ್ಲ. ಇತ್ತೀಚಿನ ಅನೇಕ ಸೀರಿಯಲ್ಲುಗಳ ಹೆಸರುಗಳನ್ನು ಹೇಳಿದಳು. ಪ್ರತಿ ಸೀರಿಯಲ್‌ನಲ್ಲೂ ಗಂಡನಿಗೆ ಅಥವಾ ಹೆಂಡತಿಗೆ ಎಕ್ಸ್‌ಟ್ರಾ ಮಾರಿಟಲ್ ಅಫೇರ್ಸ್ ಇರುತ್ತೆ. ಗಂಡನಿಗೆ ಒಬ್ಬ ಗರ್ಲ್ ಫ್ರೆಂಡು, ಹೆಂಡ್ತಿಗೆ ಒಬ್ಬ ಬಾಯ್ ಫ್ರೆಂಡು.. ಎಷ್ಟೋ ಸೀರಿಯಲ್ಲುಗಳಲ್ಲಿ ನಾಯಕನ್ನ ಇಬ್ಬಿಬ್ಬರು ಕಟ್ಕೊಂಡಿರ್‍ತಾರೆ.. ಇದನ್ನ ನೋಡಿ ನೋಡಿ ಗಂಡಸರೆಲ್ಲಾ ಹಾಳಾಗಿ ಬಿಟ್ಟಿದ್ದಾರೆ ಎಂದು ದಬಾಯಿಸಿದಳು.

ಆದರೆ ಸೋಮು ಇದನ್ನು ಒಪ್ಪಲು ತಯಾರು ಇರಲಿಲ್ಲ.

"ಸೀರಿಯಲ್ ನೋಡಿ ಕೆಟ್ಟಿರೋದು ಗಂಡಸರಲ್ಲ, ಹೆಂಗಸರು" ಎಂದು ದಬಾಯಿಸಿದ.

"ಗಂಡನ್ನ ಗೋಳಾಡಿಸೋದು ಹೇಗೆ? ಅತ್ತೆಗೆ ವಿಷ ಹಾಕೋದು ಹೇಗೆ? ಗ್ಯಾಸ್ ಆನ್ ಮಾಡಿ ಮನೆಮಂದಿಯನ್ನು ಕೊಲ್ಲೋದು ಹೇಗೆ? ಮೆಟ್ಟಿಲ ಮೇಲೆ ಎಣ್ಣೆ ಸುರಿದು ಕಾಲು ಮುರಿಯೋದು ಹೇಗೆ? ಇಂಥದ್ದನ್ನೆಲ್ಲಾ ಹೆಂಗಸರೇ ಟಿ.ವಿ. ಸೀರಿಯಲ್‌ಗಳಲ್ಲಿ ಪ್ರಯೋಗ ಮಾಡ್ತಾ ಇದ್ದಾರೆ" ಎಂದ.

ಗಲಾಟೆ ತಾರಕಕ್ಕೆ ಏರಿತ್ತು. ನಾನು ಫ್ಯಾನ್ ಜೋರು ಮಾಡಿ ವಾತಾವರಣದ ಬಿಸಿ ಕಡಿಮೆ ಮಾಡಲು ಪ್ರಯತ್ನಿಸಿದೆ. ಅಷ್ಟರಲ್ಲಿ ಅವರ ಮಗನಾದ ಚೋಟು ತನ್ನ ಡೈಲಾಗನ್ನು ಮುಂದುವರೆಸಿದ.

"ನಿನ್ನ ಮನೆಗೆ ನಾನು ಬಂದಿದ್ದೀನಿ ಅಂತ ಸಂತೋಷವಾಗಿ ನೀನು ಇರಬೇಡ. ನಾನು ಬಂದಿರೋದೇ ನಿನ್ನ ಸ್ಟಡಿ ಮಾಡೋಕೆ. ನೀನು ಯಾವ್ಯಾವ ಜಾಗದಲ್ಲಿ ಏನೇನು ರಂಪಾಟ ಮಾಡಿದ್ದೀಯ ಅನ್ನೋದು ನನಗೆ ಗೊತ್ತು. ನಿನ್ನ ಅಪರಾಧಗಳ ಪಟ್ಟಿ ನಾನು ಕೊಟ್ರೆ ನೀನು ನೇರವಾಗಿ ಪರಪ್ಪನ ಅಗ್ರಹಾರ..." ಎಂದು ಗಹಗಹಿಸಿ ನಕ್ಕ.



ಈ ಬದಲಾವಣೆಗೆ ಏನು ಕಾರಣ? ಮಕ್ಕಳಲ್ಲಿ ಇಂಥ ಮಾತುಗಳು ಯಾಕೆ ಜನಪ್ರಿಯ ಆಗುತ್ತಿವೆ ಎಂಬುದೇ ಗೊತ್ತಿಲ್ಲ. ಯಾರದೇ ಮನೆಗೆ ಹೋದರೂ ಟೀವಿಯಲ್ಲಿ ಬರುವ

ಡೈಲಾಗಿನ ತುಣುಕನ್ನು ಮಕ್ಕಳು ಬಂದವರ ಮುಂದೆ ಹೇಳುತ್ತಿರುತ್ತಾರೆ.

ಸೋಮು ನನ್ನನ್ನು ಒಳಗಡೆ ಕರೆದುಕೊಂಡು ಬಂದ. ಏನೋ ವಿಶೇಷವಾದ ವಿಷಯ ಹೇಳೋದು ಇತ್ತು.

"ಯಾಕಪ್ಪಾ ಸೋಮೂ, ಏನಿದೆ ಮನಸ್ಸಿನಲ್ಲಿ?"

ಗುಟ್ಟಾಗಿ ಸೋಮು ವಿಷಯ ಹೇಳಿದ.

"ನನ್ನ ಹೆಂಡ್ತೀಗೆ ಸೀರಿಯಲ್ ನೋಡಿ ನೋಡಿ ತಲೆ ಕೆಟ್ಟಿದೆ. ಆ ಸೀರಿಯಲ್ ಅಸೋಸಿಯೇಟ್ ಡೈರೆಕ್ಟರ್ ಇದ್ದಾನಲ್ಲಾ ಅವನಿಗೆ ಆಗಾಗ ಫೋನ್ ಮಾಡಿ, ಆ ಸೀನ್ ಚೆನ್ನಾಗಿದೆ. ಆ ಸೀನ್ ಚೆನ್ನಾಗಿದೆ ಅಂತ ಹೇಳ್ತಾ ಇರ್ತಾಳೆ. ಅವನೂ ಇವಳಿಗೆ ಫೋನ್ ಮಾಡಿ ನಾಳೆ ಈ ಸೀನ್ ನೋಡಿ, ಈ ಹೀರೋಯಿನ್‌ಗೆ ಇಂಥಾ ಡ್ರೆಸ್ ಹಾಕಿಸಿದ್ದೀನಿ ನೋಡಿ ಅಂತಿರ್ತಾನೆ. ಇದು ಎಲ್ಲಿಗೆ ಹೋಗಿ ಮುಟ್ಟುತ್ತೆ ಅಂತ ಗೊತ್ತಿಲ್ಲ..." ಎಂದ.

"ಇದರಲ್ಲಿ ಅನುಮಾನ ಪಡೋದು ಏನಿದೆ ಸೋಮೂ?"

"ಅನುಮಾನ ಪಡೋದು ಅಲ್ಲಪ್ಪಾ, ನನ್ನ ಹೆಂಡತಿಗೆ ನನ್ನ ಕಡೆ ಗಮನ ಕಮ್ಮಿ ಆಗ್ತಿದೆ" ಎಂದ.

"ಹೋಗ್ಲಿ ಬಿಡು, ಹಾಗಿದ್ರೆ ಸೀರಿಯಲ್‌ನಲ್ಲೇನೇ ಪಕ್ಕದ ಮನೆ ಹುಡುಗೀನ ಲವ್ ಮಾಡ್ತಾರಲ್ಲಾ, ಹಾಗೆ ನೀನು ಒಂದು ಸೀನು ರೆಡಿ ಮಾಡು, ಯಾಕೆ ಯೋಚನೆ ಮಾಡ್ತೀಯ" ಎಂದೆ.

"ಹೇಗೆ?"

ಸೋಮು ಆಶ್ಚರ್ಯದಿಂದ ಕೇಳಿದ.

"ಹೌದು. ನಾಳೆ ನೀನೇ ಬೇರೆ ಸಿಮ್‌ನಿಂದ ನಿನಗೆ ನೀನೇ ಒಂದು ಹುಡುಗಿ ಮೆಸೇಜ್ ಮಾಡಿದಂತೆ ಮಾಡ್ಕೋ... ನಿನ್ನ ಹೆಂಡತಿಗೆ ಫೋನ್ ಸಿಗೋ ಥರ ಇಡು, ಆಗ ಸರಿ ಹೋಗುತ್ತೆ" ಎಂದೆ.

ಸೋಮು ಅದೇ ರೀತಿ ಮಾಡಿದ. ರೀಮಾ ಎಂಬ ಹುಡುಗಿ 'ಐ ಲವ್ ಯೂ' ಮೆಸೇಜ್‌ನ ಸೋಮುಗೆ ಕಳಿಸಿದ್ದನ್ನು ಸುಶೀಲಾ ನೋಡಿ ಹೌಹಾರಿದಳು. ಗಂಡನ ನಡವಳಿಕೆ, ಫೋನು ಗಮನಿಸಲು ಶುರು ಮಾಡಿದಳು. ಕೆಲವೇ ದಿನಗಳಲ್ಲಿ ಮಹಾನ್ ಪರಿವರ್ತನೆ ಆಯಿತು. ಗಂಡನ ಜೊತೆಯಲ್ಲಿ ಎಡಬಿಡದೆ ಇರಲು ಶುರು ಮಾಡಿದಳು. ಎಲ್ಲಿಗೆ ಹೋದರೂ ತಾನು ಬರುತ್ತೇನೆ ಎಂದಳು. ಪ್ರೀತಿಯಿಂದ ಮಾತಾಡಿಸಿದಳು. ಕೆಲವೊಮ್ಮೆ ಅವನಿಗೆ ಜೋತು ಬಿದ್ದು,

"ರೀ, ನನ್ನ ಬಿಟ್ಟು ನೀವು ಬೇರೆ ಯಾರನ್ನೂ ಪ್ರೀತಿ ಮಾಡಬಾರದು..." ಎಂದು ಕೇಳಿಕೊಂಡಳು.

ಅಡ್ಡದಾರಿ ಹಿಡಿಯಬೇಕಿದ್ದ ಸಂಸಾರ ಸರಿಹೋಗಿದ್ದು ಸಹ ಸೀರಿಯಲ್ ಎಫೆಕ್ಟ್‌ನಿಂದಾನೇ ! ■



# ತಾಂತ್ರಿಕ ಸುಳಿಯಲ್ಲಿ ...

• ಕೃಷ್ಣ ಸುಬ್ಬರಾವ್

ತಂತ್ರಜ್ಞಾನ ಕ್ರಾಂತಿಕಾರಕ ಬದಲಾವಣೆ ತಂದಿರುವುದನ್ನು ಯಾರೂ ಅಲ್ಲಗೆಳೆಯಲಾರರು. ಬೆಳವಣಿಗೆಯ ಅಗಾಧ ವೇಗಕ್ಕೆ ಸ್ಪಂದಿಸಲಾಗದ ವರ್ಗಕ್ಕೆ ಸೇರಿದ ನನ್ನಂತಹವರ ಸಂಖ್ಯೆಯೂ ಹೆಚ್ಚಿನದು ಎಂದು ನಾನು ದೃಢವಾಗಿ ನಂಬಿದ್ದೇನೆ. ನಾನೊಬ್ಬ ಹಿರಿಯ ಔಟ್‌ಡೇಟೆಡ್ ಆಸಾಮಿ ಎಂದು ಯಾರೂ ಬೇಕಾದರೂ ಊಹಿಸಬಹುದು. ನಮ್ಮ ಪಾಡಿಗೆ ನಾವು ಹಾಯಾಗಿ 'ಡಬ್ಬ' ಮೊಬೈಲ್ ಇಟ್ಟುಕೊಂಡು ನೆಮ್ಮದಿಯಾಗಿರಲು ಬಿಡದೆ ಸ್ಮಾರ್ಟ್ ಫೋನ್ ತೆಗಿಸಿಕೊಟ್ಟು ನಮ್ಮನ್ನು ಅಪ್‌ಡೇಟ್ ಮಾಡಲು ಸತತ ಪ್ರಯತ್ನಮಾಡುತ್ತಾರೆ ನಮ್ಮ ಮಕ್ಕಳು, ಮೊಮ್ಮಕ್ಕಳು. ನನಗೂ ಕಲಿಯಲು ಅಪಾರ ಆಸಕ್ತಿಯಿದೆ. ಆದರೆ ಎಡವಟ್ಟುಗಳು ನಡೆಯುತ್ತಿರುತ್ತವೆ. ಹೇಳಿಕೊಟ್ಟಿದ್ದನ್ನೇ ಮಾಡಿದ್ದೇನೆ ಎಂಬುದು ನಮ್ಮ ನಂಬಿಕೆ ಆದರೆ ತಪ್ಪುಗಳ ಸರಮಾಲೆಯೆ ಆಗಿರುತ್ತೆ. ಬಟನ್‌ಗಳನ್ನು ಬಲವಾಗಿ ಒತ್ತುತ್ತೇನೆ ಎಂಬ ಆರೋಪ ನನ್ನ ಮೇಲಿದೆ. ಒಂದು ಫೋಟೋ ತೆಗೆಯುವುದಕ್ಕೆ ಹೋಗಿ ಹತ್ತು ಫೋಟೋ ಬಂದಿರುವುದನ್ನು ತೋರಿಸಿ ನನ್ನ ಬಲಪ್ರಯೋಗವನ್ನು ಸಾಬೀತುಪಡಿಸುತ್ತಾರೆ. ಬಲವಾಗಿ ಒತ್ತಬೇಡಿ, ಮೃದುವಾಗಿ 'ಒತ್ತು' ಎನ್ನುವ ಪದಪ್ರಯೋಗಕ್ಕೆ ನನ್ನ ಆಕ್ಷೇಪಣೆ ಇದೆ. 'ಒತ್ತು' ಎಂದರೆ 'ಬಲವಾಗಿ' ಎಂಬುದು ನನ್ನ ಸಹಜ ಭಾಷಾಜ್ಞಾನ. ಮೃದುವಾಗಿ 'ಒತ್ತು' ಎನ್ನುವುದು ಒಂದಕ್ಕೊಂದು ವಿರೋಧ ಪದವಲ್ಲವೆ. ಅದೆಲ್ಲ ತಲೆಹರಟೆ, ಚಿಕ್ಕವರಿಂದ ಬೇಸಿಕ್ಸ್ ಕಲಿಯೋಣವೆಂದು ನನ್ನ ಪ್ರಾಮಾಣಿಕ ಪ್ರಯತ್ನ ಮಾಡುತ್ತಲೇ ಇದ್ದೇನೆ. ನನ್ನ ಸ್ಮಾರ್ಟ್‌ಫೋನ್‌ಗಾಗಿ ಮೊಮ್ಮಗ ಧೀರಜ್ ದುಂಬಾಲು ಬೀಳುತ್ತಾನೆ. ಅವನಿಗೆ ಅದನ್ನು ಕೊಟ್ಟು ಅಲ್ಪಸ್ವಲ್ಪ ಅಪ್‌ಡೇಟ್ ಆಗಲು ಹವಣಿಸುತ್ತೇನೆ. ಈಗಿನ ಹುಡುಗರು ಆಟವಾಡದೇ ಏನಿಲ್ಲ. ಕ್ರಿಕೇಟು, ಟೆನ್ನಿಸ್, ಫುಟ್‌ಬಾಲ್ ಬ್ಯಾಸ್ಕೆಟ್‌ಬಾಲ್ ಎಲ್ಲ ಆಡುತ್ತಾನೆ ನನ್ನ ಮೊಮ್ಮಗ, ಆದರೆ ಎಲ್ಲ ಆಟವೂ ಮೊಬೈಲ್‌ನಲ್ಲೆ! ಮೂರು ಹೊತ್ತು ಕೈಕಾಲು ಆಡಸದೆ ಇದ್ದರೆ ದೈಹಿಕ ಬೆಳವಣಿಗೆ ಹೇಗೆ ಸಾಧ್ಯವೆಂಬ ಆತಂಕದಿಂದ ತಿಂಡಿ ಕೊಡಿಸುವ ಆಸೆ ತೋರಿಸಿ ಹೊರಗೆ ಕರೆದುಕೊಂಡು ಹೋಗುವ ಪ್ಲಾನ್ ಮಾಡಿದರೆ 'ತಾತ ಮನೆಗೆ ತರಿಸುತ್ತೇನೆ ಇರಿ'' ಎಂದು ಯಾವುದೊ ನಂಬರ್ ಒತ್ತಿ ತನಗೆ ಬೇಕಾದ ಸ್ಯಾಂಡ್‌ವಿಚ್, ಬರ್ಗರ್, ಪೆಪ್ಸಿ ಎಲ್ಲ ತಾನೇ ಆರ್ಡರ್ ಮಾಡುತ್ತಾನೆ. ಅದಕ್ಕೆಲ್ಲ ದುಡ್ಡು ಒದಗಿಸುವ ಯೋಚನೆಯಲ್ಲಿದ್ದರೆ ನನ್ನ ಹೆಸರಿನಲ್ಲಿ ಇಟ್ಟಿರುವ ಪೇಟಿಯಮ್ ಮೂಲಕ ಹಣವನ್ನು ಪಾವತಿ ಮಾಡಿರುತ್ತಾನೆ.

ತಾಂತ್ರಿಕತೆ ನಮ್ಮ ದೈಹಿಕ ಚಲನೆಗೆ ಅಡ್ಡಬರುತ್ತಿದೆ ಎಂಬುದು ನನ್ನ ವಾದ. ಹಿಂದೆ ಬಸ್‌ಸ್ಟಾಂಡಿಗೊ ಆಟೊಸ್ಟಾಂಡಿಗೊ ನಡೆದುಕೊಂಡು ಹೋಗುತ್ತಿದ್ದವು. ಈಗ ಎಲ್ಲ ವಾಹನಗಳು ನಮ್ಮ ಮನೆ ಬಾಗಿಲಿಗೇ ಬರುತ್ತವೆ. ಪರ್ಸ್‌ನಲ್ಲಿ ಸಾಕಷ್ಟು ದುಡ್ಡು ಇಟ್ಟುಕೊಂಡು ಬೀದಿಲಿ ಓಡಾಡಬಾರದೆಂದು ಕೆಲವು ಕಾರ್ಡ್‌ಗಳನ್ನು ಇಟ್ಟುಕೊಂಡಿರುತ್ತಾರೆ. ಹೀಗಾದರೆ ಕೊಡುವ ಕಳೆಯುವ ಲೆಕ್ಕಗಳು ಮಕ್ಕಳಿಗೆ ಬರುವುದು ಹೇಗೆ? ಮೊಬೈಲ್‌ನಲ್ಲಿ ತೋರಿಸುವ ಹಣವು ಕ್ಷಣದಲ್ಲಿ ಅವರಿಗೆ (ಮಾರಾಟಗಾರರಿಗೆ) ತಲುಪಿರುತ್ತದೆ. ಇಷ್ಟೆಲ್ಲ ಸೌಕರ್ಯಗಳ ನಡುವೆಯೂ ನನ್ನಂತಹವರಿಗೆ ಸಮಾಜದಲ್ಲಿ ಬೇಡಿಕೆಯೂ ಇದೆ. ನಮ್ಮ ಅಪಾರ್ಟಮೆಂಟ್‌ನಲ್ಲಿ ನಾನೊಬ್ಬ ಚಿಲ್ಲರೆ ಅಂಕಲ್. ಆಟೊದಿಂದ ಇಳಿಯುತ್ತಿದ್ದಂತೆ ಎರಡು ಸಾವಿರದ ಅಥವಾ 500ರ ನೋಟನ್ನು ಚಾಲಕನಿಗೆ ಕೊಡುತ್ತಾರೆ. ಚಿಲ್ಲರೆಯಿಲ್ಲವೆಂದಾಗ ನನ್ನ ಹತ್ತಿರ, ಹತ್ತರ, ಇಪ್ಪತ್ತರ ನೋಟು, ಐದು



ರೂಪಾಯಿ ನಾಣ್ಯವನ್ನು ಪಡೆಯುತ್ತಾರೆ. ಬ್ಯಾಂಕಿನಿಂದ ನಿವೃತ್ತಿಯಾದರೂ ಇದುವರೆಗೂ ನನಗೆ ಬೇಕಾದ ಎಲ್ಲ ರೀತಿಯ ಚಿಲ್ಲರೆ ಕಾಸುಗಳನ್ನು ತಂದಿಟ್ಟುಕೊಂಡಿರುತ್ತೇನೆ. ನಾಲ್ಕು ಜನಕ್ಕೆ ಈ ರೀತಿ ಸಮಾಜಸೇವೆ ಮಾಡುತ್ತಿರುತ್ತೇನೆ.

ಪೆನ್ ಈಸ್ ಮೈಟಿಯರ್ ದ್ಯಾನ್ ಸ್ವೋರ್ಡ್ ಅನ್ನುತ್ತಿದ್ದ ಕಾಲದವನು ನಾನು. ಆದರೆ ಈಗ ಪಿನ್(ಕೋಡ್) ಈಸ್ ಮೈಟಿಯರ್ ದ್ಯಾನ್ ಸ್ವೋರ್ಡ್ ಅನ್ನುವ ಕಾಲ. 'ಪಿನ್' ಒತ್ತುವ ಮೂಲಕ ಏನು ಬೇಕಾದರೂ ಪಡೆಯಬಹುದು. ಹಣ ಬೇಕಾದಾಗಲೆಲ್ಲ ಬ್ಯಾಂಕಿನ ಒಳಗೆ ಹೋಗಿ ದುಡ್ಡು ತೆಗೆದುಕೊಂಡು ಬರುವಾಗ 'ಎ.ಟಿ.ಎಂ' ಮುಂದೆ 'ನೊ ಕ್ಯಾಶ್' ಎಂಬ ಬೋರ್ಡ್‌ನ್ನು ನೋಡುತ್ತಾ ನಿಂತ ತರುಣ, ತರುಣಿಯರನ್ನು ನೋಡಿ ನಾನು ನಗುತ್ತೇನೆ. ಹತ್ತಾರು ಕಾರ್ಡ್‌ಗಳನ್ನು ಇಟ್ಟುಕೊಂಡು 'ಪಿನ್' ಜ್ಞಾಪಕದಲ್ಲಿಟ್ಟು ಕೊಳ್ಳಲಾರದೆ ಸಣ್ಣಚೀಟಿಯಲ್ಲಿ ಬರೆದುಕೊಂಡು ಅದನ್ನು ಬೀಳಿಸಿಕೊಂಡು ಬೀದಿಯಲ್ಲಿ ಪರದಾಡುವ ಹೆಣ್ಮಕ್ಕಳನ್ನು ನೋಡುತ್ತಿರುತ್ತೇನೆ.

ಇತ್ತೀಚೆಗೆ ನನ್ನ ಮಗನ ಐವತ್ತನೇ ಹುಟ್ಟುಹಬ್ಬವನ್ನು ಒಂದು ಭವ್ಯವಾದ ಹೋಟೆಲ್‌ನಲ್ಲಿ ಆಚರಿಸಲಾಯಿತು. ಅದರ ಖರ್ಚನ್ನು ನಾನು ಸ್ಪಾನ್ಸರ್ ಮಾಡುತ್ತೇನೆಂದು ಹೇಳಿದಾಗ ಎಲ್ಲರೂ ಸೇರಿ ಒಮ್ಮತದಿಂದ ನಿರಾಕರಿಸಿದರು. ಪಾರ್ಟಿ ಬಹಳ ಚೆನ್ನಾಗಿತ್ತು. ಬಿಲ್ ಬಂದಾಗ ನನ್ನ ಮಗ ತನ್ನ ಕಾರ್ಡ್‌ನನ್ನು ಉಜ್ಜಿದ. ಅದ್ಯಾಕೊ ತಾಂತ್ರಿಕ ದೋಷದಿಂದ ಕಾರ್ಯನಿರ್ವಹಿಸಲಿಲ್ಲ. ನನ್ನ ಸೊಸೆ ತನ್ನ ಕಾರ್ಡ್‌ಗಳನ್ನು ಮನೆಯಲ್ಲೇ ಮರೆತು ಬಂದಿದ್ದಳು. ನಾನು ಪರ್ಸ್ ತೆಗೆದುಕೊಳ್ಳಲು ಹೋದಾಗ ಮತ್ತೆ ''ಸುಮ್ನಿರಪ್ಪ, ಎಲ್ಲಾದಕ್ಕೂ ಬರಬೇಡ, ನಾನು ಎ.ಟಿ.ಎಮ್‌ನಲ್ಲಿ ಡ್ರಾ ಮಾಡಿಬರ್‍ತೀನಿ'' ಎಂದು ನನ್ನ ಮಗ ಎದ್ದ. ಆಗ ನನ್ನ ಮೊಮ್ಮಗ ''ಅಪ್ಪ, ಎ.ಟಿ.ಎಮ್‌ನಲ್ಲಿ ನೋ ಕ್ಯಾಷ್ ಬೋರ್ಡ್ ನೋಡಲಿಲ್ಲವಾ?'' ಎಂದು ಕೇಳಿದ. ಅನಾಥವಾಗಿ ಬಿದ್ದಿದ್ದ ಬಿಲ್‌ನ್ನು ಕೈಗೆ ಎತ್ತಿಕೊಂಡು ನನ್ನ ಪರ್ಸ್‌ನಲ್ಲಿ ಅಷ್ಟು ಹಣ ಇದೆಯೇ ಎಂದು ನೋಡಿದೆ, ಸಧ್ಯ! ನನ್ನಲ್ಲಿ ಬೇಕಾದಷ್ಟು ಹಣವಿದೆ ಎಂದು ನಗುತ್ತಾ ಟಿಪ್ಸ್ ಸೇರಿಸಿ ಗೌಪ್ಯವಾಗಿ ದುಡ್ಡು ಇಟ್ಟೆ.

ಮನೆಗೆ ಹೋದ ತಕ್ಷಣ ಈ ಹಣವನ್ನು ತೆಗೆದುಕೊಳ್ಳಲೇ ಬೇಕೆಂದು ಮಗ ಸೊಸೆ ಹೇಳಿದಾಗ ನಾನು ಒಂದು ಶರತ್ತು ಮೇಲೆ ಒಪ್ಪಿದೆ.

''ನನಗೆ ಮನೆಗೆ ಹೋದ ತಕ್ಷಣ ಅಷ್ಟೂ ಹಣ ಕೊಟ್ಟರೆ ಮಾತ್ರ'' ಎಂಬ ಶರತ್ತು ಹಾಕಿದೆ. ಅವರಿಬ್ಬರ ಬಳಿ ಮನೆಯಲ್ಲಿ ಅಷ್ಟೊಂದು ಕ್ಯಾಶ್ ಇರುವುದಿಲ್ಲ ಎಂಬ ನಂಬಿಕೆ ನನಗಿತ್ತು. ಇಂತಹದಕ್ಕೆಲ್ಲ ಸೋಲು ಒಪ್ಪುವ ಕುಳ ನನ್ನ ಮಗನಲ್ಲ. ತನ್ನ ಸ್ಮಾರ್ಟ್ ಫೋನ್‌ನಿಂದ ನನ್ನ ಬ್ಯಾಂಕ್ ಅಕೌಂಟ್‌ಗೆ ಹಣವರ್ಗಮಾಡಲು ಬೆರಳಾಡಿಸಿದ. ಪಾಪ ಸಿಗ್ನಲ್ ಸಿಗಲಿಲ್ಲ ತಕ್ಷಣಕ್ಕೆ.

ಯಾವುದೇ ಕೆಲಸ ಸರಾಗವಾಗಿ ನಡೆಯಬೇಕೆಂದು ನಮ್ಮ ಪೀಳಿಗೆಯವರು ಮೇಲಿನ ಕಾಣದ ಕೈಯ ಸಿಗ್ನಲ್‌ಗಾಗಿ ಕಾಯುತ್ತಾ ಬಂದವರು. ಈಗಿನ ಪೀಳಿಗೆಯವರೂ ಮೇಲಿನ ಸಿಗ್ನಲ್‌ಗಾಗಿಯೇ ಕಾಯುತ್ತಾರೆ. ಅವರು ಸರ್ವೀಸ್ ಪ್ರೊವೈಡರ್ ಎಂದು ಕರೆಯುತ್ತಾರೆ. ನಾವು ದೇವರೆಂದು ಕರೆಯುತ್ತೇವೆ ಅಷ್ಟೆ.

'ಸರ್ವಂ ಡಿಜಿಟಲ್‌ಮಯಂ' ಎಂಬ ಸಮಾಪ್ತಿವಾಕ್ಯದೊಂದಿಗೆ ಲಾಗ್ ಔಟ್ ಆಗುತ್ತೇನೆ.

■



# ಗಾಂಪರ ಗುಂಪ ನೀವು ಕಂಡಿರಾ.... ನೀವು ಕಂಡಿರಾ...?

• ವೈ.ಎನ್. ಗುಂಡೂರಾವ್

ಒಂದು ಕಾಲದಲ್ಲಿ ಅಂದರೆ 1900–2000ದ ವರೆಗೆ ಒಂದು ಶತಮಾನಕಾಲ ಗಾಂಪರೊಡೆಯರ ಮಹಿಮೆ ಇಡಿ ಕರ್ನಾಟಕದಾದ್ಯಂತ ಹಬ್ಬಿದ್ದು ಲಕ್ಷಾಂತರ ಜನ ಗಾಂಪಗುರುಗಳ ಹಾಗೂ ಶಿಷ್ಯರ ಗಾಂಪತನದ ಘಟನೆಗಳನ್ನು ನೋಡಿ ನಲಿಯುತ್ತಾ, ಇತರರು ಹೇಳಿದ್ದನ್ನು ಕೇಳಿ ಮೆಲಕು ಹಾಕುತ್ತಾ ಸಂತೋಷ ಪಡುತ್ತಿದ್ದರು. ಆದರೆ 21 ಶತಮಾನದಲ್ಲಿ ಗಾಂಪಗುರುಗಳ, ಶಿಷ್ಯರ ಹೆಸರು ಎಲ್ಲೂ ಪ್ರಸ್ತಾಪವೇ ಆಗುತ್ತಿಲ್ಲ. ಏಕಾಏಕಿ ಗುರುಗಳಿಗೆ, ಶಿಷ್ಯರಿಗೆ ಏನಾಯಿತು? ಗಾಂಪರೊಡೆಯರು ಹಾಗೂ ಐದು ಮಂದಿ ಶಿಷ್ಯರಾದ ಮರುಳ, ಮಂಕ, ಮುಟ್ಠಾಳ, ಮಡೆಯ, ಮಡ್ಡಿ ಇವರುಗಳು ಗಾಂಪಗುರುಪಾದವನ್ನೈದಿದರೇ?

ಛೇ, ಬಿಡ್ತು ಅನ್ನಿ, ಅವರೇನು ನಮ್ಮಂತೆ ಹುಲು ಮಾನವರೇ? ಆರು ಮಂದಿಯೂ ಹನುಮಂತ, ಜಾಂಬವಂತ, ವಿಭೀಷಣ, ಮೈಂದ, ದ್ವಿದಿದರಂತೆ ಚಿರಂಜೀವಿಗಳೇ, ಇಲ್ಲೆಎಲ್ಲೋ ಇರಲೇಬೇಕು. ಹೇಗಾದರೂ ಮಾಡಿ ಆ ಆರುಮಂದಿ ಚಿರಂಜೀವಿಗಳನ್ನು ಭೇಟಿಮಾಡಲೇ ಬೇಕೆಂದು ನಿರ್ಧರಿಸಿ ನನ್ನ ಹುಡುಕಾಟವನ್ನು ಪ್ರಾರಂಭಿಸಿದೆ.

ಗಾಂಪರೊಡೆಯರು ಮೊದಲು ಮಠ ಕಟ್ಟಿಕೊಂಡಿದ್ದು ಕೃಷ್ಣಾನದಿ ತೀರದಲ್ಲಂತೆ, ಇದನ್ನು ರಾ. ನರಸಿಂಹಾಚಾರ್ಯರೇ ದಾಖಲಿಸಿದ್ದಾರೆ. 1898ರಲ್ಲಿ ಗಾಂಪರನ್ನು ಮೊದಲು ಪ್ರಪಂಚಕ್ಕೆ ಪರಿಚಯಿಸಿದವರೇ ರಾ. ನರಸಿಂಹಾಚಾರ್ಯರು. 1926ರ ವೇಳೆಗೆ ಇವರು ಗಾಂಪರ ಬಗ್ಗೆ ಬರೆದ ಕಿರು ಪುಸ್ತಕವು ಐದು ಮುದ್ರಣಗಳನ್ನು ಕಂಡಿತ್ತಂತೆ. ಅಂದರೆ ಗಾಂಪರನ್ನು ಗಾಂಪರೊಡೆಯರನ್ನು ಕರ್ನಾಟಕದ ಜನತೆ ಎಷ್ಟು ಪ್ರೀತಿಯಿಂದ ಬರಮಾಡಿಕೊಂಡಿತೆಂಬುದು ಇದರಿಂದಲೇ ತಿಳಿಯುತ್ತದೆ.

1940–50ರ ದಶಕದಿಂದೀಚೆಗೆ ಹೆಚ್ಚು ಹೆಚ್ಚು ಪ್ರಚಾರಕ್ಕೆ ಬಂದಿದ್ದು ನಂತರ ಗಾಂಪರು ಏನಾದರೋ, ಗುರುಗಳೇನಾದರು ಬೃಂದಾವನಸ್ಥರಾದರಾ? ಒಂದೂ ತಿಳಿಯದೆ ಹೇಗಾದರೂ ಮಾಡಿ ಹುಡುಕಲೇಬೇಕೆಂದು ನಿರ್ಧರಿಸಿದೆ.

ಹೀಗೆ ಗಾಂಪರ ಗುಂಪನ್ನು ಹುಡುಕುತ್ತಾ ವಿಜಯಪುರ, ಬಾಗಲ ಕೋಟೆ, ರಾಯಚೂರು ಜಿಲ್ಲೆಗಳಲ್ಲಿ ಸುತ್ತಾಡುತ್ತಿದ್ದಾಗ ಹೈಸ್ಕೂಲು ಹುಡುಗನೊಬ್ಬ ಗಾಂಪರ ಶೌರ್ಯದ ಬಗ್ಗೆ ನಡೆದ ಘಟನೆಯನ್ನು ತಿಳಿಸಿದ.

ಒಂದು ಸಾರಿ ರಾತ್ರಿ ವೇಳೆಯಲ್ಲಿ ನದಿ ದಾಟಲು ಪಂಜು ಹಿಡಿದು ಶಿಷ್ಯನೊಬ್ಬನು ನದಿ ಮಲಗಿದೆಯಾ, ನಿದ್ರಿಸುತ್ತಿದೆಯಾ ಎಂಬುದನ್ನು ತಿಳಿಯಲು ಪಂಜನ್ನು ನೀರಿಗೆ ಅದ್ದಿದಾಗ ಸುಂಯ್ ಎಂದು ಹೊಗೆಯೊಡನೆ ಸದ್ದು ಬಂದಾಗ ಹೆದರಿದ ಶಿಷ್ಯನು ''ಬದುಕಿದೆ ಗುರುದೇವ, ನದಿ ಎಚ್ಚರವಾಗಿದ್ದು ಬುಸುಗುಟ್ಟಿತು. ನಿಮ್ಮ ದಯೆದಿಂದ ಬದುಕಿದೆ'' ಎಂದು ಅಡ್ಡಬಿದ್ದನಂತೆ. ಸ್ವಲ್ಪ ಹೊತ್ತಿನ ನಂತರ ಮತ್ತೊಬ್ಬ ಶಿಷ್ಯನು ಅದೇ ಪಂಜನ್ನು (ಆರಿಹೋಗಿತ್ತು) ನೀರಿಗೆ ಅದ್ದಿದಾಗ ಸದ್ದು ಬಾರದ್ದು ಕಂಡು'' ಗುರುಗಳೇ ನದಿ ಮಲಗಿದೆ ಬೇಗ ಬನ್ನಿ, ದಾಟಿ ಬಿಡೋಣ'' ಎಂದು ಹೇಳಿದಾಗ ಮೊಳಕಾಲುದ್ದ ನೀರಿದ್ದ ನದಿಯನ್ನು ಶಿಷ್ಯರೊಡನೆ ದಾಟಿಕೊಂಡರಂತೆ.



ಅನಂತರ ವೃದ್ಧನೊಬ್ಬ ಮೈಸೂರು ಕಡೆಗೋ, ಬೆಂಗಳೂರಿನ ಕಡೆಗೋ ಗುರು-ಶಿಷ್ಯರು ಹೊರಟು ಹೋದರು ಎಂದದ್ದು ಕೇಳಿ ಪುನಃ ಬೆಂಗಳೂರಿನ ಕಡೆ ನಡೆದೆ.

1960-70ರ ದಶಕದಲ್ಲಿ ಎ.ಎನ್. ಮೂರ್ತಿರಾಯರು ವಿಧಾನಸಭಾ ಕಲಾಪವನ್ನು ತೋರಿಸಲು ಗಾಂಪರ ಗುಂಪನ್ನು ಕರೆದೊಯ್ದರಂತೆ. ಅಲ್ಲಿ ಸುಮ್ಮನೆ ಕೂಡದೆ ಆಹಾರ ಸಮಸ್ಯೆಯ ಮೇಲೆ ಚರ್ಚೆ ನಡೆಯುತ್ತಿದ್ದಾಗ ಶಾಸಕರೊಬ್ಬರು ರೈತರಿಗೆ ಹೆಚ್ಚು ಹೆಚ್ಚು ಬೆಳೆಯಲು ಉತ್ತೇಜಿಸಬೇಕೆಂದಾಗ ಎದ್ದುನಿಂತ ಗಾಂಪರೊಡೆಯರು ''ಅಕ್ಷಯ ವಿಧಾನವನ್ನು ಕಂಡು ಹಿಡಿಯಿರಿ, ಇದು ವಿಧಾನಸಭೆಯ ಕರ್ತವ್ಯವೂ ಹೌದು'' ಎಂದು ಬಡಬಡಿಸಿದಾಗ, ಯಾರ್‍ರಿ ಅದು ದಬ್ಬಿರಿ ಅವರನ್ನು ಎಂದು ಸಭಾಧ್ಯಕ್ಷರು ಹೇಳಿದಾಗ ಇರಲಿ, ದೇಶದ ಒಳಿತಿಗಾಗಿ ಹೊರಗೇ ದುಡಿಯೋಣ ಎಂದು ನಿರುದ್ವಿಗ್ನ ಮನಸ್ಸಿನಿಂದ ಹೊರದಬ್ಬಿಸಿಕೊಂಡರಂತೆ.

ಹೀಗೆ ಹುಡುಕುತ್ತಾ ಹೊರಟಾಗ ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರು ರಥಸಪ್ತಮಿ ಉತ್ಸವಕ್ಕೆ ಗಾಂಪಗುರುಗಳನ್ನು ಆಹ್ವಾನಿಸಿದಾಗ ಕುದುರೆಯನ್ನು ಬಸ್ಸಿನ ಮೇಲೆ (ಟಾಪ್ ಮೇಲೆ) ಏರಿಸಿಕೊಂಡಿದ್ದು, ಕುದುರೆ ಕೆನೆದಾಗ ಹೆದರಿದ ಬಸ್ ಡ್ರೈವರ್ ಬಸ್ಸು ನಿಲ್ಲಿಸಿ ಇಳಿದು ನೋಡಿದನು. ಅರೆ, ಕುದುರೆ ಹೇಗೆ ಮೇಲೆ ಹತ್ತಿತು. ಯಾರು ಹತ್ತಿಸಿದ್ದು ಎಂದು ಜಬರಿಸಿದಾಗ ಗಾಂಪರ ಶಿಷ್ಯರು ತಾವೇ ಎಂದು ಹೇಳಿದಾಗ ಇಳಿಸಿಕೊಳ್ಳಿ ಎಂದು ಬೈದನಂತೆ, ಹೀಗೆ ಮಾರ್ಗ ಮಧ್ಯದಲ್ಲೇ ಇಳಿದು ಗೊರೂರು ತಲುಪಿ ಉತ್ಸವದಲ್ಲೂ ಹಲವಾರು ಯಬಡ-ತಬಡ ಕೆಲಸ ಮಾಡಿ ಬೈಸಿಕೊಂಡರೂ ಇವರ ಗಾಂಪತನ ಕಂಡ ಜನ ಸಂತೋಷಪಟ್ಟರು.

ಹೀಗೆ ನಾನು ಹುಡುಕುತ್ತಾ ಹೋದರೆ ಅವರು ಅಲ್ಲಿಂದ ಜಾಗ ಖಾಲಿ ಮಾಡಿ ಬಿಟ್ಟಿರುತ್ತಿದ್ದರು. ನಾನು ಪರವೂರಿನಲ್ಲಿದ್ದಾಗ ಟಿ. ಸುನಂದಮ್ಮನವರು ತಮ್ಮ ಮಹಿಳಾ ಮಂಡಳಿಗೆ ಆಹ್ವಾನಿಸಿದಾಗಲೂ ಗಾಂಪರು ಬಂದು ತಮ್ಮ ಗಾಂಪತನವನ್ನು ಪ್ರದರ್ಶಿಸಿದರಂತೆ. ತಂಪು ಪಾನೀಯಕ್ಕೆ ಸ್ಟ್ರಾ ಹಾಕಿಕೊಟ್ಟರೆ ಕುಡಿಯೋಕೆ ಕಡ್ಡಿ ಏಕೆ ಹಾಕಿದ್ದಾರೆಂದು ಶಿಷ್ಯರು ಕೇಳಿದ್ದು; ಟೇಬಲ್ ಟೆನಿಸ್ ಆಡುತ್ತಿದ್ದ ಮಹಿಳೆಯರು ಸ್ಕೋರ್ ಲೆಕ್ಕಹಾಕುವಾಗ ಲವ್ ಆಲ್, ಲವ್ ಟೆನ್ ಎಂದಾಗ, ಈ ಹೆಂಗೆಳೆಯರಿಗೆ ಲವ್‌ಜ್ವರ, ನಮ್ಮ ಮಠಕ್ಕೆ ಸೇರಿಸಿಕೊಳ್ಳೋಣವೇ ಎಂದು ಗುರುಗಳನ್ನು ಮಡ್ಡಿ ಕೇಳಿದ್ದು, ಸಂಘದಲ್ಲಿ ಮಹಿಳೆಯರೇ ತಯಾರಿಸಿದ ಕರಕುಶಲ ವಸ್ತುಗಳನ್ನು ಪ್ರದರ್ಶಿಸಿ, ಬೇಕಾದರೆ ತೆಗೆದುಕೊಳ್ಳಿ ಜ್ಞಾಪಕಾರ್ಥಕ್ಕೆ ಎಂದಾಗ, ಟೇಬಲ್ ಲ್ಯಾಂಪ್, ಸ್ವೆಟರ್, ವಾಲ್ ಪೇಯಿಂಟಿಂಗ್ಸ್, ಕ್ಯಾಲೆಂಡರ್ ಮುಂತಾದವುಗಳನ್ನು ಬಿಟ್ಟು ಹೆಂಗಸರ ಲಂಗದ ಲೇಸ್, ಕುಂಕುಮದ ಭರಣಿ, ಹೇರ್‌ಪಿನ್, ಬ್ರಾ ಮುಂತಾದವುಗಳನ್ನು ಶಿಷ್ಯರು ತೆಗೆದುಕೊಂಡರೆ ಗಾಂಪರೊಡೆಯರು ವ್ಯಾನಿಟಿ ಬ್ಯಾಗನ್ನು ಭುಜಕ್ಕೆ ತಗುಲಿಸಿ ನಡೆದಾಗ ಮಹಿಳಾ ಮಂಡಳಿ ಸದಸ್ಯರು ಬಹು ಸಂತೋಷ ಪಟ್ಟರಂತೆ. ಹೀಗೆ ನಾನು ಎಲ್ಲಿ ಹುಡುಕಿದರೂ ಸಿಗದೆ ಮತ್ತೊಂದೆಡೆ ಪ್ರತ್ಯಕ್ಷರಾಗಿ ಅದೃಶ್ಯರಾಗುತ್ತಿದ್ದರು.



ಪುನಃ ನಾನು ಬೆಂಗಳೂರಿಗೆ ಬರುವ ವೇಳೆಗೆ ದಾಶರಥಿ ದೀಕ್ಷಿತ್ ಎಂಬ ನಾಟಕಕಾರರು ಅವರ ಗುಂಪನ್ನು ವಿದೇಶಕ್ಕೆ ಕಳುಹಿಸಿದ್ದರು. ದೇಶದ ಸಾಂಸ್ಕೃತಿಕ ನಿಯೋಜನಾ ಮಂಡಳಿ ಸಬ್ ಕಮಿಟಿ ಸೆಕ್ರೆಟರಿಯ ಭಾವ ಮೈದುನ ದಾಶರಥಿ ದೀಕ್ಷಿತರ ಸಂಬಂಧಿಯಂತೆ, ಈ ಸಂಬಂಧದಿಂದ ರೆಕಮಂಡೇಶನ್ ಮೇಲೆ ಇಂಗ್ಲೆಂಡ್‌ಗೂ ತೆರಳಿ ಅಲ್ಲೆ ಪರಾಕು ಸಮೇತ ಇಳಿದಾಗ ಇಂಗ್ಲೆಂಡಿಗರಿಗೆ ಅಚ್ಚರಿ. ಪರಾಕು ಹೇಗಿತ್ತೆಂದರೆ ''ಅಖಿಲಾಂಡ ಕೋಟಿ ಬ್ರಹ್ಮಾಂಡ

ನಾಯಕ / ಭಕ್ತಗಂಡಭೇರುಂಡ ಧ್ವಜವಂದಿತ / ಉಂಡಾಡಿ ಶಿಷ್ಯರಿಂದ ಪೂಜಿತ / ಪರಿವ್ರಾಜಕಾಚಾರ್ಯ / ಗಾಂಪ ವೃಂದ ಪೋಷಿತ / ಮಹಾಗಾಂಪಮಠಾಧೀಶ / ಗಾಂಪರೊಡೆಯರಿಗೆ ಪರಾಕ್, ಬಹುಪರಾಕ್'' ಈ ಪರಾಕ್ ಕೇಳಿ ಇಂಗ್ಲೆಂಡಿಗರು ಬೆಚ್ಚಿದ್ದರಂತೆ. ಇಂಗ್ಲೆಂಡ್ ಚರಿತ್ರೆಯಲ್ಲೆ ಇದೆಲ್ಲ ನಡೆದಿರಲಿಲ್ಲವಂತೆ.

ಇಂಗ್ಲೆಂಡ್ ಎಲ್ಲಾ ಸುತ್ತಿ, ಶೇಕ್ಸ್‌ಪಿಯರನ ಮ್ಯೂಸಿಯಂನ ವಿಸಿಟರ್ಸ್ ಪುಸ್ತಕದಲ್ಲಿ

''ಕರುನಾಡ ದೇಶದ ಹಾಲಿಬೆಂಗಳೂರು ವಾಸಿಗಾಂಪರ

ಮಠಾಧೀಶರ ಎಡಗೈ ಹೆಬ್ಬೆರಳಿನ ಗುರುತಿಗೆ ಮಂಕನ ರುಜು''

ಎಂದು ಬರೆದಿದ್ದು ಓದಿ, ಅಲ್ಲ ಅಲ್ಲ ನೋಡಿ ಲಂಡನ್ನಿಗರೆಲ್ಲ ಖುಷಿಪಟ್ಟರಂತೆ. ಹೀಗೆ ಕನ್ನಡದ ಬಾವುಟವನ್ನು ಇಂಗ್ಲೆಂಡ್‌ನಲ್ಲೂ ಹಾರಿಸಿದರಂತೆ.

ನನಗೆ ಅವರು ಹಿಂದಿರುಗಿದ್ದು ತಿಳಿದಾಗ ಬಾಂಬೆಗೆ ಆಫೀಸಿನ ಕೆಲಸದ ಮೇಲೆ ತೆರಳಿದ್ದೆ. ಅಲ್ಲೂ ಎಡೆಬಿಡದೆ ಮಳೆ ಸುರಿದು ಕಛೇರಿಗೆ ನೀರುನುಗ್ಗಿ ಸ್ಥಳಾಂತರಗೊಳಿಸಿ, ವ್ಯವಸ್ಥೆ ಮಾಡಿ ಹಿಂದಿರುಗುವಲ್ಲಿ ವಿಳಂಬವಾಯಿತು. ಇಲ್ಲಿ ಬೆಂಗಳೂರಿನ ಕೆಂಪಾಂಬುಧಿ ಕೆರೆಯ ದಡದಲ್ಲೇ ಗಾಂಪರು ಮಠ ಕಟ್ಟಿಕೊಂಡಿದ್ದರಂತೆ. ಇದನ್ನು ದಾಶರಥಿ ದೀಕ್ಷಿತರೇ ಒಮ್ಮೆ ದೃಢಪಡಿಸಿದರು. ಗಾಂಪರೊಡೆಯರು ಇಂಗ್ಲೆಂಡ್‌ನಿಂದ ಬರುವಷ್ಟರಲ್ಲಿ ಗಾಂಪರ ಮಠಕ್ಕೆ ಉಂಡಾಡಿಗಳು ಸೇರಿಕೊಂಡು ಮಠವನ್ನು ಬಡ ಸ್ಥಿತಿಗೆ ತಂದು ದಿನದ ಕೂಳಿಗೂ ಗತಿಯಿಲ್ಲದಂತೆ ಮಾಡಿದ್ದರಂತೆ. ಆಗ ಪಾರುಪತ್ತೇಗಾರ್ರ ಹಳೆಯಕೋಟನ್ನು 'ಅಮೆರಿಕದ ಆ್ಯಂಟಿಕ್ ಕ್ಲಾತ್' ಕಂಪನಿಗೆ ಮಾರಾಟಮಾಡಿ ಬಂದ ಡಾಲರ್ ಹಣದಲ್ಲಿ ಮಠಕ್ಕೆ ಕೊಂಚ ಶಕ್ತಿ ಬಂತಂತೆ. ಈ ಐಡಿಯಾ ಕೊಟ್ಟವರು ದಾಶರಥಿ ದೀಕ್ಷಿತರ ಮಗ ಲೋಕನಾಥ ದೀಕ್ಷಿತ್. ಅಪ್ಪನಂತೆ ಇವರಿಗೂ ಗಾಂಪರ ಮಠವೆಂದರೆ ಒಂದು ರೀತಿ ಪ್ರೀತಿ.

ನಾನು ಬೆಂಗಳೂರಿಗೆ ಹಿಂದಿರುಗುವ ಹೊತ್ತಿಗೆ ಬೆಂಗಳೂರಿನಲ್ಲಿ ಸುರಿದ ಕುಂಭದ್ರೋಣ ಮಳೆಯಿಂದ ರಾಜಾ ಕಾಲುವೆಗಳು ಉಕ್ಕಿ ಹರಿದು ಕೆರೆಯ ದಡದಲ್ಲಿದ್ದ ಮಠಕೊಚ್ಚಿ ಹೋಯಿತಂತೆ. ಮಠ ಕಟ್ಟುವ ಮೊದಲೇ ಕೆಲ ಹಿರೀಕರು ''ಮಠಕಟ್ಟಬೇಡಿ, ರಾಜಾಕಾಲುವೆಯ ಜಾಗ ಬಿಬಿಎಂಪಿ ನವರು ಒಡೆಯುತ್ತಾರೆ ಎಂದು ಎಚ್ಚರಿಸಿದರಂತೆ. ಅದಕ್ಕೆ ಗುರುಗಳು ''ಗಾಂಪರಲ್ಲದೆ ಮತ್ಯಾರು ರಾಜ ಕಾಲುವೆಯ ಮೇಲೆ ಮಠ ಕಟ್ತಾರೆ, ಗಾಂಪದೇವನೇನು ಸುಮ್ನೆ ಕೂತಿರ್ತಾನಾ? ನಮ್ಮನ್ನು ಕಾಪಾಡೇ ಕಾಪಾಡ್ತಾನೆ'' ಎಂದು ಹಗುರಾಗಿ ಮಾತನಾಡಿದರಂತೆ. ಮಠ ಕೊಚ್ಚಿಕೊಂಡು ಹೋದ ನಂತರ ಗುರುಗಳು ಗಾಂಪರು ಎಲ್ಲಿ ಹೋದರೆಂಬುದು ಯಾರಿಗೂ ತಿಳಿಯದಾಗಿತ್ತು. ಎಲ್ಲಿ ಹುಡುಕುವುದೆಂದು ಯೋಚಿಸತೊಡಗಿದೆ.

ಹೀಗೆ ಯೋಚಿಸುತ್ತಿದ್ದಾಗ ಕ್ರೈಮ್‌ಬ್ರ್ಯಾಂಚ್‌ನಲ್ಲಿದ ಇನ್‌ಸ್ಪೆಕ್ಟರ್ ಚಂಗಪ್ಪ ಬಂದು ನೋಡಲು ಮೆಸೇಜ್ ಮಾಡಿದ್ದರು. ಹೋಗಿ ನೋಡಿದಾಗ 'ಏನಯ್ಯಾ ಬಾಳದಿನವಾಯ್ತು ಕಾಣಲೇ ಇಲ್ಲ' ಎಂದರು.

''ಹೀಗೆ... ಆಫೀಸ್ ಕೆಲಸ, ಜೊತೆಗೆ ಗಾಂಪರನ್ನು ಹುಡುಕಿಕೊಂಡು ಹೋಗಿದ್ದೆ'' ಎಂದೆ.



ಹ್ಹ..... ಹ್ಹ... ಹ್ಹಾ... ಎಂದು ಜೋರಾಗಿ ನಕ್ಕ ಚಂಗಪ್ಪ ಕಂಪ್ಯೂಟರ್ ಆನ್ ಮಾಡಿ 'ಗಾಂಪರನ್ನು ತೋರಿಸ್ತೀನಿ ನೋಡು' ಎಂದು ಒಂದೊಂದಾಗಿ ವಿವರ ತೋರಿಸತೊಡಗಿದರು.

ಕೆಲವು ಖದೀಮರಿದ್ದಾರೆ. ''ಬ್ಯಾಂಕ್ ಮ್ಯಾನೇಜರ್ ಮಾತನಾಡುತ್ತಿರುವುದು. ನಿಮಗೆ ಹೊಸ ಕ್ರೆಡಿಟ್ ಕಾರ್ಡ್ ಕೊಡಬೇಕಿದೆ. ಸೀಕ್ರೆಟ್ ಕೋಡ್, ಕಾರ್ಡ್ ಸಂಖ್ಯೆ, ಅಕೌಂಟ್ ನಂಬರ್ ಹೇಳಿ ಎಂದಾಗ, ನೀವೇನಾದರು ಬ್ಯಾಂಕ್ ಮ್ಯಾನೇಜರೇ ಮಾತನಾಡುತ್ತಿರಬೇಕೆಂದು ವಿವರ ತಿಳಿಸಿದರೆ ನಿಮ್ಮ ಖಾತೆಗೆ ಕನ್ನ ಹಾಕಿ ಇದ್ದ ಹಣವನ್ನು ತಮ್ಮ ಖಾತೆಗೆ ವರ್ಗಾವಣೆ ಮಾಡಿಕೊಂಡಿರುತ್ತಾರೆ.

ಮತ್ತೊಬ್ಬರು ಕಂಪ್ಲೇಂಟ್ ಮಾಡಲು ಬಂದಿದ್ದರು. ಸ್ಕೂಟರ್ ಡಿಕ್ಕಿಯಲ್ಲಿ ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್‌ಗಳನ್ನು ಇಟ್ಟಿರುವುದರ ಜೊತೆಗೆ ಸೀಕ್ರೆಟ್ ಕೋಡ್ ವರ್ಡ್‌ಗೆ ಪರದಾಡುವುದು ಬೇಡವೆಂದು ಅದನ್ನೂ ಒಂದು ಚೀಟಿಯಲ್ಲಿ ಬರೆದು ಕ್ರೆಡಿಟ್ ಕಾರ್ಡ್‌ಗಳ ಜೊತೆಗೆ ಇಟ್ಟಿದ್ದರಂತೆ. ಇದನ್ನು ನೋಡಿದ ಖದೀಮನೊಬ್ಬ ಕಾರ್ಡ್‌ಗಳನ್ನು ಎಗರಿಸಿ ಅರ್ಧಗಂಟೆಯೊಳಗೆ ವಿವಿಧ ಬ್ಯಾಂಕ್‌ಗಳಿಂದ ಇವರ ಖಾತೆಯಲ್ಲಿದ್ದ ಎಂಬತ್ತು ಸಾವಿರಕ್ಕೂ ಹೆಚ್ಚು ಹಣವನ್ನು ಡ್ರಾಮಾಡಿಬಿಟ್ಟಿದ್ದನಂತೆ. ಇವರಿಗೆ ಗೊತ್ತಾಗಿ ಬ್ಯಾಂಕಿಗೆ ವಿಷಯ ತಿಳಿಸುವಲ್ಲಿ ಖಾತೆಯಲ್ಲಿದ್ದ ಹಣ ಖಾಲಿಯಾಗಿತ್ತಂತೆ.

''ಇವರೆಂತಹ ಗಾಂಪರು ಎಂಬುದು ತಿಳಿಯಿತಲ್ಲ''. ಎಂದರು ಚಂಗಪ್ಪ.

ಈ ಗುರು ಎಂತಹವನು ನೋಡು. ಮಹಾರಾಷ್ಟ್ರದವನು ಐಷಾರಾಮಿ ಜೀವನ ಮನೆಯಲ್ಲಿ ಗಂಡ ಹೆಂಡತಿ, ಮಕ್ಕಳಿಬ್ಬರಿಗೂ ವಿದೇಶಿ ಕಾರುಗಳು. ಜೊತೆಗೆ ವಿದೇಶಿ ಬೈಕ್ ಹುಚ್ಚು. ವಿದೇಶಿ ಬೈಕ್ ಮಾರುವವರನ್ನು ಪತ್ತೆಹಚ್ಚಿ ಅಡ್ವಾನ್ಸ್ ನೀಡಿ ಬೈಕ್‌ಕೊಂಡು ಹೇಗೋ ದಾಖಲೆ ಪತ್ರಗಳನ್ನು ಸಂಪಾದಿಸಿ ನಂತರ ಮೊಬೈಲ್ ಸಂಖ್ಯೆ ಬದಲಾಯಿಸಿ ಬಿಡುತ್ತಿದ್ದ. ಕೊಟ್ಟವರಿಗೆ ಹುಡುಕಲು ಕಷ್ಟವೆನಿಸಿದಾಗ ಪೊಲೀಸರ ಬಳಿಗೆ ಬರುತ್ತಿದ್ದರು. ಇವನ ಮತ್ತೊಂದು ಕೆಲಸವೆಂದರೆ ಸಣ್ಣಪುಟ್ಟ ಹೋಟೇಲ್ ಮಾಲೀಕರ ಹತ್ತಿರ ಹೋಗಿ ಪ್ರತಿಷ್ಠಿತ ಬ್ಯಾಂಕ್‌ಗಳ ಛೇರ್ಮನ್, ಸಿ.ಇ.ಓ. ನನಗೆ ಚೆನ್ನಾಗಿಗೊತ್ತು. ಕಡಿಮೆ ಬಡ್ಡಿಗೆ ಸಾಲ ಕೊಡಿಸುತ್ತೇನೆ. ಕೆಲವು ಸಾರಿ ಛೇರ್ಮನ್, ಸಿ.ಇ.ಓ. ಗಳಿಗೆ ತಮ್ಮ ವಿವೇಚನಾ ಖೋಟಾದಡಿಯಲ್ಲಿ ಇಂಥ ಸಾಲ ಕೊಡಬಹುದು. ನೀವೇಕೆ ಉಪಯೋಗಿಸಿಕೊಳ್ಳಬಾರದು? ಆದರೆ ನೀವು ನನಗೆ ಸಾಲದ ಹಣದ ಎರಡು ತಿಂಗಳ ಬಡ್ಡಿ ಹಣವನ್ನು ಮುಂಗಡವಾಗಿ ಕೊಡಬೇಕು ಎಂದು ನಂಬಿಸಿ ಬಡ್ಡಿ ಹಣ ಪಡೆದು ಪರಾರಿಯಾಗುತ್ತಿದ್ದ. ಹಣಕೊಟ್ಟು ಕಳೆಕೊಂಡವರು ವಿಳಾಸ ಪತ್ತೆ ಹಚ್ಚಲಾಗದೆ ಪೊಲೀಸರ ಮೊರೆ ಹೋಗುತ್ತಿದ್ದರು.

''ಇಂಥವರನ್ನೂ ನಂಬಿದ ಎಂತಹ ಗಾಂಪರಿದ್ದಾರೆ ಎನ್ನುವುದು ಗೊತ್ತಾಯಿತಲ್ಲ''.



ಇದು ನೋಡು ಇನ್ನೊಂದು ಇಂಟರೆಸ್ಟಿಂಗ್ ಕೇಸ್. ಬಲಮುರಿ ಶಂಖ ಮನೆಯಲ್ಲಿದ್ದರೆ ಲಕ್ಷ್ಮಿ ತಾಂಡವಾಡುತ್ತಾಳೆ ಅನ್ನೋದು ದೈವ ಭಕ್ತರ ನಂಬಿಕೆ. ಇದನ್ನುಪಯೋಗಿಸಿಕೊಂಡು ಶಂಖದ ಅಂಚುಗಳಿಗೆ ಚಿನ್ನದ ಗಿಲೀಟಿನ ರೇಖೆ ಅಳವಡಿಸಿ ''ಇದೊಂದು ವಿಶಿಷ್ಟ ರೀತಿಯ ಶಂಖು. ಇದು ಮನೆಯಲ್ಲಿದ್ದರೆ ನಿಮ್ಮ ಏಳು ತಲೆಮಾರು ಕುಳಿತು ತಿಂದರೂ ಕರಗದ ಆಸ್ತಿ ನಿಮ್ಮ ಕೈಗೆ ಸಿಗುತ್ತದೆ ಬೆಲೆ ಕಡಿಮೆ ಕೇವಲ ಹತ್ತು ಲಕ್ಷರೂ. ಹತ್ತು ಲಕ್ಷ ಎಲ್ಲಿಂದ ತರೋದು ಅಂದರೆ, ಈಗ ಹತ್ತು ಲಕ್ಷ ಹಾಕಿ ನಿಮಗೆ ಒಂದೇ ವಾರಕ್ಕೆ ಕೋಟಿ ರೂಪಾಯಿ ವಹಿವಾಟು ಆಗುತ್ತೆ'' ಎಂದು

ವಾಣಿಜ್ಯೋದ್ಯಮಿಗಳನ್ನು ನಂಬಿಸುತ್ತಿದ್ದ. ಹೋಗಲಿ ಇದು ಬೇಡಾಂದ್ರೆ ನನ್ನ ಬಳಿ ಒಂದು ಚಿನ್ನದ ಹಂಸ ಪಕ್ಷಿ ಇದೆ. ಅದರ ವಿಶಿಷ್ಟತೆ ಏನೆಂದರೆ ನೀರಿನಲ್ಲಿ ಹಾಕಿದರೂ ಎಂದೂ ಮುಳುಗುವುದಿಲ್ಲ. ಅದೇ ರೀತಿ ನಿಮ್ಮ ವ್ಯವಹಾರದಲ್ಲಿ ಎಂದೂ ನಷ್ಟವಾಗುವುದೇ ಇಲ್ಲ. ಬೇಕಾದ್ರೆ ಪರೀಕ್ಷೆಮಾಡಿ ಕೊಂಡುಕೊಳ್ಳಿ. ಇದರ ಬೆಲೆ ಹದಿನೈದು ಲಕ್ಷ ಎಂದು ಹೇಳುವ. ನೀವು ಸ್ವಲ್ಪ ಯೋಚಿಸಿ ಅಲ್ಲಪ್ಪ, ನಿನ್ನ ಹತ್ತಿರವೇ ಇಟ್ಕೊಂಡು ಲಕ್ಷಗಟ್ಟಲೆ ಸಂಪಾದಿಸಬಹುದಲ್ವಾ ಎಂದರೆ, ಸಾರ್ ಇದು ಇಟ್ಟುಕೊಳ್ಳಲು ಸ್ವಂತ ಮನೆ ಇರಬೇಕು. ಸ್ವಗೃಹದ ಲಕ್ಷಣಗಳೇ ಬೇರೆ! ನಾನಿರುವುದು ಬಾಡಿಗೆ ಮನೆ. ಅದಕ್ಕೆ ಮಾರುತ್ತಿರುವುದು ಎನ್ನುವ. ಕೊಂಡವನೊಬ್ಬ ಇವನ ಮಾತನ್ನು ನಂಬಿ ಹಳ್ಳಕ್ಕೆ ಬಿದ್ದು ಮೋಸ ಹೋಗಿದ್ದು ತಿಳಿದುನಂತರ ಪೊಲೀಸರಲ್ಲಿಗೆ ಬಂದಿದ್ದ.

''ನೋಡಿದೆಯಾ ಇವರನ್ನು ನಂಬುವ ಎಂಥೆಂಥಾ ಗಾಂಪರಿದ್ದಾರೆ ಎನ್ನುವುದು ತಿಳಿಯಿತಾ?''

ಈ ಕೇಸ್ ನೋಡು ಹೇಗಿದೆ. ಗಂಡ ಹೆಂಡರಿಬ್ಬರೂ ಆ ಬಡಾವಣೆಗೆ ಬಂದು ಐದು ವರ್ಷವಾಗಿತ್ತಂತೆ. ಬಡಾವಣೆಯವರ ಸ್ನೇಹ, ನಂಬಿಕೆಯನ್ನು ಬಹುಬೇಗ ಸಂಪಾದಿಸಿದರು. ಪ್ರಾರಂಭಿಕ ಹಂತದಲ್ಲಿ ಗಿಫ್ಟ್ ಮುಂತಾದವುಗಳಿಗೆ ಕೆಲ ಲಕ್ಷ ರೂ.ಗಳನ್ನು ಖರ್ಚುಮಾಡಿ ಸದಸ್ಯರಾದವರಿಗೆ ಗಿಫ್ಟ್ ನೀಡುತ್ತಾ ಹೋದಂತೆ ಮತ್ತಷ್ಟು ಜನ ಸದಸ್ಯರಾದರು. ಚೀಟಿ ಹಾಕಿ ಕೊನೆ ತನಕ ಬಿಡ್ ಮಾಡದಿದ್ದರೆ ಡಬ್ಬಲ್ ಹಣ ಕೊಡುತ್ತೇವೆಂದು ನಂಬಿಸಿದರು. ಸಾವಿರಾರು ಜನ ಚೀಟಿ ಹಾಕಿದರು. ಸುಮಾರು ಇಪ್ಪತ್ತೈದು ಕೋಟಿ ಸಂಗ್ರಹಿಸಿ ರಾತ್ರೋರಾತ್ರಿ ಮನೆ ಖಾಲಿ ಮಾಡಿ ಓಡಿಹೋಗಿದ್ದಾರೆ. ಮೊದಲ ಬ್ಯಾಚ್‌ಗೆ ಹಣ ಕೊಡಬೇಕಾದ ದಿನ ಮನೆಗೆ ಬೀಗ ಬಿದ್ದಿರುವುದು ನೋಡಿ ಎಚ್ಚೆತ್ತ ಜನ ಪೊಲೀಸರಿಗೆ ಕಂಪ್ಲೇಂಟ್‌ಕೊಟ್ಟರು. ಪೊಲೀಸರು ಬಂದು ಬೀಗ ಒಡೆದು ನೋಡಿದರೆ ವರಾಂಡದಲ್ಲಿ ರಾಘವೇಂದ್ರಸ್ವಾಮಿಗಳ ಫೋಟೋಗೆ ಚೆನ್ನಾಗಿ ಅಲಂಕರಿಸಿ ತುಪ್ಪದ ದೀಪ ಹಚ್ಚಿಟ್ಟಿದ್ದರು; ಹಾಲ್‌ನಲ್ಲಿ ಸಾಯಿಬಾಬನ ದೊಡ್ಡ ಸೈಜಿನ ಫೋಟೋಗೆ ಇದೇ ರೀತಿ ಪೂಜೆ; ಇನ್ನೂ ಮುಂದೆ ಹೋದರೆ ಯಥೇಚ್ಛ ಹೂವುಗಳಿಂದ ಪೂಜಿಸಿದ್ದ ತಿರುಪತಿ ತಿಮ್ಮಪ್ಪನ ಫೋಟೋ, ಫೋಟೋ ಮುಂದೆ ಬಿಳಿ ತಗಡಿನ ದೊಡ್ಡ ಸೈಜಿನ ಮೂರು ನಾಮ!

''ಇವರ ಬಳಿ ಚೀಟಿ ಹಾಕಿದ ಸಾವಿರಾರು ಮಂದಿ ಗಾಂಪರು ಬಾಯಿ ಬಡಿದುಕೊಳ್ಳುತ್ತಿದ್ದಾರೆ.''

ಹೀಗೆ ಮೋಸಮಾಡುವವರಲ್ಲಿ ಗಂಡಸರು ಅಥವಾ ಗಂಡ ಹೆಂಡಿರೇ ಸೇರಿ ಸ್ಕೆಚ್ ಹಾಕುತ್ತಿದ್ದರು ಎಂದೇನಲ್ಲ. ಹೆಂಗಸರೇ ಸ್ಕೆಚ್ ಹಾಕಿ ಬಹಳ ಮಂದಿ ಹೆಣ್ಣುಮಕ್ಕಳಿಗೇ ನಾಮ ಹಾಕಿದ ಘಟನೆಗಳಿಗೇನೂ ಕಡಿಮೆಯಿಲ್ಲ ಎಂದು ಹೇಳಿದ ಚಂಗಪ್ಪ ಮತ್ತೊಂದು ಕೇಸಿನ ವಿವರ ತೋರಿಸಿದರು.

ಇದು ನೋಡಿ ಲೇಡಿ ರೌಡಿ ಅನ್ನುವವಳ ವ್ಯವಹಾರ, ಹೆಂಗಸರೇ ಈ ರೀತಿಯ ವ್ಯವಹಾರಕ್ಕೆ ಇಳಿದರೆ ಅಕ್ಕಪಕ್ಕದ ಹೆಂಗೆಳೆಯರ ಹೃದಯ ಗೆಲ್ಲುವುದು ಮಹಾ ಸುಲಭ. ಸ್ವಲ್ಪ ಹೊಗಳಿದರೆ ಸಾಕು ಹೆಂಗೆಳೆಯರ ಹೃದಯ ಅರಳಿ ಹೋಗುತ್ತದೆ. ಈ ದುರ್ಬಲತೆಯನ್ನುಪಯೋಗಿಸಿಕೊಂಡು ಚೀಟಿ ಹಾಕಿದವರಿಗೆ ಬ್ಯಾಂಕ್ ಪ್ರಾರಂಭಿಸಿ ಅದರಲ್ಲೂ ಬಡವರಿಗೆ ಮೊದಲ ಪ್ರಾಶಸ್ತ್ಯದಲ್ಲಿ ಒಂದು ಲಕ್ಷ ರೂ. ಸಾಲ ಕೊಡುತ್ತೇವೆ ಎಂದು ನಂಬಿಸಿ ಚಂದ



ದಾರರಿಂದ ಹತ್ತು ಸಾವಿರ ರೂ.ನಂತೆ ಕೋಟಿಗಟ್ಟಳೆ ಸಂಗ್ರಹಿಸಿ ರಾತ್ರೋ ರಾತ್ರಿ ಮನೆ ಖಾಲಿ ಮಾಡಿದ್ದಾಳೆ.

ನೋಡು ನಿನ್ನ ಹುಡುಕಾಟದಲ್ಲಿ ಬರೇ ಐವರು ಪುರುಷ ಗಾಂಪ ಶಿಷ್ಯರಿದ್ದರಲ್ಲವಾ? ಈಗ ನೋಡು ಹಣ ಕಳೆದುಕೊಂಡ ಇಂಥ ಗಾಂಪಿಣಿಯರಿಗೆ ಲೆಕ್ಕವೇ ಇಲ್ಲ.

ಈ ರೀತಿ ಗಾಂಪತನದಲ್ಲಿ ಹಣ ಕಳೆದುಕೊಳ್ಳುತ್ತಿರುವವರಲ್ಲಿ ಅನಕ್ಷರಸ್ಥರು ಅಥವಾ ಅಲ್ಪ ಬುದ್ಧಿಯಿರುವವರಿಗೇ ಸೀಮಿತವಾಗಿಲ್ಲ. ಬಹಳ ಬುದ್ಧಿವಂತರೆನಿಸಿಕೊಂಡ ಇಂದಿನ ಬಹು ಬೇಡಿಕೆಯ ಕಂಪ್ಯೂಟರ್ ತಂತ್ರಜ್ಞರೂ ಬಹಳ ಮಂದಿ ಇದ್ದಾರೆ.

ಇದ್ದಕ್ಕಿದಂತೆ ನಿಮ್ಮ ಮೊಬೈಲ್‌ಗೊಂದು ಸಂದೇಶ ಬಂದು ಬೀಳುತ್ತದೆ. ನಿಮ್ಮ ಮೊಬೈಲ್ ಸಂಖ್ಯೆಯನ್ನು ಅದೃಷ್ಟವಂತರನ್ನಾಗಿ ಆಯ್ಕೆ ಮಾಡಲಾಗಿದೆ. ನಿಮಗೆ 3 ಕೋಟಿ ಹಣ ಲಾಟರಿಯಲ್ಲಿ ಬಂದಿದೆ. ಈ ಹಣವನ್ನು ನಿಮಗೆ ಹಸ್ತಾಂತರಿಸಲು ನೀವು ನಲವತ್ತೈದು ಸಾವಿರ ರೂ.ಗಳನ್ನು .....ಬ್ಯಾಂಕ್ ಖಾತೆಗೆ ಜಮಾ ಮಾಡಿ ಎಂದು ಸಂದೇಶ ಕಳುಹಿಸುತ್ತಾರೆ. ನಿಮಗೆ ಹಣದ ತುರ್ತಿದ್ದು ಆಸೆಯನ್ನು ಅದುಮಿಡಲಾಗದ ದುರ್ಬಲ ಮನಸ್ಸಿನವರಾದರೆ ಹಣ ಪಾವತಿಸುತ್ತೀರಾ. ನೀವು ಈ ರೀತಿ ಅವರ ಕರೆಗೆ ಓಗೊಟ್ಟಿರುವುದನ್ನು ತಿಳಿದು ಪುನಃ ಮತ್ತೇನೋ ಖರ್ಚು ತೋರಿಸಿ ಐವತ್ತು ಸಾವಿರ ಜಮಾ ಮಾಡಲು ತಿಳಿಸುತ್ತಾರೆ. ಈಗ ನಿಮಗೆ ಸಂದೇಶ ಪ್ರಾರಂಭವಾಗುತ್ತದೆ. ಜಮಾ ಮಾಡುವುದೋ ಬೇಡವೊ ಎಂದು. ಆದರೆ ಮೊದಲ ಕಂತು ನಲವತ್ತೈದು ಸಾವಿರ ಕೈಬಿಟ್ಟು ಹೋಗಿದೆ ಇದು ನಿಜವಿದ್ದರೂ ಇರಬಹುದು. ಏಕೆ ಪ್ರಯತ್ನಿಸಬಾರದು ಎಂದು ನೀವು ಐವತ್ತು ಸಾವಿರ ಜಮಾ ಮಾಡುತ್ತೀರಾ. ಎಂಟು ದಿವಸ ಕಳೆದ ನಂತರ ಮತ್ತೊಂದು ಸಂದೇಶ ಬರುತ್ತದೆ. ಪುನಃ ಇನ್ನೊಂದು ಖರ್ಚು ತೋರಿಸಿ ಮೂವತ್ತು ಸಾವಿರ ಜಮಾ ಮಾಡಲು ಹೇಳುತ್ತಾರೆ. ಈಗ ನಿಮಗೆ ಬಲವಾದ ಸಂದೇಹ ಬಂದು ಫೋನ್ ಸಂಖ್ಯೆಯನ್ನು ಪೊಲೀಸರಿಗೆ ತಿಳಿಸುತ್ತೀರಾ. ಅಷ್ಟರಲ್ಲಾಗಲೇ ಎಚ್ಚೆತ್ತ ಅವರು ಬ್ಯಾಂಕ್ ಖಾತೆಯನ್ನು ರದ್ದು ಮಾಡಿರುತ್ತಾರೆ. ಫೋನ್ ನಂಬರ್ ಚಾಲೂವಿರುವುದಿಲ್ಲ.

''ಬುದ್ಧಿವಂತರೆನಿಸಿಕೊಂಡವರ ಜೇಬಿಗೆ ಬಹು ಜಾಣತನದಿಂದ ಕನ್ನ ಕೊರೆದಿರುತ್ತಾರೆ.''

ಇತ್ತೀಚಿಗೆ ದಿನಕ್ಕೆ ಏನಿಲ್ಲವೆಂದರೂ ಹತ್ತಾರು ಪ್ರಕರಣಗಳು ದಾಖಲಾಗುತ್ತ ಇರುತ್ತವೆ. ಈಗ ಹೇಳು ಆ ಐವರು ಗಾಂಪರು ಚಿರಂಜೀವಿಗಳೆಂದು ಹುಡುಕಿಕೊಂಡು ಹೊರಟಿದ್ದೀಯಲ್ಲಿ ಇಲ್ಲಿ ದಾಖಲಾಗುತ್ತಿರುವ ಗಾಂಪರ ಗುಂಪು ಐದೇನು, ಐನೂರು, ಐದು ಸಾವಿರವನ್ನು ಮೀರಬಹುದು.

ಗಾಂಪರು ಎಲ್ಲೆಡೆ, ಎಲ್ಲ ಕಾಲದಲ್ಲೂ ಇದ್ದೇ ಇರುತ್ತಾರೆ. ಗಾಂಪತನಕ್ಕೆ ಕೊನೆ ಮೊದಲ ಅವರನ್ನಾಡಿಸುವ ಗುರುಗಳೂ ಇದ್ದೇ ಇರುತ್ತಾರೆ.



ನೀನು ಹೀಗೆ ಗಾಂಪರನ್ನು ಹುಡುಕಿಕೊಂಡು ಶ್ರಮ ಪಡುವುದಕ್ಕಿಂತ ಸೃಜನಾತ್ಮಕವಾಗಿ ಯಾವುದಾದರೊಂದು ಪುಸ್ತಕ ಬರೆಯುವುದೊಳ್ಳೆಯದು ಎಂದರು ಚಂಗಪ್ಪ. 'ಚಂಗಪ್ಪ ಹೇಳುವುದೆರಲ್ಲೂ ಅರ್ಥವಿದೆ ಎನಿಸಿತು'.

ಚಂಗಪ್ಪ ತರಿಸಿದ್ದ ಕರಿದ ಖಾರದ ಗೋಡಂಬಿಯನ್ನು ತಿಂದು, ಟೀ ಕುಡಿದು ಬೈ ಹೇಳಿ ಮನೆಕಡೆ ನಡೆದೆ. ■

TEMPLE OF KNOWLEDGE

DISTANCE EDUCATION

(Govt. & UGC Recognised Universities)

# BEECHI VIDYA KENDRA

## ADMISSION OPEN - APPLY NOW

## CENTER OF DISTANCE LEARNING

## MBA WITH 6 SPECIALIZATIONS, MA, M.COM, MCA, MSc-BT, PGDCS, BA & B.COM - AGE BASIS

Email : admin@beechi.in Web : www.becchi.in
Mob. 9035302302, 9035007003

## PLACEMENT SERVICES FOR :

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

TEMPLE OF KNOWLEDGE

Email : admin@beechi.in
Web : www.becchi.in
Mob. 9740968677

# ಜಲಜಾಕ್ಷಿ ಮನೆ ಮಾತು ಯಾರಿಗೆ ಬೇಕು?

• ಎಚ್. ಆರ್. ಹನುಮಂತರಾವ್

'ಅದೇನು ಸಾವಿತ್ರಮ್ಮ ಬಹಳ ಅಪರೂಪ ಆಗ್ಬಿಟ್ರಿ ಈ ಕಡೆ? ಊರಲ್ಲಿರ್ಲಿಲ್ಲಾಂತ ಕಾಣ್ಸುತ್ತೆ? ಮಗಳ ಹೆರಿಗೆಗೇನಾದ್ರೂ...'

'ಹಾಗೇನಿಲ್ಲ ರಮಾಮಣಿ, ಮೂರು ತಿಂಗ್ಳ ಹಿಂದೇ ಅದೇ ನಮ್ಮವರರ್ದೇನೇ ಸೋದರ ಮಾವ ಸುಬ್ರಾಯಪ್ಪ ತೀರ್ಕೊಂಡು ಬಿಟ್ರು, ಅರಸೀಕೆರೆಗೆ ಹೋಗಿದ್ದೆ ಅಲ್ಲಿ ಅವ್ರಿಗೆ ಸಹಾಯ ಯಾರದೂ ಇಲ್ಲಾಂತ ಅಂತ. ಮನೇಲಿ ಎಲ್ಲ ಜವಾಬ್ದಾರಿ ಮಕ್ಕಳ ಮೇಲೆ ಹಾಕಿದ್ದೆ, ಬೇಕಲ್ಲ ಅಂಥಾ ವೇಳೆ ಯಾರ್ಗಾದ್ರೂ? ಮತ್ತೆ ಬರ್ತಿದ್ದಾಗೆ ಪಕ್ಕದ್ಮನೆ ಲೀಲಗೆ ಅದೇನೋ ವಿಚಿತ್ರ ಕಾಯಿಲೆ ಆಗಿ ಅವರ್ನ ಯಾವ್ದಾವ್ದೋ ಅ ಹೈಟೆಕ್ಕು, ಬಿಟೆಕ್ಕು ಅಂತ ಎಲ್ಲ ಕಡೆ ಅವ್ರ ಮಗಳ ಜತೆ ಓಡಾಡ್ಕೊಂಡಿದ್ದೆ, ಬೇಕಲ್ಲಾ ರಮಾಮಣೀ, ನೆರೆಹೊರೆ ಅಂದಮೇಲೆ ಅಷ್ಟಾದ್ರೂ ಮಾಡ್ದಿದ್ರೆ ನಾವೆಂತವ್ರು?

ಈಗ ಅಂಥ ಖಾಯಿಲೆ ಏನೂ ಇಲ್ಲ, ಮನೇಲಿ ಬೆಡ್‌ರೆಸ್ಟನಲ್ಲಿರ್ಲಿ ಯಾರ ಹತ್ರನೂ ಎರಡು ತಿಂಗ್ಳು ಮಾತಾಡ್ಬಾರ್ದು ಅಂತೇಳೀ ಸಾಕಷ್ಟು ಹಣ ಕಿತ್ತಿದ್ರು, ಸದ್ಯ ಅಂಥ ಆಸ್ಪತ್ರೆಗೆ ಹೋಗೀ ಬದುಕಿ ಬಂದ್ರಲ್ಲಾ ಅದೇ ಅವಳ ಅದೃಷ್ಟ ಏನ್ಹೇಳ್ತೀ ರಮಾ? ಅವ್ರುಗೋಳು ಹಣಾನೂ ಪ್ರಾಣಾನೂ ತೆಗೆಯೋವರು ಅಂಥಾ ನನ್ನ ತಮ್ಮ ಹೇಳ್ತಾನೇ ಇರ್ತಾನೆ.'

'ಚೆನ್ನಾಗಿ ಹೇಳಿದ್ರಿ, ನಮ್ಮ ಪೈಕೀನೇ ಒಬ್ರು ಅಲ್ಲೇ ತೀರ್ಕೊಂಡಿದ್ದನ್ನ ಕೇಳಿದ್ದೆ, ದೇಹನ ಆಚೆ ಕಳ್ಸಬೇಕಾದ್ರೆ ಇವ್ರ ಇದ್ದ ಆಸ್ತಿನಾ ಬಹಳಾನೇ ಕರೆಗಿಸಿಕೊಂಡು ಬಂದ್ರು. ಒಂದೊಂದ್ಸಲ ಅನ್ಸತ್ತೆ, ಆಸ್ಪತ್ರೇಲಿ ನರಳೋದ ಒಂದೇ ಸತ್ತು ಅವ್ರ ಋಣ ತೀರ್ಸೋದು ಒಂದೇ, ಅಯ್ಯೋ ಪಾಪ ಅನ್ಸತ್ತೆ. ಹೋಗ್ಲಿ ಬಿಡಿ, ಅದಿರ್ಲಿ ಸಾವಿತ್ರಮ್ನೋರೆ, ಅದೇನ ಮಾತಾಡ್‌ಬಾರ್ದೂ ಅನ್ನೋದ?'

'ಓ, ಅದಾ, ಅದ್ಯಾಕೋ ಏನೋ ಅವ್ಳಿಗೇ ಅದೇ ಖಾಯಿಲೆ ಅಂತೆ, ಗಂಡನ್ನ ನೋಡಿದ್ರೆ ಬಾಯಿಗೆಬಂದಂಗೇ ಬಯ್ಯೋದಂತ ಎಲ್ಲರೆದಿರ್ಗೇನೇ, ಮಕ್ಕಳೆದ್ರಿರ್ಗೇನವೇ'

'ಅಯ್ಯೋ, ನಮ್ಗೆ ಗೊತ್ತಿರೋ ಹಾಗೇ ಆತ ತುಂಬ ಮೃದು ಸಾವಿತ್ರಮ್ಮಾ, ಎದುರ್ಮನೆ ಚಾಮುಂಡಮ್ಮನೂ ಹೇಳ್ತಾನೇ ಇರ್ತಾಳೆ.

ಹೋಗ್ಲಿ ಬಿಡು ರಮಾ, ನಮಗ್ಯಾಕೆ ಕಂಡವ್ರ ಸಮಾಚಾರ? ನನ್ನ ಕೈಲಾದ ಸೇವೆ ಮಾಡ್ಬಂದೀನಿ. ನನ್ಗೆ ಗೊತ್ತಿರೋ ಹಾಗೇ ಆ ಹಿಂದಿನ ಬೀದೀಲಿರೋ 'ಜಲಜಾಕ್ಷಿ ಬಗ್ಗೆ ಏನೇನೋ ಕೇಳ್ತಿದೀನಿ, ಅದೇನ್ನಿಜ್ವೋ ಸುಳ್ಳೋ ಆ ದೇವರಿಗೇ ಗೊತ್ತು.'



'ಹೋಗ್ಲಿ ಬಿಡಿ ನಮಗ್ಯಾಕಿದ್ದೀತು ಇನ್ನೊಬ್ರ ರಾಮಾಯಣ, ನಮ್ಮನ್ಮದ್ದೆ ಸಾಕಾಗಿರತ್ತೆ ಅಲ್ವಾ ಸಾವಿತ್ರಮ್ಮನೋರೆ?'

'ಅಲ್ವೆ ಮತ್ತೆ, ಮತ್ತೊಬ್ರ ಉಸಾಬರಿ ನಮಗ್ಯಾಕೆ? ನಮ್ದೇ ನಮ್ಗೆ ಸಾಕಷ್ಟು ತಲೆನೋವು ಇರತ್ತೆ. ಚೆನ್ನಾಗ್ಹೇಳ್ದೆ ಕಣೆ ರಮಾ, ಆದ್ರೆ ಒಂದೊಂದ್ಸಲ, ಯಾವ್ದೆ ವಿಷಯ ಅರ್ಧಂಬರ್ಧ ತಿಳ್ಕೊಳ್ಳೋದು ಸರಿ ಅಲ್ಲಮ್ಮಾ, ನಮ್ಗೇ ಒಂದೊಂದ್ಸಲ ಅಪಾಯ. ಏನೋ ವಟವಟಾಂತೀನಿ

ಅಂತ ಅನ್ಕೋಬ್ಯಾಡ.'

'ಛೇ, ಎಲ್ಲಾದ್ರೂ ಉಂಟೆ, ಆ ಜಲಜಾಕ್ಷಿ ಮನೆಬಿಟ್ಟುಹೋಗಿದಾಳಂತೆ ಗಂಡನ ಜೊತೆ ಜಗಳಾಡ್ಕೊಂಡು, ಮೂರು ತಿಂಗಳಾಯ್ತಂತೆ, ನಿಜಾನ ಸಾವಿತ್ರಮ್ಮ? ನಿಮ್ಮನೆ ಇಂದ ನಾಲ್ಕನೆದೋ ಐದ್ನೇದೋ ನಿಮ್ಮ ಹಿಂದಿನ ಬೀದೀಲಿದಾಳಲ್ಲ?'

'ಹಂಗಾ, ನಾನೂ ಊರ್ನಲ್ಲಿರ್ಲಿಲ್ಲ, ಲೀಲಮ್ಮನ ಆಸ್ಪತ್ರೆ ತಾಪತ್ರಯದಲ್ಲಿದ್ದೆ. ನಂಗೊತ್ತಿರೋ ಹಾಗೆ ಏನೇನೋ ಹೇಳ್ತಾರಪ್ಪ, ಅದನ್ನೆಲ್ಲಾ ಹೇಳಿ ನಾವೇಕೆ ಬಾಯ್ಕೆಡಸ್ಕೋಬೇಕು. ಬಡವ ನೀ ಹಾ0ಗಿರು ಅಂತಿದ್ರೆ ಸರಿ. ಅವಳ ಗಂಡಸರೀ ಇತ್ತಿಲ್ವಂತೆ, ಮನೆಗೆ ಏನೂ ಮಾಡ್ತಿದ್ದಿಲ್ವಂತೆ, ಅಲ್ದೆ ಮಕ್ಕಳ್ನ ಹೊಡೀತಿದ್ದ್ರಂತೆ, ಅಂತಾ ನಮ್ಮಾಚೆಮನೆ ಕೆಲ್ಸದವ್ಳು ರಂಗೀಗೆ ನಮ್ಮೀಚೆ ಮನೇಲಿ ಕೆಲ್ಸ ಮಾಡೋ ಶಾಂತಿ ಹೇಳಿದ್ದಂಳಂತಪ್ಪ.'

'ಅಯ್ಯೋ ಬಿಡಿ, ಈ ಕೆಲ್ಸದವ್ರ ಮಾತೆಲ್ಲ ಕೇಳ್ಬಾರ್ದು, ಕೆಲವ್ರು ಇಂಥ ಕೆಲ್ಸದವ್ರು ಇರ್ತಾರೆ, ಹುಳಿ ಹಿಂಡೋ ಕೆಲ್ಸ.ಅವರಿವ್ರಿಗೆ ಜಗಳ ತಂದಿಡೋದು. ಸಾವಿತ್ರಮ್ಮನೋರೆ, ಮಾತಿಗೆ ಹೇಳ್ತೀನಿ, ಅವಳತ್ತೆ ಇವ್ಳನ ಕಂಡಂಗೆಲ್ಲ ನಡುಬೀದೀಲೆ ಬಯ್ತಿದ್ದಳಂತೆ ಬೇಕಾಬಿಟ್ಟಿ. ಅದೂ ಅಲ್ದೆ ಆಕೆ ಬಾಯಿ ಬೊಂಬಯಿ ಅಂತ ಎಲ್ಲ ಆಡ್ಕೊಳ್ಳೋದ್ನ ನನ್ಕಿವೀಲೇ ಕೇಳಿದೀನಿ.'

'ಹೌದೇನೆ ರಮಾ? ಆದ್ರೆ ಈಗಿನ ದಿನಗಳಲ್ಲಿ ಅತ್ತೆ, ಮಾವ ಅಂದ್ರೆ ರಾಹು, ಕೇತು ಅಂತನ್ನಿಸ್ಕೊಳ್ಳೋದು, ಯಾವ್ಕಾಲ್ದಾಗಿದೀ ಈಗೀಗ ಅತ್ತೇಗಳೇ ಸೊಸೇ ಮಗನ್ಮುಂದೆ ಕತ್ತೇಗಿಂತ ಕಡೇ ಅಂತ ಜೀರೋ ಟೀವೀನ "ಮಲ್ಲೀ ನೀ ಬಿಲ್ಲೀ, ಸಿಲ್ಲೀ ಸಿಲ್ಲೀ" ಸೀರಿಯಲ್ನಲ್ಲಿ ಆತ್ತೇ ಪಾರ್ಟ್ ಮಾಡೋ ಸವಿತ ಹೇಳೋದ ಕೇಳಿಲ್ವ? ಆ ಸೀರಿಯಲ್ನ ಟೈಟ್ಲ್ ಸಾಂಗ್, ಅದೇನ್ ವಿಚಿತ್ರವಾಗಿ ಹಾಡ್ತಾರಲ್ಲಾ "ಮಲ್ಲೀ ಮಲ್ಲೀ, ಪ್ಯಾರೀ, ಪ್ಯಾರೀ"ನಾದ್ರೂ ಕೇಳಿದಿಯಲ್ವೋ? ಪಾಪ, ಅವ್ಳನ್ನ ಹಿಂಡಿ ಹಿಪ್ಪೆ ಮಾಡ್ತಿದಾರೆ. ನಾವೂ ನೋಡ್ತಿಲ್ವಾ ಕಣ್ಮುಂದೇನೆ. ಆ ನಮ್ಮವ್ರ ಆಫೀಸ್ನಲ್ಲಿ ಕೆಲ್ಸ ಮಾಡ್ತಾರಲ್ಲ ಸೋಮಶೇಖರಯ್ಯ ಹಾಳಭಾವಿ ರಿಟೈರ್ ಆಗಿ ಐದಾರು ವರ್ಷ ಆಗಿರಬೇಕು, ಕಟ್ಟಿದ್ಮನೇನ, ಬ್ಯಾಂಕ್ ಖಾತೇನೆಲ್ಲ ಇರೋ ಒಬ್ಬ ಮಗನ ಹೆಸರ್ಗೇ ಬರಸ್ಕೊಂಡು ಆಮೆರಿಕದಲ್ಲಿರೋ ಶೇಖರನ ಮಗ, ಸೊಸೆ ತನ್ನ ಹಾಳಭಾವಿ ದಂಪತಿಗಳ್ನ ಎಂಥದೋ "ಶಾಂತಿ, ಪರಮಶಾಂತೀ" ಅನ್ನೋ ವೃದ್ಧಾಶ್ರಮಕ್ಕೆ ಸೇರಿಸದ್ರಂತೆ ಗೊತ್ತಾ? ನೀನೂ ಒಂದ್ಕಾಲಕ್ಕೆ ಅತ್ತೆ ಆಗೋವ್ಳು, ಹುಷಾರು.'

ಹೋಗ್ಲಿ ಬಿಡೀ ಇವ್ರೆ, ಮುಂದಾಗೋದ್ನ ಲೆಕ್ಕ ಹಾಕಕ್ಕಾಗತ್ಯೆ, ನಮ್ಹಣೇ ಬರಹ ಎಷ್ಟಾದ್ರೂ....'

'ಆದ್ರೂನೆವೆ ರವಮಾ, ವಮಾತಿಗೆ ಹೇಳ್ತೀನಿ, ರವಮಾ ಹೊಸಾ ಸುದ್ಧಿ ಏನಾದ್ರೂ...,ನಮ್ಗೇನಾದ್ರೂ ಸಿಹಿ ಉಂಟಾ ರಮಾ?'

'ಹಾಗೇನಿಲ್ಲ, ಮಗ ಹೈಸ್ಕೂಲಿಗೆ ಬರ್ಲಿ, ಆಮೇಲೆ ನೋಡೋಣ ಅಂತ ಅನ್ಕಂಡಿದೀವಿ'

'ಒಳ್ಳೇ ಐಡಿಯ ಕಣೇ, ಆಗ ಮಗ್ಗೇನಾದ್ರೂ ಆದ್ರೆ ಸಾಕಷ್ಟು ಸಂಪಾದ್ನೆ ಇರತ್ತೆ, ಮಗಾನೂ ಸಂಪಾದ್ನೆಗೆ ತಯಾರಾಗಿರ್ತಾನೆ', ನೀ ಏನಾದ್ರೂ ಅನ್ನು, ಜಲಜಾಕ್ಷಿ ಹಾಗೆ ಮನೆ ಬಿಡೋದು ತಪ್ಪಲ್ವ? ಹುಟ್ಟುತ್ಲೂ ಅಪ್ಪ, ಅಮ್ಮ, ಬೆಳೀತಾ ಶಾಲೆ, ಸ್ನೇಹಿತರ ಸಂಗ, ಆಮೇಲೆ ಗಂಡನ ಮನೇನೆ ಸರ್ವಸ್ವ ಅಂತ ನಾವು ಬೆಳ್ದು ಬಂದಿರೋದು, ಗಂಡ ಅಂದ್ಮೇಲೆ ಎಲ್ಲ ತರಾ ಇರ್ತಾರೆ ರಮಾ, ಅದಕ್ಕೆಲ್ಲ ಯಾರಾದ್ರೂ ಔಷಧ ಕೊಡ್ಲಿಕ್ಕುಂಟಾ?'



'ಹಾಗಂತ ನಿರಂತರ ಗಂಡ ಅನ್ನಿಸ್ಕಂಡವ್ನು ಷಂಡನ್ತರಾ ಎಲ್ಲಾರ ಮಾತು ಕೇಳ್ಕಂಡು ಸಂಸಾರ ನಡೆಸ್ಲಿಕ್ಕುಂಟಾ? ನಾ ಕೇಳಿದ್ದ ನಿಜಾ ಆಗಿದ್ರೆ, ಆತ ಮಾಡ್ತ ಇರೋದ ಸರೀನಾ, ಮಕ್ಕಳ್ನ ದಿನಾ ಹೊಡೆಯೋದ, ಬಡಿಯೋದ, ಸ್ಕೂಲ್ನಗೇ ಅವ್ರಮೇಲೆ ಇಲ್ದಿಇರೋ ಸುಳ್ಳನ್ನ ಎತ್ತಿಕಟ್ಟಿ ಅವರ ಮಿಸ್‌ಗಳೀಗೂ ಮಕ್ಕಳ್ಗೆ ಚನ್ನಾಗಿ ಶಿಕ್ಷೆ ಕೊಡಿ ಅಂತ ಹೇಳ್ಕೊಡೋದೇನ್ ಸರಿನಾ ಸಾವಿತ್ರಮ್ಮನೋರೆ?'

'ಹಾ, ಇನ್ನೊಂದ್ಮಾತ್ನ ಕೇಳಿದ್ದೆ, ಆತ ಬೇರೆಲ್ಲೋ ಇನ್ನೊಂದ್ ಹುಡುಗಿ ಜೊತೇಗೆ ಇರ್ತಾನಂತ ನಮ್ಮನೆ ಕೆಲ್ಸದಾಳಿಗೆ ಅವರ್ವೈಕೀನೇ ಇನ್ನೊಬ್ಬಾಕೆ ಹೇಳ್ತಾ ಇದ್ಳಂತೆ, ಹೌದೇನೆ ರಮಾ? ಅದೆಷ್ಟು ಮಟ್ಟಿಗ್ಗೆ ನಿಜಾನೋ

'ಅದೇನೋ ಗೊತ್ತಿಲ್ಲ ಆದ್ರೆ ಆತ ಮನೇಗೆ ಸಂಪಾದ್ಸಿದ ಹಣದಲ್ಲಿ ಸರಿಯಾಗಿಮನೇಗೆಕೊಡ್ತಾಇರ್ಲಿಲ್ಲವಂತೇ ರೀ,'ನೀವ್ಹೇಳೋದ ನಿಜ ಆದ್ರೆ, ದುಡ್ಡೆಲ್ಲ ಇನ್ಯಾವ್ಳೋ ಹೇಳಿದ್ರಲ್ಲ, ಅಲ್ಲಿ ತೊಗೊಂಡ್ಸುರೀತಿದ್ನೋ ಏನೋ?

'ಇನ್ನೊಂದ ಮಾತ, ನಾನೇ ನೋಡಿದ್ದಂಗೆ ಜ್ಞಾಪ್ಕ ರಮಾ, ಸುಮಾರು ದಿನಗಳ ಹಿಂದೆ ಜಲಜಾಕ್ಷಿ ಯಾರೋ ವಯಸ್ಸಾದ ದಂಪತಿಗಳ ಜೊತೆ ಕಾರ್ನಲ್ಲಿ ಹೋಗಿದ್ನೋಡಿದ್ದಂಗೆ ಜ್ಞಾಪ್ಕನಮ್ಮ, ಅವ್ರೇನೋ ಅಲ್ವೋ ಹ್ಯಾಗ್ಹೇಳ್ಲಿ'

' ಸರಿಯಾಗಿ ಹೇಳಿದಿರ ಬಿಡಿ, ಅಲ್ಲಿಗಲ್ಲಿಗೆ ಅದೇ ಸರಿ ಇರ್ಬೇಕು. ಏನಾದ್ರೂ ಆ ಚಾಂಡಾಲ್ಲನ್ನ ಕೋರ್ಟಿಗೆ ಎಳೀಬೇಕು ಇಲ್ಲಾ ಬುದ್ಧಿ ಕಲ್ಸಬೇಕು, ಏನ್ಹೇಳ್ತೀರ?'

'ಮತ್ತೇನ, ಆದ್ರೆ ರಮಾ ಅವ್ಳ ಅಪ್ಪ, ಅಮ್ಮನಾದ್ರೂ ಅವ್ಳಿಗೆ ಬುದ್ಧಿ ಹೇಳ್ಬೇಕೆನಸ್ಲಿಲ್ವಾ? ಹೆಣ್ಣು ಅಂದ್ಮೇಲೆ ಸರ್ಸಿಕೊಂಡ್ಹೋಗ್ಬೇಕು, ಮಕ್ಳ ಗತಿ ಏನಂತ ಯೋಚ್ನೆ ಮಾಡಿದಾಳ? ಹೋಗ್ಲಿ ಬಿಡು, ನಮಗ್ಯಾಕಿದ್ದೀತು ಕಂಡವ್ರ ಸಮಾಚಾರ, ರಾಮ ಕೃಷ್ಣಾಂತ ನಮ್ಪಾಡಿಗೆ ನಾವಿರೋಣ ಅಲ್ವ, ಏನ್ಹೇಳತೀ?'

'ಅಷ್ಟಲ್ದೆ ಏನು, ನಾನೂ ಹೊರಡ್ತೀನಿ, ಅಲ್ದೆ ಮತ್ತೊಬ್ರ ಸಮಾಚಾರ ಉಪ್ಪಿಗೆ ಸಮಾ ಅಂತ, ನಾ ಬರ್ಲಾ, ಮನೇಲಿ ಸಾಕಷ್ಟು ಕೆಲ್ಸ ಇನ್ನ ಬಹಳಾನೇ ಇದೆ, ಅಗೋ ಅಲ್ಲಿ ಜಲಜಾಕ್ಷಿ ವಾರಗಿತ್ತೀನೆ ಬರ್ತಿದಾಳೆ, ಹುಷಾರು ಆಕೆ ಎದುರ್ಗೆ...'

'ಇದಪ್ಪ ಆಶ್ಚರ್ಯ, ಏನಮ್ಮ ಸರಸೂ, ಈ ಕಡೆ ನಿನ್ನ ಪ್ರಯಾಣ, ನಿನ್ನಾ ನೋಡಿ ಸುಮಾರು ತಿಂಗ್ಳೇಆಯ್ತು, ನಾನೂ ಊರ್ನಾಗಿರ್ಲಿಲ್ಲ ಅಂತಿಟ್ಕೊ,ಎಲ್ಲಾ ಮನೆ ಕಡೆ ಚೆನ್ನಾನ?'

'ಓಹೋ , ನಿಮ್ಮಗಳ ಆಶೀರ್ವಾದ, ನೀವಿಬ್ರೂ ಹೀಗೆ ಇಲ್ಲಿ?'

'ಅದೇ ಕಣೆಮ್ಮಾ, ಹೀಗೆ ನಿನ್ತರಾ ರಮಾನೂ ಸಿಕ್ಕಿದ್ದು ಅಪರೂಪಕ್ಕೆ.'

'ನಿಮ್ಮಲ್ಲೂ ಎಲ್ಲಾ ಚೆನ್ನಾಗಿದಾರ? ಮಕ್ಕಳು?'

'ಅವಕ್ಕೇನ ದಾಡಿ ಬಿಡು ಅತ್ಲಾಗೆ,ಆಡ್ಕಂಡ್, ಕುಣ್ಕಂಡ್ ಇದಾವೆ, ನನಗೂ ಕೆಲಸಬಹಳಾ ಇದೆ, ನಾ ಬರ್ತೀನಿ, ರಮಾ, ಸರಸೂ, ಅಂದ್ಹಾಗೆ ನಿನ್ನ ವಾರ್ಗಿತ್ತಿ ಜಲಜಾನ ಕೇಳ್ದೆ ಅಂತ ಹೇಳು. ನಮ್ಮುಂದಿನ ಬೀದೀಲೆ ಇದ್ರೂನೂವೆ ಸಿಕ್ಕೋದೆ ಅಪರೂಪ. ನಮ್ಮನೆ ಕಡೆ ಇಬ್ರೂ ಬನ್ನಿ.

'ಆಯ್ತು, ಸದ್ಯಕ್ಕೆ ಜಲಜಾ ಊರಿಗೆ ಹೋಗಿದಾಳೆ ಬರೋದು ಸದ್ಯಕ್ಕಲ್ಲ..'



'ಅದೇನಮ್ಮ ಹಂಗಂದ್ರೆ? ಏನೋ ಒಗಟ್ನಲ್ಲಿ ಮಾತಾಡ್ತಿದೀಯ?'

'ಏನಿಲ್ಲ, ಆಕೆಗೆ ಈಗ ಆರ್ತಿಂಗ್ಳು, ಗೊತ್ತಲ್ಲಾ ತೌರ್ನಲ್ಲಿ ಶಾಸ್ತ್ರ ಮಾಡಿಸಕ್ಕೆ ಗಂಡಾನೆ ಬಿಟ್ಟುಬರಕ್ಕೆ ಹೋಗಿದಾರೆ ಗರ್ಭಕೋಶದ ಸಮಸ್ಯೆ ಇದೆಅಂತ ಅಲ್ಲೇ ಅವ್ರಿಗೆ ಗೊತ್ತಿರೋ ಡಾಕ್ಟರಇದಾರಂತ  ಡೆಲಿವೆರಿ ಮಾಡಿಸ್ಕೊಳ್ಳಕ್ಕೆ. ಹೇಗೂ ಮಕ್ಕಳಿಗೂ ಸ್ಕೂಲಿಗೂ ಇನ್ನೆರಡು ತಿಂಗ್ಳು ರಜಾ'

'ಹಂಗಾ, ನಮ್ಭಾವ ತುಂಬಾ ಒಳ್ಳೇವ್ರು,ಹೆಂಡ್ತಿ ಆರೋಗ್ಯ ಮುಖ್ಯ ಅಂತ ಒಪ್ಕೊಂಡಿದ್ದು.

'ಆದರ್ಶ ದಂಪತಿಗಳು ಅನ್ನು, ನನ್ಗೂ ಗೊತ್ತು ಕಣೇ, ಆತ ನಮ್ ಚಿಕ್ಕಪ್ಪನ ಸಹಪಾಠಿ, ತುಂಬಾ ಮೃದೂ ಅಂತ, ನಂಗೊತ್ತಿರ್ಲಿಲ್ಲ ಕಣೆ ಇಷ್ಟು ಒಳ್ಳೇವಾ ಅಂತ'

'ಅವಳ ಅದೃಷ್ಟ, ನಾನ್ಬರ್ತೀನಿ ರಮಾ, ಸಾವಿತ್ರಮ್ಮಾ, ಇನ್ನೊಂದ್ಸಲ ಭೇಟಿ ಆಗೋಣ.''ಏನ್ ಸಾವಿತ್ರಮ್ಮನೀವ್ ಕೇಳಿದ್ದು, ನಂಗೆ ಗೊತ್ತಾಗಿದ್ದು ಎಲ್ಲಾ?'

'ಹೋಗ್ಲಿ ಬಿಡು ರಮಾ, ನನ್ಗೂ ಪೂರಾ ಕೆಲ್ಸ ಇದೆಮನೇಲಿ, ನಾ ಬರ್ಲಾ? ಜಲಜಾಕ್ಷಿ ಮನೆ ಮಾತು ನಮಗ್ಯಾಕೆ ಬೇಕು, ಅಲ್ವಾ? ■

---









# ಅವರೇಕಾಳ್ VS ವೈಟ್ ಹೌಸ್

• ಜಿ.ವಿ.ನಿರ್ಮಲ

ಮನೆಗೊಬ್ಬರಂತೆ ಅಮೆರಿಕಕ್ಕೆ ರಫ್ತು ಮಾಡಿರುವ ಬೆಂಗಳೂರಿಗರಿಗೆ ವೈಟ್ ಹೌಸ್, ವಿಧಾನಸೌಧದಷ್ಟೇ ಪರಿಚಿತ. ಆದರೆ ಒಬಾಮಾ ಅಮೆರಿಕದ ಅಧ್ಯಕ್ಷರಾಗುವುದಕ್ಕೆ ಮುಂಚಿತವಾಗಿಯೇ ಅವರೇಕಾಳು ವೈಟ್ ಹೌಸ್‌ಗೆ ರಫ್ತಾಗಿ, ಅದರಿಂದಾದ ಫಜೀತಿ ಯಾರಿಗೂ ಗೊತ್ತಿರಲು ಸಾಧ್ಯವೇ ಇಲ್ಲ. ಏಕೆಂದರೆ ಇದು ನನ್ನ ಅನುಭವ.

ಭಾರತೀಯರು ಅಮೆರಿಕಾಕ್ಕೆ ಹೋಗುವಾಗ ಚಕ್ಕುಲಿ, ಕೋಡುಬಳೆ, ಮಿಠಾಯಿಗಳು ಜೊತೆಗೆ ಉಪ್ಪಿನಕಾಯಿ, ಮಸಾಲೆ ಪುಡಿಗಳು ಸೂಟ್‌ಕೇಸ್‌ನಲ್ಲಿದ್ದರೆ, ಸೆಕ್ಯುರಿಟಿ ಚೆಕ್ ನಡೆಸುವವರಿಗೆ ಇವರು ನಾರ್ಮಲ್ ಪ್ರಯಾಣಿಕರು ಎಂಬ ಸಂದೇಶ ತಲುಪಿದಂತೆಯೇ! ಒಂದ್ವೇಳೆ ಅವು ಇಲ್ಲದಿದ್ರೆ ಅನುಮಾನಿಸಿ, ಹೆಚ್ಚಿನ ತಪಾಸಣೆ ನಡೆಸಬಹುದು. ನಾನು ಅಮೆರಿಕಾಕ್ಕೆ ಪ್ರಯಾಣ ಬೆಳಸಿದಾಗಲೂ ರುಚಿರುಚಿಯಾದ ತಿಂಡಿಗಳ ಹೊತೆ ಹುರಿದ ಅವರೇಕಾಳನ್ನೂ ತೆಗೆದುಕೊಂಡು ಹೊರಟೆ.

ಅಮೆರಿಕಾಗೆ ಹೊರಡೋ ಮುಂಚೆನೇ ನಮ್ಮ ಶ್ವೇತಭವನದ ಭೇಟಿಯ ಕಾರ್ಯಕ್ರಮ ನಿಶ್ಚಯವಾಗಿತ್ತು. ಇಂಟರ್‌ನೆಟ್ ಮೂಲಕ ಹೆಸರು, ಪಾಸ್‌ಪೋರ್ಟ್ ವಿವರಗಳನ್ನು ಕಳಿಸಿ ಅನುಮತಿ ಪಡೆದಿದ್ದೆವು. ನಿರೀಕ್ಷಿಸಿದ ದಿನ ಬಂದೇ ಬಿಟ್ಟಿತು. ವೈಟ್ ಹೌಸ್ ಪ್ರವೇಶದ ನಿಯಮಗಳನ್ನು ಎಲ್ಲರೂ ಒಂದೆರಡು ಸಾರಿ ಓದಿ, ಒಳಗೆ ಯಾವ ತರಹದ ತಿಂಡಿತಿನಸುಗಳನ್ನೂ, ಕೊನೆಗೆ ನೀರಿನ ಬಾಟಲಿಯನ್ನು ತೆಗೆದುಕೊಂಡು ಹೋಗುವಂತಿಲ್ಲ ಎಂದು ತಿಳಿದುಕೊಂಡೆವು. ಅದರಂತೆ ಹೊರಟಿದ್ದ ಹತ್ತು ಜನರೂ ನಮ್ಮ ನಮ್ಮ ಚೀಲಗಳನ್ನು ಎಚ್ಚರಿಕೆಯಿಂದ ತಪಾಸಣೆ ಮಾಡಿಕೊಂಡು ಬಿಸ್ಕತ್ತು, ಚಾಕಲೋಟ್ ಇತ್ಯಾದಿಗಳನ್ನು ಬಿಸಾಡಿ, ಶುದ್ಧೀಕರಿಸಿಕೊಂಡು ಹೊರಟೆವು.

ಪತ್ರದಲ್ಲಿ ಸೂಚಿಸಿದ್ದಂತೆ ವೈಟ್ ಹೌಸ್ ಹಿಂಬಾಗಿಲು ತಲುಪಿದೆವು. ರಕ್ಷಣಾ ತಪಾಸಣೆ ಪ್ರಾರಂಭವಾಯಿತು. ಸರದಿಯಲ್ಲಿ ಕಾಯುವಾಗ ಬೇಕಾದೀತೆಂದು ಜೊತೆಗಿಟ್ಟುಕೊಂಡಿದ್ದ ನ್ಯೂಟ್ರಿಷನ್ ಬಾರ್‌ಗಳನ್ನು ತಿಂದುಬಿಡೋಣವೆಂದು ಬ್ಯಾಗ್ ತೆಗೆದಾಗ, ಖಾರದ ಅವರೇಕಾಳಿನ ಡಬ್ಬಿ ಕಾಣಿಸಿತು! ಅದ್ಹೇಗೋ ನನ್ನ ಚೀಲದಲ್ಲಿ ನುಸುಳಿ, ಗುಟ್ಟಾಗಿ ಕುಳಿತಿತ್ತು. ಖಾರದ ಅವರೇಕಾಳನ್ನು ಗಬಗಬ ತಿನ್ನಲೂ ಸಾಧ್ಯವಿಲ್ಲ. ಸೆಕ್ಯುರಿಟಿಯವ ಅದನ್ನು ತನ್ನ ಬಳಿ ಇಟ್ಟುಕೊಳ್ಳಲೂ ಒಪ್ಪಲಿಲ್ಲ. ಸ್ವಲ್ಪ ದೂರದಲ್ಲಿದ್ದ ಕಸದ ಡಬ್ಬ ತೋರಿಸಿ ಅದರಲ್ಲಿ ಹಾಕಿರೆಂದು ಹೇಳಿದ. ಅವನಿಗೇನು ಗೊತ್ತು ಅದರ ರುಚಿ? ನಮ್ಮ ಗುಂಪಿನಲ್ಲಿ ಅದನ್ನು ಬಿಸಾಡಲು ಯಾರಿಗೂ ಮನಸ್ಸಿಲ್ಲ. ಒಬ್ಬೊಬ್ಬರಾಗಿ ಒಳಗೆ ಹೋಗುವಂತಿಲ್ಲ. ಹತ್ತು ಜನರ ಗುಂಪಿನಂತೆಯೇ ಒಳಗೆ ಹೋಗುವುದು ಕಡ್ಡಾಯವಾಗಿತ್ತು. ಒಳ್ಳೆ ಪೀಕಲಾಟವಾಯಿತು. ಸಾವಿರಾರು ಮೈಲಿ ಪಯಣಿಸಿ ವೈಟ್ ಹೌಸ್ ತಲುಪಿದ್ದ ಅವರೇಕಾಳು ಸದ್ದುಗದ್ದಲವಿಲ್ಲದೆ ಎಲ್ಲರನ್ನೂ ಸಂದಿಗ್ಧ ಪರಿಸ್ಥಿತಿಯಲ್ಲಿ ಕೆಡವಿತ್ತು. ನಾವೋ ವೈಟ್ ಹೌಸ್ ಬಿಟ್ಟರೂ ಅವರೇಕಾಳು ಬಿಡೆವು ಎನ್ನುವ ಮನಸ್ಥಿತಿಯಲ್ಲಿದ್ದೆವು. ಅಂತೂ ಅವರೇಕಾಳ್ v/s ವೈಟ್ ಹೌಸ್ ದ್ವಂದ್ವ ದೊಡ್ಡ ಫಜೀತಿಯಾಯಿತು.



ವಿಧಿ ಇಲ್ಲದೆ ನಮ್ಮೊಲ್ಲಬ್ಬರು ಅವರೇಕಾಳು ತೆಗೆದುಕೊಂಡು ಕಸದ ಡಬ್ಬದ ಕಡೆ ನಡೆದರು. ಖಾಲಿ ಕೈಯ್ಯಲ್ಲಿ ವಾಪಸ್ಸು ಬಂದರು. ಎಲ್ಲರ ಹುಬ್ಬುಗಳೂ ಏರಿದ್ದನ್ನು

ನೋಡಿ, ಚೀಲವನ್ನು ಡಬ್ಬದ ಒಳಗೆ ಹಾಕದೆ, ಯಾರಿಗೂ ಕಾಣಿಸದಂತೆ ಒಂದು ತಂತಿಗೆ ಸಿಕ್ಕಿಸಿದ್ದೇನೆ ಎಂದು ಪಿಸುಮಾತಿನಲ್ಲಿ ಹೇಳಿದರು. ವೈಟ್ ಹೌಸ್ ಹೊಕ್ಕೆವು.

ಮೂವತ್ತರಿಂದ ನಲ್ವತ್ತು ನಿಮಿಷಗಳಲ್ಲಿ ವೈಟ್ ಹೌಸ್ ಸುತ್ತಾಟ ಮುಗಿದೇ ಹೋಯಿತು. 'ಇಷ್ಟೇನಾ?' ಎಂದೆನ್ನುತ್ತಾ ಆಚೆ ಬಂದೆವು. ಆದರೆ ಆಚೆ ಬಂದಿದ್ದು ಮುಂಭಾಗದಿಂದ! ಅವರೇಕಾಳಿದ್ದುದು ಹಿಂಬಾಗಿಲಿನ ಬಳಿ.

ಹಿಂಭಾಗಕ್ಕೆ ಹೋಗಿ ಅದನ್ನು ತರುವುದೆಂದು ನಿಶ್ಚಯಿಸಿ ಹಿಂಬದಿ ತಲುಪಿದೆವು ಚೀಲ ತರಲು ಒಳ ಹೊಕ್ಕ ಪ್ರಸಾದ್ ಎರಡೇ ನಿಮಿಷದಲ್ಲಿ ಬಂದರು. ಕೈ ಖಾಲಿ! ಅವರೇಕಾಳು ಹೋಯಿತೆಂದುಕೊಂಡೆವು. ಆದರೆ ಸಮಾಚಾರ ಅದಾಗಿರಲಿಲ್ಲ. ಯಾರೋ ಮುಖ್ಯ ಅತಿಥಿಗಳು ಬರುತ್ತಿರುವುದರಿಂದ ಯಾರನ್ನೂ ಒಳಗೆ ಬಿಡುತ್ತಿರಲಿಲ್ಲ. ನಾವು ನೋಡುತ್ತಿದ್ದಂತೆಯೇ ಅನೇಕ ಜನ ವಾಪಸ್ಸು ಬಂದರು. ಮತ್ತೊಂದು ಗೇಟ್ ಬಳಿ ಸಾಗಿದೆವು. ಅಲ್ಲಿ ಹೋಗುತ್ತಿದ್ದಂತೆಯೇ ಆ ಗೇಟ್‌ಗೂ ಬೀಗ ಜಡಿದರು. ಎಲ್ಲಾ ಸೆಕ್ಯುರಿಟಿ ಸ್ಥಾನದಲ್ಲೂ ಗಡಿಬಿಡಿಯ ವಾತಾವರಣ. ನಮಗಂತೂ ಅವರೇಕಾಳಿನ ಚೀಲ ಸೆಕ್ಯೂರಿಟಿಯವರಿಗೆ ಸಿಕ್ಕಿಯೇ ಗಲಾಟೆಯಾಗುತ್ತಿದೆಯೆಂದು ಆತಂಕವಾಯಿತು. ನಮ್ಮನ್ನು ಹಿಡಿದುಕೊಂಡು ಹಿತಕವರೆ ಮಾಡಿದರೆ ಎಂದು ಗಾಬರಿಯಾಯಿತು.

ಮತ್ತೊಂದು ರಸ್ತೆಯಿಂದ ಸುತ್ತಿ ಬಳಸಿ ಅವರೇಕಾಳಿನ ಚೀಲ ಇದ್ದ ಕಡೆಗೇ ಬಂದೆವು. ಎಲ್ಲರ ಕಣ್ಣೂ ಅತ್ತ ಕಡೆಯೇ ಹೊರಳಿತು. ಅಲ್ಲಿ ಒಬ್ಬ ಸೆಕ್ಯೂರಿಟಿಯವ ನಿಂತಿದ್ದಾನೆ! ಖಂಡಿತ ನಮ್ಮ ಅವರೇಕಾಳು ಸಿಕ್ಕಿಬಿದ್ದಿದೆ. ನಮ್ಮ ಗುಂಪನ್ನು ಸೆಕ್ಯೂರಿಟಿಯವನು ಗುರುತಿಸಬಹುದೆಂದೂ ಹೆದರಿದೆವು. ನನ್ನ ಮಗ ಏನೂ ಗೊತ್ತಿಲ್ಲದವನಂತೆ, ಸುಮ್ಮನೆ ಆ ಕಡೆಯೇ ಹೋದ. ನಾವು ಕಾಲ್ದಾರಿಯಲ್ಲಿ ನಿಂತು ನೋಡುತ್ತಾ ಇದ್ದೆವು. ನಮ್ಮ ಚೀಲ ಅಲ್ಲೇ ಇರುವುದೆಂದು ಕೈಸನ್ನೆ ಮಾಡಿದ. ಸ್ವಲ್ಪ ನಿರಾಳವಾಯಿತು. ಅದರಲ್ಲಿ ಏನೋ ಸ್ಫೋಟಕ ವಸ್ತುವಿರಬಹುದೆಂದು ಅನುಮಾನ ಬಂದಿರುವುದೇ? ಅದಕ್ಕೇ ಆ ಪೋಲೀಸ್ ಅದನ್ನು ಕಾಯುತ್ತಿದ್ದಾನೆಯೇ? ಗೇಟುಗಳನ್ನು ಹಾಕಿ ಜನರಿಗೆ ತಡೆ ಹಾಕಿರುವುದು ಇದೇ ಕಾರಣಕ್ಕಾಗಿಯೇ? ಎಂದು ಹಲವಾರು ಪ್ರಶ್ನೆಗಳು ಎದ್ದವು. ಅವರೇಕಾಳು ನಮ್ಮನ್ನು ಇಷ್ಟೆಲ್ಲಾ ಪೇಚಿನಲ್ಲಿ ಸಿಕ್ಕಿಸುತ್ತಿದೆಯಲ್ಲ ಎಂದುಕೊಂಡೆವು. ನಮ್ಮ ಜಿಹ್ವಾ ಚಾಪಲ್ಯವನ್ನೂ ಶಪಿಸಿಕೊಂಡೆವು. ಕಣ್ಣೆದುರಿಗಿದ್ದರೂ ಪೋಲಿಸ್‌ನವನ ಮುಂದೆ ಚೀಲವನ್ನು ಹೇಗೆ ತೆಗೆದುಕೊಳ್ಳುವುದು? ಕೈಗೆ ಬಂದದ್ದು ಬಾಯಿಗಿಲ್ಲ ಎನ್ನುವಂತಾಗಿತ್ತು.

ಅಷ್ಟರಲ್ಲಿ ನಮ್ಮ ಪುಣ್ಯವೋ ಏನೋ ಆ ಪೋಲೀಸ್ ಅಲ್ಲಿಂದ ಕಾಲ್ತೆಗೆದ. ಪ್ರಸಾದ್ ಸರಸರನೆ ಹೋಗಿ ಅತ್ಯಂತ ಚಾಕಚಕ್ಯತೆಯಿಂದ ಕ್ಷಣಾರ್ಧದಲ್ಲಿ ಚೀಲವನ್ನು ಸರಕ್ಕನೆ ಹೊರತೆಗೆದರು. ಚೀಲ ಶುಭ್ರವಾಗಿಯೇ ಹೊರಬಿದ್ದಿತ್ತು. ಸ್ವಲ್ಪ ದೂರ ಹೋಗಿ, ಮೆಲ್ಲನೆ ಡಬ್ಬಿ ತೆಗೆದಾಗ ಅವರೇಕಾಳು ನಮ್ಮನ್ನು ನೋಡಿ ನಕ್ಕಂತಾಯಿತು. ವೈಟ್ ಹೌಸ್‌ಗಿಂತ ಅವರೇಕಾಳೇ ಹೆಚ್ಚು ಪ್ರಮುಖವಾಗಿಬಿಟ್ಟಿತ್ತು. ಸಣ್ಣಗೆ ಮಳೆಯೂ ಪ್ರಾರಂಭವಾಯಿತು. ಕುರುಂಕುರುಂ ಖಾರ ಹಚ್ಚಿದ ಅವರೇಕಾಳು ಸವಿಯುತ್ತಾ, 'ಅವರೇಕಾಳ್ ಬಚಾವ್' ತಂತ್ರ ಫಲಿಸಿದ್ದಕ್ಕಾಗಿ ಸಂತೋಷಪಡುತ್ತಾ, ಫಜೀತಿಗಳನ್ನು ನೆನಪು ಮಾಡಿಕೊಂಡು ನಗತ್ತಾ ಮನೆ ತಲುಪಿದೆವು. ಅವರೇಕಾಳ್ v/s ವೈಟ್ ಹೌಸ್ ಒಂದು ಮರೆಯಲಾಗದ ಅನುಭವ. ■



# ಭಾಗಮ್ಮನ ಬಡಾಯಿ

**• ಗಾಯತ್ರಿ ಮೂರ್ತಿ**

ಬಡಾಯಿ ಕೊಚ್ಚಿಕೊಂಡ್ರೂ ಭಾಗಮ್ಮನತರಹ ಕೊಚ್ಕೋ ಬೇಕು. ನಿಜದ ತಲೆ ಮೇಲೆ ಹೊಡೆದ ಹಾಗೆ ಕೊಚ್ಕೊತಾರೇಂತsss...... ನಾನು ಹೇಳ್ತಿದೀನೀಂತ ಅಂದ್ಕೊಬೇಡಿ. ಭಾಗಮ್ಮನಿಗೆ ಪರಿಚಯವಿರೋ ಎಲ್ಲರ ಅಂಬೋಣ ಇದು.

'ಭಾಗಮ್ಮ, ಇವತ್ತು ನಿಮ್ಮನೇಲಿ ಏನಡಿಗೆ ಮಾಡಿದ್ರಿ?'ಎಂದು ಪಕ್ಕದ್ಮನೆ ಪಂಕಜಮ್ಮ ಕೇಳಿದ್ರೆ, ಉತ್ತರ ಹೋಟೆಲ್ ಮಾಣಿಯಂತೆ ಉದ್ದಕ್ಕೆ ಸ್ವಾರಸ್ಯವಾಗಿ ಹೇಳ್ತಾರೆ, 'ಏನ್ಹೇಳ್ತೀರಾ? ನಮ್ಮನೇಲಿ ಇರೋದು ನಾಲ್ಕು ಜನ ಆದ್ರೂ, ಒಬ್ಬೊಬ್ಬರಿಗೂ ಒಂದೊಂದು ಬಗೆ ಊಟ, ತಿಂಡಿ ಇಷ್ಟ. ನನ್ನ ಮಗ ಉಪ್ಪಿಟ್ಟೂ ಅಂದ್ರೆ ಊsss......ಅಂತ ಮೂಗು ಮುರೀತಾನೆ. ಅವನಿಗೆ ಗರಿಗರಿ ಅಂತ ದೋಸೆನೇ ಆಗ್ಬೇಕು. ಮಗಳಿಗೆ ಉಪ್ಪಿಟ್ಟು, ಕೇಸರಿ ಭಾತು, ಅದೇ ಹೋಟೆಲ್ ಚೌಚೌ ಭಾತ್ ಅಂತಾರಲ್ಲ ಹಾಗೆ, ಅದು ತುಂಬಾ ಇಷ್ಟ. ಅವಳಿಗೆ ಅದೇ ಬೇಕೂಂತಾಳೆ. ನನ್ನ ಗಂಡನಿಗೆ ಮೃದುವಾಗಿ ಮಲ್ಲಿಗೆ ಹೂವಿನ ಹಾಗಿರೋ ಇಡ್ಲಿ ಅಂದ್ರೆ ಪಂಚ ಪ್ರಾಣ. ಹೀಗಾಗಿ ಇವತ್ತು ಇಡ್ಲಿ, ದೋಸೆ, ಉಪ್ಪಿಟ್ಟು, ಕೇಸರಿ ಭಾತ್ ಎಲ್ಲ ಮಾಡಿದ್ದೆ. ಏನು ರುಚಿಯಾಗಿತ್ತೂಂತೀರಿ. ನಾನು ಎಲ್ಲ ತಿಂಡೀನೂ ಚೂರುಚೂರು ಹಾಕ್ಕೊಂಡು ತಿಂದೆ.'

'ಅಂದ್ರೆ ನಿಮ್ಮನೇಲಿ ಬಫೆ ಬ್ರೇಕ್ ಫಾಸ್ಟ್ ಅನ್ನಿ,'

'ಅಯ್ಯೋ, ಅದೆಲ್ಲಾ ನಂಗೊತ್ತಿಲ್ಲ, ಒಟ್ನಲ್ಲಿ ಇಷ್ಟೂ ಮಾಡೋದ್ರಲ್ಲಿ ನಂಗೆ ಸಾಕಾಗಿ ಹೋಗತ್ತೆ,' ಅಂದರು.

'ನೀವು ದಿನಾ ಹೋಟೆಲ್‌ನೋರ ಹಾಗೆ ಅಷ್ಟೊಂದು ವೆರೈಟಿ ಬ್ರೇಕ್‌ಫಾಸ್ಟ್ ಮಾಡ್ತೀರಾನ್ನಿ,'

'ಹೂ, ಹಾಗೇ ಅನ್ಕೊಳಿ,'

ಆದರೆ, ಸತ್ಯ ಸಂಗತಿಯೇ ಬೇರೆ. ಮಗ ಬೆಳಗಿನ ಜಾವ ಎದ್ದು ಫ್ಯಾಕ್ಟರೀಗೆ ಹೋಗುತ್ತಾನೆ. ಮಗಳು ಇನ್ನೂ ಓದ್ತಿದಾಳೆ. ಶಾಲೆಗೆಂದು ಮಾಡಿದ ಚಿತ್ರಾನ್ನವನ್ನೋ, ಚಪಾತಿಯನ್ನೋ ತಿಂದು, ಅದನ್ನೇತೆಗೆದುಕೊಂಡು ಹೋಗುತ್ತಾಳೆ. ಇನ್ನು ನಿವೃತ್ತರಾಗಿ ಮನೆಯಲ್ಲಿರುವ ಗಂಡ ಮತ್ತು ತಾನು ಅದೇ ಚಪಾತಿ ಇಲ್ಲವೇ ಚಿತ್ರಾನ್ನ ತಿಂದು ಬೆಳಗಿನ ತಿಂಡಿ ಶಾಸ್ತ್ರ ಮುಗಿಸುತ್ತಾರೆ. ಆದರೆ, ಬೇರೆಯವರಿಗೆ ಹೇಳುವಾಗ ಮಾತ್ರ ಇಂತಹ ಬಡಾಯಿ ಕೊಚ್ಚುವುದೆಂದರೆ ಅವರಿಗೆ ಬಲು ಪ್ರೀತಿ. ಎಷ್ಟೋ ವೇಳೆ ಪಕ್ಕದ ಮನೆ ಪಂಕಜಮ್ಮನ ಮನೆಯಿಂದ ರಾತ್ರಿ ಅಕ್ಕಿಯನ್ನೋ, ಗೋಧಿ ಹಿಟ್ಟನ್ನೋ ಸಾಲ ಪಡೆದು ಮರುದಿನ ಮಗಳ ಡಬ್ಬಿಗೆ ಊಟ ತಯಾರಿಸುತ್ತಾರೆ.



ಅದಕ್ಕೂ ಭಾಗಮ್ಮನ ಬಳಿ ಸೂಕ್ತ ಕಾರಣ ಇರತ್ತೆ. 'ಇವತ್ತು ನನ್ನ ಮಗಳು ಡಬ್ಬಿಗೆ ಚಪಾತಿ ಸಾಗು ಬೇಕೂಂದ್ಲು. ಅದೂ ರಾತ್ರಿ ಹತ್ತು ಗಂಟೇಲಿ. ಐದು ಕೆಜಿ ಗೋಧಿ ಹಿಟ್ಟು ಮುಗಿದಿದ್ದೇ ತಿಳೀಲಿಲ್ಲ. ಅರ್ಧ ಸೇರುಗೋಧಿ ಹಿಟ್ಟು ಕೊಡಿ. ಇಗೋ,

ನಾಳೇನೇ ಐದು ಕೆಜಿ ಗೋಧಿ ಹಿಟ್ಟು ತರಿಸಿಬಿಡ್ತೀನಿ. ನಮ್ಮ ಮನೇಲಿ ತಂದತಕ್ಷಣ ವಾಪಸ್ ಮಾಡ್ತೀನಿ,'

'ಸರಿ, ಇವರು ಐದು ಕೆಜಿಗೋಧೀ ಹಿಟ್ಟು ತರ್ಸಿ, ನಂಗೆ ವಾಪಸ್ ಮಾಡ್ದಾಗ ಅದೇ ಮಹಾ ಸುದಿನ', ಎಂದು ಪಂಕಜಮ್ಮ ಗೊಣಗಿಕೊಂಡರೂ, ಗೋಧೀ ಹಿಟ್ಟು ಕೊಟ್ಟು, ಇಲ್ಲವೇ ಅಕ್ಕಿ ಕೊಟ್ಟು ಕಳಿಸುತ್ತಾರೆ.

'ನಮ್ಮನೇಲಿ ಯಾರೂ ತುಪ್ಪ ಇಲ್ಲದೆ ತುತ್ತು ಬಾಯಿಗೆ ಇಡೊದೇ ಇಲ್ಲ. ಏನಿಲ್ಲಾಂದ್ರೂ, ತಿಂಗಳಿಗೆ ಎಂಟು, ಹತ್ತು ಕೆಜಿ ತುಪ್ಪಾನೇಆಗತ್ತೆ. ಏನೂಂತೀರಿ, ಎಲ್ಲರ ಮನೇಲಿ ಚಮಚದಲ್ಲಿತುಪ್ಪ ಹಾಕ್ಕೊಂಡ್ರೆ, ನಮ್ಮನೇಲಿ ಎಲ್ರೂ ಸೌಟಲ್ಲಿ ತುಪ್ಪ ಸುರ್ಕೊಂಡು ತಿಂತಾರೆ. ನಮ್ಮನೆಯವ್ರಿಗಂತೂ ತುಪ್ಪದಲ್ಲಿ ಕರಿದ ಚಕ್ಕುಲಿ, ಕೋಡು ಬಳೇಂದ್ರೆ ಪಂಚಪ್ರಾಣ. ಅಪ್ಪಿತಪ್ಪಿ ಎಣ್ಣೇಲಿ ಕರಿದೇಂದ್ರೆ ಅವತ್ತು ಯಾರೂ ಅದನ್ನು ಮೂಸಿ ಕೂಡ ನೋಡಲ್ಲಾಂತೀನಿ,' ಎನ್ನುತ್ತಾರೆ.

ಅದಕ್ಕೇ ಇರ್ಬೇಕು ಅವರು ಕರಿದ ತಿಂಡಿ ಮಾಡೋದೇ ಇಲ್ಲ ಅಂತ ಪಕ್ಕದ್ಮನೆ ಪಂಕಜಮ್ಮ ಮನದಲ್ಲೇ ಗೊಣಗಿದರು.

'ಅಲ್ಲಾ, ಅಷ್ಟೆಲ್ಲಾ ತುಪ್ಪ ತಿಂದ್ರೂ ಎಲ್ಲರೂ ಅಷ್ಟೊಂದು ಸಣ್ಣಗಿದಾರಲ್ಲಾ? ಹೇಗೇಂತ ನಮಗೂ ಹೇಳಿ ಭಾಗಮ್ಮ.' ಪಂಕಜಮ್ಮನ ವರಸೆ ಇದು.

'ಅಯ್ಯೋ, ಈಗಿನ ವಿಷಯ ಅಲ್ಲ ನಾನು ಹೇಳ್ತಿರೋದು. ಮೊದಲು ಹಾಗೆ ಮಾಡ್ತಿದ್ರು. ಈಗ ಅದೇನೋ ಡಯಟ್, ಹೆಲ್ತ್, ಹಾಗೇ, ಹೀಗೇಂತ ತುಪ್ಪಾನಾ ಮುಟ್ಟಿ ಮೂಸಲ್ಲ.'

'ಹೌದಾ???'

****

ಅವರ ಮನೇಲಿ ಮಂಚ, ಸೋಫಾ ಅಂತ ಸ್ವಂತದ್ದು ಯಾವುದೂ ಇಲ್ಲ. ಆದರೆ, ಬಂದವರೆದುರಿಗೆ ಮರ್ಯಾದೆ ಕಾಪಾಡ್ಕೊಬೇಕಲ್ಲ. ಎಲ್ಲವನ್ನೂ ಬಾಡಿಗೆಗೆ ತಂದು ಹಾಕಿಕೊಂಡಿದ್ದಾರೆ.

'ನಮ್ಮ ಮನೋಜು ಈ ನಡುವೆ ಸೋಫಾ ಹಳೇದಾಯ್ತು, ಜೊತೆಗೆ ತುಂಬಾ ದುಬಾರಿ, ಅದಕ್ಕೆ ಅವರು ಯಾವುದೋ ಪದ ಉಪಯೋಗಿಸ್ತಾರೆ, ನಂಗೆ ಮರ್ತು ಹೋಗತ್ತೆ, ಹಾಳು ಮರೆವು ಬೇರೆ ನೋಡಿ.'

'ಅದೇರಿ, ತುಂಬಾ ದುಬಾರಿ ವಸ್ತುಗಳನ್ನು 'ಎಕ್ಸಪೆನ್ಸಿವ್' ಅಂತಾರೆ,'

'ಓ, ಅದೇ, ಇದನ್ನು ಓಎಲ್ಎಕ್ಸ್‌ನಲ್ಲಿ ಮಾರಿ, ಅಂತಾದು ತರೋಣ ಅಂತ ಗಲಾಟೆ ಮಾಡ್ತಿದಾನೆ,' ಎಂದು ಭಾಗಮ್ಮ ಹೇಳುತ್ತಿದ್ದಂತೆ ಫರ್ನೀಚರ್ ಬಾಡಿಗೆ ಕೊಟ್ಟವ ಬಂದು, 'ಬಾಡಿಗೆ ಕೊಡಿ, ಮೂರು ತಿಂಗಳಿಂದ ಸತಾಯಿಸ್ತಿದೀರಾ. ಈ ಸಾರಿ ನೀವು ಬಾಡಿಗೆ ಕೊಡ್ದಿದ್ರೆ ಫರ್ನೀಚರ್ ವಾಪಸ್ ತೊಗೊಂಡು ಹೋಗ್ತೀನಿ,' ಎಂದು ದಬಾಯಿಸಿದ.



ಪಂಕಜಮ್ಮ ಕಣ್ಣು ಬಾಯಿ ಬಿಟ್ಟುಕೊಂಡು ನೋಡುತ್ತಿದ್ದರು. ಭಾಗಮ್ಮ ಮರ್ಯಾದೆ ಹೋಯ್ತಲ್ಲಾ ಎಂದು ಮುಜುಗರ ಪಟ್ಟುಕೊಂಡರೂ. ಅವನನ್ನು ಪಕ್ಕಕ್ಕೆ ಕರ್ಕೊಂಡು ಹೋಗಿ, ಅದೇನು ಸಮಾಧಾನ ಹೇಳಿ ಕಳಿಸಿದರೊ ತಿಳೀದು.

'ಇರ್ಲಿ, ಒಂದು ವಾರ ಬಿಟ್ಕೊಂಡು ಬರ್ತೀನಿ,' ಎಂದು ಹೇಳಿ ಹೋದ.


ಪಂಕಜಮ್ಮ ಏನೂ ಅರ್ಥವಾಗದೆ ಪಿಳಿಪಿಳಿ ಕಣ್ಣು ಬಿಟ್ಕೊಂಡು ನೋಡ್ತಿದ್ರು. ಆದರೆ ಭಾಗಮ್ಮ ಸೋಲೊಪ್ಪೋದುಂಟೇ? ಅವನನ್ನು ಕಳುಹಿಸಿ ಬಂದು, 'ಅಯ್ಯೋ, ಏನಂತೀರಿ, ನಮ್ಮನೇಲಿ ಹೊಸ ಸೋಫಾ ತೊಗೋಬೇಕೂಂತ ಹಳೇದು ಮಾರಿದ್ವಾ?

'ಹೌದಾ? ಯಾವಾಗ? ಗೊತ್ತೇ ಆಗ್ಲಿಲ್ಲ?' ಎಂದು ಪಂಕಜಮ್ಮ ಹುಬ್ಬು ಹಾರಿಸಿದರು.

'ಆವತ್ತೇ ಕೊಟ್ವಿ. ಇನ್ನೂ ನಮ್ಮ ಟೇಸ್ಟಿಗೆ ತಕ್ಕ ಹಾಗೆ ಸೋಫಾ ಸೆಟ್ ಸಿಕ್ಕಿಲ್ಲ. ನನಗೋ, ನೆಲದ ಮೇಲೆ ಕೂರ್ಲೇ ಕೂಡದೂಂತ ಡಾಕ್ಟ್ರು ಹೇಳಿ ಬಿಟ್ಟಿದಾರೆ. ಸರಿ, ನಾಲ್ಕು ದಿನಕ್ಕೆ ಇರ್ಲೀಂತ ಬಾಡಿಗೆ ಸೋಫಾ ತಂದಿಟ್ವಿ. ಇಗೋ ಅನ್ನೋದ್ರೊಳ್ಗೆ ನಮ್ಮವರು ಸೋಫಾ ಸೆಟ್ ತಂದ್ಬಿಡ್ತಾರೆ,' ಎಂದು ಹೇಳಿದಾಗ, ಪಂಕಜಮ್ಮ 'ಹೌದ್ಹೌದು. ಮಾರ್ಕೆಟ್ಟಲ್ಲಿ ಯಾವಾಗ ಬೇಕಾದ್ರೂ ಸಿಗತ್ತೆ ಬಿಡಿ, ಅದಕ್ಕೇನಂತೆ.' ಎಂದು ನುಡಿದು ಸುಮ್ಮನಾದರು. ಆದರೂ ಪಂಕಜಮ್ಮ ಮನದಲ್ಲಿ 'ಜಟ್ಟಿ ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ' ಅಂದ ಹಾಗೆ ಭಾಗಮ್ಮ ಎಂದುಕೊಂಡರು.

ಹೇಗಿದೆ ನೋಡಿ, ಭಾಗಮ್ಮನ ಬಡಾಯಿ. ■

---






# ಈಡೇರಿದ ಆಸೆ

• ಅನಿತಾ ನರೇಶ್ ಮಂಚಿ

ಮೇಲಿನ ಮನೆ ರಾಯರಿಗೆ ತಮ್ಮ ಹೆಸರು ಪೇಪರಿನಲ್ಲಿ ಕಾಣಿಸಿಕೊಳ್ಳಬೇಕೆಂಬ ಆಸೆಯ ಭೂತ ಹಿಡಿಯಿತು. ಈ ಭೂತವೇನೂ ಸುಮ್ಮ ಸುಮ್ಮನೆ ಹಿಡಿದದ್ದಲ್ಲ. ಮೊನ್ನೆ ಮೊನ್ನೆಯಷ್ಟೇ ಚಡ್ಡಿಯಲ್ಲಿ ಉಚ್ಚೆ ಹೊಯ್ದುಕೊಳ್ಳುವುದನ್ನು ಬಿಟ್ಟಿದ್ದ ಅವರ ಮೂರೂವರೆ ವರ್ಷದ ಮೊಮ್ಮಗನ ಫೊಟೋ ಪತ್ರಿಕೆಯಲ್ಲಿ ಬಂದದ್ದನ್ನು ಹೆಂಡತಿ ಪಾರ್ವತಮ್ಮನವರು ತಂದು ರಾಯರ ಮೂತಿಗೆ ಹಿಡಿದಿದ್ದರು. ನೋಡ್ರೀ ಇಲ್ಲಿ.. ನಮ್ಮ ಚಿನ್ನು ಫೊಟೋ ಪೇಪರಿನಲ್ಲಿ ಎಷ್ಟು ಮುದ್ದಾಗಿ ಬಂದಿದೆ ನೋಡಿ ಎಂದಿದ್ದರು. ರಾಯರ ಮಬ್ಬು ಕಣ್ಣುಗಳಿಗೇನೂ ಕಾಣದೇ ತಮ್ಮ ಹೈ ಪವರ್ ಕನ್ನಡಕದ ಧೂಳು ಒರೆಸಿ ಕಣ್ಣಿಗೆ ಹಾಕಿಕೊಂಡು ನೋಡಿದಾಗ ಸೊಟ್ಟ ಪಟ್ಟ ಗೆರೆಗಳ ಚಿತ್ರವೊಂದು ಮತ್ತು ಅದನ್ನು ಬಿಡಿಸಿದವರು ಎಂದು ತಮ್ಮ ಮೊಮ್ಮಗ ಚಿನ್ನುವಿನ ಮುದ್ದಾದ ಫೊಟೋವೊಂದನ್ನು ಪತ್ರಿಕೆಯಲ್ಲಿ ಪ್ರಿಂಟ್ ಹಾಕಿದ್ದು ಕಂಡು ಬಂದಿತ್ತು. ಹುಟ್ಟಿ ಇಷ್ಟು ವರ್ಷ ಅದೇನು ಕಡಿದು ಕಟ್ಟೆ ಹಾಕಿದ್ದರೂ ಒಂದು ದಿನವಾದರೂ ತಮ್ಮ ಫೊಟೋ ಪತ್ರಿಕೆಯಲ್ಲಿ ಬಂದದ್ದಿಲ್ಲ ಎಂಬ ಭಾವ ರಾಯರನ್ನು ಕಾಡಲು ತೊಡಗಿತ್ತು.

ಅದಕ್ಕೆ ಗಾಳಿ ಹಾಕುವಂತೆ ರಾಯರ ಪತ್ನಿ ನೋಡ್ರೀ ನಮ್ಮ ಮಗ ವೆಂಕಿಯ ಫೊಟೋ ಪೇಪರಿನಲ್ಲಿ ಬಂದಿದ್ದು ಅವನಿಗೆ ಮೂವತ್ತಾದಾಗ, ಅದೂ ಅವನು ಆಫೀಸಿನಿಂದ ಕೆಲಸದ ಮೇಲೆ ಫಾರಿನ್ನಿಗೆ ಹೋಗುವಾಗ ಅಲ್ವಾ.. ರಾಯರಿಗದು ನೆನಪಾದರೂ ಮೌನವಾಗುಳಿದರು.

ನಂದೂ ಬಂದಿತ್ತಲ್ವಾ ಆವತ್ತು ನಮ್ಮ ಮಹಿಳಾ ಸಮಾಜದ ಶಂಕು ಸ್ಥಾಪನೆಯ ದಿನ ಮಂತ್ರಿಣಿಗೆ ಕೊಡಲಿಕ್ಕೆಂದು ಗುದ್ದಲಿ ಹಿಡ್ಕೊಂಡು ಹಿಂದುಗಡೆಯೇ ನಿಂತಿದ್ದೆ ಅಲ್ವಾ.. ಅಯ್ಯೋ ಆ ಫೊಟೋ ಕ್ಕೆ ಕಟ್ಟು ಹಾಕಿಸಿ ಇಟ್ಟಿದ್ದೆನಲ್ಲಾ.. ಮೊನ್ನೆ ಮನೆಗೆ ಪೈಂಟ್ ಹೊಡೆಯಲು ಬಂದಿದ್ದನಲ್ಲಾ ಪೈಂಟರ್.. ಅವನು ಅದನ್ನು ಬೀಳಿಸಿ ಗಾಜು ಒಡೆದು ಹಾಕಿದ್ದಾನೆ ಕಣ್ರಿ.. ನಿಮ್ಮತ್ರ ಹೇಳೋಕೇ ಮರ್ತು ಹೋಗಿತ್ತು..ಈಗಲೇ ಸರಿ ಮಾಡಿಸಿ ತನ್ನಿ. ಅದರ ಜೊತೆಗೆ ನಮ್ಮ ಚಿನ್ನು ವಿನ ಈ ಸುದ್ದಿಯನ್ನು ಕತ್ತರಿಸಿ ಫ್ರೇಮ್ ಮಾಡಿಸಿ ತಂದು ಬಿಡ್ರಿ ಎಂದು ಸಡಗರದಿಂದ ಒಳಗೆ ಹೋಗಿ ಮಯ ಮಯವಾಗಿ ಕಾಣಿಸುತ್ತಿರುವ ಹಳೇ ಪೇಪರಿನ ತುಣುಕಿರುವ ಗಾಜಿಲ್ಲದ ಫೊಟೋ ಫ್ರೇಮೊಂದನ್ನು ತಂದು ರಾಯರ ಕೈಯಲ್ಲಿಟ್ಟಳು.

ಇದು ರಾಯರ ದುಃಖವನ್ನು ದ್ವಿಗುಣಗೊಳಿಸಿತು.

ಅಷ್ಟು ಹೊತ್ತಿಗೆ ಕೆಲಸದ ಕೆಂಚಮ್ಮ ಮನೆಗೆ ಪಾದಾರ್ಪಣೆ ಮಾಡಿದ್ದಳು.. ಅಯ್ನೋರೇ ನಿಮಗೆ ಹೊಸಾ ಸುದ್ದಿ ಗೊತ್ತಾ ..ಇವತ್ತು ಪೇಪರಿನಲ್ಲಿ ಬಂದಿದೆ ನೋಡಿದ್ರಾ ಎಂದು ಕುತೂಹಲ ಸೃಷ್ಟಿಸುವ ಪ್ರಯತ್ನ ಮಾಡಿದಳು. ರಾಯರಿಗೆ ರಿಟೈರ್ ಆದ ಮೇಲೆ ಕೆಲಸದ ಕೆಂಚಿಯೇ ಮೆಚ್ಚಿನ ನ್ಯೂಸ್ ರಿಪೋರ್ಟರ್. ಮಡದಿ ಪಾರ್ವತಮ್ಮನವರ ಜಾಸೂಸಿಗಿಂತಲೂ ಒಂದು ಕೈ ಮೇಲೇ ಇರುವ ಕೆಂಚಿಯೇ ಅವರಿಗೆ ಫೇವರೆಟ್. ಯಾರ್ಯಾರ ಮನೆಯಲ್ಲಿ ಏನೇನಾಗುತ್ತದೆ ಎಂದು ಕೆಂಚಿಯಷ್ಟು ಪರ್ಫೆಕ್ಟ್ ಆಗಿ ಯಾರೂ ಹೇಳಲಾರರು. ಅವಳಿಗೂ ಮೊಮ್ಮಗನ ಫೊಟೋ ಕಂಡಿರಬಹುದು ಎಂದು



ಯಾವತ್ತಿನಂತೆ ಕುತೂಹಲ ತೋರಿಸದೇ ತೆಪ್ಪಗಾದರು.

ರಾಯರ ಅನ್ಯಮನಸ್ಕತೆಯನ್ನು ಕಂಡರೂ ಕಾಣದಂತೆ ನೆಗ್ಲೆಕ್ಟ್ ಮಾಡಿ ಕೆಂಚಿ ನಮ್ಮ ಪಕ್ಕದ ಮನೆ ಹುಡುಗನ ಫೋಟೋ ಇವತ್ತಿನ ಪೇಪರಿನಲ್ಲಿ ಬಂದಿದೆ ನೋಡಿದ್ರಾ ಎಂದು ಕೇಳುವುದರ ಜೊತೆಗೆ ಪೇಪರಿನಿಂದ ಆ ಪೇಜನ್ನು ತೆಗೆದು ತೋರಿಸಿದಳು. ಪಿಕ್ ಪಾಕೆಟ್ ಮಾಡಿದ ಇಬ್ಬರು ಚೋರರ ಬಂಧನ ಎಂಬ ತಲೆಬರಹದಡಿಯಲ್ಲಿ ಸ್ಲೇಟು ಹಿಡಿದು ನಿಂತಿದ್ದ ಹುಡುಗರಿಬ್ಬರ ಫೋಟೋ ಕಾಣಿಸಿತು. ಅದರಲ್ಲಿ ಒಂದರ ಮೂತಿಗೆ ಬೆರಳು ಹಿಡಿದ ಕೆಂಚಮ್ಮ ಅವನನ್ನು ಪರಿಚಯಿಸಿದಳು.

ಅದಾಗಲೇ ತಲೆಕೆಟ್ಟಂತಿದ್ದ ರಾಯರಿಗೆ ಆ ಹುಡುಗನ ಅದೃಷ್ಟದ ಬಗ್ಗೆಯೂ ಕರುಬುವಂತಾಯಿತು. ಏನಾದರೂ ಸರಿ ನನ್ನ ಫೋಟೋವೂ ಪೇಪರಿನಲ್ಲಿ ಬಂದೇ ತೀರಬೇಕು ಎಂದು ಪ್ರತಿಜ್ಞೆ ಹೊತ್ತರು. ಅದಕ್ಕವರಿಗೆ ನೆನಪಾಗಿದ್ದು ತಮ್ಮ ಹಳೆಯ ಗೆಳೆಯ ಗುಂಡಾಸ್ವಾಮಿ. ಒಂದು ಕಾಲದಲ್ಲಿ ಪತ್ರಕರ್ತ ಎನ್ನಿಸಿಕೊಂಡವನವನು. ಈಗಲೂ ಎಲ್ಲಾ ಪತ್ರಿಕೆಗಳ ಸುದ್ದಿಯನ್ನೂ ಓದಿ ಅದರ ಬಗ್ಗೆ ವಿಮರ್ಶೆ ಮಾಡುವವನು. ನೋಡೋ ಆ ಪೇಪರಿನವನು ಹೀಗೆ ಬರೆದಿದ್ದಾನೆ, ಈ ಪೇಪರಿನವನು ಹಾಗೆ ಬರೆದಿದ್ದಾನೆ. ನನ್ನ ಕೇಳಿದ್ರೆ ಆ ಪೇಪರಿನವನು ಹಾಗೆಯೂ ಈ ಪೇಪರಿನವನು ಹೀಗೆಯೂ ಬರೆಯಬೇಕಿತ್ತು ಎಂದು ಘನಘೋರವಾಗಿ ಚರ್ಚೆ ಮಾಡುವವನು. ಅವನಿಗೆ ಪತ್ರಿಕೆಯವರೆಲ್ಲಾ ಗೊತ್ತೇ ಇರುತ್ತದೆ. ಇನ್ನು ಹೇಗೂ ಈ ತಿಂಗಳ ಕೊನೆಯಲ್ಲಿ ಹುಟ್ಟುಹಬ್ಬ ಬರುತ್ತದಲ್ಲಾ.. ಆ ದಿನ ಗುಂಡಾಸ್ವಾಮಿ ನನಗೆ ವಿಶ್ ಮಾಡಿದಂತೆ ಫೋಟೋ ಹಾಕಿಸಲು ಹೇಳಬೇಕು. ದುಡ್ಡು ನಾನೇ ಕೊಟ್ರಾಯ್ತು. ವಿಷಯ ನಮ್ಮಲ್ಲೇ ಇರುವ ಕಾರಣ ಯಾರಿಗೂ ಗೊತ್ತಾಗದು ಎಂದು ಗಟ್ಟಿ ಮಾಡಿಕೊಂಡು ಹೊರನಡೆದರು.

ಅಂತೂ ಇಂತೂ ರಾಯರು ಕಾದ ದಿನ ಬಂದೇ ಬಿಟ್ಟಿತು. ಬೆಳಗಾಗುತ್ತಿದ್ದಂತೆಯೇ ಪಾರ್ವತಮ್ಮನವರ ಫೋನ್ ಬಡಿದುಕೊಂಡಿತು. ಅವರು ಸ್ಪೀಕರ್ ಹಾಕಿಯೇ ಮಾತನಾಡುವವರಾದ ಕಾರಣ ಅಯ್ಯೋ ಏನಾಯಿತ್ರಿ ರಾಯರಿಗೆ ಕಲ್ಲುಗುಂಡಿನಂತಿದ್ದರಲ್ಲಾ.. ಎಂದು ಹಲುಬುವುದು ಕೇಳಿಸಿತು. ಮತ್ತೆ ಬೆನ್ನು ಬೆನ್ನು ಹೊಡೆದುಕೊಂಡ ಪಾರ್ವತಮ್ಮನವರ ಫೋನುಗಳು ಅದೇ ರಾಗವನ್ನು ಕೊಂಚ ಅತ್ತಿತ್ತ ಮಾಡಿ ಹಾಡತೊಡಗಿದಾಗ ಪಕ್ಕದಲ್ಲೇ ಕುಳಿತ ಪತಿರಾಯರು ಪಾರ್ವತಮ್ಮನವರಿಗೆ ಭೂತ ಕಂಡಂತೆ ಕಾಣಿಸಹತ್ತಿದರು. ರಾಯರು ಓಡಿ ಹೋಗಿ ಪೇಪರ್ ತಂದು ಪುಟ ಬಿಡಿಸಿದರೆ ಶುಭಾಶಯಗಳ ಬದಲು 'ಶ್ರದ್ಧಾಂಜಲಿ' ಎಂದು ಹಾಕಿದ್ದ ವರದಿಯ ಕೆಳಗಡೆ ರಾಯರ ಫೋಟೋವಿತ್ತು.

ಪೇಪರ್ ಹಿಡಿದು ಹಾಗೇ ನೆಲಕ್ಕೊರಗಿದ ರಾಯರು ಇನ್ನೂ ಕೋಮಾದಿಂದ ಮೇಲೆದ್ದಿಲ್ಲವೆಂಬುದು ಕೆಂಚಮ್ಮಳ ಹೊಸಾ ಸುದ್ದಿ. ■

---



## ಪರವಾಗಿಲ್ಲ

ಅಂಕಲ್ : (ಶಾಲೆಗೆ ಹೊರಟಿದ್ದ ಬಾಲಕನನ್ನು)
'ಬೇಗನೆ ಹೋಗು. ಲೇಟಾಗ್ತಿದೆ'

ಬಾಲಕ : ಪರವಾಗಿಲ್ಲ ಅಂಕಲ್ ಅದು 3 ಗಂಟೆವರೆಗೂ ತೆಗೆದಿರುತ್ತದೆ.'

# ಇಂಗ್ಲಿಷ್ ಬಾರದ ಫಾರಿನ್ ಹುಡುಗಿ

**• ಸಹನಾ ಪ್ರಸಾದ್**

ಯುಗ ಯುಗಾದಿ ಕಳೆದರೂ.. ಅಪಸ್ವರದಲ್ಲಿ ಗುನುಗುನುತ್ತಾ ಚಿತ್ರಾನ್ನ ಕಲೆಸುತ್ತಿದ್ದೆ. ಬೇಗ ಕಣೆ, ಅವರು ಬರುವ ಹೊತ್ತಾಯಿತು ಎಂದು ಅಮ್ಮ ಅವಸರಿಸಿದರು. ಮಾವಿನಕಾಯಿ ಚಿತ್ರಾನ್ನ, ಕೊಸಂಬರಿ, ಹೋಳಿಗೆ ಇವು ಈ ದಿನ ನಮ್ಮ ಮನೆಯ ಅಡುಗೆ. ಅದರ ಜತೆ ಸರ್ಪ್ರೈಸ್ ಕೇಕು ಕೂಡ . ಸ್ಟೀಲ್ ತಟ್ಟೆ ಬಟ್ಟಲುಗಳ ಬದಲು ಎಲ್ಲಾ ಪಿಂಗಾಣಿ ಪಾತ್ರೆಗಳು, ಚಮಚೆಗಳು ರೆಡಿಯಾಗಿದ್ದವು. ಕಾರಣ ಇಷ್ಟೇ, ಅಮೇಲಿಯ ನನ್ನಣ್ಣನ ಮಗ ಜಾನು ಅಂದರೆ ಜವಾಹರ ಮೆಚ್ಚಿವರಿಸಿದ ನವ ವಧು. ಯೂರೋಪಿನವಳು. ಯಾವ ದೇಶವೋ ಗೊತ್ತಿಲ್ಲ. ಫಾರಿನ್ ಹುಡುಗಿ ನಮ್ಮ ಅಮ್ಮು ಎಂದು ನಮ್ಮತ್ತಿಗೆ ಭೋ ಖುಶಿಯಲ್ಲಿ ಎಲ್ಲರಿಗೂ ಹೇಳಿದ್ದಾಗಿತ್ತು. ಇಂದು ಬೆಳಗ್ಗೆ ಭಾರತಕ್ಕೆ ಬಂದಿಳಿದ ಜಾನು- ಅಮ್ಮು ಜೋಡಿಗೆ ನಾವುಗಳು ಅಂದರೆ ನನ್ನ ತವರು ಮನೆ ಕಡೆಯವರೆಲ್ಲ ಒಂದಿಪ್ಪತ್ತು ಜನ ಕಾದಿದ್ದೆವು. ನಮ್ಮೆಲ್ಲರಿಗೊ ಬರುವ ಹರುಕು ಮುರುಕು ಇಂಗ್ಲಿಷ್ ಇನ್ನಷ್ಟು ಹರುಕಾಗಿತ್ತು, ಒಬ್ಬರಿಗೊಬ್ಬರು ಮಾತನಾಡಲೆತ್ನಿಸಿ! ಕೊನೆಗೆ, ಸರಿಯಾಗಿ ಇಂಗ್ಲಿಷ್ ಮಾತಾಡಬಲ್ಲ ನಮ್ಮ ವೇದತ್ತೆ ಒಬ್ಬರೇ ಅಮ್ಮುವನ್ನು ಮಾತಾಡಿಸಬೇಕು, ಮಿಕ್ಕವರೆಲ್ಲ ಚುಪ್ ಆಗಿರಬೇಕು ಎಂದು ನಿರ್ಧರಿಸಿದ್ದೆವು. ವೇದತ್ತೆ ಮಗಳ ಬಾಣಂತನ, ಸೊಸೆಯ ಮಗು ಚೌಲ ಎಂದು ಹಲವಾರು ಬಾರಿ ವಿದೇಶ ಯಾತ್ರೆ ಮುಗಿಸಿ ಠುಸ್ ಪುಸ್ ಇಂಗ್ಲಿಷ್ ಕಲಿತಿದ್ದರು. ಅವರ ವೇಷ ಭೂಷಣವೂ ಸ್ಮಾರ್ಟ್. ನಮ್ಮಗಳ ಹಾಗೆ ಒಡ್ಡೊಡ್ಡಾಗಿ ಸೀರೆ ಸುತ್ತದೆ, ನಾಜೂಕಾಗಿ ಪಿನ್ ಹಾಕಿ ಉಡುವರು. ನಮ್ಮಗಳ ಗುಂಗುರು ಕೂದಲು ಅಂಕೆಗೆ ಸಿಕ್ಕದೆ ಹಾರಾಡುತ್ತಿದ್ದರೆ, ಅವರ ತುರುಬು ನೀಟಾಗಿ ಕಟ್ಟಲ್ಪಟ್ಟಿರುತ್ತಿತ್ತು.

ಮಧ್ಯಾಹ್ನ ಸುಮಾರು 12.30 ಗೆ ಕಾರ್ ಶಬ್ದ ಕೇಳಿ ಎಲ್ಲರೂ ಹೊರ ಓಡಿದೆವು. ಜಾನು ಒಳ್ಳೆಯ ಜುಬ್ಬ, ಪಂಚೆ ಧರಿಸಿ ಕೆಳಗಿಳಿದ. ಚಿಕ್ಕ ಫ್ರಾಕ್ ತೊಟ್ಟ ಹೆಣ್ಣಿನ ಚಿತ್ರ ನಮ್ಮೆಲ್ಲರ ಕಣ್ಣಲ್ಲಿರುವಾಗಲೇ ರೇಷಿಮೆ ಸೀರೆ ಉಟ್ಟು, ವೇದತ್ತೆಗಿಂತ ಸೊಗಸಾಗಿ ತಲೆ ಬಾಚಿ ಮೈ ತುಂಬ ಒಡವೆ ಹೇರಿಕೊಂಡ ವಿದೇಶಿ ಹೆಣ್ಣು ಕೆಳಗಿಳಿದಾಗ ನಾವೆಲ್ಲ ಬಿಟ್ಟ ಕಣ್ಣು ಬಾಯಿ ಒಳ್ಳೆ ಕಾಮೇಡಿ ತರಹ ಕಾಣುತ್ತಿತ್ತು. ಆರತಿ ತಟ್ಟೆ ಹಿಡಿದು ಪೆಚ್ಚುಪೆಚ್ಚಾಗಿ ನಿಂತಿದ್ದ ಹೆಂಡತಿಯನ್ನು ಅಣ್ಣ ತಿವಿದ ಮೇಲೆ, ಮುತ್ತೈದೆಯರಿಬ್ಬರು ಆರತಿ ಬೆಳಗಿ ಸೇರಕ್ಕಿ ಎಡವಿಸಿ ಹೊಸ ಜೋಡಿಯನ್ನು ಬರಮಾಡಿಕೊಂಡೆವು.

ವೇದತ್ತೆ ಒಂಥರ ತಬ್ಬಿಬ್ಬಾಗಿದ್ದು ನೋಡಿ, ಸುಮಾರು ಜನ ತಮಗೆ ಗೊತ್ತಿದ್ದ ಇಂಗ್ಲಿಸ್ ಉಪಯೋಗಿಸಲು ಹೆಣಗಾಡಿದರು. ಯೂ ವಾಟರ್? ಯೂ ಮಿಲಕ್? ಹೌ ಯೂ ಯೂ ಸುಸ್ತ್? ಎಲ್ಲದಕ್ಕು ಅವಳ ಮುಗುಳು ನಗುವೇ ಉತ್ತರವಾಗಿತ್ತು. ಜಾನು ಕೂಡ ಸೈಲೆಂಟಾಗಿ ಮಜ ತೊಗೋತಿದ್ದ. ಕೊನೆಗೆ ಕಾಲು ತೊಳೀತೀಯ ಎನ್ನುವುದಕ್ಕೆ ನಾನು ವಾಶ್ ಲೆಗ್? ಅಂದಾಗ ಇಬ್ಬರೂ ಮುಸಿ ಮುಸಿ ನಕ್ಕರು.

ನಾ ಹೇಳಿದ್ದೆ ಅತ್ತೆ, ನೀವು ಈ ಪ್ರಶ್ನೆ ಕೇಳೇ ಕೇಳುತ್ತೀರ, ನೀವು ಬಾರಿ ಬಾರಿ ಕಾಲು ತೊಳೆಯುವುದು ಎಲ್ಲರಿಗೂ ಗೊತ್ತಿದೆ. ಅದಕ್ಕೆ ಪಾಪ, ನಿಮಗೆ ಎಲ್ಲರ ಬಗ್ಗೆ ಕಾಳಜಿ ಮುಖ ಕೆಂಪಾಗಿಸಿಕೊಂಡು ನಾ ನುಡಿದೆ. ಅಲ್ಲವೋ ಬಚ್ಚಲು ಮನೆಗೆ ಹೋಗಬೇಕಾ ಎಂದು ನುಡಿದರೆ ಸರಿ ಕೇಳುವುದಿಲ್ಲ, ಅದಕ್ಕೆ ಕಾಲು ತೊಳೆಯಬೇಕಾ ಎನ್ನುತ್ತೇನೆ.



ಇರಲಿ ಅತ್ತೆ, ನೀವೆಲ್ಲ ಆರಾಮವಾಗಿರಿ, ಅವಳಿಗೆ ಇಂಗ್ಲಿಷ್ ಬರಲ್ಲ, ಸ್ಪಾನಿಷ್ ಅವಳು ಅಷ್ಟರಲ್ಲಿ ಊ ಪೀಟ್ಸಾ ಎಂದು ಚಿಂಟು ಕೂಗಿ, ಅವನಕ್ಕ ಅವನ ತಲೆ ಕುಟ್ಟಿ ಅಯ್ಯೊ, ಅದು ಇಟಲಿಯದು ಕಣೊ ಎಂದು ತನ್ನ ತಿಳುವಳಿಕೆ ಪ್ರದರ್ಶಿಸಿದ್ದು ಆಯಿತು. ನಿಮ್ಮೆಲ್ಲರಿಗೂ ಧನ್ಯವಾದಗಳು. ನನ್ನೊಡನೆ ಕನ್ನಡ ಮಾತಾಡಿ, ದಯವಿಟ್ಟು ನಿಧಾನವಾಗಿ ಬೇರೆ ಧಾಟಿಯಾದರೂ ಸ್ಪಷ್ಟವಾಗಿ ಮಾತಾಡಿದ ಅವಳನ್ನು ಕೇಳಿ ನಾವೆಲ್ಲಾ ಮತ್ತೆ ಚುಪ್! ನಮ್ಮ ಮನೆಯಲ್ಲಿ ಸಂಪೂರ್ಣವಾಗಿ ಬೆರೆಯಲು ಅವಳು ನಿರಂತರ ಕನ್ನಡ ಭಾಷೆ ಅಭ್ಯಾಸ ಮಾಡಿದ್ದಾಳೆ. ಈ ಸೀರೆ ಉಟ್ಟಿದ್ದೂ ಅವಳೇನೆ! ಇದರ ಮತ್ತು ಒಡವೆಗಳ ಶಾಪ್ಪಿಂಗ್ ಮಾಡಲು ನನ್ನ ಇಡೀ ಅರ್ಧ ವರುಷದ ಸಂಬಳ ಖರ್ಚಾಗಿದೆ! ತರಲೆಯಾದ ಅವನ ತಮ್ಮ ಇರಲು ಬಿಡೋ ನೆರಿಗೆ ಹಿಡಿದ್ದಿದ್ದು, ಸೆರಗು ಪಿನ್ ಮಾಡಿದ್ದು ನೀ ತಾನೆ? ಎಂದಾಗ ಅಷ್ಟು ಹೊತ್ತಿಗೆ ಕವಿದಿದ್ದ ಒತ್ತಡ ಕಡಿಮೆಯಾಗಿ ವಾತಾವರಣ ತಿಳಿಯಾಯಿತು. ಎಲ್ಲರೂ ಒಟ್ಟಿಗೆ ಮಾತಾಡಲು ಶುರು ಮಾಡಿದರು, ಕೇಕು ಮಕ್ಕಳ ಪಾಲಾಯಿತು. ಹೋಳಿಗೆಯನ್ನು ತುಪ್ಪ ಹಾಲಿನೊಂದಿಗೆ ಸವಿಯುತ್ತಿದ್ದ ಅವಳನ್ನು ನೋಡಿ ನಮ್ಮತ್ತಿಗೆ, ನೊಡಿದ್ರಾ ನನ್ನ ಮಗನನ್ನು, ಮನೆಗೆ ಹೊಂದಿಕೊಳ್ಳುವ ಹುಡುಗಿಯನ್ನೇ ಹುಡುಕಿದ್ದಾನೆ! ಎನ್ನುವಲ್ಲಿಗೆ ಉಗಾದಿ ಹಬ್ಬ ಸಂಪನ್ನವಾಯಿತು. ■

## ರೋಗ ಪತ್ತೆ ಹೇಗೆ

ಒಬ್ಬ ಪತ್ರಿಕಾ ಪ್ರತಿನಿಧಿ ಮಾನಸಿಕ ವೈದ್ಯರನ್ನು ಸಂದರ್ಶಿಸಲು ಆಸ್ಪತ್ರೆಗೆ ಹೋದ.

| | |
|---|---|
| ಪತ್ರಿಕಾ ಪ್ರತಿನಿಧಿ: | ನಿಮ್ಮಲ್ಲಿಗೆ ಬರುವ ಮಾನಸಿಕ ರೋಗಿಗಳನ್ನು ಹೇಗೆ ಪತ್ತೆ ಮಾಡುತ್ತೀರಿ. ಮೊದಲು ಅವರಿಗೆ ಹೇಗೆ ಚಿಕಿತ್ಸೆ ಪ್ರಾರಂಭಿಸುತ್ತೀರಿ |
| ವೈದ್ಯರು | ಮೊದಲು ಅಂಥವರನ್ನು ನೀರು ತುಂಬಿದ ಬಾತ್ ಟಬ್ಬಲ್ಲಿ ಕೂರಿಸಿ ಅದರಲ್ಲಿರುವ ನೀರನ್ನು ಖಾಲಿ ಮಾಡಿ ಎಂದು ಹೇಳಿ ಅವರಿಗೆ ಒಂದು ಚಮಚ ಮತ್ತು ಒಂದು ಬಕೇಟು ಕೊಡುತ್ತೀವಿ |
| ಪತ್ರಿಕಾ ಪ್ರತಿನಿಧಿ | ಓ ಗೊತ್ತಾಯ್ತು ಬಿಡಿ. ಸಾಮಾನ್ಯ ನಾಗರೀಕರಾದರೆ ಬಕೇಟಿಂದ ನೀರು ಖಾಲಿ ಮಾಡ್ತಾರೆ ಅಲ್ವಾ? |
| ವೈದ್ಯರು | ಅಲ್ಲಾ. ಚೈನ್ ಎಳೆದು ನೀರನ್ನು ಒಂದೇ ಸಾರಿಗೆ ಖಾಲಿ ಮಾಡ್ತಾರೆ. |
| | ನೀವು ಒಂದೆರಡು ದಿನ ಇಲ್ಲಿ ಅಡ್ಮಿಟ್ ಆಗಿ. ನಿಮ್ಮನ್ನು ಸರಿ ಮಾಡಿ ಕಳಿಸುತ್ತೇವೆ |



ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

# ತುಂತುರು



**- ದಂನಆ**

- ಬೆಳಗಾಗಿ ಏಳುತ್ತಿದ್ದಂತೆ ನಿಮಗೆ ಇಂತಹ ಸಂದೇಶ ಕೇಳಿಬಂದರೆ ಹೇಗಿರುತ್ತದೆ: "ದಯವಿಟ್ಟು ಗಮನಿಸಿ. ಈ ದಿನ ರದ್ದು ಮಾಡಲಾಗಿದೆ. ನೀವು ನಿದ್ದೆಗೆ ಮರಳಬಹುದು." ವಾವ್!
- ಭಾರತದಲ್ಲಿ ಮೆರಿಟ್, ಶ್ರೇಷ್ಠತೆ ಅಥವಾ ಸಮಾನತೆಗೆ ಮತ ಬ್ಯಾಂಕ್ ಇಲ್ಲ.
- ದಿ ಟೇಸ್ಟ್ ಆಫ್ ಯುವರ್ ಲೈಫ್ ಡಿಪೆಂಡ್ಸ್ ಆನ್ ದಿ ಸ್ಪೈಸಸ್ ಯು ಯೂಸ್ ಟು ಕುಕ್ ಇಟ್.
- ದಸರಾಗೆ ದೂಸರಾ ಉಂಟೆ?
- ಮಾಡರ್ನ್ ಮ್ಯಾನ್ ಈಸ್ ಸೊ ಬ್ಯುಸಿ ಅರ್ನಿಂಗ್ ಎ ಲಿವಿಂಗ್ ದಟ್ ಹಿ ಹ್ಯಾಸ್ ನೊ ಟೈಮ್ ಟು ಲಿವ್.
- ಟೀ ಶರ್ಟ್ ಮೇಲೆ ಕಂಡದ್ದು: ಐ ಅಮ್ ಅಲ್‌ಮೋಸ್ಟ್ ಫೇಮಸ್.
- ಬದುಕು ಸರಿಯಾಗಿ ಸಾಗುತ್ತಿದ್ದರೆ ಹೊಸ ವರ್ಷಕ್ಕೆ ನಿರ್ಣಯಗಳನ್ನು ಮಾಡಬೇಕಾದ ಅವಶ್ಯಕತೆಯೇ ಬರುವುದಿಲ್ಲ.
- ನಿದ್ದೆ ಮೆದುಳಿಗೆ ಅಷ್ಟು ಅವಶ್ಯಕ ಎಂದಿದ್ದರೆ ಶಾಲೆಯಲ್ಲಿ ನಿದ್ರಿಸಲು ಅನುಮತಿ ಏಕಿಲ್ಲ?
- ಯುದ್ಧ ಟಿವಿಗೆ ಒಳ್ಳೆಯ ವಸ್ತು ಆಗಬಹುದು. ಆದರೆ ಆ್ಯಂಕರ್‌ಗಳಿಗೆ ಕಮರ್ಷಿಯಲ್ ಬ್ರೇಕ್ ಇರುತ್ತದೆ, ಸೈನಿಕರಿಗೆ ಆ ಸೌಲಭ್ಯ ಇರುವುದಿಲ್ಲ.
- ಎ ಗುಡ್ ಲಾಫ್ ಅಂಡ್ ಲಾಂಗ್ ಸ್ಲೀಪ್ ಆರ್ ಟು ಬೆಸ್ಟ್ ಕ್ಯೂರ್ಸ್ ಫಾರ್ ಎನಿಥಿಂಗ್. ಇಫ್ ಯು ಹ್ಯಾವ್ ಹ್ಯಾಡ್ ಒನ್ ಇಟ್ ಈಸ್ ಟೈಂ ಫಾರ್ ದಿ ಅದರ್.
- ಇತ್ತೀಚೆಗೆ ಹೊಸ ಬಗೆಯ ಎನ್‌ಆರ್‌ಐಗಳು ಕಾಣಿಸಿಕೊಂಡಿದ್ದಾರೆ – ನಾನ್ ರಿಟರ್ನಿಂಗ್ ಇಂಡಿಯನ್ಸ್.
- ದುರದೃಷ್ಟಕ್ಕಿಂತ ಅದರ ಬಗ್ಗೆ ಇರುವ ಹೆದರಿಕೆಯೇ ತುಂಬಾ ಕೆಟ್ಟದ್ದು.
- ನಿಮಗೆ ನಿಜವಾಗಿಯೂ ಅಗತ್ಯವಾಗಿರುವದನ್ನೆಲ್ಲ ಸುಲಭವಾಗಿ ಸಂಪಾದಿಸಬಹುದು. ಆದರೆ ಅನಗತ್ಯವಾದುದನ್ನು ಸಂಪಾದಿಸಲು ಹೆಣಗಾಟ ಅನಿವಾರ್ಯ.
- ನಾನು ನಾಸ್ತಿಕನಾಗಿರುವುದು ದೇವರ ಇಚ್ಛೆ.
- ಎನರ್ಜಿ ಈಸ್ ರ್‍ಯಾದರ್ ಲೈಕ್ ಮನಿ. ಇಫ್ ಯು ಹ್ಯಾವ್ ಅ ಪಾಸಿಟಿವ್ ಬ್ಯಾಂಕ್ ಬ್ಯಾಲೆನ್ಸ್ ಯು ಕೆನ್ ಡಿಸ್ಟ್ರಿಬ್ಯೂಟ್ ಇಟ್ ವೇರಿಯಸ್ ವೇಸ್. ■



# ಬಿಸಿನೆಸ್ ನೆಟ್ವರ್ಕ್

• ಇ.ಆರ್. ರಾಮಚಂದ್ರನ್

ಇತ್ತೀಚಿಗೆ ಮೈಸೂರಿನಲ್ಲಿ ಕಳ್ಳತನಗಳು ವಿಪರೀತವಾಗಿಬಿಟ್ಟಿದೆ. ಎಲ್ಲೆಲ್ಲಿ ನೋಡಿದರೂ ಸರಗಳನ್ನು ಕಳೆದುಕೊಂಡವರು, ಕಾರಿನಲ್ಲಿ ದುಡ್ಡಿಟ್ಟು ಭದ್ರವಾಗಿದೆಯೆಂದು ಹೋಗಿ ದುಡ್ಡು ಕಳೆದುಕೊಂಡವರ ಸಂಖ್ಯೆ ದಿನೇ ದಿನೇ ಏರುತ್ತಿದೆ.

ಯಾಕೆ ಹೀಗಾಗುತ್ತಿಯೆಂದು ತಿಳಿಯಲು ಪೋಲೀಸ್ ಸ್ಟೇಷನ್ಗೆ ಹೋಗಿ ನನಗೆ ಪರಿಚಯವಾಗಿದ್ದ ಸಬ್ ಇನ್ಸ್‌ಪೆಕ್ಟರ್ ಮಂಡಗದ್ದೆ ಹುಲ್ಕಡ್ಡಿಯವರಿಗೆ ಕೇಳಿದೆ. 'ಯಾಕ್ಸಾರ್ ಬೆಳ್ಳಂಬೆಳಿಗ್ಗೆ ನಮಗೆ ಅವಮಾನ ಮಾಡ್ತೀರ? ನಮಗೆ ಗೊತ್ತಿದ್ರೆ ನಾವೇ ಅವರನ್ನ ಹಿಡಿದು ಪೇಪರ್ಗೆ ನ್ಯೂಸ್ ಕೊಡ್ತಿರ್ಲಿಲ್ವಾ?' ಅಂತ ಹುಲ್ಕಡ್ಡಿ ಉರಿದು ಬಿದ್ರು.

ಸಂತೇಪೇಟೆಗೆ ಹೋದ್ರೆ ಅಲ್ಲಿ ಇದಕ್ಕೆಲ್ಲಾ ಕಂಡಿತ ಮಾಹಿತಿ ಸಿಕ್ಕೇ ಸಿಗುತ್ತೇಂತ ಗೊತ್ತಾಯಿತು. ಮೂವರನ್ನು ನೋಡಿದ ಮೇಲೆ ಕೊನೆಗೆ ಇದಕ್ಕೆಲ್ಲಾ ಕಿಂಗ್ ಪಿನ್ ಆಗಿದ್ದ ಜಾನಿ ಹತ್ರ ಹೋದೆ.

ನಮ್ಮ ಸಿನಿಮಾ ಸ್ಟಾರ್ಸ್ ತರಹ  ಹೆಸರಿಗೆ ಮುಂಚೆ ಕಲರ್ಫುಲ್ ಬಿರಿದು ನಾಮಾವಳಿ ಇಟ್ಟುಕೊಂಡಿರುವ  'ಸ್ಮಾರ್ಟಫೋನ್ ಜಾನಿ' ಸಿಕ್ದ. ಜಾನಿಗೆ ಅಬ್ಬಬ್ಬ ಅಂದ್ರೆ 17 ವರ್ಷ ಇರ್ಬಹುದು. ಅವನ ಹತ್ರ ಕೆಲ್ಸ ಮಾಡೋವ್ರನ್ನ ನೋಡಿದ್ರೆ ಎಲ್ಲಾ 15 ವರ್ಷದ ಕೆಳಗೇ. ನಾನು ಹೋದಾಗ ಜಾನಿ ಒಂದರ ಫೋನಿನಿಂದ ಇನ್ನೊಂದು ಫೋನಿಗೆ ಸಿಮ್ ಕಾರ್ಡ್ ಬದಲಾಯಿಸುತ್ತಿದ್ದ.

ನನ್ನ ಪೂರ್ವಿಕರು ಯಾರು, ನನ್ನ ಯಾರು ಕಳಿಸಿದರು ಎಂದು ಮಾಹಿತಿ ಸಿಕ್ಕಿದ ಮೇಲೆ ಮಾತನಾಡಲು ಒಪ್ಪಿದ. 'ಟ್ರೇಡು ಸೀಕ್ರೆಟ್ಟು ಬಿರ್ಲಾ ಟಾಟ ಹಿಡಿದು ಈಗ ಅಂಬಾನಿ ಸೇರಿ ಯಾರೂ ಟ್ರೇಡು ಸೀಕ್ರೆಟ್ಟು ಬಿಟ್ಕೊಡಕ್ಕಿಲ್ಲ.. ನನ್ ಬಾಸ್ ಕಡೆಯಿಂದ  ಬಂದೀದೀರ.. ಅದ್ಕೆ ನಿಂಜೊತೆ ಮಾತಾಡ್ತಿನಿ..'

'ಜಾನಿ, ಬ್ಯಾಂಕಿನಿಂದ ಸಾವಿರಗಟ್ಟಲೆ ತಂದ ದುಡ್ಡನ್ನು ಹೇಗೆ ಹೊಡೀತಾರೆ?'

'ನೋಡಿ ಗುರೂ! ಇದು ನಮ್ ಜನಗಳೇ ನಮ್ಗೆ ಬಾಳ ಹೆಲ್ಪ್ ಮಾಡ್ತಾರೆ!'

' ಅಂದ್ರೆ ದುಡ್ಡು ಕಳ್ಕೊಂಡವ್ರೇ ನಿಮ್ಗೆ ಹೆಲ್ಪ ಮಾಡ್ತಾರಾ! ಅದ್ಹೇಗೆ?'

'ಅದು ಆಮೇಲೆ ಏಳ್ತೀನಿ...ನಮ್ಮ ಹುಡುಗರ್ನ ನಾನು ಬ್ಯಾಂಕ್ ಅತ್ರ ಬಿಟ್ಟರ್ತೀನಿ. ಅವರ್ ಕೈಗೆಲ್ಲಾ  ಸ್ಮಾರ್ಟ ಫೋನ್ ಓಡಾಡಕ್ಕೆ ಹಿರೊ ಮೋಟಾರ್ ಸೈಕಲ್ ಕೊಟ್ಟಿವ್ನಿ. ಪಾರ್ಟಿ ಕಾರ್ ನಿಲ್ಲಿಸ್ಬಿಟ್ಟು ಬ್ಯಾಂಕ್ಗೆ ಹೋದ್ರೆ, ಕಾರ್ ಪಾರ್ಕ್‌ನಿಂದ 'ರಾಕೆಟ್' ನಂಜ 'ಸಿಮ್ಕಾರ್ಡ' ಸಿವನಿಗೆ ಫೋನ್ ಒಡ್ದು ಡಿಟೇಲ್ಸು ಕೊಡ್ತಾನೆ'.



'ಏನು ಡಿಟೇಲ್ಸ್?'

'ಇದ್ನೂ ನಾನ್ ಯೇಳ್ಬೇಕಾ? ವಾಟ್ಸಪ್ನಲ್ಲಿ ಫೋಟೋ, ಆಸಾಮಿ ಯೆಂಗವ್ನೆ, ಡ್ರೆಸ್ ಪಂಚೆ/ಜೀನ್ಸಾ ನಾಮ, ಟೋಪಿ ಕಾರು ನಂಬರ್ ಎಲ್ಲಾ..'

'ಮತ್ತೆ?'

'ಬ್ಯಾಂಕ್ನಲ್ಲಿ ಸಿವ ಯಾವ್ದಾದ್ರೂ ಫಾರ್ಮ್ ಫಿಲ್ ಮಾಡ್ತಾ ಕುಳ ಎಷ್ಟು ದುಡ್ಡು ಡ್ರಾ ಮಾಡ್ಧ ಅಂತ ಗೊತ್ತಾದಂಗೆ ರಾಕೆಟ್ ನಂಜಂಗೆ ಫೋನ್ ಮಾಡಿ ಏಳ್ತಾನೆ... ಇಲ್ಲೇ ನಮ್ಗೆ ಬಾಳ ಎಲ್ಪು ಪಾರ್ಟಿನೇ ಕೊಡ್ತಾರೆ!'

'ಹೇಗೆ?'

'ಕಾರ್ನಲ್ಲಿ ಒಂದು ಲಕ್ಷ ತಂದು ಇಟ್ಬಿಟ್ಟು ಬಾಗಿಲ್ ಹಾಕಿ ಐದು ರುಪಾಯ್ ಸಿಂಗಲ್ ಟಿ ಕುಡಿಯಕ್ಕೆ, ಇಲ್ಲ ಅಂಬಾಳ್ ನಸ್ಯ ಮೂಗಿಗ್ ಏರ್ಸಕ್ಕೆ ಅಂಗ್ಡಿಗ್ ಓಗ್ತಾರೆ. ಆಗ ನಮ್ಮ ಕೆಮಿಕಲ್ ಕೃಷ್ಣ , ಬ್ಲೇಡ್ ರಾಮು ಎಲ್ಡು ನಿಮಿಶ್ದಲ್ಲಿ ಕೆಮಿಕಲ್ ಆಕಿ, ಬ್ಲೇಡ್ನಲ್ಲಿ ಹಿಂದುಗಡೆ ಗ್ಲಾಸ್ ಕಟ್ಟುಮಾಡಿ ಬ್ಯಾಗನಿಂದ ದುಡ್ಡು ತೆಗೆದು ಬ್ಯಾಗ್ ಅಲ್ಲೇ ಆಕಿ ಗ್ಲಾಸ್‌ನ ಫೆವಿಕಾಲ್‌ನ ಆಕಿ ಮುಚ್ಬಿಟ್ಟು ಎಸ್ಕೇಪ್ ಆಗ್ತಾರೆ.. ಪಾರ್ಟಿಗೆ ಗೊತ್ತಾಗೋದು ಮನೆ ಸೇರ್ದಾಗ್ಲೇ. ಅಲ್ಲಿ ಬೊಂಬ್ಡ ವಡೀತಾನೆ. ಓದ ವಾರ ಇನ್ನೊಂದು ಕೇಸು ಸಿಗ್ತು..'

'ಏನದು'?

'ನಗುವನ ಅಳ್ಳಿ ಟೊಬ್ಯಾಕೊ ಗೌಡ ಮೈಸೂರಿಗ್ ಬಂದು ಎರಡು ಲಕ್ಸ ಡ್ರಾ ಮಾಡಿ, ದುಡ್ನ ಸ್ಕೂಟರ್ ಡಿಕ್ಕೀಲಿಟ್ಟು ಅವ್ನ ಉಡ್ಗನ್ನ ಕರ್‍ಕೊಂಡು ಇಬ್ರೂ ಗೋಡೆ ಉರುಳ್ಸೋಕೆ ಓದ್ರು.. ಅವ್ರು ಗೋಡೆಗ್ಹೋಗಿ ಮುಗಿಸಿ ಬರೋದ್ರೊಳಗೆ ನಮ್ಮುಡುಗ್ರು ಕೆಲ್ಸ ಮುಗ್ಸಿದ್ರು..'

'ಹ..ಹ... ಮದ್ಯೆ ಯಾರಾದ್ರೂ ಬಂದ್ರೆ ಏನ್ಮಾಡ್ತೀರಿ?'

'ನಾನಿಲ್ವಾ! ನಾನು ಅವರ್ಗೆ ಸಂಜೀವಿನಿ ಆಸ್ಪೆಟಲ್ ಅಡ್ರೆಸ್ ಕೇಳ್ತಾ ಅವರ್ನ ಪಕ್ಕಕ್ಕೆ ಕರ್‍ಕೊಂಡು ನನ್ನ ಹೆಲ್ತ್ ಪ್ರಾಬ್ಲಮ್, ಕಣ್ಣುರಿ, ಕೈತುರಿ, ಬಾಯಲ್ಲಿ ನೊರೆ ಬರೋದು ಎಲ್ಲಾ ಹೇಳಿ ಸಂಜೀವ್ನಿಗೆ ಯಾವದು ಬಸ್ಸು ಓಗುತ್ತೆ, ಮ್ಯಾಕ್ಸಿ ಕ್ಯಾಬು ಓಗುತ್ತಾ ಅಂತಾ ಅವ್ನ ಕೈಇಡ್ಕೊಂಡು ಜೋರಾಗಿ ಅಳ್ತೀನಿ.. ನಮ್ ಜನಗೋಳು ಬಾಳ ಹೆಲ್ಪ್ ಮಾಡ್ತಾರೆ. ನಾನೂ ಅಲ್ಲೇ ಓಗ್ತಿದೀನಿ ಬಾ ಅಂತಾರೆ. ಕಷ್ಟ ಪಟ್ಟು ಬಿಡಸ್ಕೊಂಡಿದೀನಿ ಅವ್ರಿಂದ..'

'ಕಾರ್ನವರೇ ಬೇಗ ಬಂದ್ರೆ?'

'ಐ! ನೀವು ಏನು ಪೊಲಿಸ್ ತರ ಕ್ರಾಸ್ ಎಜಾಮ್ ಮಾಡ್ತೀರಲ್ಲಾ..? ನಮ್ ಸಿಮ್ಕಾರ್ಡ್ ಸಿವ ಅವರ್ಗೆ ದಾರೀಲಿ ಸಿಮ್ಕಾರ್ಡ್ ಸ್ಕೀಮ್‌ಗಳು ಏಳಿ ನಿಲ್ಲಿಸ್ಕೊಳತಾನೆ. ಅಲ್ಲೇ ಎರೆಡೆರೆಡು ಕಾರ್ಡ್ ಮೊಬೈಲ್ಗೆ ಆಕಿ ಅವರ್ ಕೈಗೆ ಎರಡು ಮೊಬೈಲ್ ಕೊಟ್ಟು ವೀಡಿಯೋ ತೋರಿಸ್ತಾನೆ... ಅವ್ರಿಗೆ ವೀಡಿಯೋ ಇಷ್ಟಾ ಆಗೇ ಆಗ್ತದೇ.. ಇನ್ನು ರವಷ್ಟು ನೋಡುವಾಂತ ಅವ್ರು ಅಲ್ಲೇ ಕಲ್ಬೆಂಚ್ನಲ್ಲಿ ಕೂತ್ಬಿಡ್ತಾರೆ.. ಇನ್ನಷ್ಟು ಸಿಮ್ ಕಾರ್ಡ್ ತೆಗಿತಾನೆ... ಸಿವನ್ ಕೈಲಿಂದ ಬಿಡಿಸ್ಕೊಂಡು ಬರೋದು ಬಾಳ ಕಷ್ಟ. ನಾವು ಇಷ್ಟು ದಿವ್ಸ ಕೆಲ್ಸ ಮಾಡೀದೀವಿ. ನೀವು ಕೇಳಿದ್ದು ಯಾವ್ದೂ ಆಗಿಲ್ಲ. ಹೋದ್ವಾರ ಮೇಡಮ್ ಒಬ್ರು ಐವತ್ತು ಸಾವ್ರ ಕಾರ್ನಲ್ಲಿ ಮಡ್ಗಿ ಮನೆಗೆ ಪಾವ್ ಕಿಲೊ ಎಳ್ಚಿಹಣ್ಣು ತರೋಕೆ ಓದ್ರು. ಅದ್ಕೆ ಅತ್ತೇ ರೂಪಾಯಿ. ಮನೇಲಿ ಅವ್ರಿಗೆ ಸಿಕ್ಕಿದ್ದು ಆ ಅಣ್ಣೆ! ನಂಗೇ ಬೇಜಾರಾಯ್ತು.. ರಾಮು ಕೃಷ್ಣ ಸೇರಿ ಕೆಲ್ಸ ಮುಗ್ಸಿದ್ದರು'.

'ನಿಂದು ಬಿಸಿನೆಸ್ ಹೇಗೆ?'



'ಸೀಸನ್ ಮೇಲೆ ಓಗ್ತದೆ... ಮದ್ವೆ ಟೈಮ್ನಲ್ಲಿ ನಾವು ಭೀಮ ಜ್ಯೂವೆಲರ್ಸ್ ತೊಳಸಿ ಜ್ಯೂವಲರ್ಸ್ ಅಲ್ಲಿಗೆ ಶಿಫ್ಟ್ ಆಗ್ತೀವಿ.. ಅಲ್ಲಿ ಗಾಡಿ ಬಾಳ ಬರ್ತವೆ. ಮತ್ತೆ ರಾಧ ಸಿಲ್ಕ್ , ಪಿಎಸ್ ಆರ್ ಸಿಲ್ಕ್ಸ್‌ನಲ್ಲಿ ಗಾಡಿಗಳು ಬರ್ತವೆ.. ಮದ್ಯಾಹ್ನ ಬಿಸಿಲು ಜೋರಾಗಿ ಇರ್‍ತೈತೆ. ಆಗ ನಮ್ದೇ ಜ್ಯೂಸ್ ಸ್ಟಾಲ್ ಆಕ್ತಿವಿ! ಕಾಲೇಜ್ ಅಡ್ಮಿಸನ್ ಲಾಸ್ಟ್ ಡೇ ಗೆ ಕ್ರೌಡು ಯುವರಾಜ, ಮಹಾರಾಜ ಕಾಲೇಜ್ನಲ್ಲಿ ಬಾಳ ರಷ್ ಇರುತ್ತೆ. ಕ್ಯಾಷು ಜಾಸ್ತಿ ಬರೋ ದಿನ. ಸ್ಪಾಟಲ್ಲೇ ಪ್ಲಾನ್ ಮಾಡ್ತೀವಿ. ಹುಡುಗೀರ್ದು ಫಿಲಮ್ ಸ್ಟಾರ್ಸ್ ಫೋಟೋಹಾಕಿ ಸ್ಟಾಲ್ ಆಕಿ ಸ್ಟೂಡೆಂಟ್ಸ್ಗೆ ತೋರಿಸ್ತೀವಿ. ಅವ್ರು ಬೈಕ್ನ ಡಿಕ್ಕಿಲಿ ದುಡ್ಡು ಇಡ್ತಾರೆ..'

'ನಿಮ್ದು ಬೇರೆ ಏನಾದ್ರೂ ಬಿಸಿನೆಸ್ ಇದ್ಯಾ?'

'ಐತೆ... ಕಾರ್ತಿಕ ಸೋಮವಾರ, ನಂಜನ್ಗೂಡು ತೇರು, ವೈಕುಂಠ ಏಕಾದಸಿ, ಸಿವರಾತ್ರಿ ಆವಾಗ ಕ್ಲೋಸಪ್ ಕ್ಯಾಮೆರಾದಿಂದ ಗೊತ್ತಾಗ್ತದೆ ಚೈನು ಎಷ್ಟು ಪವನೂಂತ.. ನೋಡಿ ಎಳೀತೀವಿ..ಈಗ ಬೆಳಿಗ್ಗೆ ಬಾಳ ಹೆಂಗ್ಸ್ರು ಮಾರ್ನಿಂಗ್ ವಾಕ್ಗೆ ಓಗ್ತಾರೆ.. ಮಾರ್ನಿಂಗ್ ವಾಕ್ ಸಾಯಂಕಾಲಾನೂ ಓಗ್ತಾರೆ.. ಅವ್ರು ಬೇರೇವ್ರಿಗೆ ತೋರ್ಸ್ಲಿಕೆ ನೈಟ್ ಡ್ರೆಸ್ ಮೇಲೆ ನೆಕ್ಲೆಸ್ ಆಕ್ಕೊಂಬರ್ತಾರೆ.... ನಮ್ಮ ಮೊಟರ್ ಸೈಕಲ್ ಟಿಂ ಆಗ ಅಗ್ಲು ರಾತ್ರಿ ದುಡಿತಾರೆ.'

'ಚೈನು ಹೇಗೆ ಎಳೀತಾರೆ?'

'ಅದರಲ್ಲಿ ನಮ್ಮ ಅತ್ತು ವೈಸ್ನ ಉಡುಗ ಅಪ್ಪು ಬೆಸ್ಟು.. ಅವ್ನು ಬೆಳಿಗ್ಗೆ ಮನೆ ಮುಂದೆ ಗುಡ್ಸಿ , ನೀರು ಉಯ್ದು ಸಾರ್ಸುವಾಗ, ನೈಟಿ ಆಕ್ಕೊಂಡು ದೊಪ್ಪ ಚೈನು ಕತ್ನಲ್ಲಿ ಇರುತ್ತಲ್ಲಾ.. ಅದ್ನ ನೋಡಿ ನಮ್ ಅಪ್ಪು, 'ಮೇಡಮ್ ನೀವು ಸಾಕ್ಷಾತ್ ಲಕ್ಷ್ಮಿ ತರಾ ಕಾಣಿಸ್ತೀರಾ.. ಸ್ವಲ್ಪ ಕುಡಿಯೋಕೆ ನೀರು ಕೊಡ್ತಿರಾಮ್ಮ' ಅಂತ ಏಳ್ತಾನೇ ಅವ್ರ ಕೈಯಿಂದ ನೀರಿನ ಲೊಟ ಬದ್ಲು ಕತ್ನಿಂದ ಚೈನ್ನ ಎಗರ್ಸಿ ಮೋಟರ್ ಸೈಕಲ್ನಲ್ಲಿ ಇಲ್ಲಿಗ್ ಬಂದು ಗೋಳೋಂತ ಅಳ್ತಾನೆ! ಬಂಪರ್ ಸೀಸನ್ ತರ ಯಾವ್ದು ಇಲ್ಲ ಬಿಡಿ..'

'ಯಾವ್ದು?'

'ಬಂಪರ್ನಲ್ಲಿ ಅಕ್ಷಯ್ ತ್ರುತೀಯ, ದಸರಾ... ಆಗ ಸುಗ್ಗಿ ಒಡ್ದಂಗೆ. ನಾವು ಯಾರು ರಜಾಕ್ಕೆ ಓಗಲ್ಲ.. ಎಕ್ಷಿಭಿಷನ್ಗೆ ಒಂದು ಗ್ರೂಪು, ಚಾಮುಂಡಿ ಬೆಟ್ಟದ್ ಮೇಲೆ..ಹುಡುಗರ್ನ ಆಕಿರ್‍ತೀನಿ.. ನಾನು ಸೆನ್‌ಟ್ರಲ್ ಪಾಯಿಂಟ್ನಿಂದ ನೆಟ್ವರ್ಕ ನೋಡ್ಕೋತೀನಿ.. ಒಂದಿಷ್ಟು ಹುಡುಗುರ್ನ ರಿಕ್ರೂಟ್ ಮಾಡ್ತಿವಿ.'

'ಬೇರೆ?'

'ಟ್ರೈನಿಂಗ್ ಬೇಕು.. ಅದಕ್ಕೆ ಉಡುಗರ್ನ ಬಾಂಬೆಗೆ ಕಳಿಸ್ತೀನಿ ಅಲ್ಲಿ ಇದ್ಕೆಲ್ಲಾ ಸ್ಕೂಲ್ ಐತಂತೆ. ಸಿಕ್ಕಾಕೊಂಡ್ರೆ ನಮ್ಮ ಜನಗಳೇ ಮದ್ಯ ಬಂದು ನಾಲ್ಕು ಬಾರ್ಸಿ ಕರ್ಕೊಂಡು ಬಂದ್ಬಿಡ್ತಾರೆ. ಇಲ್ದಿದ್ರೆ ಅಲ್ಲಿ ಪಬ್ಲಿಕ್ ಬಾಳ ಒಡೀತಾರೆ. ಇದೆಲ್ಲ ನಾವೂ ಕಲೀತೀವಿ'.

'ಪೊಲೀಸ್ನವ್ರಿಂದ ತೊಂದ್ರೆ ಇಲ್ವಾ?'



' ಐ! ಅವ್ರ ಮಾತ್ ಯಾಕ್ ಈಗ ... ಸಿಟಿಜನ್ಸ್ನ ನೋಡ್ಕೊಳ್ಳೊವ್ರು ಅವ್ರೇ ಅಲ್ವಾ... ಅವ್ರು ನಂಗೂ ಫ್ರೆಂಡ್ಸು ಬಿಡಿಸಾರ್!'

■

# ಚಿಂತ್ಯಾಕೆ ಮಾಡುತೀ...ಚಿಲುಮಯನಿದ್ದಾನೆ....!

**• ಶರತ್ ಕಲ್ಕೋಡ್**

ಲಕ್ಷ...ಕೋಟಿ...ಮೌಲ್ಯದ ಗಾಂಜಾ ವಶಪಡಿಸಿಕೊಂಡ ಸುದ್ದಿ, ಪೇಪರ್‌ನ ಯಾವುದೇ ಮೂಲೆಯಲ್ಲಿದ್ದರೂ ಹಡುಕಿ ಕಣ್ಣಲ್ಲಿಕಣ್ಣಿಟ್ಟು, ಓದುವ ಗೀಳಿನವ ನಾನು.ಎಂಥ ಹುಚ್ಚು ಹವ್ಯಾಸವಿದೆಂದು ಬೇರೆಯವರಿರಲಿ, ನನ್ನನ್ನು ನಾನೇ ಎಷ್ಟೋ ಸಲ ಪ್ರಶ್ನಿಸಿಕೊಂಡದ್ದೂ ಉಂಟು. ಆದರೆ ಬದುಕಿನುದ್ದಕ್ಕೂ ಕೆಲವು ಪ್ರಶ್ನೆಗಳು ಬೆನ್ನಿಗೆ ಬಿದ್ದ ಬೇತಾಳವಾಗಿ ಕಾಡುತ್ತಾವಲ್ಲ; ಅಂಥ ಶೇಷಪ್ರಶ್ನೆಗಳಲ್ಲಿ ನನ್ನ ಪಾಲಿಗೆ ಇದೂ ಒಂದು!

ಗಾಂಜಾ ಕುರಿತ ವಿಶೇಷ ಕುತೂಹಲದ ಹಿಂದೆ ಹುಟ್ಟಿಬೆಳೆದ ಮಲೆನಾಡಿನ ಪರಿಸರವೂ ಕಾರಣವಿರಬಹುದೇ ಎಂಬ ಸಂಶಯ ನನಗೆ! ಬಾಲ್ಯದಿಂದಲೇ ಗಾಂಜಾದ ಮಹಿಮೆ ಕುರಿತು ಕಣ್ಣಾರೆ ಕಂಡ, ಕಿವಿಯಾರೆ ಕೇಳಿದ ಹತ್ತು ಹಲವಾರು ಸ್ವಾರಸ್ಯಕರ ಘಟನೆಗಳ ಜೊತೆಜೊತೆಗೆ ಹೆಚ್ಚಿನ ಮಲೆನಾಡಿಗರ ಮನೆ ಸೂರಂಕ್ಲಲ್ಲೋ, ಹಿತ್ತಲ ಗೊಬ್ಬರ ಗುಂಡಿ ಆಸುಪಾಸಿನ ಸೂರ್ಯ–ಚಂದ್ರಕಾಂತಿ, ತರಾವರಿ ಚೆಂಡುಹೂಗಳ ರಾಶಿ ನಡುವೆ, ನಳನಳಿಸುತ್ತ ಬೆಳೆದ ಭಂಗಿ ಗಿಡಗಳ ವಿಶೇಷ ಆಕರ್ಷಣೆ ಕಾರಣಗಳೂ ಇರಬಹುದು. ನೋಟಕರ ಪಾಲಿಗೆ ಫಕ್ಕನೆ ಚೆಂಡುಹೂ ಗಿಡದ ಹಾಗೆ ಕಾಣುವುದು ಗಾಂಜಾ ಗಿಡದ ವೈಶಿಷ್ಟ್ಯ!

ಆದರೆ ಗಾಂಜಾ ಗಿಡವನ್ನು ರಾಜಾರೋಷಾಗಿ ಬೆಳೆಯಲು ಸಾಧ್ಯವಿಲ್ಲ, ಕದ್ದುಮುಚ್ಚಿ ಬೆಳೆಸುವ ಎಂಟೆದೆಯವರಿಗೆ ಮಾತ್ರ ಸಾಧ್ಯವಾದ ಕಾರ್ಯ, ಯಾಕೆಂದರೆ ಮಾದಕ ವಸ್ತುವಾದ್ದರಿಂದ ಅದನ್ನು ಬೆಳೆಯುವುದು ಕಾನೂನು ದೃಷ್ಟಿಯಲ್ಲಿ ಮಹಾಅಪರಾಧ. ಅಪರಾಧಿಗಳಿಗೆ ಕಠಿಣ ಶಿಕ್ಷೆ, ಜೈಲುವಾಸ ಕಟ್ಟಿಟ್ಟ ಬುತ್ತಿ! ಅದಕ್ಕೆ ಕೆಲ ಸಾಹಸಿ ಮಲೆನಾಡಿಗರು ದಟ್ಟಾರಣ್ಯದ ನಡುವೆ ಗೊತ್ತಾದ ಜಾಗದಲ್ಲಿ ಬೀಜ ಬಿತ್ತಿ ಫಸಲು ಪಡೆಯುವುದು.ಆಗದವರು ಯಾರಾದರೂ ಹಚ್ಚಿ ಕೊಟ್ಟು, ಅರಣ್ಯ ಇಲಾಖೆಯವರು ವಿಚಾರಣೆಗೆ ಬಂದರೆ ಕೈಯೆತ್ತಿ ಎಮಾರಿಸುವುದು ಸುಲಭತಾನೇ!? ಹೆಚ್ಚಿನ ಸಂದರ್ಭಗಳಲ್ಲಿ ಲಂಚದ ಮೂಲಕ ವ್ಯವಹಾರ ಚುಕ್ತಾವಾಗುತ್ತದೆ. ಸ್ಥಳೀಯರೊಂದಿಗೆ, ಅರಣ್ಯ ಇಲಾಖೆಯವರೂ, ರಾಜಕಾರಣಿಗಳು, ದಲ್ಲಾಳಿಗಳು ಶಾಮೀಲಾಗಿ, ರಾಷ್ಟ್ರೀಯ, ಅಂತರ್ರಾಷ್ಟ್ರೀಯ ಗಾಂಜಾ–ಮಾದಕ ವಸ್ತುಗಳ ಮಾರಾಟ ಮಾಡುವ ಮಾಫಿಯಾ ಜಗತ್ತಿನ ವ್ಯವಹಾರ ನಮ್ಮನಿಮ್ಮ ಊಹೆಗೆ ನಿಲುಕದ ಬೇರೆ ಜಗತ್ತು ಬಿಡಿ!

ಹಾಗೆ ನೋಡಿದರೆ ಗಾಂಜಾ ಪದಕ್ಕಿಂತ ಮೊದಲು ನನಗೆ ಪರಿಚಯವಾದದ್ದು ಭಂಗಿ. ಒಂದೇ ವಸ್ತುವಿಗೆ ಎರಡು ಪದಗಳು ಚಾಲ್ತಿಯಲ್ಲಿವೆ ಎಂಬುದು ಗೊತ್ತಾದದ್ದು ಬಹಳ ವರ್ಷಗಳ ಮೇಲೆ!ಸೇದುವುದು, ಕುಡಿಯುವುದು ಮಾತ್ರವಲ್ಲ; ಲೇಹ ಮುಂತಾದ ಔಷಧಿ ತಯಾರಿಕೆಯಲ್ಲಿ ಹಾಗೂ ಮಣಿಯಪ್ಪಚ್ಚಿ ಮುಂತಾದ ತಿಂಡಿತಿನಿಸುಗಳಲ್ಲೂ ಗಾಂಜಾದ ಪವಾಡ ಆಗಾಧವೆಂಬ ಸತ್ಯ ಲೋಕಾನುಭವದಿಂದ ಕ್ರಮೇಣ ಸ್ಪಷ್ಟವಾಗುತ್ತಾ ಬಂದ ಸಂಗತಿ.

ಗಾಂಜಾ ಬಗ್ಗೆ ಇಷ್ಟು ಬಣ್ಣನೆ ಕೇಳಿದ ಮೇಲೆ ನೀವು, "ಓ ಇವ ಸಣ್ಣವನಿದ್ದಾಗಲೇ ಗಾಂಜಾ ಮಜಾ ನೋಡಿರಬೇಕೆಂದುಕೊಳ್ಳಬಹುದು.ಆದರೆ ನಿಮ್ಮ ಊಹೆ



ತಲೆಬುಡವಿಲ್ಲದ್ದು. ನಿಜ ಹೇಳಬೇಕೆಂದರೆ ನನ್ನ "ಧಂ"ನ ಓನಾಮ ಪ್ರಾರಂಭವಾದದ್ದು ಗಾಂಜಾದಿಂದಲ್ಲ; ಬೀಡಿ, ಸಿಗರೇಟ್ ಅವಳಿಜವಳಿಗಳಿಂದ!

ಬಾಲ್ಯ ಕಳೆದದ್ದು ಕೂಡುಕುಟುಂಬದಲ್ಲಿ. ಚಿಕ್ಕಪ್ಪವೊಬ್ಬರು–ಊಟತಿಂಡಿ ಬಿಟ್ಟರೆ–ಉಳಿದ ವಿಷಯಗಳಲ್ಲಿ ಸೋಂಭೇರಿಯೆಂದರೆ ಶುದ್ಧ ಸೋಂಭೇರಿ! ಮಧ್ಯಾಹ್ನ ಊಟವಾದ ಮೇಲೆ ಜಗುಲಿ ಮುಂಡಿಗೇ ಕಂಬಕ್ಕೆ ಒರಗಿ, ಬೀಡಿ ಎಳೆದು, ಹಾಗೇ ಜಾರಿ ಕಾಲುಚಾಚಿ ಗೊರಕೆ ಹೊಡೆದೇಳುವುದು ನಿತ್ಯದ ಪರಿಪಾಠ! ಊಟ ಮಾಡಿ ಹೊಟ್ಟೆ ಮೇಲೆ ಕೈ ಸವರುತ್ತಾ, ಢರ್‌ನೇ ತೇಗುತ್ತಾ ಮುಂಡಿಗೆ ಕಂಬಕ್ಕೆ ಬೆನ್ನು ಉಜ್ಜುತ್ತಾ "ಮಾಣಿ ಬಾ ಇಲ್ಲಿ....ನೀ ಭಾರೀ ಚುರಕಲ್ವಾ ಮಾರಾಯಾ. ಕಲಿಯುವುದರಲ್ಲೂ ಮಹಾ ಹುಷಾರಂತೆ. ನಿನ್ನೆ ಗುಡ್ಡೇಕೇರೀಲ್ಲಿ ಸಿಕ್ಕ ಮೇಸ್ಟ್ರು ನಿನ್ನ ಹೊಗಳಿದ್ದೇ ಹೊಗಳಿದ್ದು! ಎಷ್ಟಾದ್ರೂ ನೀ ನಮ್ಮ ಹುಡ್ಗ ಅಲ್ವಾ? ನೋಡೋವ, ಅಡುಗೆ ಮನೆಗೆ ಹೋಗಿ ಉರಿವ ಸೌದೆ ಕೊಳ್ಳಿಯಲ್ಲಿ, ಬೆರಳು ಸುಟ್ಟು ಕೊಳ್ಳದೆ ಈ ಬೀಡಿ ಹಚ್ಚಿಕೊಂಡು ಬಾ. ನಾ ಕಣ್ಣು ಮುಚ್ಚಿ ಬಿಡೋದ್ರಲ್ಲೀ ನೀ ಕಾರ್ ಬಿಟ್ಟಕೊಂಡು ಪ್ಯಾಂಕ್...ಪ್ಯಾಂಕ್... ಅಂತ ಹಾರನ್ ಮಾಡ್ತಾ ಹೋಗಿ ಬಾ" ಅನ್ನೋರು. ಹಾಗೆ ಅನ್ನೋದೇ ತಡ  ಗಾಡಿ ರಿವರ್ಸ್‌ಗೇರಿಗೆ ಹಾಕಿ ಚಿಕ್ಕಪ್ಪನ ಕೈಯಿಲ್ಲಿದ್ದ ಬೀಡಿ ಛಕ್ಕನೆ ಪಟಕಾಯಿಸಿ ಫಸ್ಟ್ ಗೇರ್‌ಗೆ ಹಾಕಿ ಬಾಯಲ್ಲಿ ಹಾರನ್ ಮಾಡುತ್ತಾ ಓಡಿದರೆ ಗಾಡಿ ನಿಲ್ಲುವುದು ಅಡುಗೆ ಒಲೆಮುಂದೆಯೇ! ಹೆಂಗಸರ ಬೈಗುಳಕ್ಕೆ ಕ್ಯಾರೇ ಎನ್ನದೆ ಉರಿವ ಕೊಳ್ಳಿ ಎಳೆದು ಬೀಡಿ ಹತ್ತಿಸಿಕೊಂಡು ಜಗುಲಿ ಕಡೆ ಹೊರಡುವ ಗಾಡಿಗೆ ಬಂದ ಸ್ಪೀಡ್ ಇರುವುದಿಲ್ಲ. ಅಡುಗೆ ಮನೆ ದಾಟಿದರೆ ಊಟದ ಮನೆ. ಅದಾದ ಮೇಲೆ ಮಾಳಿಗೆ. ಆನಂತರ ಎರಡು ಕೋಣೆ.ಮೆಲ್ಲಮೆಲ್ಲನೆ ಹೆಜ್ಜೆ ಮೇಲೆ ಹೆಜ್ಜೆ ಇಕ್ಕುತ್ತಾ ಜಗುಲಿಯತ್ತ ಸಾಗಬೇಕು. ಆದ್ರೆ ಬೀಡಿ ಆರಬಾರದು. ಕಾಯಕದೆಚ್ಚರ. ಹಾಗಾಗಿ ಬಾಗಿಲು ಮರೆ ಯಾರಿಗೂ ಕಾಣದ ಹಾಗೆ ಕದ್ದುಮುಚ್ಚಿ ನಿಂತು ಎರಡು–ಮೂರು ಧಂ ಎಳೆಯುವುದು ಅನಿವಾರ್ಯ. ಹೊಗೆ, ವಾಸನೆ ಪತ್ತೆಯಾಗದ ಹಾಗೆ ಚಿಕ್ಕಪ್ಪನಿಗೆ ಬೀಡಿ ಕೊಟ್ಟರೆ ಕರ್ತವ್ಯ ನಿರ್ವಹಿಸಿದ ಕೃತಾರ್ಥ ಮುಖಭಾವ! ಕದ್ದು ಬೀಡಿ ಸೇದಿದ ವಿಷಯ ಚಿಕ್ಕಪ್ಪನಿಗೂ ಗೊತ್ತಾಗುತ್ತಿತ್ತು. ಆದರೂ ಅವರು ಕೇಳುವುದಿಲ್ಲವೆಂಬ ಖಾತ್ರಿ ನನಗೆ. ಚಿಕ್ಕಪ್ಪ ಎಂಥ ಉದಾರಚರಿತರು ಎಂದೆಷ್ಟೋ ಸಲ ನನ್ನೊಳಗೆ ನಾನೇ ಅಂದುಕೊಳ್ಳುತ್ತಿದ್ದದ್ದುಂಟು, ಈಗಲೂ!

ಶಾಲೆಗೆ ಹೋಗಲು ಪ್ರಾರಂಭಿಸಿದ ಮೇಲೆ ವೇದ–ಉಪನಿಷತ್ತು, ದೇವರು, ಋಷಿಮುನಿಗಳ ಏಕಾಗ್ರತೆ, ಧ್ಯಾನಾವಸ್ಥೆ, ದೇವಾನುದೇವತೆಗಳ ಮಹಿಮೆ, ದಾನವರ ಉಪಟಳ, ಅದನ್ನು ನಿಗ್ರಹಿಸಲು ಬಳಸಿದ ತಂತ್ರ ಪಠ್ಯದೊಂದಿಗೆ ಸಣ್ಣಪ್ಪ ಮಾಸ್ತರು ವಿವರಿಸುತ್ತಾ ಹೋದ ಹಾಗೇ ಸೋಮ–ರಾಮರಸ ಪ್ರಸ್ತಾಪ ಬಂದು ಪ್ರಾಚೀನಕಾಲದಿಂದಲೂ ಗಾಂಜಾ ಮಹಿಮೆ ಹಾಸುಹೊಕ್ಕಾಗಿರುವುದು ಕಂಡು ನಾನಾ ರೀತಿಯ ಬೆರಗು–ವಿಸ್ಮಯ!



ಸಣ್ಣಪ್ಪ ಮಾಸ್ತರು ಅಸ್ತಮಾ ಪೇಶಂಟು. ಅದರಲ್ಲೂ ನಮ್ಮೂರಿನ ಮಳೆ, ಚಳಿಗಾಲ ಎರಡೂ ಥಂಡಿ ಅವರಿಗೆ ಎಷ್ಟು ಮಾತ್ರಕ್ಕೂ ಹೇಳಿಸಿದ್ದಲ್ಲ. ಜೀವಕ್ಕಂಟಿದ ಅಸ್ತಮಾದ ಪಿಟೀಲಿನ ಸುಯಿ ಸುಯಿ ರಾಗದ ಏದುಸಿರು ತಾರಕಕ್ಕೇರುತ್ತಿತ್ತು. ಅದಕ್ಕೆ ಅವರು ಕಂಡುಕೊಂಡ ಮದ್ದೆಂದರೆ "ಭೋಟಾ ಬೀಡಿ." ಮೂವತ್ತರ ಕಟ್ಟಿನಿಂದ ಬೀಡಿ ತೆಗೆದು ಮಧ್ಯಕ್ಕೆ ಎರಡು ಭಾಗ ತುಂಡರಿಸಿ ಬೀಡಿ ಎಲೆ ಭೋಟುದ್ದ ಕೊಟ್ಟೆ ಕಟ್ಟಿ, ಮೇಲೊಂದು

ಟಿಕೇಟ್ ನೂಲು ಸುತ್ತಿ ಅದರೊಳಗೆ ಬೀಡಿಪುಡಿಯೊಂದಿಗೆ ಗಾಂಜಾ ಹುಡಿ ಮಿಶ್ರ ಮಾಡಿ ತುಂಬಿ, ಬೇಕೆಂದಾಗ ತರಗತಿ ನಡುನಡುವೆ ಆಫೀಸ್ ರೂಂಗೆ ಹೋಗಿ ಕೆಮ್ಮುತ್ತಾ, ಎದೆ ನೇವಿಕೊಳ್ಳುತ್ತಾ, ಎದುಸಿರು ಬಿಡುತ್ತಾ ಪಸುಪುಸನೆ "ಧಂ" ಎಳೆದು, ಸುಧಾರಿಕೊಂಡು ಬಂದು ಪಾಠ ಶುರು ಹಚ್ಚಿದರೆ, ಮತ್ತೆ ದಂ ವಕರಿಸಬೇಕೆ? ಅವರ ಪರಿಪಾಡು ಆ ದೇವರೇ ಬಲ್ಲ! ಆದರೆ ಹಾಡುವುದರಲ್ಲಿ ಮಾತ್ರ ಎತ್ತಿದ ಕೈ. ಏನ್ ಕಂಠ? ಎಂಥ ಮಾಧುರ್ಯ. ಅವರ ನೆನೆದಾಗಲೆಲ್ಲಾ  ನೆನಪಾಗುವುದು ಶಿಶುನಾಳ ಶರೀಫರ ತತ್ವ ಪದ: "ಗುಡುಗುಡಿಯ ಸೇದಿ ನೋಡು...."

ಪ್ರತಿವರ್ಷ ಊರಿನ ರಾಮೋತ್ಸವಕ್ಕೆ ನಮ್ಮ ಶಾಲೆಯ ಆವರಣವೇ ತಾಣ. ಆ ಸಂದರ್ಭದಲ್ಲಿ ಒಮ್ಮೆ ಹರಿಕಥೆ ಮಾಡಲು ಸುರಳಿ ಸುಬ್ಬಯ್ಯ ಎಂಬ ದಾಸರನ್ನು ಕರಸಿದ್ದರು. ಕಥೆ ನಡುವೆ "ಚಿಂತ್ಯಾಕೆ ಮಾಡುತೀ...ಚಿನ್ಮಯನಿದ್ದಾನೆ" ದೇವರ ಮಹಿಮೆ ಕೊಂಡಾಡುತ್ತಾ, ಈಗಿನವರು ದೇವರ ಧ್ಯಾನ ಮಾಡುವುದ ಬಿಟ್ಟು ಮಾದಕವಸ್ತುಗಳ ಕಡೆ ಹೇಗೆ ಆಕರ್ಷಿತರಾಗುತ್ತಾರೆಂದು ಉಪಕಥೆಯೊಂದರಲ್ಲಿ ವರ್ಣಿಸಿ "ಚಿಂತ್ಯಾಕೆ ಮಾಡುತೀ...ಚಿಲುಮಯನಿದ್ದಾನೆ..." ಎಂಬ ಕಾಲ ಬಂದಿದೆ ಎಂದು ಮನಮುಟ್ಟುವಂತೆ ಬಹಳ ರಸವತ್ತಾಗಿ ವರ್ಣಿಸಿದರು.

ತೀರ್ಥಹಳ್ಳಿ ಎಳ್ಳಮಾಸೆ ಜಾತ್ರೆಯೆಂದರೆ ಹುಡುಗರಾಗಿದ್ದ ನಮಗೋ ಎಲ್ಲಿಲ್ಲದ ಸಂಭ್ರಮ. ಗುಬ್ಬಿವೀರಣ್ಣ, ಹಿರಿಯಣ್ಣಯ್ಯ ನಾಟಕಮಂಡಳಿ, ಒಂದಲ್ಲ ಒಂದು ತಪ್ಪದೇ ಕ್ಯಾಂಪ್ ಹಾಕುತ್ತಿದ್ದ ಕಾಲ. ಆ ವರ್ಷ ಹಿರಿಯಣ್ಣಯ್ಯ ಮಿತ್ರ ಮಂಡಲಿ ಕ್ಯಾಂಪ್ ಹಾಕಬೇಕೆ? ಬೇಡಬೇಡವೆಂದು ಹಿರಿಯರು ಎಷ್ಟು ಹೇಳಿದರೂ, ಕೇಳದೇ ಶಾಲು ಹೊದ್ದು ಚಳಿಯಲ್ಲಿ ಗಡಗಡ ನಡಗುತ್ತಾ ಮುದುರಿ ಕುಳಿತು ನಾವು "ಟಿಪ್ಪೂಸುಲ್ತಾನ್" ನಾಟಕ ನೋಡಬೇಕೇ? ಪಾತ್ರಧಾರಿಗಳಾದ ಬುಡನ್ ಸಾಬಿ, ಸಿದ್ಧಾಂತಿಶಾಸ್ತ್ರಿ, ಕೈ ಮುಷ್ಟಿಯೊಳಗೆ ಕೊಳವೆ ಹಿಡಿದು, ಗಾಂಜಾ ಸೇದುತ್ತಾ, ಹೊಗೆ ಕಾರುತ್ತಾ ಎದ್ವಾತದ್ವಾ ತೊದಲುತ್ತಾ, ಲೆಗ್ ಹಾರ್ಮೋನಿಯಂ, ತಬಲ, ಖಂಜರಿ ಗದ್ದಲಗೌಜಿನ ನಡುವೆ ಹಾಡಿದ ಹಾಡು ಇದೋ:

"ಏನೆಂಬುದೋ ರಾಜ ಗಾಂಜಾ ಮಜಾ..."

ಒಂದೇ ಧಂ ಈ ಲೋಕದ್ಮುಸ್ಕಿಲ್ ಮಜಾ

ಮುಂದೆ ಪರಲೋಕಕ್ಕುಳಿಯೋದು ನಾಲ್ಕೇ ಗಜಾ...

ಮಸಲತ್ತು ನಡೆಸುವ ಹಾಸ್ಯ ಸನ್ನಿವೇಶ. ನಟರ ಅಭಿನಯ ಮರೆಯಲು ಸಾಧ್ಯವೇ? ಹಾಗೇ ಅದೇ ವರ್ಷ ಎಳ್ಳಮಾಸೆ ಜಾತ್ರೆಯಲ್ಲೇ ನೋಡಿದ "ವೀರಕೇಸರಿ" ಸಿನಿಮಾದಲ್ಲಿ ನರಸಿಂಹರಾಜು ಲೋಟ ಅದಲುಬದಲು ಮಾಡಿ ಬಾಲಕೃಷ್ಣನನ್ನು ಮಂಗ ಮಾಡಿ ರಾಮರಸ ಕುಡಿಸುವ, ದೃಶ್ಯ ಬಾಲ ಪ್ರೇಕ್ಷಕನಾಗಿದ್ದ ನನ್ನ ಮನದಲ್ಲಿ ಅಚ್ಚೊತ್ತಿದ ಬಗೆ ಹೇಗೆಂದರೆ,– ಆ ನಾಟಕ, ಸಿನಿಮಾದ ಮತ್ತೆಲ್ಲ ಪಾತ್ರ, ಸನ್ನಿವೇಶಗಳು ಲವಲೇಶವೂ ಉಳಿಯದಿದ್ದರೂ, ಅರವತ್ತು, ಅರವತ್ತೈದು ವರ್ಷಗಳ ಬಳಿಕವೂ ಆ ಹಾಸ್ಯ ದೃಶ್ಯಗಳು ಅಚ್ಚೊತ್ತಿರುವ ನೆನಪು ಅಚ್ಚಹಸಿರು!

ಅರ್ಥಸ್ವಾರ್ಥಗಳಿಗೆ ಅತೀತವಾಗಿ ವ್ಯರ್ಥವಾಗಿ ಗುನುಗುಟ್ಟುತ್ತಿದ್ದ "ಗಾಂಜಾ ಮಜಾ" ಕ್ಕೆ ಹೊಸ ಹೊಸ ಅರ್ಥ ಪ್ರಾಪ್ತವಾಗುವಂತ ಘಟನೆಗಳು ಮುಂದೆ ಬದುಕಿನುದ್ದಕ್ಕೂ



ಮತ್ತೆ ಮತ್ತೆ ಪ್ರಾಪ್ತವಾಗುತ್ತಾ ಹೋಗಬೇಕೇ? ಅದೂ ನೆನಪಿನಲ್ಲಿ ಅಚ್ಚೊತ್ತುವ ಬಾಲ್ಯ–ಕೌಮಾರ್ಯದ ದಿನಗಳಲ್ಲೇ!

*

ಕಲ್ಕೋಡ್ ನನ್ನ ಮನೆ ಮೂರು ಸುತ್ತ ಹಾಡಿ. ಎದುರು ಅಡಿಕೆ ತೋಟ.ಹಾಡಿಯಲ್ಲಿ ಭೋಗಿ, ಹೊನ್ನೆ, ಬೀಟೆ, ಧೂಪ, ರಂಜ, ಹೆಬ್ಬಲಸು, ಸಂಪೆ, ಅಶೋಕ–ಹೀಗೆ ವಿವಿಧ ಬಗೆಯ ಮರಗಳು.ಅವುಗಳ ನಡುನಡುವೆ ಅಲ್ಲೊಂದು ಇಲ್ಲೊಂದು ಬೈನೆಮರ. ಈ ಬೈನೆಮರದ ವಿಶೇಷವೆಂದರೆ ಕಳ್ಳು.ಕಳ್ಳು ತೆಗೆಯುವುದು ಒಂದು ಕಾಲದಲ್ಲಿ ದೀವರ ಕಸಬಾಗಿತ್ತು. ಬೈನೆ ಹೂಗೊನೆ ಕತ್ತರಿಸಿ ಅದಕ್ಕೆ ಉಪ್ಪುಕಾಳುಮೆಣಸು ಮುಂತಾದ ಲಮಾಜಮೆಗಳನ್ನು ಸವರಿ ಹದಗೊಳಿಸಿದರೆ ಹಾಲು ಬಣ್ಣದ ಕಳ್ಳು ಇಳಿಯಲಾರಂಭಿಸುತ್ತದೆ. ಗೊನೆಗೆ ಗಡಿಗೆ ಕಟ್ಟಿ ಶೇಖರಿಸುತ್ತಾರೆ. ಸೂರ್ಯೋದಯಕ್ಕೆ ಮುನ್ನ ಕುಡಿದರೆ ಕೆಂಪುಕೆಂಪಾಗಿ ಆರೋಗ್ಯವಂತರಾಗಿರುತ್ತಾರಂತೆ. ಯಾವುದೇ ಬಗೆಯ ಅಡ್ಡ ಕಾಯಿಲೆಖಾಸಲೆ ಹತ್ತಿರ ಸುಳಿಯುವುದಿಲ್ಲವಂತೆ. ಸೂರ್ಯೋದಯವಾದ ಮೇಲೆ ಕುಡಿದರೆ ಮಾತ್ರ ನಶೆ ಏರುವುದು.

ಅಣ್ಣುಪೂಜಾರಿ ಎಂಬ ಮಹಾಶಯ ನಮ್ಮ ಹಾಡಿಯ ಬೈನಮರಳ ಗೊನೆ ಹದಗೊಳಿಸಿ ಕಳ್ಳು ಕಟ್ಟಿ ಮಾರಾಟ ಮಾಡುತ್ತಿದ್ದ. ಆದರೆ ಅವನ ಕಳ್ಳಿಗೆ ಮನುಷ್ಯರಿಗಿಂತ ಹೆಚ್ಚಾಗಿ ಲಗ್ಗೆ ಹಾಕುತ್ತಿದ್ದವು ಮಂಗಗಳು. ಅವುಗಳ ಕಾಟದಿಂದ ಪಾರಾಗುವುದೇ ದೊಡ್ಡ ಸಮಸ್ಯೆಯಾಗಿತ್ತು. ಕೊನೆಗೂ ಅಣ್ಣುಪುಜಾರಿ, ಭೀಕರ ಸಮಸ್ಯೆಗೆ ಸುಲಭ ಪರಿಹಾರ ಕಂಡುಕೊಂಡ. ಅದೆಂದರೆ ಅಪರೂಪಕ್ಕೆ ಗಡಿಗೆ ಕಳ್ಳಿಗೆ ಭಂಗಿ ಪಾನಕ ಬೆರಸಿ ಮಂಗಗಳಿಗೆ ತಕ್ಕ ಪಾಠ ಕಲಿಸುವುದು! ಮರದ ಬುಡದಲ್ಲಿ ಹತ್ತಾರು ಬಲಿಗೆ ಸೋಟೆಯಿಡುವುದು. ಕಳ್ಳು ಹೀರಿದ ಮಂಗಗಳು ಅಮಲೇರುತ್ತಿದ್ದಂತೆ ಸರಸರನೆ ಮರವಿಳಿದು ಬಂದು ಬಲಿಗೆ ಸೋಟೆ ಹಿಡಿದು ಪರಸ್ಪರ ಬಡಿದಾಡಿಸಿಕೊಳ್ಳುತ್ತಿದ್ದವು. ಈ ಬಡಿದಾಟದಲ್ಲಿ ಕೆಲವು ಮಂಗಗಳು ತಲೆಯೊಡೆದು ಸತ್ತದ್ದೂ ಉಂಟು. ಕ್ರಮೇಣ ಕಳ್ಳಿನ ಗಡಿಗೆ ತಂಟೆಗೆ ಹೋಗದೇ ಬೈನೆ ಮರದಿಂದ ಬಹುದೂರದಲ್ಲೇ ಮಂಗಗಳು ತಮ್ಮ ಕಿತಾಪತಿ, ಲೂಟಿ, ವ್ಯವಹಾರ ನಡೆಸುತ್ತಿದ್ದವೆಂಬುದಂತೂ ದಿಟ! ಅಣ್ಣು ಪೂಜಾರಿಯ ಈ ಉಪಾಯ ಕಂಡು ಬೆರಗಾದ ನಮ್ಮೂರಿನವರು "ತಲೆಯೆಂದರೆ ಅಣ್ಣುವಿನ ತಲೆ, ವಿಶ್ವೇಶ್ವರಯ್ಯನವರ ತಲೆ" ಎಂದು ಮೆಚ್ಚುಗೆ ನುಡಿಯಾಡುತ್ತಿದ್ದರು! ನಿಜವಾದ ಅರ್ಥ ತಿಳಿಯದೇ ಇದ್ದರೂ, ನಾಣ್ನುಡಿಯಾಗಿ ಆ ಮಾತು ಈಗಲೂ ನಮ್ಮೂರಿನಲ್ಲಿ ಚಾಲ್ತಿಯಲ್ಲುಂಟು!

*

ಐತ ದಕ್ಷಿಣ ಕನ್ನಡದಿಂದ ಘಟ್ಟವೇರಿ ಮಲೆನಾಡಿಗೆ ಬಂದವ. ಅಡಿಕೆ ತೋಟ, ಗದ್ದೆ ಬೇಸಾಯದ ಕಾರ್ಯಗಳಿಗಾಗಿ ದಕ್ಷಿಣ ಕನ್ನಡದ ಸೇರೇಗಾರರು, ಕೂಲಿಯಾಳುಗಳನ್ನು ಕರೆತಂದು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡಿಸುವುದು ಒಂದು ಕಾಲದಲ್ಲಿ ಒಳ್ಳೇ ಲಾಭದಾಯಕ ಉದ್ಯಮವಾಗಿತ್ತು. ಸೇರೇಗಾರಿಕೆ ಮಾಡುತ್ತಿದ್ದವರಿಗೆ ಊರಿನಲ್ಲಿ ಘನತೆ–ಗೌರವಗಳೂ ದೊರೆಯುತ್ತಿದ್ದವು. ಮಳೆಗಾಲ ಕಳೆದು ದೀಪಾವಳಿ ಬೆಳಗ್ಗೆ ಜನ ಕರೆದುಕೊಂಡು ಬಂದ ಸೇರೇಗಾರರು ಊರಿನಲ್ಲಿರುತ್ತಿದ್ದ ಅಡಿಕೆ ಸೋಗೆ ಮಾಡು, ಅಡಿಕೆ ಹಾಳೆಯ ತಡಿಕೆಗಳಿಂದ ನಿರ್ಮಿಸುತ್ತಿದ್ದ ಗುಡಿಸಿಲುಗಳಲ್ಲಿ ಕೂಲಿ ಆಳುಗಳ ಮೊಕ್ಕಾಂ ಹೂಡುತ್ತಿದ್ದರು. ಮಳೆಗಾಲ ಹಿಡಿಯುವ ಮುನ್ನ ಅಂದರೆ ಮೇ ತಿಂಗಳ ಕೊನೆಭಾಗದಲ್ಲಿ ಆಳುಗಳು ಊರಿಗೆ ಮರಳುತ್ತಿದ್ದದ್ದು ವಾಡಿಕೆ.ಹೀಗೆ ಸೇರೇಗಾರರೊಬ್ಬರ



ಜೊತೆ ಬಂದಿದ್ದ ಐತ ಆ ವರ್ಷ ಮಳೆಗಾಲ ಹಿಡಿದರೂ ಊರಿಗೆ ಮರಳಲಿಲ್ಲ. ಕಳ್ಳಭಟ್ಟಿ–ಗಾಂಜಾ ಉದ್ಯಮ ಆರಂಭಿಸಲು ನಿರ್ಧರಿಸಿದ.

ಕಳ್ಳಭಟ್ಟಿ, ಗಾಂಜಾ ಬೆಳೆ–ಎರಡೂ ಕಾನೂನಿನ ದೃಷ್ಟಿಯಲ್ಲಿ ಅಪರಾಧಗಳೇ. ಒಮ್ಮೆ ಯಾರೋ ಐತನ ಕಳ್ಳಭಟ್ಟಿ ತಯಾರಿಕೆ ಬಗ್ಗೆ ಪೊಲೀಸರಿಗೆ ಹಚ್ಚಿಕೊಟ್ಟರು. ಯಥಾಪ್ರಕಾರ ಪೊಲೀಸರು ಕಳ್ಳಭಟ್ಟಿ ಅಡ್ಡೆ ಮೇಲೆ ಧಾಳಿ ಮಾಡಲು ಹೊಂಚು ಹಾಕಿದರು. ವಿಷಯ ಹೇಗೋ ಐತನಿಗೆ ತಿಳಿಯಿತು. ಅಡ್ಡೆಯಲ್ಲಿದ್ದ ಕಳ್ಳಭಟ್ಟಿಯನ್ನು ಗೋಪ್ಯ ಸ್ಥಳಕ್ಕೆ ವರ್ಗಾಯಿಸುವಂತೆ ಸಹಚರರಿಗೆ ಆದೇಶಿಸಿ, ಪೊಲೀಸರ ಬರುವಿಗಾಗಿ ಮನೆಯಲ್ಲೇ ಕಾಯುತ್ತಾ ಕುಳಿತ. ಸಂಜೆಯ ಇಳಿಬಿಲಿನಲ್ಲಿ ಬಸವಳಿದು ಬಂದ ಪೊಲೀಸರನ್ನು ಆದರದಿಂದ ಸ್ವಾಗತಿಸಿ, ಭಂಗಿಪಾನಕ, ಹುರಿದ ಮಾಂಸದ ತುಣುಕು ನೀಡಿ ಸತ್ಕರಿಸಿ ಉಪಚರಿಸಿದ. ನಡೆದು ಬಂದು ಸುಸ್ತಾಗಿದ್ದ ಪೊಲೀಸರು ಹೊಟ್ಟೆಬಿರಿ ಕುಡಿದು, ತಿಂದು ತೇಗಿ, ಕಣ್ಣು ಎಳೆದಂತಾಗಲು, ಕಾಲು ಚಾಚಿ ವಿಶ್ರಮಿಸಿದರು. ಅವರಿಗೆ ಎಚ್ಚರವಾದಾಗ ಕೋಳಿ ಕೂಗು ಕೇಳಿತು. ಮೂಡಣ ಕೆಂಪಾಗಿತ್ತು. ಲಗುಬಗೆಯಿಂದ ಎದ್ದ ಪೊಲೀಸರು ಬೆಳಗಿನ ನಿತ್ಯಕರ್ಮಗಳನ್ನು ಮುಗಿಸಿ, ಕಾರ್ಯಾಚರಣೆಗೆಂದು ಬಂದಿದ್ದ ಅಡ್ಡೆ ಮೇಲೆ ದಾಳಿ ನಡೆಸಿ ಕರ್ತವ್ಯ ನಿರ್ವಹಿಸಿದರು. ಆದರೆ ಅಲ್ಲಿ ಕಳ್ಳಭಟ್ಟಿಯ ವಾಸನೆ ಸಹಿತ ಸಿಗಲಿಲ್ಲ. ಐತನ ಭಂಗಿ ಪಾನಕದ ಕರಾಮತ್ತು ನಿರ್ವಿಘ್ನವಾಗಿ ಉಡ್ಡಯನವಾಗಿ ಯಶಸ್ಸು ಲಭಿಸಿತು! ಮುಂದೆ ಮಲೆನಾಡಿನಲ್ಲೇ ನೆಲಸಿ ಮಲೆನಾಡಿಗನೇ ಆದ. ಹೀಗಾಗಲು ಮುಖ್ಯ ಕಾರಣ, ಅವನು ಕಂಡುಕೊಂಡ ಹೊಸ ಉದ್ಯಮ, ಕಳ್ಳಭಟ್ಟಿ ತಯಾರಿಕೆ ಹಾಗೂ ಕಾಡಿನ ನಡುವೆ ಗಾಂಜಾದ ಕೃಷಿ. ಕ್ರಮೇಣ ಈ ಎರಡೂ ಉದ್ಯಮಗಳು ಕೈ ಹಿಡಿದುದರ ಪರಿಣಾಮವಾಗಿ ಊರಿನ ಒಂದು ಜನವಾದದ್ದು ಮಾತ್ರವಲ್ಲ; ಪಂಚಾಯ್ತಿ ಹಾಗೂ ತಾಲೂಕು ಬೋರ್ಡ್ ಎಲೆಕ್ಷನ್ನಿಗೆ ನಿಂತು ಗೆದ್ದು, ಮುಂದೆ ತಾಲೂಕ ಬೋರ್ಡ್ ಪ್ರೆಸಿಡೆಂಟ್ ಕೂಡ ಆದ!

*

ಮೇಗರವಳ್ಳಿಯಲ್ಲಿ ಹೈಸ್ಕೂಲ್ ಓದುತ್ತಿದ್ದ ದಿನಗಳವು:

ಅನಂತಯ್ಯ ನಮ್ಮೂರಿನ ಹಿರಿಯರಲ್ಲೊಬ್ಬರು.ನನ್ನ ತಂದೆ, ಅವರು ಗಳಸ್ಯಗಂಟಸ್ಯವಂತೆ. ಗೆಳೆಯನನ್ನು ಕಳೆದುಕೊಂಡ ದು:ಖ, ನನ್ನನ್ನು ಕಂಡಾಗಲ್ಲೆಲ್ಲಾ ಅವರಿಗೆ ಉಕ್ಕಿಉಕ್ಕಿ ಉಮ್ಮಳಿಸುತಿತ್ತು. "ವೆಂಕಟರಮಣ ಹೋದ ಮೇಲೆ, ನಾನು ಬದುಕಿದ್ದೂ ಸತ್ತ ಲೆಕ್ಕ ಕಣೋ" ಕಣ್ಣು ತುಂಬಿಕೊಂಡು ಆಲಾಪಿಸುತ್ತಿದ್ದದ್ದೂ ಉಂಟು. ಶಾಲೆಗೆ ರಜಾ ಇದ್ದಾಗ ಒಂದೆರಡು ದಿನ ನಾನು, ಅವರ ಮನೆಯಲ್ಲಿ ಮೊಕ್ಕಾಂ ಹೂಡುತ್ತಿದ್ದದ್ದುಂಟು. ಆಗ ಅಪ್ಪನನ್ನು ನೆನಯುತ್ತಾ, ಅವನಿಗೆ ಇಷ್ಟವಾದ ಗೋಧಿ ಹಲ್ವಾ, ಕಾಯಿಕಡಬು, ಕಡ್ಲೆಚಟ್ನಿ, ಪತ್ರೊಡೆ, ಹಲಸಿನ ಹಣ್ಣಿನ ಮುಳುಕ, ಖಾರ/ ಸಿಹಿ ಒತ್ತುಶಾವಿಗೆ–ಹೀಗೆ ಥರಾವರಿ ತಿನಿಸುಗಳ ಸೇವೋಪಚಾರ ನನಗೂ ನಡೆಯುತ್ತಿತ್ತು.

ಒಮ್ಮೆ ಕೇದಾರನ ವ್ರತ. ಊಟಕ್ಕೆ ಕರೆದಿದ್ದರು, ಹೋಗಿದ್ದೆ. ಸಾಯಂಕಾಲ ಹಾಲನೇವೆದ್ಯ.ಅನಂತನವ್ರತ ಮಾಡಿಸಲು ಬಂದಿದ್ದ ಗೋಪಾಲಭಟ್ಟರದ್ದೇ ಪೂಜೆ ನೇತೃತ್ವ. ಪೂಜೆಪುನಸ್ಕಾರ ಮಂಗಳಾರಾತಿ ಎಲ್ಲ ಮುಗಿದ ತೀರ್ಥತೆಗೆದುಕೊಳ್ಳಲು ಕರೆ ಬಂತು. ನೋಡಿದರೆ ತೀರ್ಥ ನೀಡುತ್ತಿದ್ದದ್ದು ಥಾಲಿಸೌಟಿನಲ್ಲಿ ಅಲ್ಲ; ಮಧ್ಯಮ ಗಾತ್ರದ ಸ್ಟೀಲ್‌ಲೋಟ್‌ದಲ್ಲಿ.



"ಇದೇನಿದು ಲೋಟದಲ್ಲಿ ತೀರ್ಥವೇ?"ಕುತೂಹಲದಿಂದ ಕೇಳಿದೆ.

"ಇದೂ ಒಂದು ಬಗೆ ತೀರ್ಥವೇ..!" ವಿಚಿತ್ರ ರೀತಿಯಲ್ಲಿ ಉತ್ತರಿಸಿದರು ಅನಂತಯ್ಯ.

"ಅಂಥಿಂಥ ತೀರ್ಥವಲ್ಲವಯ್ಯಾ ಇದು, ದೇವಾನುದೇವತೆಗಳು ಸೇವಿಸುತ್ತಿದ್ದ ಪವಿತ್ರ ತೀರ್ಥ" ಅನಂತಯ್ಯನ ದನಿಗೆ ಕೋರಸ್ ಹಾಡಿದರು ಗೋಪಾಲಭಟ್ಟರು.

"ಅಂದ್ರೆ..." ಅರ್ಥವಾಗದೇ ಕೇಳಿದೆ.

"ರಾಮರಸವಯ್ಯ.... ಇದು ರಾಮರಸ....!" ಅನಂತಯ್ಯನವರ ಸ್ಪಷ್ಟನೆ.

"ಸ್ವರ್ಗದಲ್ಲಿ ದೇವಾನುದೇವತೆಗಳು ವಿಶೇಷ ಸಂದರ್ಭಗಳ ಸಂತೋಷಕೂಟದಲ್ಲಿ ಸೋಮರಸ ಸೇವಿಸುವುದುಂಟು. ಅದಕ್ಕೆ ಸರಿಸಮಾನವಾದದ್ದು ಇನ್ನೊಂದು ಎಂದರೆ ಇದೇ ರಾಮರಸ. ಇದನ್ನು ಸೇವಿಸಿದರೆ ಸ್ವರ್ಗ ಸುಖ ಮಾತ್ರವಲ್ಲ; ಇದು ಮೋಕ್ಷ ಸಾಧನವೂ ಹೌದು...ಮಾತ್ರವಲ್ಲ; ತೀರ್ಥದಷ್ಟೇ ಪವಿತ್ರ" ಗೋಪಾಲಭಟ್ಟರ ವೇದಾಂತದ ಸಮರ್ಥನೆ.

ಅವರಿಬ್ಬರೂ ಎಷ್ಟೇ ವಾದ-ಬಲವಂತ ಮಾಡಿದರೂ, ನಾನು ಬಿಲ್ಕುಲ್ ಒಪ್ಪಲಿಲ್ಲ. ಕೊನೆಗೆ ಹತಾಶರದ ಅನಂತಯ್ಯ ನನ್ನನ್ನು ದೇವರ ಮಂಟಪದ ಹತ್ತಿರ ದರದರ ಎಳೆದುಕೊಂಡು ಹೋಗಿ ನಿಲ್ಲಿಸಿ ಉಗ್ರಪ್ರತಾಪಿಯಾಗಿ ಆವಾಜ್ ಹಾಕಿದರು:

"ನೀನು ಕುಲಪುರೋಹಿತ ಈ ಭಟ್ಟರಿಗೂ, ಹಿರಿಯನಾದ ನನಗೂ ಅಷ್ಟೇಯಲ್ಲ ಮಂಟಪದಲ್ಲಿರುವ ಸಮಸ್ತ ದೇವರಿಗೂ ದ್ರೋಹ ಬಗೆಯುತ್ತಿದ್ದೀಯ... ದೇವಾನುದೇವತೆಗಳೇ ಸೇವಿಸುತ್ತಿದ್ದ ರಾಮರಸವನ್ನು, ಅದರಲ್ಲೂ ತೀರ್ಥರೂಪದಲ್ಲಿ ನಾವು ಕೊಟ್ಟದ್ದನ್ನು ಸ್ವೀಕರಿಸಿದೇ ತಿರಸ್ಕರಿಸುತ್ತಿದ್ದೀಯಲ್ಲಾ? ಈ ಜನ್ಮದಲ್ಲಿ ಮಾತ್ರವಲ್ಲ; ಮುಂದಿನ ಏಳೇಳು ಜನ್ಮದಲ್ಲೂ ನೀನು ಉದ್ಧಾರವಾಗುವುದಿಲ್ಲ. ಸತ್ತ ಮೇಲೆ ನಿನಗೆ ನರಕವೇ ಗತಿ...!"

ನಾನಿನ್ನೂ ಈ ಭೂಲೋಕದಲ್ಲೇ ಇದ್ದೇನೆ. ಸ್ವರ್ಗದಲ್ಲಿರುವ ಭಟ್ಟರು, ಅನಂತಯ್ಯ ನಾನು ಸತ್ತ ಮೇಲೆ ನರಕಕ್ಕೆ ಹೋಗುವ ದೃಶ್ಯ ವೀಕ್ಷಿಸುವುದನ್ನೇ ತವಕದಿಂದ ನಿರೀಕ್ಷಿಸುತ್ತಿರಬಹುದು!

ಈ ಜೋಡಿಮೇಳದ "ಭಂಗಿ ಅವಾಂತರ"ದ ಇನ್ನೊಂದು ಮಹಿಮೆ ವರ್ಣಿಸಿದರೆ ಅಪ್ರಸುತ್ತವಾಗಲಾರದು.ಆದರೆ ಆ ಘಟನೆಗೆ ನಾನು ಪ್ರತ್ಯಕ್ಷದರ್ಶಿಯಲ್ಲ. ಅನಂತಯ್ಯನವರ ಹಿರಿ ಮಗಳು ಪದಕ್ಕನ ಮನೆಯಲ್ಲಿ ನಡೆದದ್ದನ್ನು ಅವಳೇ ಹೇಳಿದ್ದರಿಂದ ನಂಬಲರ್ಹವಾದದ್ದೆಂಬ ಖಚಿತ ವಿಶ್ವಾಸ ನನ್ನದು.

ಒಮ್ಮೆ ಅನಂತಯ್ಯನ ಸವಾರಿ ಬಹಳ ಅಪರೂಪಕ್ಕೆ ಮಗಳ ಮನೆಗೆ ಹೋಗಿದೆ. ಜೊತೆಯಲ್ಲಿ ಗೋಪಾಲ ಭಟ್ಟರು ಸಹ. ಅಯ್ಯನ ಬ್ಯಾಗಿನಲ್ಲಿ ಭಂಗಿಯಲ್ಲಿ ಮಾಡಿದ ಸಿಹಿ ತಿಂಡಿ ಮಣಿಯಪ್ಪಚ್ಚಿಯೂ ಅವಿತು ಭಾರದಿಂದ ಬೀಗುತ್ತಿದೆ. ಮಾವ ಬಂದಾಗ ಮನೆ ಯಜಮಾನ ಅಳಿಮಯ್ಯ ಮನೆಯಲ್ಲಿ ಇರಲಿಲ್ಲ. ಶಿವಮೊಗ್ಗಾಕ್ಕೆ ಹೋಗಿದ್ದಾರೆ. ಬರುವುದು ಒಂದೆರಡು ದಿನವಾಗಬಹುದು. ಬಹಳ ದಿನಗಳ ಮೇಲೆ ಬಂದ ಅಪ್ಪನಿಗೆ ಮಗಳು ರಾತ್ರಿ ಹಲಸಿನ ಹಣ್ಣಿನ ಕಡಬು, ಮುಳಕ, ಮರಗೆಸದ ಪತ್ರೊಡೆ, ಗಸೆಗಸೆ ಪಾಯಸ ಮಾಡಿದ್ದಾಳೆ. ವಿಶೇಷ ತಿನಿಸು ತಯಾರಿಯ ವಿಷಯ ಮಗಳಿಂದ ತಿಳಿದ



ಅಯ್ಯ ಮತ್ತು ಭಟ್ಟರು, ಮನೆ ಯಜಮಾನನಿಲ್ಲವೆಂಬ ಗ್ಯಾರೆಂಟಿಯಿಂದ ಬ್ಯಾಗ್‌ನಲ್ಲಿದ್ದ ಮಣಿಯಪ್ಪಚ್ಚಿಯನ್ನು ಸಂಜೆಗೆ ಮುನ್ನವೇ ಯಥೇಚ್ಚ ಮುಕ್ಕಿದ್ದಾರೆ. ಕತ್ತಲೇರಿದಂತೆ ಸೀಮೆಯೆಣ್ಣೆ ಬುಡ್ಡಿ ಬೆಳಕಿನ ಪ್ರಭಾವಕ್ಕೆ ಮಣಿಯಪ್ಪಚ್ಚಿಯೊಳಗೆ ಅವಿತ ಭಂಗಿ ಕೋಲಕಟ್ಟಿ ಬೊಬ್ಬರ್ಯನ ಅವತಾರ ತಾಳಿ ಕುಣಿಯಲಾರಂಭಿಸಿದೆ.ರಾತ್ರಿ ಊಟದ ಹೊತ್ತಿಗೆ ಯಜಮಾನ ಅಳಿಯನ ಅನಿರೀಕ್ಷಿತ ಆಗಮನವಾಗಿದೆ. ಊಟಕ್ಕೆ ಕುಳಿತ ಭಟ್ಟರಿಗೆ, ಪಕ್ಕದಲ್ಲಿದ್ದ ಅನಂತಯ್ಯ ಎದ್ದು ಹಸ್ತೋದಕ ಹಾಕಿ, ಗಿರಕಿ ಹೊಡೆದು ಸಾಷ್ಟಾಂಗ ನಮಸ್ಕಾರ ಮಾಡಿ ಭಟ್ಟರ ಎಲೆಯ ಅನ್ನವನ್ನು ತೆಗೆದು ಮುಷ್ಟಿಕಟ್ಟಿ "ಅಹಾ ಪ್ರಸಾದ, ನಿಜಕ್ಕೂ ನಾನು ಧನ್ಯ. ನನ್ನ ಪಾಲಿಗೆ ನೀವೇ ಸಾಕ್ಷಾತ್ ದೇವರು..." ಎಂದು ತೊದಲುತ್ತಾ ಉಲಿಯುತ್ತಿದ್ದಾರೆ. ಹಿನ್ನೆಲೆಮರ್ಮ ಅರಿಯದ ಅಳಿಯ ದೇವರು ಕಂಗಾಲಾಗಿ ಎಲ್ಲವನ್ನೂ ವೀಕ್ಷಿಸುತ್ತಿದ್ದಾರೆ.,

ಅಂದಿನ ಆ ಘಟನೆಯೂ ಈಗಲೂ ನೆನಪುಮಾಡಿಕೊಂಡಾಗಲೆಲ್ಲಾ ಪದಕ್ಕ ಹೇಳುವ ಒಂದೇಒಂದು ಮಾತು:

"ಅಪ್ಪಯ್ಯ ಅವತ್ತು ನನ್ನ ಜೀವಂತವಾಗಿ ಕೊಂದುಬಿಟ್ಟ ಕಣೋ.....!"

*

ಗಾಂಜಾಕ್ಕೂ ಮಲೆನಾಡಿನ ಮದುವೆ ಮನೆಗಳಿಗೂ ಎಲ್ಲಿಲ್ಲದ ನಂಟು. ಅದರಲ್ಲೂ ಅಡಿಗೆಮನೆಯೇ ಕೇಂದ್ರಸ್ಥಾನ. ಮದುವೆ ಭೋಜನಕ್ಕೆಂದು ಮಾಡುವ ಬಗೆಬಗೆ ಸಿಹಿತಿಂಡಿಗಳೇ ತಯಾರಿಸುವುದೇ ಶ್ರಮದಾಯಕ ಕಾರ್ಯ. ಉರಿಯುತ್ತಿರುವ ಒಲೆ ಅಕ್ಕಪಕ್ಕದಲ್ಲೇ ಕುಳಿತು, ರಾತ್ರೀಯಿಡಿ ನಿದ್ದೆಗೆಟ್ಟು ಖಾದ್ಯ ತಯಾರಿಸುವ ಬವಣೆ ಬಲ್ಲವರೇ ಬಲ್ಲರು. ಎಂಥ ಕಷ್ಟಶ್ರಮಗಳಿಗೂ ರಾಮರಸ ಸಿದ್ಧೌಷಧ. ಅಲ್ಲದೆ ಏಕಾಗ್ರತೆ, ಧ್ಯಾನಾವಸ್ಥೆ ಭಂಗಿಯ ವಿಶೇಷಗುಣಗಳು.ಜೊತೆಗೆ ಹಸಿವೂ ಕೂಡ!

ರಾಮಣ್ಣ ಕಲ್ಕೂರ ಮದುವೆ ಮನೆ ಭಕ್ಷ್ಯ-ಭೋಜಗಳ ತಯಾರಿಕೆಯಲ್ಲಿ ಬಹಳ ಪ್ರಸಿದ್ಧರು. ರಾಮರಸ ಸೇವಿಸಿಯೇ ಅವರು ಕಾರ್ಯಾರಂಭ ಮಾಡುವುದು. ಎಲ್ಲ ಮುಗಿಯುವ ವೇಳೆಗೆ ಮಾಡಿಟ್ಟದ್ದರಲ್ಲಿ ಹೆಚ್ಚಿನ ಪಾಲು ಅವರ ಜಟರಾಗ್ನಿಯ ಪಾಲಾಗುತ್ತಿತ್ತಂತೆ. ಇಸ್ಪಿಟಾಟಕ್ಕೂ, ಭಂಗಿಗೂ ಬಾದರಾಯನ ಸಂಬಂಧ. ಎರಡು ಹಗಲು, ಮೂರು ರಾತ್ರಿ ಪಟ್ಟು ಹಿಡಿದು ಕುಳಿತು ರೆಮ್ಮಿಯಾಟ ಆಡುವವರನ್ನು ಕಂಡು ಮೂಕವಿಸ್ಮಿತನಾಗಿದ್ದೇನೆ.

ಇಸ್ಪೀಟಾಟವೆಂದಾಗ ಹಿರಿಯರೊಬ್ಬರು ಹೇಳಿದ ಘಟನೆ ನೆನಪಿಗೆ ಬರುತ್ತದೆ. ಮಲೆನಾಡು ಕರೆಂಟ್ ರಹಿತ ಕಾಲವದು. ಚಿಮಣಿ ಬುಡ್ಡಿ, ಲಾಟೀನ್-ಲ್ಯಾಂಪ್‌ಗಳ ಮಿಣಿಮಿಣಿ ಬೆಳಕು. ವಿಶೇಷ ಸಮಾರಂಭಗಳಲ್ಲಿ ಝಗಮಗಿಸುತ್ತಾ ಕಳೆಗಟ್ಟುತ್ತಿದ್ದದ್ದು ಆಗ ತಾನೇ ಪ್ರವೇಶವಾಗಿದ್ದ ಗ್ಯಾಸ್‌ಲೈಟ್. ಅದೊಂದು ಮದುವೆ ಮನೆ. ಹಿರಿಯರು ಯಥಾಪ್ರಕಾರ ರಾಮರಸ ಸೇವಿಸಿ, ಗ್ಯಾಸ್‌ಲೈಟ್ ಬೆಳಕಿನಲ್ಲಿ ಇಪ್ಪತ್ತೆಂಟರಾಟ ಆಡುತ್ತಿದ್ದಾರೆ. ಆಟವಾಡುತ್ತಿದ್ದರೂ ಸಾಹುಕಾರ ಸುಬ್ರಾಯರಿಗೆ ಚೌಕಿಯ ಮೂಲೆಬದಿಯ ಕೋಣೆ ಮೇಲೆ ಕಣ್ಣು. ಆ ಕೋಣೆಯಲ್ಲಿ ದೊಂಬರ ಮಂಜಿ ಮೊಕ್ಕಾಂ ಮಾಡಿದ್ದಾಳೆ. ಹೇಗಾದರೂ ಮಾಡಿ ಅವಳ ಬಳಿ ಹೋಗಿ ಬರಬೇಕೆಂಬ ತವಕ. ಮಧ್ಯರಾತ್ರಿ ಕಳೆದರೂ ಅವಕಾಶ ದೊರೆಯಲಿಲ್ಲ. ಕಾತರದಿಂದ ಕೊನೆಕೊನೆಗೆ ತಾಳ್ಮೆಗೆಟ್ಟು, "ನಾಲ್ಕು ಸುತ್ತು ನನ್ನ ಕೈ ಬಿಟ್ಟು



ಹಾಕಿ" ಎಂದು ಹೊದ್ದಿದ್ದ ಶಾಲು, ತಲೆಗೆ ಸುತ್ತಿ ಕತ್ತಲು ಬೆಳಚುತ್ತಾ ಹೊರಕಡೆ ಹೊರಟವರಂತೆ ಸಾಗಿದರು. ಕೆಲವು ಹೊತ್ತಿನ ಬಳಿಕ ಕಚ್ಚೆಪಂಚೆ, ನೆರಿಗೆ ಸರಿ ಪಡಿಸಿಕೊಳ್ಳುತ್ತಾ ಇಸ್ಪಿಟಾಟದ ಅಡ್ಡೆ ಪ್ರವೇಶಿಸಿದರು. ಸಾಹುಕಾರರನ್ನು ನೋಡಿ ಎಲ್ಲರೂ ಮುಸಿಮುಸಿ ನಗಲಾರಂಭಿಸಿದರು. ಆದರೆ ಅವೆಲ್ಲವನ್ನೂ ತಮ್ಮ ಸಾಹುಕಾರಿಕೆ ಗತ್ತಿನಲ್ಲೇ ನಿರ್ಲಕ್ಷಿಸುತ್ತಾ ಬಂದು ಕುಳಿತುಕೊಳ್ಳುತ್ತಿದ್ದವರನ್ನು, ಅವರ ಆಪ್ತ ಹೆಬ್ಬಾರರು ಪ್ರಶ್ನಿಸಿಯೇ ಬಿಟ್ಟರು:

"ಇದೇನೋ ಸುಬ್ಬು, ನೀನು ಹೊರಕಡೆ ಹೋಗುವಾಗ ತಲೆಗೆ ಶಾಲು ಸುತ್ತಿಕೊಂಡಿದ್ದಿ. ಮರಳಿ ಬರುವಾಗ ಶಾಲು, ಸೀರೆಯಾಗಿದ್ದು ಹೇಗೆ ಮಾರಾಯ? ನಿಜಕ್ಕೂ ನೀನು ದೊಡ್ಡ ಪವಾಡಪುರುಷನೇ ಹೌದು!"

ಸುಬ್ರಾಯರ ಸಾಹುಕಾರಿಕೆ ಗತ್ತು, ಅಂದು ಮೂರು ಕಾಸಿಗೆ ಹರಾಜಾಗಿ ಪಂಚೇರಾದ್ದು ಮಾತ್ರವಲ್ಲ; ಕಥೆಯಾಗಿ ಇಂದಿಗೂ ಜೀವಂತವಾಗಿರುವುದು ಸುಳ್ಳಲ್ಲ!

*

ಎಂ.ಎ, ಪದವಿ ಪಡೆದು, ನಿರುದ್ಯೋಗ ಪರ್ವದ ದಿನಗಳವು. ಮನೆಯಲ್ಲಿ ಸುಮ್ಮನೆ ಕೂರಲಾಗದೆ, ಹಿಂದೆ ಓದಿದ್ದ ಮೇಗರವಳ್ಳಿ ಹೈಸ್ಕೂಲ್ ಹೆಡ್ ಮಾಸ್ಟರ್ ಚಂದ್ರಶೇಖರ ಜೋಯಿಸರ ಕರೆ ಮೇರೆಗೆ ಒಂದು ವರ್ಷಕಾಲ ಉಪಾಧ್ಯಾಯನಾಗಿ ಕಾರ್ಯನಿರ್ವಹಿಸಿದೆ. ಆ ಸಮಯದಲ್ಲೇ ಪ್ರೊ.ಎಂ, ಗೋಪಾಲಕೃಷ್ಣ ಅಡಿಗರ ಸಂಪಾದಕತ್ವದ "ಸಾಕ್ಷಿ" ಸಾಹಿತ್ಯ ಸಂಚಿಕೆಯಲ್ಲಿ ಹಿರಿಯ ಕವಿ ಎಚ್.ಎಸ್. ಬಿಳಗಿರಿ ಬರೆದ ಎಲ್ಎಸ್‌ಡಿ ಅನುಭವದ ಲೇಖನ ಪ್ರಕಟವಾಗಿತ್ತು. ಅದನ್ನು ಓದಿದ ನನಗೂ ಗಾಂಜಾ ಮಜಾದ ಅನುಭವ ಪಡೆಯಬೇಕೆಂಬ ಆಸೆ ಚಿಗುರೊಡೆಯಿತು, ಸಮಯಕ್ಕೆ ಸರಿಯಾಗಿ ನೆಂಟರೊಬ್ಬರು ಭಂಗಿಲೇಹ ತಂದು ಕೊಟ್ಟು, ಮೂರುಬೆರಳಿನಲ್ಲಿ ಸಣ್ಣ ಉಂಡೆ ಪ್ರಮಾಣ ತೋರಿಸಿ, "ಎರಡು ಅಥವಾ ಮೂರುಂಡೆಗಿಂತ ಖಂಡಿತಾ ಜಾಸ್ತಿ ಸೇವಿಸಬೇಡ. ಹೆಚ್ಚುಕಮ್ಮಿಯಾದರೆ ಕೊನೆಗೆ ತಂದುಕೊಟ್ಟ ನನಗೆ ಕೆಟ್ಟ ಮಾತು ತರಬೇಡ ಮಾರಾಯಾ" ಎಂದು ಎಚ್ಚರಿಸಿದ್ದರು.

ಸಂಜೆ ಎರಡು ಉಂಡೆ ಗಾತ್ರದ ಲೇಹ ಸೇವಿಸಿದೆ. ಊಟದ ಹೊತ್ತಿಗೆ ಸುತ್ತಮುತ್ತಲ ಪ್ರಪಂಚ ಗಿರಿಗಿರಿ ಗಿರಕಿ ಹೊಡೆಯಲಾರಂಭಿಸಿತು. ಮುನ್ನೆಚ್ಚರಿಕೆ ಕ್ರಮವಾಗಿ ಮಂಚದ ಪಕ್ಕದ ಟೇಬಲ್ ಮೇಲೆ ಮಜ್ಜಿಗೆ ಹಾಗೂ ಪೇರಲೆ ಸೊಪ್ಪಿನ ರಸ ರೆಡಿ ಮಾಡಿಟ್ಟುಕೊಂಡಿದ್ದೆ. ಹೊತ್ತೇರುತ್ತಿದ್ದಂತೆ ಶುರುವಾಯಿತು ನೋಡಿ ಭಂಗಿ ಲೀಲೆ! ಹೊತ್ತಿಸಿಟ್ಟಿದ್ದ ಬೆಡ್‌ಲ್ಯಾಂಪ್‌ನ ಸಣ್ಣ ಉರಿ ಭಗ್ಗನೆ ಹತ್ತಿ ಆಳೆತ್ತರ ಉರಿದಂತೆ. ಆ ಉರಿ ಮಾಡಿಗೆ ತಗುಲಿ ಇಡೀ ಮನೆ ಹೊತ್ತಿ ಧಗಧಗಿಸುತ್ತಿರುವಂತೆ.... ಎಂಥೆಂಥದ್ದೋ ಪುಕ್ಕಲು. ಮಂಚದ ಮೇಲೆ ಮಲಗಿದವನು ಪಾತಾಳಕ್ಕೆ ಬಿದ್ದಂತೆ... ಒಂದ ಬಂದಂತನರ ಹೊರಗೆ ಹೋಗಿ ಬಂದರೆ ಮತ್ತೆ ಮೂತ್ರ ಬರುವ ಶಂಕೆ! ಮಂಚದಲ್ಲಿ ಮಲಗುವುದು ಬೇಡವೆಂದು ನೆಲದ ಮೇಲೆ ಮಲಗಿದರೂ, ಮಂಚದ ಮೇಲೆ ಮಲಗಿ ಪಾತಾಳಕ್ಕೆ ಬಿದ್ದಂತೆ,,, ಮತ್ತೆ ಮತ್ತೆ ಮೂತ್ರ ಬಂದಂತೆ....ಮನೆ ಮಾಡಿಗೆ ಉರಿ ಹೊತ್ತಿ ಧಗಧಗಿಸುತ್ತಿರುವಂತೆ... ರಾತ್ರೆ ಅಮ್ಮ ಬೈಯುತ್ತಾ ಎಷ್ಟು ಸಾರಿ ಪೇರಲೆ ಕಷಾಯ, ಮಜ್ಜಿಗೆ ಕೊಟ್ಟಳೋ... ನಾನೆಷ್ಟು ಕುಡಿದೆನೋ ಲೆಕ್ಕವೇ ಇಲ್ಲ!



ಗಾಂಜಾ ಮಜಾದ ಮತ್ತು ಇಳಿಯಬೇಕಾದರೆ ಮೂರು–ನಾಲ್ಕು ದಿನ ಬೇಕಾಯಿತು. ಬಸ್ ಹಿಡಿದು ಮೇಗರವಳ್ಳಿಗೆ ಹೋಗಿ, ಶಾಲಾ ಮಕ್ಕಳಿಗೆ ಪಾಠ ಹೇಳಿ, ಮತ್ತೆ ಸಂಜೆ

ಬಸ್ ಹಿಡಿದು ಮನೆಗೆ ಬರುತ್ತಿದ್ದೆ. ಹೇಗೆ ಹೋಗಿ ಬರುತ್ತಿದ್ದೆನೋ, ಹೇಗೆ–ಏನು ಪಾಠ ಮಾಡಿದೆನೋ, ಮಕ್ಕಳಿಗೆ ಎಷ್ಟು ಅರ್ಥವಾಯಿತೋ ಆ ದೇವರೇ ಬಲ್ಲ....!

ಗಾಂಜಾ ಮಜಾದ ಗಮ್ಮತ್ತು ನಾನು ಪಡೆದದ್ದು ಅದೇ ಮೊದಲು ಮತ್ತು ಅದೇ ಕೊನೆ!

*

ಗಾಂಜಾವೆಂದರೆ ಪಕ್ಕನೆ ನೆನಪಾಗುವುದು ಮಹಾಕುಂಭಮೇಳ!

ಹನ್ನೆರಡು ವರ್ಷಗಳಿಗೊಮ್ಮೆ ನಡೆಯುವ, ಕೋಟಿಕೋಟಿ ಜನ ಸೇರುವ ಮಹಾಕುಂಭ ಮೇಳದ ಪ್ರಮುಖ ಆಕರ್ಷಣೆಯೆಂದರೆ ನಾಗಾಗಳು, ಸಾಧುಸಂತರು. ಅವರಿಗೆ ಅಲ್ಲಿ ಅಗ್ರಸ್ಥಾನ. ಹಿಂಡುಹಿಂಡುಗಟ್ಟಿ ಮಹಾಪೂರದಂತೆ ಹರಿದು ಬರುವ ಸಹಸ್ರಸಹಸ್ರ ಸಂಖ್ಯೆಯ ನಾಗಗಳು, ಸಾಧುಸಂತರ ವೇಷಭೂಷಣ, ಹಾವಭಾವಭಂಗಿ ಪವಾಡದ ನಾನಾ ಅವತಾರಗಳನ್ನು ಕಂಡಾಗ ಬೆರಗಾಗದಿರಲು ಸಾಧ್ಯವೇ!? ಹತ್ತಾರು ಬಗೆಯಲ್ಲಿ ಭಂಗಿ ಚಿಲುಮೆ ಸೇದುವ, ಇಹದ ಬಗ್ಗೆ ನಿರ್ಲಕ್ಷ್ಯ ತೋರುವ ಭಾವಚಿತ್ರಗಳನ್ನು ಟಿವಿ, ಪತ್ರಿಕೆಗಳಲ್ಲಿ ಕಂಡಾಗಲೆಲ್ಲಾ ಮೂಕವಿಸ್ಮಿತನಾಗಿ ಬಿಡುತ್ತೇನೆ. ಎಷ್ಟೋವರ್ಷದ ಅವರ ಸಾಧನೆ–ಸಿದ್ಧಿಗಳೇನು? ಅವರ ಗುರಿಯೇನು?ಪಡೆಯುವ ಫಲ ಯಾವುದು? ನಮ್ಮ ವರ್ಣನೆ ಹಾಗೂ ಊಹೆಗೂ ನಿಲುಕಲಾರದ ಸಾಧನಾ ಜಗತ್ತು ಅವರದು ಎಂಬುದು ನಿಸ್ಸಂಶಯ!

ಆದಿಯಿಂದ ಅನಂತಕಾಲದವರೆಗೂ ಅವರವರ ಭಾವ, ಅವರವರ ಭಕುತಿ, ಸಾಧನೆಗಳಿಗೆ ತಕ್ಕಂತೆ ಫಲ ಸಿದ್ಧಿಸಿಕೊಡುವುದೇ ಭಂಗಿಯು ಪರಮ ಕರ್ತವ್ಯವೇನೋ?ನಮಗೇಕೆ ಅಲ್ಲಸಲ್ಲದ ಉಪದ್ವ್ಯಾಪ. ಸುಮ್ಮನೆ "ಚಿಂತ್ಯಾಕೆ ಮಾಡುವುದು? ಚಿಲುಮಯನಿದ್ದಾನೆ....!" ಅಲ್ಲವೇ? ■






# ಐಲು ಸೀಟಿನಲ್ಲಿ ಪ್ರಯಾಣ

**• ಜೈಕುಮಾರ ಮರಿಯಪ್ಪ**

ಇದ್ಯಾರೋ ಐಲು ಪಾರ್ಟಿ ರೈಲು ಅನ್ನುವುದಕ್ಕೆ ಐಲು ಸೀಟು ಎಂದು ಬರೆದಿದ್ದಾನೆ ಎಂದು ಮೂಗು ಮುರಿಯಬೇಡಿ. ಐಲು ಸೀಟು ಎಂದರೆ ನಿಜಕ್ಕೂ ಐಲು ಐ ಮೀನ್ aisle. ವಿಮಾನದಲ್ಲಿ ಪ್ರಯಾಣಿಸುತ್ತಿದ್ದರೆ ವಿಮಾನದ 3–3 ಸೀಟುಗಳ ಮಧ್ಯದಲ್ಲಿ ಹಾದು ಹೋಗುವ ಕಾಲುದಾರಿಯ ಎಡ ಬಲಕ್ಕೆ ಇರುವ ಸೀಟುಗಳೇ ಐಲು ಸೀಟುಗಳು. ಅಂದರೆ ದಾರಿ ಮಗ್ಗುಲ ಸೀಟುಗಳು. ವಿಮಾನದಲ್ಲಿ ಅದರ ಖದರೇ ಬೇರೆ. ನಮ್ಮ ಅಪಾಂಗದ ಅಳತೆಯನ್ನು ಯಾವಾಗ ತೆಗೆದುಕೊಂಡರೋ ಎಂಬ ಅನುಮಾನ ಬರುವಷ್ಟು ಸರಿ ಅಳತೆಯ ಕಿರಿದಾದ ಸೀಟುಗಳಲ್ಲಿ ನಮ್ಮನ್ನು ಅಳವಡಿಸಿಕೊಂಡು ಪ್ರಯಾಣ ಮಾಡುವಾಗ ದೇಹದ ಜಡತೆ ನೀಗಿಸಲು ಕೆಲವೊಮ್ಮೆ ಕಾಲು ಚಾಚ ಬೇಕಾಗುತ್ತದೆ. ಆಗ ಕಾರ್ನರ್ ಸೈಟು ಸಿಕ್ಕವನಿಗೆ ಸಿಗುವ ಪ್ರಯೋಜನ ವೈಪುಲ್ಯದಂತೆ ಐಲು ಸೀಟು ಸಹ ಕೂತವನಿಗೆ ಕಾಲು ಚಾಚಲು ಬಹಳ ಅನುಕೂಲಕಾರಿ. ಆದರೆ ಹೆಚ್ಚಾಗಿ ಪತ್ನಿ ಜೊತೆ ಪ್ರಯಾಣಿಸುವದರಿಂದ ಕಿಟಕಿ ಪಕ್ಕದ ಸೀಟು ಆಕೆಗೆ ಕೊಟ್ಟು ನಾನು ಮಧ್ಯದ ಸೀಟಲ್ಲಿ ಕೂರುವದೇ ರೂಢಿ. ಮಧ್ಯದ ಸೀಟಿನಲ್ಲಿ ಅತಿ ಮುಖ್ಯವಾದ ಅನಾನುಕೂಲವೊಂದಿದೆ ನಮ್ಮ ಹಿಂದಿನ ಸೀಟಿನಲ್ಲಿ ಪುಟ್ಟ ಮಗುವಿರುವ ಕಿರಿಯ ದಂಪತಿಗಳು ಕೂತರೆ ಮಧ್ಯದ ಸೀಟು ಆ ಮಗುವಿಗೆ ಗ್ಯಾರಂಟಿ. ತಂದೆ ತಾಯಿಗಳಿಬ್ಬರೂ ಸುಖಾಸೀನರಾಗಿ ನಿದ್ದೆ ಹೋದರೆ ಆ ಮಗುವೂ ನಿದ್ದೆ ಹೋಗಲೇ ಬೇಕೆಂಬ ನಿಯಮವೆಲ್ಲಿದೆ? ಅದರ ಅಳತೆಯ ಪ್ರಕಾರ ಬಹಳ ವಿಶಾಲವಾದ ಆಸನದಲ್ಲಿ ಅತ್ತಿತ್ತ ಮಿಸುಕುವಾಗ ಅದು ಅನಿವಾರ್ಯವಾಗಿ ಮುಂದಿನ ಸೀಟನ್ನು ಒದೆಯಲೇ ಬೇಕು. ಇಡೀ ರಾತ್ರಿ ಆ ಮಗು ಮುಸು ಮುಸು ಮಿಸುಕಾಡುತ್ತಿದ್ದರೆ ಮುಂದಿನ ಮಧ್ಯ ಸೀಟಿನವನ ಮಧ್ಯಮ ವೈರಾಗ್ಯ ಹೆಚ್ಚಾಗುತ್ತದೆ.

ಬಿಡಿ ಆ ಮಾತು! ದಿನಾ ವಿಮಾನದಲ್ಲೇ ಪ್ರಯಾಣ ಮಾಡುತ್ತೇವೆಯೇ? ಈ ಲೇಖನ ವಿಮಾನದ ಐಲು ಸೀಟು ಅಥವಾ ಮಗುವಿನಂತೆ ಪ್ರಯಾಣ ಮಾಡಿ ಎಂದು ಎರಡೂ ಮಗ್ಗುಲಲ್ಲಿ ಚಿತ್ರ ಬರೆದ ಐರಾವತ ಬಸ್ಸಿನ ಐಲು ಸೀಟಿನ ಬಗ್ಗೆ ಬರೆದುದಲ್ಲ. ಅಸಲಿಗೆ,"ನಾಳಿನ ಪ್ರಜೆಗಳಿಗಾಗಿ ಇಂಧನ ಉಳಿಸಿ ಸಾರ್ವಜನಿಕ ಸಾರಿಗೆ ಬಳಸಿ"ಎಂದು ಘೋಷಿಸುವ ಘನ ಬಿಎಂಟಿಸಿ ಬಸ್ಸಿನ ಐಲು ಸೀಟು ಈ ಲೇಖನದ ಉದ್ದೇಶಿತ ವಸ್ತುವಿಷಯ. ಅಲ್ಲ ಬಿಎಂಟಿಸಿ ಬಸ್ಸಿನಲ್ಲಿ ಸೀಟು ಸಿಕ್ಕರೆ ಸಾಕಪ್ಪ ಅನ್ನುವವರಿದ್ದಾರೆ. ನೇತಾಡಿ ನಿಂತು ಬರುವವರ ಕಷ್ಟ ಯಾರಿಗೆ ಹೇಳಿಕೊಳ್ಳಬೇಕು, ಅಂತಹುದರಲ್ಲಿ ಈತನದ್ದೇನು ಭೇದಭಾವ ಸುಮ್ಮನೆ ಕೂತು ಪ್ರಯಾಣ ಮಾಡೋದು ತಾನೆ ಅಂದು ನೀವು ಹೇಳಿದರೆ ತಪ್ಪೇನಿಲ್ಲ.



ಆದರೆ ನಾನು 60+ ಹೀಗಾಗಿ ಹಿರಿಯ ನಾಗರಿಕನಾಗಿ ದಿನಾ ಬಸ್ಸಿನಲ್ಲಿ ಪ್ರಯಾಣಿಸುವಾಗ ನಾಲ್ಕರಲ್ಲಿ ಒಂದು ಸೀಟಾದರೂ ನನಗೆ ಸಿಗುತ್ತದೆ. ಇಲ್ಲದಿದ್ದರೆ ಬೇರೆ ಬಸ್ಸು ಹತ್ತುತ್ತೇನೆ. ಕುಳಿತು ಪ್ರಯಾಣಿಸಲು ತೊಂದರೆ ಏನಿಲ್ಲ. ಇನ್ನೇನು ತೊಂದರೆ ಇದೆ ಅಂದರೆ ಎರಡು ಅಂಶವನ್ನು ನಾನು ತಮ್ಮ ಗಮನಕ್ಕೆ ತರಬೇಕು. ಇದು ಬ್ಯಾಕ್ ಪ್ಯಾಕ್ ಯುಗ ಮತ್ತು mob ಐಲುಅರ್ಥಾತ್ ಮೊಬೈಲು ಯುಗ.

ಯಾಕೆ ಈ ಮಾತನ್ನು ಹೇಳಿದೆ ಅಂದರೆ ನಮ್ಮ ತಾರುಣ್ಯದ ಕಾಲದಲ್ಲಿ ಬಸ್ಸಿನಲ್ಲಿ ಮಹಿಳೆಯರು (ವಿಶೇಷವಾಗಿ ಕಛೇರಿ ಕೆಲಸಕ್ಕೆ ಹೋಗುತ್ತಿದ್ದ ಮಹಿಳೆಯರು) ಸೀಟು ಸಿಕ್ಕು ಕುಳಿತರೆ ಮೊದಲು ತಮ್ಮ ಪರ್ಸ್‌ನಿಂದ ತೆಗೆಯುತ್ತಿದ್ದುದು ಉಲ್ಲನ್ ಉಂಡೆಯನ್ನು. ತರುವಾಯ ಸಾಂಗವಾಗಿ ಅದರ ಸಿಕ್ಕುಗಳನ್ನು ಬಿಡಿಸಿ ಹೇಣಿಗೆ ಕಡ್ಡಿಗೆ ಸಿಗಿಸುತ್ತಿದ್ದರು. ಇದೊಂದು ಉತ್ಪಾದಕ ಕೆಲಸ, ಕುಟುಂಬಕ್ಕೆ ಸಹಕಾರಿ, ಅಲ್ಲದೆ ಕಾಡು ಹರಟೆ ಹೊಡೆಯದೇ ಸಮಯದ ಸದುಪಯೋಗ. ಹೀಗಾಗಿ ಪ್ರೋತ್ಸಾಹಾರ್ಹ. ಕಾಲ ಬದಲಾಗಿದೆ ಆದರೆ ಇಂದೂ ಹೆಮ್ಮಕ್ಕಳು ಗಂಮಕ್ಕಳು ಬಸ್ ಹತ್ತಿದಾಕ್ಷಣ ಸಿಕ್ಕು ಬಿಡಿಸುತ್ತಾರೆ ಉಲ್ಲನ್‌ದಲ್ಲ ಇಯರ್ ಫೋನಿನ ವೈರಿನದು. ಈ ಕೆಲಸವನ್ನು ಕುಳಿತ ಪ್ರಯಾಣಿಕರು ಮಾಡಿದರೆ ಅಡ್ಡಿಯಿಲ್ಲ. ಅದೇ ಐಲು ಸೀಟಿನ ಪಕ್ಕದಲ್ಲಿ ನಿಂತ ವ್ಯಕ್ತಿ ಮಾಡಲು ಪ್ರಾರಂಭಿಸಿದರೆ ಆವರ ಕೈಚಲನೆಯ ವಿವಿಧ ರೀತಿಗಳು ಮತ್ತು ಅದರ ರೇಂಜು (ಕ್ರಮಿಸುವ ದೂರ) ದಯವಿಟ್ಟು ಊಹಿಸಿಕೊಳ್ಳಿ. ನಾನಂತೂ ಒಂದು ಕೈಯನ್ನು ತಲೆಯ ಮೇಲೂ ಇನ್ನೊಂದನ್ನು ಮುಖದ ಮುಂದೆಯೂ ಮುಂಜಾಗ್ರತಾ ಕ್ರಮವಾಗಿ ಹಿಡಿದುಕೊಂಡಿರುತ್ತೇನೆ. ಪಕ್ಕದ ಕಿಟಕಿ ಪಕ್ಕದ ಸೀಟಿನಲ್ಲಿರುವ ಹಿರಿಯ ನಾಗರಿಕ ಪ್ರಯಾಣದುದ್ದಕ್ಕೂ ನಿದ್ದೆ ಮಾಡಿ ರಾತ್ರಿ ಸೀರಿಯಲ್ ನೋಡಲು ಸಿದ್ಧರಾಗುತ್ತಿದ್ದರೆ ನಾನು ಪೂರ್ಣ ಪ್ರಜ್ಞಾವಸ್ಥೆಯಲ್ಲಿ ಆತ್ಮರಕ್ಷಣಾ ಕಾರ್ಯದಲ್ಲಿ ನಿರತನಾಗುತ್ತೇನೆ.

ಬ್ಯಾಕ್ ಪ್ಯಾಕ್ ಬಗ್ಗೆ ಹೇಳಿದ್ದೇನಲ್ಲವೇ. ಸ್ಕೂಟರ್‌ನಲ್ಲಿ ಪ್ರಯಾಣಿಸುತ್ತಿದ್ದ ವ್ಯಕ್ತಿ ಕಾರು ಕಲಿಯಲು ಪ್ರಾರಂಭಿಸಿದರೆ ಆತನಿಗೆ ಇಕ್ಕೆಲದಲ್ಲಿ ಬರುವ ವಾಹನಗಳ ಅಂದಾಜು ಹೇಗೆ ಸಿಗುವುದಿಲ್ಲವೋ ಹಾಗೆ ಬ್ಯಾಕ್ ಪ್ಯಾಕ್ ಹಾಕಿಕೊಂಡು ಬರುವ ವ್ಯಕ್ತಿಗೆ ತನ್ನ ಬೆನ್ನಂತರ (ಬೆನ್ನು + ಅಂತರ) ಅಂದಾಜು ಖಂಡಿತ ಇರುವುದಿಲ್ಲ. "ದಯವಿಟ್ಟು, ಬಸ್ ಹತ್ತುವ ಮತ್ತು ಇಳಿಯುವ ಮುನ್ನ ಅಂತರದ ಬಗ್ಗೆ ಗಮನವಿರಲಿ" ಎಂಬ ಅಪರ್ಣ ವಾಯ್ಸ್ನ ಎಚ್ಚರಿಕೆ ಗಂಟೆ ಬಸ್ಸಿನಲ್ಲಿ ಇರುವುದಿಲ್ಲವೇ. ಅಂದಹಾಗೆ ಮೆಟ್ರೋದಲ್ಲಿ ಬ್ಯಾಕ್ ಪ್ಯಾಕ್ ಧಾರಿಗಳ ಬಗ್ಗೆ ಕೂಡ ಎಚ್ಚರಿಕೆ ಮಾತುಗಳಿವೆ.

ಮೆಟ್ರೋ ಬೇರೆ ಬಸ್ಸು ಬೇರೆ. ಬ್ಯಾಕು ಪ್ಯಾಕುಧಾರಿ ಬಸ್ಸು ಹತ್ತಿದ ಎಂದಿಟ್ಟುಕೊಳ್ಳಿ. ಅಂದಂದಿನ ತನ್ನ ಬೆನ್ನುಬ್ಬರ ಅದರ ಪ್ರಹಾರ ಕ್ಷಮತೆ, ಗಾಯ ಸಂಭವ, ಘಾಸಿ ಸಾಧ್ಯತೆ ಯಾವುದರ ಪೂರ್ವಾಲೋಚನೆ ಆತನಿಗೆ ಇರುವುದಿಲ್ಲ. ಹೀಗಾಗಿ ಐಲು ಸೀಟಿನಲ್ಲಿ ಕುಳಿತಾತ ಜಾಗೃತ ಬಾಹುಬಲಿಯಾಗಬೇಕು. ಬ್ಯಾಕ್ ಪ್ಯಾಕ್ ಸಪ್ಪೆ (slack) ಆಗಿದ್ದರೆ ತುಸು ಲಘುವಾಗಿ ನಿಭಾಯಿಸಿದರೆ ಆಯಿತು. ಆದರೆ ಅದು ಪೂರ್ಣ ಭರ್ತಿಯಾಗಿದ್ದರೆ (turgid) ಮೊದಲು ಗಮನಿಸ ಬೇಕಾಗಿರುವುದು ಅದರ ಅಸಂಖ್ಯಾತ ಜಿಪ್‌ಗಳ ಬಗ್ಗೆ. ಯಾವ ಜಿಪ್ ನಿಮ್ಮ ಮುಖಕಮಲದ ಯಾವ ಅಂಗಭಾಗಕ್ಕೆ ನಿಕಟವಾಗುತ್ತದೆ, ಕೆನ್ನೆ ಕುಯುತ್ತದೋ ಕಣ್ಣು ಕುಯುತ್ತದೊ ಎಂಬ ಅಂದಾಜು ನೀವು ಮಾಡಲೇ ಬೇಕು. ಈ ಬ್ಯಾಕ್ ಪ್ಯಾಕ್ ಬಂಧುವಿನ ಎತ್ತರಕ್ಕೆ ಅನುಗುಣವಾಗಿ ಈ ಆಘಾತಕ್ಷೇತ್ರ ನಿರ್ಣಯವಾಗುತ್ತದೆ. ತಾಗುವ ಮುನ್ನ ಬಾಗುವುದು ಒಳ್ಳೆಯದು ಎಂಬ ನಾಣ್ಣುಡಿಯಂತೆ ನೀವೇ ಪೂರ್ಣ ಬಲದಿಂದ ಆತನ ಮತ್ತು ಆತನನ್ನು ತಳ್ಳುತ್ತಿರುವವರ ಒತ್ತಡಕ್ಕೆ ಸಮ ಸಮನಾದ ಬಾಹುಬಲದಿಂದ ಆತ ನಿಮ್ಮ ಆಸೀನ



ಪ್ರದೇಶವನ್ನು ಅನ್ಯಾಕ್ರಾಂತ (adverse possession) ಮಾಡದಂತೆ ತಡೆಯಬೇಕು. ಆತ ತಿರುಗಿ ನೋಡಬಹುದು, ಕೆಕ್ಕರಿಸಿ ನೋಡಬಹುದು. ವಿಚಲಿತರಾಗಬೇಡಿ ಮುಂದಿನ ಸಂಭವಕ್ಕೆ ಎಚ್ಚರದಿಂದ ಸನ್ನದ್ಧರಾಗಿ ಈಗ ಆತ ಮನದಲ್ಲೇ ಬೈಯುತ್ತ ಸೀಮಿತ ಸ್ಥಳಾವಕಾಶದಲ್ಲೇ ತನ್ನ ಹೊರೆ ಕೆಳಗಿಳಸಲು ಹೆಣಗುತ್ತಾನೆ. ಭುಜಕ್ಕೆ ಏರಿದ್ದ ಬದಿ ಪಟ್ಟಿಯನ್ನು ಕೆಳಗಿಳಿಸುವ ಕಸರತ್ತು ಸುಲಭವೇ? ಕೂಡಲೇ ನಿಮ್ಮ ಮುಖವನ್ನು ಬಲು ದೂರಕ್ಕೆ ಹಿಂದಕ್ಕೆ ತೆಗೆದು ಕೊಳ್ಳಿ ಇಲ್ಲದೇ ಹೋದರೆ WW ಈ ಶೈಲಿಯಲ್ಲಿ ಮೊಣಕೈ ಬಂದು ಬಡಿದರೆ ನಿಮ್ಮನ್ನು ದೇವರೇ ಕಾಪಾಡಬೇಕು. ಹಲ್ಲು, ಟೆಂಪಲ್ಲು, ಕಣ್ಣು ಮೂಗು ಬಕ್ಕತಲೆಯಾದರೆ ನಿಮ್ಮ ನೆತ್ತಿ ಕಾಪಾಡಬೇಕಾದ ಸ್ಥಳಗಳು. ಹೋಗಲಿ! ಇಲ್ಲಿ ಭಾರಕ್ಕೂ ದೂರಕ್ಕೂ ಗೌರವ ಕೊಟ್ಟು ಮಾಫಿ ಮಾಡೋಣ.

ಮೊಬೈಲ್ ಪ್ರೇಮಿಗಳ ವಿಷಯವೇ ಬೇರೆ. ಇಯರ್ ಫೋನು ಕಿವಿಗೆ ಕೀಲಿಸಿಕೊಂಡು "ಇವಳೇ ಮೊಬೈಲು ಪಾಣಿ ವಾಣಿ" ಎಂದು ಬರುವ ಕನ್ನಿಕೆಯರಾದರೆ ನೆನಪಿರಲಿ ಅವರಿಗೆ ಬಸ್ಸು ಪ್ರಯಾಣದ ಅವಧಿಯೇ ಚಾಟು ಸಂಭಾಷಣೆಗೆ ಸೂಕ್ತ ಕಾಲ. ಅವರ ಚಾಟು (chat) ಸಂಭಾಷಣೆಗೆ ಎರಡೂ ಕೈಗಳು ಬೇಕಾಗುತ್ತದೆ. ತದೇಕಚಿತ್ತದಿಂದ ಅಕ್ಕ ಪಕ್ಕದವರ ಪರಿವೆಯೇ ಇಲ್ಲದೆ ಮೊಬೈಲು ಮುಖಕ್ಕೆ ತಮ್ಮ ಕಣ್ಣು ಕೀಲಿಸಿ ಎರಡೂ ಕೈಗಳ ಹೆಬ್ಬೆರಳನ್ನು ಚಟುಲತೆಯಿಂದ ಚಲಿಸುತ್ತ ಕುಟುಕುತಾಡನದ ಉಲುಹು ಕೆಡದೊಂದಗ್ಗಳಿಕೆಯಿಂದ ತೀವ್ರ ಸಂಭಾಷಣೆಗೆ ತೊಡಗಿದರೆ ಆ ವೇಗಕ್ಕೆ ಎಣೆಯೇ ಇಲ್ಲ. ಇದೇ ವ್ಯಕ್ತಿ ನಿಂತು ಪ್ರಯಾಣಿಸುವವರಾದರೆ ಎರಡೂ ಕೈಗಳು ಚಾಟು ನಿರತವಾಗಿರುವಾಗ ಅವರಿಗೆ ಆಸರೆಯಾದರೂ ಯಾವುದು? ಬೇರಾರೂ ಅಲ್ಲ ಇದೇ ಐಲುಸೀಟಿನ ಪ್ರಾಣಿ. ಈ ಬಾಲೆಯರ ಬ್ಯಾಕು ಪ್ಯಾಕು ಫ್ರಂಟು ಪ್ಯಾಕು ಆಗುತ್ತದೆ. ಈ ಮುಂಚೀಲವನ್ನು ಗೋಡೆಗೆ ಒತ್ತಿ ಹಿಡಿದು ಸಮತೋಲನ ಕಾಪಾಡಿಕೊಳ್ಳುವಂತೆ ಐಲು ಪ್ರಾಣಿಯ ಭುಜಕ್ಕೆಒತ್ತಿ ಹಿಡಿದು hands free ಆಗುತ್ತಾರೆ.

ಇದಷ್ಟೇ ಕೋಟಲೆಯುಲ್ಲ. ಇವರ ಜೊತೆ ಹಿಂಬದಿಯು ಸೀಟಿನವ ಇಳಿಯುತ್ತಾನಾದರೆ ಕೂಡಲೆ ತಲೆ ಮೇಲೆ ನಿಮ್ಮ ಎರಡೂ ಕೈಗಳನ್ನು ರಕ್ಷಣಾತ್ಮಕವಾಗಿ ಹಿಡಿದುಕೊಳ್ಳಿ ಆತನ ಕೈನಲ್ಲಿರುವ ಎತ್ತಿ ಹಿಡಿದ ಯಾವದೇ ಬ್ಯಾಗು ನಿಮ್ಮ ತಲೆಗೆ ತಾಗುವ ಸಂಭವವಿರುತ್ತದೆ.

ಬಸ್ಸು ತುಂಬೆಲ್ಲ ನಿಂತ ಪ್ಯಾಸಂಜರ್‌ಗಳೆಲ್ಲ ಐಲು ಸೀಟಿನಲ್ಲೇ ನಿದ್ದೆ ಮಾಡುತ್ತೀರಿ ಅಂದುಕೊಳ್ಳಿ. ಓಡುವ ಬಸ್ಸಿನಲ್ಲಿ ಮೊಬೈಲು ಟವರ್ ಸಿಗದೇ ನಿಮ್ಮ ಹಿಂಬದಿಯ ಪ್ರಯಾಣಿಕ ಆದಷ್ಟೂ ಮುಂಬಾಗಿ ನಿಮ್ಮ ಕಿವಿಯ ಬಳಿಯೇ ಬಂದು ಹಲೋ ಎನ್ನುತ್ತಾನೆ.

ಒಟ್ಟುಕತೆ ನೀತಿಯೆಂದರೆ ಐಲು ಸೀಟಿನಲ್ಲಿ ಪ್ರಯಾಣ ಮಾಡುವಾಗ ಸೈಕಲ್ ಸವಾರರ ಲೈಟ್ ಹೆಲ್ಮೆಟ್ಟಾದರೂ ಹಾಕಿಕೊಳ್ಳಿ. ಹುಚ್ಚ ಎನ್ನುತ್ತಾರೆಅಂದಿರಾ. ನೋಡಿ ಅಪ್ಪ! ನಿಂ ಧೈರ್ಯ.

■



# ‘ನೀ ಮಾಯೆಯೊಳಗೋ.....’

• ರೇಖಾ ಹೆಗಡೆ ಬಾಳೇಸರ

ಈ ಬಾರಿ ಒಂದು ಮುಂಜಿಗೆ ಹೋಗಿದ್ದೆ. ವಟುವಿಗೆ ವೇದಿಕೆಯ ಮೇಲೆ ಕೂಡ್ರಲಿಕ್ಕೇ ಮನಸ್ಸಿಲ್ಲ, ನಿಮಿಷ ನಿಮಿಷಕ್ಕೂ ಆತ ಅಲ್ಲಿಂದ ಕಳಚಿಕೊಳ್ಳುವ ಪ್ರಯತ್ನ ಮಾಡುತ್ತಿದ್ದ. 'ಇದೇನಪ್ಪಾ, ಈ ಪರಿ ಬಲವಂತದ ಮುಂಜಿನಾ!' ಎಂದುಕೊಳ್ಳುತ್ತಿದ್ದೆ. ಆಮೇಲೆ ಗೊತ್ತಾಯಿತು. ಆತನ ಸ್ನೇಹಿತರೆಲ್ಲ ಹೊರಗೆ ಮೊಬೈಲಿನಲ್ಲಿ ಮುಳುಗಿದ್ದರು. ಸೆಳೆತ ತಡೆಯಲಾರದ ಆತ ಐದೈದು ನಿಮಿಷಕ್ಕೊಮ್ಮೆ ನಯವಾಗಿ ಜಾರಿ ಅವರಲ್ಲಿಗೆ ಹೋಗಿ ಸೇರಿಕೊಳ್ಳುತ್ತಿದ್ದ. ಇತ್ತ ಪುರೋಹಿತರಿಂದ ಬೈಸಿಕೊಳ್ಳುತ್ತಿದ್ದ ಅವನಮ್ಮ-ಅಪ್ಪ ಓಡೋಡಿ ಹೋಗಿ ಅವನನ್ನು ಎಳಕೊಂಡು ಬರುತ್ತಿದ್ದರು.

ಸುಮ್ನೆ ಇರಲಾರದೇ ಇರುವೆ ಬಿಟ್ಟುಕೊಂಡರು ಅಂತಾರಲ್ಲ ಹಾಗಾಯ್ತು ಈ ಸೋಶಿಯಲ್ ಮೀಡಿಯಾ ಸಹವಾಸ. ಮೊದಲು ಎಷ್ಟು ಚೆನ್ನಾಗಿ ಉಂಡ್ಕೊಂಡು, ತಿಂದ್ಕೊಂಡು, ಓದ್ಕೊಂಡು, ಬರ್ಕೊಂಡು, ಆಟ ಆಡಿಕೊಂಡು, ಓಡಾಡಿಕೊಂಡು ಇದ್ರು ಜನ. ಬಾಯ್ಬಿಟ್ಟು 'ಹಾಯ್, ಹಲೋ' ಹೇಳಿ... ಎದುರಿಗೆ ಇರೋ ನಿಜವಾದ ವ್ಯಕ್ತಿಗಳ ಜೊತೆಗೆ ಸ್ನೇಹ ಸಂಗ ಮಾಡಿ... ಮಣ್ಣಲ್ಲಿ ಎದ್ದು ಬಿದ್ದು ಆಡಿಕೊಂಡು ಮಜವಾಗಿದ್ರು. ಬಂದ್ವು ನೋಡಿ ಸಾಮಾಜಿಕ ಜಾಲತಾಣಗಳು. ಬಳಸೋಕ್ಕೆ ಶುರುವಿಟ್ಟುಕೊಂಡು ಜನರ ವರ್ತನೆಯೇ ಬದಲಾಗಿ ಹೋಯ್ತು. ಒಂದಷ್ಟು ಸಾಮಾನ್ಯ ಜನರ ಅಸಾಮಾನ್ಯ ಖಯಾಲಿಗಳಿಗೆಲ್ಲಾ ಒಂದು ವೇದಿಕೆ ಸಿಕ್ಕಂತಾಯ್ತು. ಕೆಲವೊಂದಿಷ್ಟು ಕ್ಲೋಸೆಟ್ ಕೋತಿಗಳೆಲ್ಲ ಮರ್ಯಾದೆ ಕವಚ ಕಳಚಿಟ್ಟು ಬಂದು ಮಂಗಾಟ ಆರಂಭಿಸಿದರು.

ಸೋಶಿಯಲ್ ಮೀಡಿಯಾ ಸಮುದ್ರದಲ್ಲಿ ಏನೆಲ್ಲ ವೈವಿಧ್ಯ, ವೈಚಿತ್ರ್ಯ ಉಂಟು! ಸುಮ್ಮನೆ ಐದು ನಿಮಿಷ ಕಣ್ಣಾಡಿಸೋಣ ಎಂದು ಒಳಗಿಳಿದವರನ್ನು ಸೆಳೆದುಕೊಂಡು ಗಿರಿಗಿರಿ ಸುತ್ತಿಸಿ ಸುಸ್ತು ಹೊಡೆಸುವ ಮಹಾಸುಳಿ ಅದು. ಈ ಜಗತ್ತಿನಲ್ಲಿ ನಾನೇನು, ನೀನೇನು, ಅವನೇನು ಎಂಬ ಬೇಧ ಇಲ್ಲ, ಒಂದೇ ಎಲ್ಲರೂ. ವರ್ಷಾನುಗಟ್ಟಲೇ ಅದೇ ಪ್ರೊಫೈಲ್ ಚಿತ್ರ ಇಟ್ಟುಕೊಂಡು ವಾರಕ್ಕೊಮ್ಮೆ ಲಾಗಿನ್ ಆಗುತ್ತ ಕಮಲದೆಲೆಯ ಮೇಲಿನ ನೀರಿನಂತೆ ಇರುವ ನಿಸ್ಸಂಗಿಗಳು ಹಲವರು, ಇದಕ್ಕೆ ವಿರುದ್ಧವಾಗಿ ಕೆಲವರು ದಿನಕ್ಕೊಂದು ಚಿತ್ರ, ಸ್ಟೇಟಸ್ ಬದಲಾಯಿಸಿ ಅದಕ್ಕೆ ಲೈಕು, ಕಮೆಂಟ್ ಬಂತಾ ಎಂದು ನಿರೀಕ್ಷಿಸುತ್ತ ಐದೈದು ನಿಮಿಷಕ್ಕೊಮ್ಮೆ ಅಕೌಂಟ್ ಚೆಕ್ ಮಾಡುವ ಚಕೋರರು, ಬಾರದಿದ್ದರೆ ಸಿಟ್ಟಿಗೆದ್ದು ಅದಕ್ಕೊಂದು ಖಾರದ ಪ್ರತಿ ಸ್ಟೇಟಸ್ ಹಾಕುವ 'ಸಿಟ್ಟಿ'ಜನ್‌ಗಳು ಒಂದಷ್ಟು ಜನ. ಒಂದು ಸಾಧಾರಣ ಫೋಟೋ ತೆಗೆದರೂ ಅದಕ್ಕೆ '*** ಫೋಟೋಗ್ರಫಿ' ಅಂತ ಹೆಸರುಕೊಟ್ಟು ಇಲ್ಲವೇ ನೂರಾ ಎಂಟು ಹ್ಯಾಶ್‌ಟ್ಯಾಗ್ ಲಗತ್ತಿಸಿ ಹಂಚಿಕೊಳ್ಳುವ ಚಿತ್ರಬ್ರಹ್ಮರು.... ಕೈಲಿರುವ ತುತ್ತು ಬಾಯಿಗಿಟ್ಟುಕೊಳ್ಳುವ ಮುನ್ನ ಅದರದ್ದೊಂದು ಚಿತ್ರ ಅಪ್ಲೋಡ್ ಮಾಡಿ ನೋಡುಗರ ಬಾಯಲ್ಲಿ ನೀರಿಳಿಸುವ ಕಿಲಾಡಿಗಳು.... ಬಾಯಿಬಡುಕರು, ಸ್ವಪ್ರಶಂಸಕರು, ಕುಶಲರು, ಹೆಡ್ಡರು, ಅಂತರ್ಮುಖಿಗಳು, ಜೀವನ್ಮುಖಿಗಳು ಎಲ್ಲ ಸಲ್ಲುವ ಜಾಗ ಇದು. 'ನೀನ್ಯಾಕೆ ಇಲ್ಲಿದೀಯ' ಎಂದು ಕೇಳುವವರಿಲ್ಲ, ಬೇಡ ಎಂದು ಬಿಟ್ಟು ಹೋದರೆ ತಡೆಯುವವರೂ ಇಲ್ಲ. ಆ ಮಟ್ಟಿಗೆ ಸಮ ವಾಲ್‌ಉ, ಸಮಪಾಲು ಇಲ್ಲಿ.



ಈ ಸಾಮಾಜಿಕ ಮಾಧ್ಯಮ ಅಕೌಂಟುಗಳಲ್ಲಿ ಹಿರಿಯರದ್ದು ಒಂದು ಲಯ... ತಾವು ಅನುಸರಿಸುವ ವಿಷಯ, ಅನುಭವ ಇರುವ ಕ್ಷೇತ್ರ ಇತ್ಯಾದಿಗಳ ಬಗ್ಗೆ ಮಾಹಿತಿ

ನೀಡುವ ಪೋಸ್ಟ್‌ಗಳೇ ಹೆಚ್ಚು ಇವರದ್ದು. ಸೂರ್ಯನಿಗಿಂತ ಕೊಂಚ ಮುಂಚೆಯೇ ಎದ್ದು ಇಂಟರ್‌ನೆಟ್ ಜಾಲಾಡಿ ಬೋಧವಾಕ್ಯವೊಂದನ್ನು ಹೆಕ್ಕಿ ವಾಟ್ಸಾಪ್ ಗುಂಪಿನ ಸದಸ್ಯರಿಗೆಲ್ಲ 'ಥಾಟ್ ಫಾರ್ ದಿ ಡೇ' ಕಳುಹಿಸಿ ಕೃತಾರ್ಥರಾಗುವ ಸಮಾಜೋದ್ಧಾರಿ ಸದಸ್ಯರು, ಬೆಳ್ಳಂಬೆಳಿಗ್ಗೆ ಫೋಟೋಶಾಪ್ ಮಾಡಿದ ಹೂವುಹಸಿರಿನ ಚಿತ್ರದ ಜೊತೆಗೆ ಒಂದು ಗುಡ್ ಮಾರ್ನಿಂಗ್ ಸಂದೇಶವನ್ನು ಫಾರ್ವರ್ಡ್ ಮಾಡೋ ಆಂಟಿಗಳು... 'ಈ ಸಂದೇಶವನ್ನು ಹತ್ತು ಸೆಕೆಂಡುಗಳಲ್ಲಿ ಹತ್ತು ಜನರಿಗೆ ಕಳುಹಿಸಿದರೆ ಹತ್ತಿಪ್ಪತ್ತು ಜನ್ಮಕ್ಕಾಗುವಷ್ಟು ಪುಣ್ಯ ಬರುತ್ತದೆ' ಎಂಬಿತ್ಯಾದಿ ಚೈನ್ ಮೆಸೇಜುಗಳ ವೈರಸ್ ಹರಡುವ ಅಂಕಲ್ಲುಗಳು.... ಹಾಸಿಗೆ ಬಿಟ್ಟೇಳುವ ಮೊದಲೇ ಶುರು ಮಾಡಿಕೊಂಡು ಮುಂದೆ 'ತಿಂಡಿ ತಿಂದೆ, ಜಿಮ್‌ಗೆ ಹೋದೆ, ಸಲೂನ್‌ಗೆ ಹೋದೆ...' ಎಂದು ತಮ್ಮೆಲ್ಲ ದೈನಂದಿನ ಚಟುವಟಿಕೆಗಳ ಬಗ್ಗೆ ತಾಸಿಗೊಮ್ಮೆ ಟ್ವಿಟ್ಟರ್‌ನಲ್ಲಿ, ಇನ್ಸ್ಟಾಗ್ರಾಂನಲ್ಲಿ ಚಿತ್ರಸಮೇತ ವರದಿ ಒಪ್ಪಿಸುವ ಸೆಲೆಬ್ರಿಟಿಗಳು, ಅದನ್ನು ಮರುಹಂಚಿ ಮನತುಂಬಿಕೊಳ್ಳುವ ಅವರ ಆರಾಧಕರು, ಎರಡೆರಡು ದಿನಕ್ಕೊಮ್ಮೆ ತಮ್ಮ ಮುದ್ದಿನ ಮಗುವಿನ ಫೋಟೋ/ವೀಡಿಯೋ ಅಪ್ಲೋಡ್ ಮಾಡುವ ಹೊಸ ಅಮ್ಮಂದಿರು, ತಾವು ಮಾಡಿದ ತಿಂಡಿಯದೋ, ತೀಡಿದ ರಂಗೋಲಿಯದೋ ಚಿತ್ರ ಹಾಕಿ ಧನ್ಯತೆ ಪಡೆಯುವ ಗೃಹಿಣಿಯರು, 'ಲೈಕ್‌ಗೆ ಮರು ಲೈಕ್, ಕಮೆಂಟ್‌ಗೆ ಮರು ಕಮೆಂಟ್' ಎಂದು ಒಳ ಒಪ್ಪಂದ ಮಾಡಿಕೊಂಡು ದಿನವಿಡೀ ಆಕ್ಟೀವ್ ಇರುವ 'ಪರಸ್ಪರ ಮೆಚ್ಚುಗೆ ಕ್ಲಬ್'ನ ಸದಸ್ಯರು... ಯಾರುಂಟು ಯಾರಿಲ್ಲ ಇಲ್ಲಿ?! ಆದರೂ ಈ ಜನ ಬೇಕು, ಒಂದಿಷ್ಟು ನಿರಪಾಯಕಾರಿ ಪೋಸ್ಟ್‌ಗಳು, ಒಂಚೂರು ಲೈಕ್, ಕಾಮೆಂಟ್‌ಗಳ ನಿರೀಕ್ಷೆ... ಅವೊಂದಿಷ್ಟು ಸಿಕ್ಕೊಡನೆ ನಿರಾಳವೆನಿಸುವಷ್ಟು ತೃಪ್ತಿ ಇವರದು.

ಇನ್ನೊಂದಿಷ್ಟು ಜನ ಇರ್ತಾರೆ, ಅವರಿಗೆ ಎಷ್ಟೊತ್ತಿಗೂ ಏನಾದರೂ ಒಂದು ಅಜೆಂಡಾವನ್ನು ಆದಷ್ಟೂ ಜನರಿಗೆ ತಲುಪಿಸುವ ಆತುರ. ಈಗಿನ ಇಂಥಿಂಥ ರಾಜಕಾರಿಣಿ ಇಷ್ಟಿಷ್ಟು ಕಷ್ಟಪಡುತ್ತಿದ್ದಾರೆ ಎಂದೋ, ಹಿಂದಿನ ಸರ್ಕಾರ ಎಂದೋ ಏನೋ ಹುನ್ನಾರ ಮಾಡಿತ್ತು ಎಂದೋ, ಇಂಥಿಂಥವರು ಎಂಥೆಂಥ ಜಾಗದಲ್ಲಿದ್ದರೆ ಏನೇನು ಸಾಧಿಸಬಹುದು, ಒಳಿತು/ಕೆಡುಕು ಆಗಬಹುದು ಎಂದೋ.... ಒಟ್ಟಿನಲ್ಲಿ ಏನೋ ಒಂದು ವಿಷಯ ಇಟ್ಟುಕೊಂಡು, ಅದಕ್ಕೊಂದಿಷ್ಟು ಸುಳ್ಳೆ-ಪುಳ್ಳೆಯಾದರೂ ಸರಿ, ಅಂಕಿ-ಅಂಶ ಜೋಡಿಸಿಕೊಂಡು ಇದ್ದಬಿದ್ದ ವಾಟ್ಸಾಪ್ ಗುಂಪುಗಳು, ಫೇಸ್‌ಬುಕ್‌ಗಳಲ್ಲೆಲ್ಲ ಹಂಚಿಕೊಳ್ಳುತ್ತಾ ಇರ್ತಾರೆ. ಎಡ-ಬಲ ಸಿದ್ಧಾಂತದ ಹಿಂದೆ ಬಿದ್ದು ಪ್ರತಿಯೊಂದು ವಿಷಯಕ್ಕೂ ಅದನ್ನು ಹೊಂದಿಸಲು ಹೋರಾಡಿ ಏಬಡರಾಗುತ್ತಾರೆ. ಅವರಷ್ಟಕ್ಕೆ ಅವರು ಏನಾರೂ ಹೋರಾಟ ಮಾಡಿ ಹೊಡದಾಡಲಿ ಎಂದು ಸುಮ್ಮನಿರಲೂ ಬಿಡದೇ, ತಮ್ಮ ಸಿದ್ಧಾಂತಗಳನ್ನು ಒಪ್ಪದವರು, ಚರ್ಚೆಗಳಲ್ಲಿ ಪಾಲ್ಗೊಳ್ಳದವರು ಬೇಜವಾಬ್ದಾರಿ ಜನ ಎಂತಲೂ ಗಂಟಲು ಹರಿದುಕೊಳ್ಳುತ್ತಾರೆ. ಇದರ ವಿಪರೀತ ಪರಿಣಾಮ ತಡೆಯಲಾರದೇ ಸರ್ಕಾರ ದುಡ್ಡು ಖರ್ಚು ಮಾಡಿ 'ಸುಳ್ಸುದ್ದಿ ತಡೆಯಿರಿ' ಅಂತ ಪ್ರಚಾರ ಮಾಡಲಾರಂಭಿಸಿದೆ ಅಂದರೆ ಇವರ ಹಾವಳಿ ಎಷ್ಟಿರಬಹುದು ನೋಡಿ.



ಇನ್ನು ಹದಿಹರೆಯದವರ ಅಕೌಂಟ್ ನೋಡಿದರೆ ಅದರ ಚಂದವೇ ಬೇರೆ. ಲವಲವಿಕೆ ತುಂಬಿ ಹೊರಚೆಲ್ಲುತ್ತದೆ ಇಲ್ಲಿ. ನೋಡೋದು ಅಂತ ಯಾಕೆ ಹೇಳಿದೆ ಅಂದ್ರೆ ಅವರು ಬರೆದಿದ್ದನ್ನು ಓದುವುದು ಸುಲಭವಲ್ಲ. ಎಲ್ಲ ಸಂಕೇತಾಕ್ಷರಗಳಲ್ಲಿ ಇರುತ್ತದೆ. 'ಜಿಎಂ' (ಗುಡ್ ಮಾರ್ನಿಂಗ್), 'ಸಪ್' (ವಾಟ್ಸ್ ಅಪ್) ಇಂದ ಶುರುವಾಗಿ 'ಜಿಟಿಜಿ' (ಗಾಟ್ ಟು ಗೋ)ವರೆಗೆ ಎಲ್ಲ ಸಂಭಾಷಣೆ ನಡೆಯುವುದು ಸಂಯುಕ್ತಾಕ್ಷರಗಳಲ್ಲಿ. ನಮ್ಮಂಥ

ಅಪ್ಪ-ಅಮ್ಮ ಗೂಢಚರ್ಯೆ ಮಾಡಲು ಬಂದರೆ ರಂಗೋಲಿ ಕೆಳಗೆ ತೂರಲು ಬೇಕಲ್ಲ..., ಆ ವಿದ್ಯೆಯಲ್ಲಿ ಹುಟ್ಟಾ ಪಿಎಚ್‌ಡಿ ಮಾಡಿದವರು ಈ ತಲೆಮಾರಿನವರು.

ಆದರೂ ಇವರ ನಿಗೂಢ ವಾಟ್ಸಾಪ್ ಸಂಭಾಷಣೆಗಳಿಗಿಂತ ಫೇಸ್‌ಬುಕ್, ಇನ್ಸ್ಟಾಗ್ರಾಂ ಚಿತ್ರಗಳೇ ಭಾರಿ ಮಜವಾಗಿರುತ್ತವಪ್ಪ. ಸೆಲ್ಫೀ ಎಂಬ ಸ್ವಮೋಹಿ ಚಿತ್ರಗಳಿಂದಲೇ ತುಂಬಿರುವ ಈ ಪ್ರೊಫೈಲುಗಳಲ್ಲಿ ಒಂದು ವಿಧಾನ ಅಡಗಿದೆ. ಹುಡುಗಿಯರ ಚಿತ್ರಗಳಾಗಿದ್ದರೆ ಚೂಪುತುಟಿ, ಬಾತುಕೋಳಿಗೆ ಸೆಡ್ಡು ಹೊಡೆಯುವಂತೆ ಬಾತ ತುಟಿ, ಚೂಪುಗಣ್ಣಿನ ಚಿತ್ರಗಳು. ಯಾವ ಕೋನದಿಂದ ಯಾರ್‍ಯಾರು ಹೆಚ್ಚು ತೆಳ್ಳಗೆ ಕಾಣುತ್ತಾರೋ ಅದೇ ಕೋನದಿಂದಲೇ ಯಾವಾಗಲೂ ತೆಗೆಯೋ ಚಿತ್ರಗಳು.... ಹುಡುಗರ ಚಿತ್ರಗಳಾದರೆ ಕೇಶವಿನ್ಯಾಸ, ಮೊಳಕೆಯೊಡೆದ ಮೀಸೆ, ಟೀ-ಶರ್ಟ್ ಮೇಲಿನ ಸ್ಲೋಗನ್ ಇಂಥವುಗಳನ್ನು ಎತ್ತಿತೋರಿಸುವ ಭಂಗಿ, ಮನಸ್ಥಿತಿಯನ್ನು ಬಿಂಬಿಸುವ ಕೈ ಸನ್ನೆಗಳು... ಎಲ್ಲರ ಮೈಬಣ್ಣ, ಹಿನ್ನೆಲೆಯ ವೈವಿಧ್ಯಮಯ ವರ್ಣಗಳನ್ನೆಲ್ಲ ಮಸುಬುಗೊಳಿಸಿ ಬ್ಲೀಚ್‌ನಲ್ಲಿ ಅದ್ದಿ ತೆಗೆದಂತೆ ತೋರಿಸುವ ಫಿಲ್ಟರ್‌ಗಳು.... ಎಲ್ಲ ಹೆಚ್ಚುಕಮ್ಮಿ ಒಂದೇ ಎರಕದಲ್ಲಿ ತೆಗೆದ ಅಚ್ಚುಗಳು.

ಇದರ ಜೊತೆಗೆ ಯಾವ್ಯಾವುದೋ ಸಿನೆಮಾ ಸಂಭಾಷಣೆಯ ಡಬ್‌ಸ್ಮ್ಯಾಶ್ ವೀಡಿಯೋಗಳು, ತರಹೇವಾರಿ ಟಿಕ್ ಟಾಕ್, ಮ್ಯುಸಿಕಲಿ ವೀಡಿಯೋಗಳು... ಹದಿನೈದು ಇಪ್ಪತ್ತು ಸೆಕೆಂಡ್‌ಗಳ ವೀಡಿಯೋಗಳಲ್ಲಿ ತಮ್ಮೆಲ್ಲ ಪ್ರತಿಭೆಯನ್ನು ಹೊರಹಾಕುವ ಯುವಜನ. ಹಿಂದಿನ ಕಾಲದಲ್ಲಿ ಓದುವ ಹುಡುಗರ ತಲೆ ಕೆಡಿಸಲು ಪ್ರೀತಿ-ಪ್ರೇಮ ಇಷ್ಟೇ ಇತ್ತು. ಈಗ ಏನೆಲ್ಲ ಆಪ್‌ಗಳು!

ಈ ಸೋಶಿಯಲ್ ಮೀಡಿಯಾಗಳ ಚಟದಿಂದಾಗಿ ಜನ ನಡೆಸುವ ಸರ್ಕಸ್ ಒಂದೆರಡಲ್ಲ. ಚಂದದ ಫೋಟೋ ಅಪ್ಲೋಡ್ ಮಾಡಬೇಕೆಂದುಕೊಂಡು ಎಲ್ಲೆಲ್ಲೋ ಹೋಗಿ ಏನೇನೋ ಮಾಡಿ ಸೆಲ್ಫೀ ತೆಗೆಯೋ ಹುಂಬತನ ಹಲವರಿದ್ದು. ಉರಿವ ಬಿಸಿಲಿರಲಿ, ಕೊರೆವ ಚಳಿಯಿರಲಿ.... ಅವರ ಮನದಲ್ಲಿ ಒಂದೇ ಧ್ಯಾನ- ಒಂದೊಳ್ಳೇ ಸೆಲ್ಫೀ! ಕಾಡು, ಮೇಡು, ಬಂಡೆ, ಗುಂಡಿ ಎಂದು ಯೋಚಿಸದೇ ನುಗ್ಗಿ ಸೆಲ್ಫೀ ತೆಗೆಯುವ ಈ ಚಟದಿಂದಾಗಿ ಹಲವರು ಪ್ರಾಣ ಕಳಕೊಂಡರೂ ಇತರರಿಗೆ ಬುದ್ಧಿ ಬಂದಿಲ್ಲ.

ನಮ್ಮ ಮಲೆನಾಡಿನ ಹಳ್ಳಿಗಳಲ್ಲಿ ಯಾವಾಗಲೂ ಮೊಬೈಲ್ ಸಿಗ್ನಲ್ ಕೊರತೆ. ಮನೆಯೊಳಗೆ ಹೋಗಲಿ, ಅಂಗಳದ ತುದಿಗೆ ಬಂದರೂ ಸಿಗ್ನಲ್ ತಾಗುವುದಿಲ್ಲ. 4ಜಿ ಬೇಕೆಂದರಂತೂ ಎತ್ತರೆತ್ತರ ಗುಡ್ಡಗಳನ್ನೇರುವುದು ಅನಿವಾರ್ಯ. ತೋಟಕ್ಕಿಳಿದು ಅಡಿಕೆ ಹೆಕ್ಕಲು 'ಕಾಲುನೋವು' ಅನ್ನುವ ಹದಿಹರೆಯದ ಪೋರರು ಸಿಗ್ನಲ್‌ಗಾಗಿ ಗುಡ್ಡಬೆಟ್ಟ ಚಾರಣ ಮಾಡಲು ಸದಾ ಸಿದ್ಧ. ಅವರದೊಂದೇ ಮೊರೆ- 'ಇಂತಾದರೂ ಬಾ, ಅಂತಾದರೂ ಬಾ, ಎಂತಾದರೂ ಬಾ, ಬಾ...!' ಹಿಂದೆಲ್ಲ ಸಂಜೆಹೊತ್ತು ಅರಳೀಕಟ್ಟೆಯಡಿ ಸೇರುತ್ತಿದ್ದ ಜನರದ್ದು ಈಗ ಭರಪೂರ ಸಿಗ್ನಲ್ ಸಿಗುವ ಜಾಗದಲ್ಲಿ ಬೈಠಕ್. ಮೊದಲು ಮದುವೆ, ಮುಂಜಿಯಂಥ ಕೌಟುಂಬಿಕ ಕಾರ್ಯಕ್ರಮಕ್ಕೆ ಜನ ಸೇರಿದಾಗ ಮಕ್ಕಳ ಟೋಳಿ ಇರುತ್ತಿದ್ದುದು ಅಂಗಳದಲ್ಲಿ.... ಕ್ರಿಕೆಟ್, ಕುಂಟಾಬಿಲ್ಲೆ, ಓಡಿ ಮುಟ್ಟುವ ಆಟ ಆಡುತ್ತ... ಊಟದ ಸಮಯದಲ್ಲಿ ಹಿರಿಯರು ಬಂದು ಅವರನ್ನು ಕೂಗಿ ಒಳಕರೆಯಬೇಕಿತ್ತು. ಈಗಲೂ ಎಲ್ಲ ಮಕ್ಕಳೂ ಅಂಗಳದಂಚಿನಲ್ಲೇ ಕಾಣುತ್ತಾರೆ, ಮೊಬೈಲಿನಲ್ಲಿ ಮಗ್ನರಾಗಿ. 'ಕತ್ತೆ ತಪ್ಪಿಸಿಕೊಂಡರೆ ಸಿಗೋದು ಮೋಟುಗೋಡೆಯ ಹಿಂದೆ' ಎಂಬಂತೆ ಈಗ ಹೈಕ್ಳು ಕಾಣಲಿಲ್ಲವೆಂದರೆ ಸಿಗೋದು ಸಿಗ್ನಲ್ ಇರುವ ಜಾಗದಲ್ಲಿ ಎಂಬಂತಾಗಿದೆ.



ಸೋಶಿಯಲ್ ಮೀಡಿಯಾ ಸುಂಟರಗಾಳಿಗೆ ಸಿಕ್ಕಿಕೊಂಡವರು ಅವರು, ಇವರು ಎಂದಿಲ್ಲ. ನಮ್ಮ ಪರಿಚಯದವರೊಬ್ಬರು ಮೊನ್ನೆ ಏರ್‌ಪೋರ್ಟಿನಲ್ಲಿ ಕಾಯುತ್ತಿದ್ದಾಗ ಒಬ್ಬ ಮಹಿಳೆ ಆತುರಾತುರವಾಗಿ ಏನೋ ಹುಡುಕುತ್ತ ಬಂದರು. ಬಹುಶಃ ಅವರ ಫೋನ್ ಚಾರ್ಜ್ ಮಾಡಬೇಕಿತ್ತು, ಖಾಲಿ ಜಾಗ ಇರಲಿಲ್ಲ. ಲ್ಯಾಪ್‌ಟಾಪ್ ತೆರೆದು ಕೆಲಸ ಮಾಡುತ್ತಿದ್ದ ನಮ್ಮವರ ಬಳಿ ಬಂದ ಆಕೆ ಅತಿಯಾಗಿ ವಿನಂತಿ ಮಾಡಿಕೊಂಡು ಇವರ ಲ್ಯಾಪ್‌ಟಾಪ್ ಮೂಲಕ ಚಾರ್ಜ್ ಮಾಡಲಾರಂಭಿಸಿದಳು. ಅಂಥಾದ್ದೇನು ತರಾತುರಿ ಇತ್ತಪ್ಪಾ ಎಂದು ನೋಡಿದರೆ ಪಾಪ, ಆಕೆಗೆ ಫೇಸ್‌ಬುಕ್ಕು ನೋಡಬೇಕಿತ್ತು!

'ನೀ ಮಾಯೆಯೊಳಗೋ, ನಿನ್ನೊಳು ಮಾಯೆಯೋ' ಎಂಬುದನ್ನೀಗ 'ನೀ ಸೋಶಿಯಲ್ ಮೀಡಿಯಾದೊಳಗೋ, ನಿನ್ನೊಳು ಸೋಶಿಯಲ್ ಮೀಡಿಯಾ ಮಾಯೆಯೋ' ಎಂದು ಅರ್ಜೆಂಟಾಗಿ ಅಪ್‌ಡೇಟ್ ಮಾಡುವ ಕಾಲ ಬಂದಿದೆ. ಎಲ್ಲಿ ಅಪ್‌ಡೇಟ್ ಮಾಡ್ಬೇಕು... ಫೇಸ್‌ಬುಕ್ಕಲ್ಲಾ, ಟ್ವಿಟ್ಟರಲ್ಲಾ ಅನ್ತೀರಾ...!? ಅಲ್ಲಾ ಸ್ವಾಮಿ, ನಂನಮ್ಮ ಮನಸ್ಸಿನಲ್ಲಿ. ■






# ಕಾಣದಂತೆ ಮಾಯವಾದನು !

• ಗಣೇಶ್ ಹೆಗ್ಗಡೆ

"ಅಮ್ಮಾ, ಇವತ್ನಿಂದ ನಾನು ಶಾಲೆಗೆ ಹೋಗಲ್ಲ"

"ಯಾಕ್ಮಗು?"

"ನಮ್ಮುಖ ನೋಡಿದ್ರೆ ಸಾಕು, ಎಲ್ಲಾ ಫ್ರೆಂಡ್ಸು ರೇಗಿಸ್ತಾ ಒಂದು ಹಾಡು ಹೇಳ್ತಾರಮ್ಮ"

"ಯಾವ ಹಾಡು"?

"ಕಾಣದಂತೆ ಮಾಯವಾದನು...ಅಂತಾ... ಆದರೆ ಮುಂದಕ್ಕೇನೂ ಹೇಳದೆ ಕಿಸಕ್ಕನೆ ವಳಗೊಳಗೆ ಯಾಕೊ ನಕ್ಕೋತಾರೆ ಕಣಮ್ಮಾ. ಈ ಹಿಂದೆ ಇವರೆಲ್ಲಾ ನನ್ಜೊತೆ ಚೆನ್ನಾಗೇ ಇದ್ರು, ಈಚೀಚೆಗೇ ಅವರು ಹೀಗ್ಮಾಡ್ತಿರೋದು ಕಣಮ್ಮಾ"

"ವರಿ ಮಾಡ್ಕೊಬ್ಯಾಡ ಮಗು.. ಅವರು ನಿನ್ನನ್ನು ಕುರಿತು ಹೀಗೆ ಗೇಲಿ ಮಾಡ್ತಾಯಿಲ್ಲ"

"ಮತ್ತೆ?"

"ನಿಮ್ಮಪ್ಪನನ್ನುದ್ದೇಶಿಸಿ ಹೀಗೆ ಅಪಹಾಸ್ಯ ಮಾಡ್ತಿರೋದು"

"ಬಿಡ್ಸಿ ಹೇಳಮ್ಮ, ನಂಗರ್ಥವಾಗ್ತಾಯಿಲ್ಲ"

"ಅವರು ಈ ತಾಲ್ಲೂಕಿನ ಎಂಎಲ್ಎ ಅಲ್ವೆ. ಅವರು, ಹೆಚ್ಚೂ ಕಮ್ಮಿ ಒಂದೂವರೆ ತಿಂಗಳಿಂದ ಈ ರಾಜ್ಯದಿಂದಲೇ ಗಾಯಬ್ ಆಗಿರೋದು ಇಷ್ಟೆಲ್ಲ ರಾದ್ಧಾಂತಕ್ಕೆ ಕಾರಣ. ಈ ವಿಚಾರ ಬಡ ವೋಟುದಾರರ ಮನೆ...ಮನದಲ್ಲಿ ಚರ್ಚೆಗೆ ಗ್ರಾಸವಾಗಿ, ಅದು ನಿನ್ನ ಶಾಲಾ ಗೆಳೆಯರ ಕಿವಿಗಳಿಗೂ ಬಿದ್ದಿರುವುದು ಈ ಹಾಡಿಗೆ ಮೂಲ ಕಾರಣ."

"ಅಮ್ಮಾ, ಈ ಹಿಂದೆಯೂ ಅಪ್ಪ ವಂದ್ಸಲಾ ಎದುರು ಪಾರ್ಟಿಯವರಿಗೆ ಹೆದರಿಕೊಂಡು ಯಾವುದೊ ರೆಸಾರ್ಟ್‌ನಲ್ಲಿ ಅವಿತುಕೊಂಡು ಕೂತಿರ್ಲಿಲ್ವೇ?

"ಹ್ಞೂಂ ಮಗು, ಅವರ ಪ್ರೊಫೆಷನ್ನೇ ಅಂಥಾದ್ದು, ಹೀಗೆಲ್ಲಾ ಮಾಡದೇ ಇದ್ರೆ ಅಪ್ಪನನ್ನು ಯಾರೂ ರೆಕಗ್ನೈಸೇ ಮಾಡಲ್ಲ. ಮಂತ್ರಿ ಪದವಿ ಗಿಟ್ಟಿಸ್ಕೋ ಬೇಕಾದ್ರೆ ಇದಕ್ಕಿಂತಲೂ ಹೆಚ್ಚಿಗೆ ಗಿಮಿಕ್ ಮಾಡ್ಬೇಕಾಗುತ್ತೆ"

"ಅಮ್ಮಾ, ಎರಡು ತಿಂಗಳ ಹಿಂದೆ ಅಪ್ಪನನ್ನು ನೋಡಲು ಹಳ್ಳಿಯಿಂದ ಬಡವನೊಬ್ಬ ಬಂದಿದ್ದ, ನೆನಪಾಯ್ತಾ?'

"ಹ್ಞೂಂ ಮಗು, ಪಾಪ ಅವನ ಹಳ್ಳಿಯಲ್ಲಿ ಬರಗಾಲ, ಕೆರೆ ಬಾವಿಗಳೆಲ್ಲಾ ಬತ್ತಿ ಹೋಗಿ, ಕುಡಿಯವುದಕ್ಕೆ ನೀರೂ ಸಿಗದೆ ಜನರು ತೀರಾ ಬವಣೆ ಪಡುತ್ತಿದ್ದಾರೆಂದು, ದಯವಿಟ್ಟು, ಹಳ್ಳಿಗೆ ಬನ್ನಿ, ಪರಿಹಾರ ಕೊಡಿಸ್ರೀ..." ಎಂದು ಅಪ್ಪನ ಮುಂದೆ ಅಲವತ್ತು ಕೊಳ್ತಿದ್ದ."



"ಆದರೆ ಅಪ್ಪ ಅವನ್ಯಾವ ಮಾತನ್ನೂ ಕೇಳಿಸಿಕೊಳ್ಳದೆ ದೆಹಲಿ ಫ್ಲೈಟಿಗೆ ಲೇಟಾಯ್ತು, ಅಂತ ಹೊರಟೇ ಬಿಡ್ತಲ್ವಾ...ಅಮ್ಮಾ""

“ಅವರ ಸ್ವಭಾವನೇ ಹಾಗೆ ಮಗು, ಅಂದ್ಹಾಗೆ ಈ ವಿಚಾರ ಯಾಕೆ ನಿನಗೆ ನೆನಪಿಗೆ ಬಂತು”?

“ಸದಾ ಸದನದ ಬಾವಿಯೊಳಗೆ ಧುಮುಕಿ ಸ್ಲೋಗನ್ನು ಕೂಗುವ ಅಪ್ಪನಿಗೆ ತನ್ನೂರಿನ ಬತ್ತಿದ ಕೆರೆ ಬಾವಿಗಳ ನೆನಪು ಆಗುವುದಿಲ್ವೇನಮ್ಮಾ?

“ನೋ...ಕಾಮೆಂಟ್ಸ್ ಮಗು, ಅಪ್ಪನಂಥಹವರಿಗೆ ಓಟು ಕೊಟ್ಟ ಬಡ ಪ್ರಜೆಗಳ ನೆನಪೂ ಇಲ್ಲ. ‘ಗನ್ನು’ ಹಿಡಿದು ಗಡಿ ಕಾಯುವ ನಮ್ಮ ಯೋಧರ ನೆನಪೂ ಇಲ್ಲ”

“ಅಮ್ಮಾ ಯೋಧರು ಅಂದರೆ ಈಗ ನೆನಪಿಗೆ ಬಂತು. ಇವತ್ತು ಶಾಲೆಗೆ ನಾನು ಹೋಗಲೇ ಬೇಕಮ್ಮಾ. ಯಾರು ಎಷ್ಟೇ ರೇಗಿಸಿದರೂ ನಾನು ಇನ್ನು ಮುಂದೆ ಕೇರ್ ಮಾಡಲ್ಲ”

“ಭೇಷ್ ಮಗು, ನಿನ್ನ ಬದಲಾದ ನಿರ್ಧಾರ ನನ್ನಂಥಹ ತಾಯಿಂದರಿಗೆ ಸಂತೋಷ ತರಿಸ್ತಿದೆ”

“ಅಮ್ಮಾ ಇವತ್ತು ಮರೆಯದೆ ಶಾಲೆಗೆ ಮೋಂಬತ್ತಿ ತರಲು ಹೆಡ್ಮಾಸ್ತರು ಹೇಳಿದ್ದಾರಮ್ಮ”

“ಯಾಕ್ಮಗು?”


“ಶಾಲೆಯ ಆವರಣದಲ್ಲಿ ಹುತಾತ್ಮರಾದ ಯೋಧರಿಗೆ ದೀಪ ನಮನವಿದೆಯಮ್ಮಾ"

“ಹೋಗು ಮಗು ಈ ಕಾರ್ಯಕ್ರಮ ತುಂಬಾ ಔಚಿತ್ಯ”

“ಅಮ್ಮಾ, ಅಪ್ಪನೂ ಹೀಗೆ ಕಾಣದಂತೆ ಮಾಯವಾಗುವ ಬದಲು, ಊರಿಗೆ ಮರಳಿ ಬಂದು ಈ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರೆ ಎಷ್ಟು ಚಂದ ಇರ್ತಿತ್ತು. ಅಲ್ವಾ?”

“ಇಂಥಹ ನಿನ್ನ ಚಿಕ್ಕ ಚಿಕ್ಕ ಆಸೆ ಎಂದಿಗೂ ಈಡೇರುವುದಿಲ್ಲ ಮಗು, ನೀವಿಬ್ಬರೂ ರೈಲ್ವೆ ಹಳಿಗಳಂತೆ ಸಮನಾಂತರ ರೇಖೆಗಳು. ಅಪ್ಪನ ಬಾಯಿಯಲ್ಲಿ ಹೊಗೆ ಬತ್ತಿ ಮಗನ ಕೈಯಲ್ಲಿ ಮೇಣದ ಬತ್ತಿ ಇದು ವಿಧಿ ನಿಯಮದ ವಿಪರ್ಯಾಸ ! ಮಗು.”■

---






# ಮೊಬೈಲು ಬಂದಿದೆ ಕೊಳ್ಳಿರೊ, ತರಾವರಿ... !

• **ಈರಪ್ಪ ಎಂ. ಕಂಬಳಿ**

'ನೀ ಮಾಯೆಯೊಳಗೊ, ನಿನ್ನೊಳು ಮಾಯೆಯೋ' ದಾಸವಾಣಿ ನೆನಪಾಯಿತು. ಭಾರತೀಯ ಆಧ್ಯಾತ್ಮವಾದಿಗಳ ಅದರಲ್ಲೂ ದಾಸ ಪಂಥದವರು ಜಗವನ್ನೇ ಮಾಯೆ ಎಂದು ಕರೆದು ಸಾಂಸಾರಿಕ ಬದುಕನ್ನು ತುಸು ಜರೆದು, ಲೌಕಿಕ ಬದುಕಿಗೆ 'ಮಾಯೆ ಎಂಬ ಹಣೆಪಟ್ಟಿ (ಲೇಬಲ್) ಬಡಿದದ್ದು ನಮಗೆ ಹೊಸದೇನೂ ಅಲ್ಲ. ಹಾಗಾದರೆ, ಜಗತ್ತೇ ಒಂದು ಮಾಯಾ ಪ್ರಪಂಚ ಎಂದು ಬಗೆದು ಕೈಕಟ್ಟಿ ಕುಳಿತರಾಗುತ್ತದೆಯೆ, ಎಲ್ಲಿಯಾದರು? ವಿಪರೀತ ವೇಗ ಬಂದಿರುವ ಇಂದಿನ ನಾಗರೀಕ ಜಗತ್ತಿನ ಓಡುವ ಧಾವಂತದಲ್ಲಿ ಬಿದ್ದಿರುವಾಗ ನಾವೂನೂ ತುಸು ಓಡಬೇಕಾಗುತ್ತದೆ. ಪ್ರವಾಹಕ್ಕೆ ಎದುರಾಗಿ ಈಜಿದರೇನು ಬಂತು, ಸುಖ !

ವಿಷಯಾಂತರಗೈಯಲಾರೆ ಬನ್ನಿರಿ. ನಾನು ಈ ಹಿಂದೆ ಬರೆಯಲುದ್ದೇಶಿಸಿದ 'ಮೊಬೈಲೆಂಬೊ ಮಾಯಾ ಜಾಲ' ಪ್ರಬಂಧದ ಪೀಠಿಕೆಯಷ್ಟೆ ಇದು. ಕೆಲ ವರ್ಷಗಳ ಹಿಂದೆ ನನ್ನ ಕಿಸೆಯಲ್ಲಿನ್ನೂ ಮೊಬೈಲಿನ ಪ್ರವೇಶ ಆಗಿರಲಿಲ್ಲ. ಹಳ್ಳಿಯ ಕೂಡು ರಸ್ತೆಯಲ್ಲಿ ಬಸ್ಸಿಗಾಗಿ ಒಬ್ಬನೇ ಕಾದು ಕೂತಿದ್ದೆ. ಅನತಿ ದೂರದಲ್ಲಿ, ಅದೇ ಕ್ರಾಸಿನಲ್ಲಿ ಚಡಪಡಿಸುತ್ತ ಅಲ್ಲೇ ಠಳಾಯಿಸುತ್ತಿದ್ದ ವ್ಯಕ್ತಿಯೊಂದು ಬಳಿ ಸಾರಿ "ನನ್ನ ಮೊಬೈಲು ಸ್ವಿಚ್ ಆಫ್ ಆಗಿದೆ. ತುರ್ತಾಗಿ ಕಾಲ್ ಮಾಡಬೇಕಿತ್ತು ಒಂದು ನಿಮಿಷ ನಿಮ್ಮ ಮೊಬೈಲು ಕೊಡುತ್ತೀರಾ" ? ಎಂದು ಅಲವತ್ತುಕೊಂಡಿತು. ನಾನೋ, ಅಷ್ಟೇ ತಣ್ಣಗಿನ ದನಿಯಲ್ಲಿ "ನನ್ನ ಹತ್ತಿರ ಮೊಬೈಲೇ ಇಲ್ಲವಲ್ಲ" ಎಂದಿದ್ದಕ್ಕೆ, 'ನೀನೆಂಥಾ ಅನಾಗರಿಕ ಪ್ರಾಣಿ' ಎನ್ನುವಂತೆ ನಖ-ಶಿಖಾಂತ ನನ್ನತ್ತ ನೋಡಬೇಕೆ? ಈಟಿಯಿಂದ ತಿವಿಯುವಂತೆ ನೋಡುತ್ತಿದ್ದ ಆತನ ಆ ತೀವ್ರ ನೋಟಕ್ಕೇ ತತ್ತರಿಸಿ ಹೋಗಿದ್ದೆ. ಮೊಬೈಲು ಅಷ್ಟೊಂದು ಅನಿವಾರ್ಯವೇ ಎಂದೆಲ್ಲ ಮೈ ಪರಚಿಕೊಂಡಿದ್ದೆ, ಅವೊತ್ತು.

ಕನ್ನಡ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಈ 'ಮೊಬೈಲು' ಪದದ ಸಂಧಿ / ಸಮಾಸ ಬಿಡಿಸಿ ಅರ್ಥ ಬರೆಯಲು ಹೇಳಿದರೆ ಹೇಗಿರುತ್ತದೆ, ಎಂದೆಲ್ಲ ಹೋಚಿಸಿದೆ. ಮಾಬ್+ಐಲು=ಮೊಬೈಲು. ಅಂದರೆ ಸಮೂಹ ಸನ್ನಿ ! ಹೌದಲ್ಲವೇ ? ಈಗ ಅದೇನಿದ್ದರೂ ಮೊಬೈಲು – ಸಮೂಹ ಸನ್ನಿಯೇ ಸೈ ! ಜಗದ ಜನರ ಕೈಯಲ್ಲಿ ಮೊಬೈಲು ಇದೆಯೋ ? ಇಲ್ಲಾ ಮೊಬೈಲಿನ ಹಿಡಿತದಲ್ಲಿ ಅಖಂಡ ಜಗದ ಜನ ಸಿಲುಕಿದ್ದಾರೆಯೋ ? ಎನ್ನುವುದು ಇಂದು ಅಯೋಮಯ ! ಅಂತರ್‌ಜಾಲ!! ಮತ್ತದೇ ದಾಸವಾಣಿ ನೆನಪಾಗುತ್ತದೆ 'ಮಾಯೆ ನಿನ್ನೊಳಗೊ, ನಿನ್ನೊಳಗೆ ಮಾಯೆಯೋ'!? 'ಮೊಬೈಲು ಬಂದಿದೆ ಕೊಳ್ಳಿರೋ ತರಾವರಿ । ದಬದಬನೇ ಮಾರುಕಟ್ಟೆಗೆ ಅಗಣಿತ, ಜನರೆಲ್ಲ ಮೊಬೈಲು ಬಂದಿದೆ ಕೊಳ್ಳಿರೋ' ॥

ಒಂದಿಷ್ಟು ನಮ್ಮನಮ್ಮ ಬಾಲ್ಯದಂಗಳಕ್ಕೆ ಹಿಂಜಿಗಿದು ನಿಂತು ನೋಡಿದಾಗ ನೆನಪಾಯಿತು. ನಾವು ಊರಿಂದೂರಿಗೆ ಬಸ್ಸುಗಳಲ್ಲಿ ಕುಳಿತು ಪ್ರಯಾಣಿಸುವಾಗ ಪುಸ್ತಕದ ಓದಿನಲ್ಲಿ ಮೈಮರೆಯುತ್ತಿದ್ದ ದಿನಗಳಿದ್ದವು, ಆಗ. ಆ ದೃಶ್ಯವೇ ಬದಲಾಗಿದೆ ಈಗ. ಎಲ್ಲ ಹುಡುಗರು / ಹುಡುಗಿಯರು ಮೊಬೈಲಿನಲ್ಲಿ ಮುಳುಗಿರುತ್ತಾರೆ. ಇದು ಓದುವ ಸಂಸ್ಕೃತಿಯ ಮೇಲೆ ಗಾಢ ಪರಿಣಾಮ ಬೀರಿದೆ ಎಂದರೆ ಯಾರೂ ಅಲ್ಲಗಳೆಯಲಾರರು. ಹಾಗಾದರೆ,



ಮೊಬೈಲು ಬಂತು, ಬಂತೂ ನಮ್ಮ ಪಾಲಿನ ಓದುವ ಗೀಳನ್ನೇ ಕಿತ್ತುಕೊಂಡಿತಲ್ಲವೇ ಎನ್ನುವ ಆತಂಕ ನನ್ನಂಥ ಪುಸ್ತಕ ಪ್ರೇಮಿಗಳದು. ಅಷ್ಟೇ ಅಲ್ಲ ವಾಹನಗಳಲ್ಲಿ ಪ್ರಯಾಣಿಸುವಾಗ, ಎಲ್ಲಿಯಾದರೂ ಅಕಸ್ಮಾತ್ ಅಪಘಾತ ಅವಘಡವೇನಾದರು ಕಣ್ಣಿಗೆ ಬಿದ್ದರೆ, ಅನುಕಂಪ ಮಿಡಿಯುವದಾಗಲಿ, ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸಲು ಧಾವಿಸದೆ, ತಮ್ಮ ಕೈಯಲ್ಲಿರುವ ಮೊಬೈಲಿನಲ್ಲಿ ಅಪಘಾತ ದೃಶ್ಯ ಚಿತ್ರೀಕರಿಸಲು ಮುಂದಾಗುವವರೆ ಬಹಳ. ಇದೆಂಥಾ ವ್ಯಂಗ್ಯ. ಮಾನವೀಯತೆ ಮರೆತ ವರ್ತನೆಯಲ್ಲವೆ?

ಕಿಸೆಯಲ್ಲೊಂದು ಮೊಬೈಲು ಇದ್ದರೆ ಸಾಕು. ಜಗತ್ತನ್ನೇ ಸೆರೆ ಹಿಡಿಯುವ ಉಮೇದು. ಕರತಲಾಮಲಕ ಸರಕು ಎಂದರೆ ಇದೇನೇ. ಜೋಬಿನಿಂದ ತೆಗೆದ, ಯಾವ ಹೊತ್ತಿನಲ್ಲಾದರೂ ಎಲ್ಲೆಂದರಲ್ಲಿ, ಯಾರೊಂದಿಗೆ ಬೇಕಾದರೂ ನಿಂತು, ಕಣ್ಣು ಮಿಟುಕಿಸುವುದರೊಳಗಾಗಿ ಸೆಲ್ಫೀ ತೆಗೆದು – ಸೆರೆ ಹಿಡಿದುಬಿಡುತ್ತಾರೆ, ವಾಹ್! ಇದು ಅತ್ಯುನ್ನತ ನಾಗರೀಕತೆಯ ಕೊಡುಗೆ. ನಾಗರೀಕ ಜಗತ್ತಿನ ನರ ಮಾನವರು ಇಷ್ಟೊಂದು ಸೆಲ್ಫೀ ಅರ್ಥಾತ್ ಸೆಲ್ಫಿಶ್ ಆದರೆ ಹೇಗೆ ಎಂದು ನನ್ನಂಥ ಮುಗ್ಧರು ಚಿಂತಿಸಬೇಕಷ್ಟೇ. ನಾವಾಗ ಅಕ್ಷರ ಜಗತ್ತಿನ ನಿರ್ಜೀವ ಪುಸ್ತಕಗಳಲ್ಲಿ ತಲ್ಲೀನರಾಗಿ ಸಜೀವ ಜಗತ್ತನ್ನು ಸ್ಪರ್ಶಿಸುತ್ತಿದ್ದೆವು, ಅನುಭವಿಸುತ್ತಿದ್ದೆವು, ಈಗ ಫೇಸ್ ಬುಕ್ಕು, ವ್ಯಾಟ್ಸ್ ಆಪ್‌ಗಳಲ್ಲಿ ಆಧುನಿಕ ಜಗತ್ತು ಮೈಮರೆತಿದೆ, ಅಷ್ಟೇ.

ಒಂದು ಕಾಲದಲ್ಲಿ, ಊರಿಗೆ ಬಂದಿದ್ದ ಬಂಧು–ಬಾಂಧವರನ್ನು ಗಾಡಿ ಹತ್ತಿಸಿ, 'ತಲುಪಿದ ಕೂಡ್ಲೇ ಕಾಗದ ಹಾಕಿರಿ' ಎಂಬ ತಾಕೀತು ಮಾಡುತ್ತಿದ್ದರು. ಅದರಂತೆಯೇ ಎರಡು–ಮೂರು ದಿನಗಳಲ್ಲಿಯೇ ಅಂಚೆ ಕಾರ್ಡು ಹಾಜರು. ಈಗ ಏನಿದ್ದರೂ, 'ಹೋದ ಕೂಡ್ಲೇ ಒಂದು ಕಾಲ್ ಮಾಡಿರಿ' ಎನ್ನುವುದು. ಕನ್ನಡದಲ್ಲಿ 'ಕಾಲು ಮಾಡುವುದು' ಎನ್ನುವುದಕ್ಕೂ ಬೇರೆ ಅರ್ಥವಿರಬೇಕಲ್ಲವೆ ? 'ಕೈ ಮಾಡು' ಅಂದರೆ ಗೊತ್ತಲ್ಲ. ಕಾಲಾಯ ತಸ್ಮೈ ನಮ: ಇದು ಮೊಬೈಲು ಯುಗ. ನಾಗರೀಕ ಜಗತ್ತಿನಲ್ಲಿ ಇಂದು ಮೊಬೈಲು ಹಿಡಿಯದ ಕೈಗಳೇ ಇಲ್ಲವೇನೋ. "ಪತ್ರ ಬರೀಲಿಕ್ಕೆ ಟೈಮೆಲ್ಲಿದೆ ಅಂಕಲ್ ? ಎಲ್ಲ ಮೊಬೈಲಿನಲ್ಲೇ ನೋಡಿಕಂತೀವಿ ಬಿಡ್ರಿ. ನಿಮ್ಮ ಕಾಲ ಹೋಯ್ತು. ಈಗ ಏನಿದ್ರೂ 'ಹಲ್ಲೋ' ಅಂದ್ರಾಯ್ತು, ಎಲ್ಲ ಮುಗೀತು.


ಹೀಗಾಗಿ, ಈಗ ಮಗುವಿನಿಂದ ಹಿಡಿದು ಮುದುಕಿಯರವರೆಗೆ ಮೊಬೈಲು ಅನಿವಾರ್ಯ ಸರಕಾಗಿದೆ, ಬಲ್ಲಿರಾ ? ಅಳುವ ಮಗುವಿನ ಕೈಗೆ ಮೊಬೈಲು ನೀಡಿದರೆ, ತಟ್ಟನೇ ಅದು ಅಳು ನಿಲ್ಲಿಸಿ ಬಿಡುತ್ತದೆ. ನಮ್ಮ ಬಾಲ್ಯ ಕಾಲದಲ್ಲಿ ಅಳುವ ಮಗುವಿನ ಕೈಗೆ ಕಲ್ಲು ಸಕ್ಕರೆ ನೀಡುತ್ತಿದ್ದರು ಸಮಾಧಾನಿಸಲು. ಅದಕ್ಕೇ ದಾಸರು 'ಕಲ್ಲು ಸಕ್ಕರೆ ಕೊಳ್ಳಿರೊ ನೀವೆಲ್ಲರೂ! ಎಂದು ಹಾಡಿದ್ದು. ಈಗ 'ಮೊಬೈಲು ಬಂದಿದೆ ಕೊಳ್ಳಿರೋ, ಸಾಸಿರ ನಾಮದ ...'! ಎಂದು ನಾವು ಹಾಡಬೇಕಾಗಿದೆ.

ವಿಮಾನ ಕಂಡು ಹಿಡಿದ ಹೊಸತರಲ್ಲಿ ಆಕಾಶವೇ ಕೆಳಗಿಳಿದಂತೆ; ಪ್ರಪಂಚವೇ ಹತ್ತಿರವಾದಂತೆ; ಜಗತ್ತು ಚಿಕ್ಕದಾಯಿತು ಎಂದೆಲ್ಲ ಅಚ್ಚರಿಪಟ್ಟಿತ್ತು ಲೋಕ. ಈಗಲೋ, ಬಡಾವಣೆಯಲ್ಲಿ ವಿಳಾಸ ಕೇಳಿದ್ದಕ್ಕೆ 'ಕೈಯಲ್ಲಿ ಮೊಬೈಲು ಇಟ್ಟುಕೊಂಡು ವಿಳಾಸ ಕೇಳುತ್ತೀರಲ್ಲ, ಫೋನಾಯಿಸಬಾರದೆ'? ಎಂಬ ಪುಕ್ಕಟೆ ಸಲಹೆ. ಕೈಯಲ್ಲಿ 'ಮೊಬೈಲು ಕೈಯಲ್ಲಿ ಇಟ್ಟುಕೊಂಡು ವಿಳಾಸಕ್ಕಾಗಿ ಅಲೆದರಂತೆ' –ಹೊಸ ಗಾದೆ ಠಂಕಿಸಬಹುದು. ನಿಗೂಢವಾದ ನೈಸರ್ಗಿಕ ರಹಸ್ಯಗಳನ್ನು ಮಾನವ ಒಂದೊಂದಾಗಿ ಭೇದಿಸುತ್ತ ಬಂದಾಗ,



ನಮ್ಮದು 'ವೈಜ್ಞಾನಿಕ ಯುಗ' ಎಂದು ಬೀಗಿ ಬೆನ್ನು ತಟ್ಟಿಕೊಂಡವರು ನಾವು. ಈಗಿನ ಯುಗವನ್ನು 'ಮೊಬೈಲು ಯುಗ' ಎಂದು ಕರೆದರೆ ನಾಗರಿಕ ಜಗತ್ತಿನ ಯಾವ ಹುಳ ನಿರಾಕರಿಸುತ್ತದೆ, ಅದನ್ನು ಹೇಳಿರಿ!

ಯಕಶ್ಚಿತ್ ಒಂದು ಮೊಬೈಲು ನಿಮ್ಮ ಕಿಸೆಯಲ್ಲಿ ಇಲ್ಲವೆಂದರೆ ನೀವು ಯಾವ ಸೀಮೆಯ ಮನುಷ್ಯರು? ಎಂದು ಕೆಕ್ಕರಿಸಿ ನೋಡುತ್ತದೆ, ಆಧುನಿಕ ನಾಗರೀಕ ಜಗತ್ತು. ಅಷ್ಟೊಂದು ಒಡನಾಡಿಯಾಗಿರುವ ಮೊಬೈಲು ಅನಿವಾರ್ಯವೇ ಅಲ್ಲದೆ ಇನ್ನೇನು? ಆ ಪುಟ್ಟ ಮೊಬೈಲಿನಲ್ಲಿಯೇ ಮನುಷ್ಯನ ಜನ್ಮ ಜಾಲಾಡುವಷ್ಟು ಅದರ ಹೊಟ್ಟೆಗೆ ತುಂಬಬಹುದು. ಅದೇ ಜಾಲ – ಮಾಯಾಜಾಲ. ತಂತ್ರಜ್ಞಾನ ನೀಡಿದ – ನೆಟ್‌ವರ್ಕ್! ಆಧುನಿಕ ನಾಗರೀಕರಣದಲ್ಲಿ ನಾವೀಗ ಆ ತಂತ್ರಜ್ಞಾನ ಜಾಲದ ಉರುಳಿಗೆ ಸ್ವಯಂ ಕೊರಳೊಡ್ಡಿದಂತೆ – ಬಲಿಪಶು! ಬಿಟ್ಟೆನೆಂದರೂ ಬಿಡದೀ ಮಾಯೆ! ಮೊಬೈಲೆಂಬೊ ಮಾಯಾ ಜಾಲ !! ■









# ನಿಧಿ ದೊರಕಿತು

• ಎನ್. ರಾಮನಾಥ್

ಅಜ್ಜನ ಮನೆಯ ಅಟ್ಟದ ಮೇಲೆ ಹಳೆಯದೊಂದು ಟ್ರಂಕ್ ಸಿಕ್ಕಿತು.

'ನಿಧಿ ಇರಬಹುದೇನೋ' ಎಂದೆ.

'ನಿಧಿ ಎಲ್ಬಂದೀತು ಬಿಡು. ನಿಮ್ತಾತ್ನಿಗೆ ಪ್ರಾಣಿಗಳೂಂದ್ರೆ ಬಹಳ ಇಷ್ಟ. ಎಲ್ಲ ದುಡ್ಡು ಪ್ರಾಣಿಗಳಿಗೆ ಕೊಟ್ಬಿಟ್ರು'

'ಈ ವಿಷಯಾನೇ ನನಗೆ ಗೊತ್ತಿರಲಿಲ್ಲ ಅಜ್ಜಿ. ಯಾವ ಪ್ರಾಣಿಗಳು ಇಷ್ಟವಿತ್ತು ತಾತನಿಗೆ?'

'ಕೋಳಿ, ಕುದುರೆ'

'ಸಾಕಿದ್ರೇನು?'

'ಸಾಕೋವ್ರನ್ನ ಉದ್ಧಾರ ಮಾಡಿದರು; ಕೋಳಿ ಜಗಳಕ್ಕೆ ಪಂಥ ಕಟ್ಟಿ ಹತ್ತಾರು ರೂಪಾಯಿ ಸುರಿಯೋವ್ರು, ಕುದುರೆ ರೇಸಿಗೆ ಹೋಗಿ ನೂರಾರು ರೂಪಾಯಿ ಸುರಿಯೋವ್ರು'

'ನಿಮಗೆ ಕೋಪ ಬರ್ಲಿಲ್ವೇನು? ಬಯ್ಲಿಲ್ವಾ ನೀವು?'

'ಎಲ್ಬಂತು ಬಿಡು. ಮಾತ್ನಲ್ಲಿ ಬಹಳ ಜಾಣ ನಿಮ್ತಾತ. 'ಪಾಪ, ಆ ಕೋಳಿ ಮಂಜಣ್ಣ ಕೋಳಿಗೆ ಕಾಳ್ಹಾಕಕ್ಕೂ ಕಾಸಿಲ್ಲಾಂತ ಗೋಳಾಡ್ತಿದ್ದ. ಸ್ವಲ್ಪ ಸಹಾಯ ಮಾಡೋಣಾಂತಿದೀನಿ. ಏನಂತೀಯ? ಅಂತಲೋ, 'ಕುದುರೆಗೆ ಹುರುಳಿ ಇಲ್ಲ ಅಂತ ಕ್ಯಾತ್ನಳ್ಳಿ ಕೊರಗಪ್ಪ ಪೇಚಾಡ್ತಿದ್ದ. ಸ್ವಲ್ಪ ಹಣ ಕೊಟ್ಬಂದೆ' ಅಂತಲೋ ನನ್ನ ಮುಂದೆ ಹೇಳ್ಕೊಳ್ತಿದ್ರು. ನಮ್ಮೆಜ್ಮಾನ್ರು ಎಷ್ಟೊಳ್ಳೇಯವ್ರು... ಪ್ರಾಣಿಗಳ ಮೇಲೆ ಎಷ್ಟೊಂದು ಪ್ರೀತಿ ಅಂತ ನಾನೂ ಒಳಗೊಳಗೇ ಉಬ್ಬಿದ್ದೆ. ನಿಮ್ಚಿಕ್ತಾತ ವಿವರಿಸಿದ್ಮೇಲೇ ನನಗೆ ವಿಷಯ ಅರ್ಥ ಆಗಿದ್ದು'

ಟ್ರಂಕ್ ಇಳಿಸಿದೆವು. ಮೊಮ್ಮಕ್ಕಳೆಲ್ಲ ಅದರ ಸುತ್ತ ಸೇರಿದೆವು. ಟ್ರಂಕ್ ತೆಗೆಯೋಣವೆಂದರೆ ಅದಕ್ಕೊಂದು ಬೀಗ!

'ಅಜ್ಜಿ, ಯಾವುದೋ ಒಳ್ಳೇ ಕಂಪನಿ ಬೀಗ!' ನಿರಾಶೆಯಿಂದ ನುಡಿದ ಪ್ರಭಾಸ್.

ಅಜ್ಜಿ ಹತ್ತಿರ ಬಂದು, ಬೀಗವನ್ನು ದಿಟ್ಟಿಸಿ, 'ಓ! ಈ ಬೀಗವಾ? ಒಳ್ಳೆ ಅಡ್ವರ್ಟೈಸ್‌ಮೆಂಟ್ ಇತ್ತು ಕಣ್ರೋ ಇದಕ್ಕೆ. ಯಾವುದೇ ಕಳ್ಳ ಯಾವುದೇ ಕೀ ಬಳಸಿದರೂ ತೆಗೆಯಕ್ಕಾಗಲ್ಲ, ಅದಕ್ಕೆ ಅದರದೇ ಕೀ ಬೇಕು ಅಂತ ಅಂಗಡಿಯವನು ಹೇಳಿದ್ದ. ನಾನು...' ಎನ್ನುತ್ತಾ ಅಜ್ಜಿ ಹೆರಳಿಗೆ ಸಿಕ್ಕಿಸಿಕೊಂಡಿದ್ದ ಹೇರ್‌ಪಿನ್ ತೆಗೆದು, '...ಹೀಗೆ ಬೆಂಡ್ ಮಾಡಿ...' ಎನ್ನುತ್ತಾ ಪಿನ್ ಬೆಂಡಿಸಿ, ಬೀಗದ ಕಿಂಡಿಗೆ ಪಿನ್ ತೂರಿಸಿ, ತಿರುಗಿಸಿ, 'ಹೀಗೆ ತೆಗೆದೆ' ಎನ್ನುತ್ತಾ ಕ್ಲಕ್ ಸದ್ದಿನೊಡನೆ ಬೀಗ ತೆಗೆದು, 'ಹೇಗಿದೆ ನನ್ನ ಮಲ್ಟಿಪರ್ಪಸ್ ಹೇರ್‌ಪಿನ್ನು?' ಎಂದು ಬೀಗಿದರು.



'ಮಲ್ಟಿಪರ್ಪಸ್ಸೇ?'

'ಹೂಂ. ನನ್ನ ಪ್ರಾಯಕಾಲದಲ್ಲಿ ಈ ಪಿನ್‌ನಿಂದಲೇ ಮೈಮೇಲೆ ಬೀಳಕ್ಬಂದ ಪಡ್ಡೆಗಳಿಗೆ ಸರಿಯಾದ ಇಂಜೆಕ್ಷನ್ ಕೊಟ್ಟಿದ್ದೀನಿ. ನಿಮ್ಮಪ್ಪ ಚಿಕ್ಕವನಾಗಿದ್ದಾಗ ಯಾವುದೋ ಹಣ

ನೋಡಿ ಬಂದು, ಅದೊಂದು ಆಟ ಅನ್ಕೊಂಡು, ಮೂಗಿಗೆ ಹತ್ತಿ ತುರುಕಿಕೊಂಡು ಮಲಗಿ ಒದ್ದಾಡ್ತಿದ್ದಾಗ, ಹತ್ತಿ ತೆಗೆದದ್ದೂ ಈ ಪಿನ್ನಿನಿಂದಾನೇ. ಚಟ್ನಿಪುಡಿ ಡಬ್ಬದ ಮುಚ್ಚಳದಿಂದ ಹಿಡಿದು ಬ್ಯಾಂಕ್ ಲಾಕರ್ ಡಬ್ಬಿಯವರೆಗೆ ಎಲ್ಲವನ್ನೂ ಓಪನ್ ಮಾಡಬಲ್ಲೆ ಈ ಪಿನ್ನಿನಿಂದ' ಬೀಗಿದರು ಅಜ್ಜಿ.

ಟ್ರಂಕ್ ತೆರೆದರೆ ಅದರ ಭರ್ತಿ ತಾತ ಆ ಕಾಲದಲ್ಲಿ ಬಳಸುತ್ತಿದ್ದ ಬಟ್ಟೆಗಳ ರಾಶಿ!

'ಇದೇನಜ್ಜೀ ಜೀನ್ಸೂ....?' ಪಿಂಕಿ ಅಚ್ಚರಿಭರಿತ ದನಿಯಲ್ಲಿ ಉದ್ಗರಿಸಿದಳು.

'ಭಾಳ ಷೋಕೀವಾಲ ಕಣೇ ನಿಮ್ಮಜ್ಜ. ಅದ್ಯಾವುದೋ ಟೆಕ್ಸಾಸ್ ಅಂತೆ. ಅಲ್ಲಿಂದಲೇ ಬಟ್ಟೆ ತರಿಸ್ಕೋತಿದ್ರು...' ನುಡಿದರು ಅಜ್ಜಿ.

ಮೊಬೈಲಲ್ಲಿ ಪಬ್ಜಿ ಆಡುತ್ತಿದ್ದ ಕಿರಣನಿಗೆ 'ಜೀನ್ಸ್' ಎಂಬ ಪದ ಟ್ರಾಫಿಕ್ ಜಾಂ ಮಧ್ಯವೂ ತೂರಿ ಸಾಗುವ ಮಂತ್ರಿಯ ಕಾರಿನಂತೆ ತಲೆಗೆ ಸೇರಿತು. ಪಬ್ಜಿ ಪಡೆಯಿಂದ ಬ್ರೇಕ್ ತೆಗೆದುಕೊಂಡು, ತಾತನ ಜೀನ್ಸ್ ಕೈಯಲ್ಲಿ ಹಿಡಿದು 'ಹೌ ವಂಡರ್‌ಫುಲ್' ಎಂದ.

'ಏನ್ವಂಡರ್ರಿದೆಯೋ ಅದ್ರಲ್ಲಿ? ಹರಿದಿದೆ, ಸವೆದಿದೆ, ಬಣ್ಣ ಹೋಗಿದೆ' ಎಂದಳು ಅಜ್ಜಿ.

'ಯೂ ಡೋಂಟ್ ನೋ ಅಜ್ಜಿ... ನೋಡಿಲ್ಲಿ... ಮಂಡಿ ಹತ್ರ ಎಷ್ಟು ಪರ್ಫೆಕ್ಟಾಗಿ ಹರಿದಿದೆ... ಪ್ರಭಾಸ್, ನೋಡೋ ಇಲ್ಲಿ, ಹಿಪ್ಸ್ ಹತ್ರ ಐಡಿಯಲ್ಲಾಗಿ ಫೇಡ್ ಆಗಿದೆ, ತುದಿಗಳು ಜೂಲುನಾಯಿ ಕಚ್ಚಿದಹಾಗೆ ಸಿಂಪ್ಲಿ ಸೂಪರ್ಬಾಗಿ ಹರಿದಿವೆ... ವಾವ್! ತೊಡೆ ಭಾಗದಲ್ಲಿ ಸೊಳ್ಳೆಪರದೆ ತರಹ ಟೋರ್ನ್ ಆಗಿದೆ...' ಗುಡ್ ಓಲ್ಡ್ ಕಾಲದ ಹೆಣ್ಣಿಗೆ ಚಿನ್ನ ತೆಗೆದುಕೊಟ್ಟರೆ ಆಗುತ್ತಿದ್ದ ಸಂತೋಷಕ್ಕಿಂತ ಹೆಚ್ಚಿನ ಸಂತೋಷ, ಸಂಭ್ರಮ ಕಿರಣನ ದನಿಯಲ್ಲಿ, ಮುಖದಲ್ಲಿ ಗೋಚರಿಸುತ್ತಿದ್ದವು.

ಟ್ರಂಕಿನ ಮೂಲೆಯಲ್ಲಿ ಕೆಂಪನೆಯ ವಸ್ತ್ರವೊಂದು ಕಾಣಿಸಿತು. 'ಓಹ್! ಇದು ನನ್ನ ಬ್ಲೌಸ್ ಕಣೇ... ಆಗ ತ್ರೀ ಫೋರ್ತ್ ಅಂತ ಹೊಲೆಸ್ತಿದ್ವಿ. ಮುಂಗೈವರೆಗೆ ಬರೋದು. ನಿಮ್ತಾತ ಬಹಳ ರಸಿಕ. ನನ್ನ ಕೈಹಿಡಿದು ಡ್ಯುಯೆಟ್ ಹಾಡೋಣ ಬಾ ಅಂತ ಕರೆದ. ನನಗೋ ನಾಚಿಕೆ. ತಪ್ಪಿಸ್ಕೊಳಕ್ಕೇಂತ ಹೋದೆ. ಬ್ಲೌಸ್ ಹರಿದೇಹೋಯ್ತು. ಅವರ ತುಂಟಾಟದ ನೆನಪಿಗೇಂತ ಇಟ್ಟಿದ್ದೆ' ಈ ವಯಸ್ಸಿನಲ್ಲಿಯೂ ಕೆಂಪುಕೆಂಪಾಯಿತು ಅಜ್ಜಿ.

'ಅಜ್ಜೀ... ಬ್ಲಷ್ ಮಾಡೋದನ್ನ ಹೇಳ್ಕೊಡು ಅಜ್ಜಿ ನನಗೂನೂ.... ಯಾರೇನೇ ಹೇಳಿದರೂ ನನ್ನ ಮುಖ ಕೆಂಪೇ ಆಗಲ್ಲ ಗೊತ್ತಾ....' ಪ್ಲೀಡ್ ಮಾಡಿಕೊಂಡಳು ಮಾಡ್ರನ್ ಮೊಮ್ಮಗಳು ಮಾಧುರಿ.

ಹಳೆಯ ಕಾಲದ ಬ್ಲೌಸ್ ಹೊರಬಂತು. ಎಡಗೈ ತೋಳು ಹರಿದಿತ್ತು. ಬೆನ್ನಿನ ಭಾಗದಲ್ಲಿ ನುಸಿಯಿಂದಲೋ, ರೇಷ್ಮೆ ಹಳತಾದುದರಿಂದಲೋ, ಬಟ್ಟೆ ಮಾಯವಾಗಿ ದಾರದಷ್ಟು ಅಗಲ ಮಾತ್ರ ಉಳಿದಿತ್ತು.

'ಆಗ ನಿನ್ನ ಮೆಷರ್‌ಮೆಂಟ್ಸ್ ಎಷ್ಟಿದ್ದವು ಅಂತ ನೆನಪಿದೆಯಾ ಅಜ್ಜಿ?'

'ಹೆಣ್ಣಿಗೆ ತನ್ನ ಸೌಂದರ್ಯದ ನೆನಪಿರಲ್ವೇನೇ... ಚೆನ್ನಾಗೇ ನೆನಪಿದೆ. ಝೀನತ್ ಅಮಾನ್‌ಗಿಂತ ತೆಳುವಾದ ಸೊಂಟ ಇತ್ತು ಕಣೇ ನನಗೆ...' ಎಂದ ಅಜ್ಜಿ ತನ್ನ ಅಂದಿನ



ಅಳತೆ ಹೇಳಿದಳು.

'ಸಿಂಪ್ಲಿ ಆಸಮ್! ನನ್ನ ಸೈಝೂ ಅದೇ.... ಈ ಬ್ಯಾಕ್‌ಲೆಸ್ ಸೆಮಿಟೋರ್ನ್ ಬ್ಲೌಸ್ ನನಗಿರಲಿ' ಎಂದಳು ಮಾಧುರಿ.

ಟ್ರಂಕಿನಿಂದ ತೆಗೆದ ಪ್ರತಿ ಹರಕಲು, ಪರಕಲು, ಸವೆದದ್ದು, ಜಾಳಾದದ್ದು ಎಲ್ಲಕ್ಕೂ ಮೊಮ್ಮಕ್ಕಳಿಂದ ಡಿಮ್ಯಾಂಡ್ ಏರಿ ಏರಿ ಬಂದವು. ಒಂದೇ ಬಟ್ಟೆಯ ಬಗ್ಗೆ ಇಬ್ಬರಲ್ಲಿ ಜಗಳ ಹತ್ತಿ, ಬಟ್ಟೆ ಹಿಡಿದು ಎಳೆದಾಡಿ, 'ಫರ್ದರ್ ಟೋರ್ನ್' ಬಟ್ಟೆ ಮತ್ತಷ್ಟು ಡಿಮ್ಯಾಂಡ್ ಪಡೆಯಿತು. ಟ್ರಂಕಿನಲ್ಲಿ ಸೇರಿದ್ದ ಬಿಳಿ ಹುಳಗಳ ಬಾಯ್ವಾಡದಿಂದ (ಕೈವಾಡವೆನ್ನಲು ಅವಕ್ಕೆ ಕೈ ಇರುವುದಿಲ್ಲವಲ್ಲ!) ಟೀ ಸೋಸುವ ಜಾಲರಿಯಂತಾದ 'ಟಾಪ್' ಅಂತೂ ಷೋಡಷಿ ಶಬ್ನಮ್‌ಗೆ ಬಹಳವೇ ಮೆಚ್ಚುಗೆಯಾಯಿತು. ಅಜ್ಜ ಧರಿಸುತ್ತಿದ್ದ ಕೋಟಿನಲ್ಲಿ ಜಿರಳೆಗಳ ಪ್ರಭಾವದಿಂದ ಬುಲೆಟ್ ಹೋಲ್ಸ್‌ನಂತಹ ತೂತುಗಳು ಮೂಡಿದ್ದವು. 'ಐ ವಿಲ್ ಯೂಸ್ ದಿಸ್ ಕೋಟ್ ಆ್ಯಸ್ ಎ ಸಿಂಗ್ಲೆಟ್' ಎಂದ ಮೊಮ್ಮಗ ರಿಷಭ್. ಬೆಲ್ಟ್ ಆ್ಯಂಟಿಕ್ ಪೀಸ್ ಆಗಿ ಮೆಚ್ಚುಗೆ ಗಳಿಸಿದರೆ, ಷೂಗಳನ್ನು ಮೂಸಿ ನೋಡುತ್ತಾ 'ಹೌ ರೊಮಾಂಟಿಕ್.... ಗೈಸ್ ವಿಲ್ ಸಿಂಪ್ಲಿ ಸ್ವೂನ್ ಓವರ್ ದಿಸ್' ಎನ್ನುತ್ತಾ ಪ್ರಭಾಸನ ತಮ್ಮ ಪ್ರಭಂಜನ್ ಸೆವೆಂತ್ ಹೆವೆನ್‌ನಲ್ಲಿ ತೇಲಾಡಿದ. ಅಜ್ಜನ ಟೈ ಅನ್ನು ಪಿಂಕಿ ತನ್ನ ವೇಯ್ಸ್ಟ್ ಬೆಲ್ಟ್ ಆಗಿ ಧರಿಸುತ್ತೇನೆ ಎಂದರೆ, ಮಾಧುರಿ 'ನೋ... ಐ ವಿಲ್ ಯೂಸ್ ಇಟ್ ಆ್ಯಸ್ ಮೈ ಹೇರ್‌ಬ್ಯಾಂಡ್' ಎನ್ನುತ್ತ ಕಿತ್ತುಕೊಂಡಳು.

ಅಜ್ಜಿಯ ಒಂಬತ್ತು ಗಜದ ದಪ್ಪನೆಯ ರೇಷ್ಮೆ ಸೀರೆ ಈಗ ಲಿವಿಂಗ್ ರೂಂನಲ್ಲಿ ಕಿಟಕಿಯ ಪರದೆಯಾಗಿ ಶೋಭಿಸುತ್ತಿದೆ. ಅಂದು ಅಜ್ಜಿ ಬಳಸಿ, ತುದಿ ಮುರಿದ, ಒಂದು ಹಲ್ಲು ಕಿತ್ತುಹೋದ ಹೇರ್‌ಕ್ಲಿಪ್‌ಗಳು 'ಮಾಡ್ರನ್ ಹೇರ್‌ಡೂ'ವಿನ ಅಂಗವಾಗಿ ರಾರಾಜಿಸುತ್ತಿವೆ.

ಆ, ಈ ವಸ್ತ್ರಗಳ ಮಾತು ಅಂತಿರಲಿ, ಆ ಬಟ್ಟೆಗಳನ್ನು ಕಟ್ಟಲೆಂದು ಬಳಸಿದ್ದ ಮೂರಿಂಚು ಅಗಲದ ನೈಲಾನ್ ಪಟ್ಟಿಗೂ ಈಗ ಡಿಮ್ಯಾಂಡ್... ಅದನ್ನು ಎರಡು ತುಂಡಾಗಿಸಿ, ತುದಿಗಳನ್ನು ಮತ್ತೂ ತೆಳ್ಳಗಾಗಿಸಿ, ಬಿಕಿನಿಯಾಗಿ ಧರಿಸಲು ಅಮೆರಿಕದಿಂದ ಬಂದಿರುವ ಮೊಮ್ಮಗಳು ಕೇಳುತ್ತಿದ್ದಾಳೆ!

ಅಂತೂ ಟ್ರಂಕ್ ಕಂಡ ತಕ್ಷಣ ನಾನು ಹೇಳಿದ ಮಾತು ನಿಜವಾಯಿತು.

ಮೊಮ್ಮಕ್ಕಳಿಗೆ ಭರ್ಜರಿ ನಿಧಿ ದೊರಕಿತು! ■

---

## ಹುಡುಕಾಟ



ಒಬ್ಬ ಹೆಂಗಸು ಇನ್ನೊಬ್ಬ ಹೆಂಗಸಿಗೆ ಡಿನ್ನರ್ ಪಾರ್ಟಿಯಲ್ಲಿ:

**ಇಲ್ಲಿ ಡ್ರಿಂಕ್ಸ್ ಸರ್ವ್ ಮಾಡ್ತಿದ್ದ ಸುಂದರ ಹುಡುಗಿ ಇದ್ದಳಲ್ಲ ಎಲ್ಲಿ?**

**ನಿಮಗೆ ಯಾರು ಬೇಕು ಹುಡುಗೀನೋ ಅಥವಾ ಡ್ರಿಂಕ್ಸೊ?**

**ಎರಡೂ ಅಲ್ಲ, ನಾನು ನನ್ನ ಗಂಡನ್ನ ಹುಡುಕ್ತಾ ಇದೀನಿ.**

# ನಕಲಿ ಅಭಿಮಾನಿಗಳ ಅಸಲಿಯತ್ತು

• ಪ್ರಕಾಶ್ ಶೆಟ್ಟಿ



ಕ್ಷಮಿಸಬೇಕು, ಇಲ್ಲಿ ಈಗ ಬರುವ ನಕಲಿ ಅಭಿಮಾನಿಗಳು ಯಾವ ಪ್ರಖ್ಯಾತರದ್ದಲ್ಲ. ಇದು ಒಬ್ಬ ಬಡಪಾಯಿ ವ್ಯಂಗ್ಯ ಚಿತ್ರಕಾರನ ಅಭಿಮಾನಿಗಳ ಕಥೆ, ವ್ಯಥೆ. ಪರವಾಗಿಲ್ಲ, ಎಷ್ಟೆಂದರೂ ಕಾರ್ಟೂನಿಸ್ಟ್ ಅಲ್ಲವೇ ಎಂದು ಖುಷಿ ಪಡುವವರಿದ್ದರೆ, ಆ ನತದೃಷ್ಟ ವ್ಯಕ್ತಿ ನಾನೇ ಎಂದು ಸ್ಪಷ್ಟ ಪಡಿಸುತಿದ್ದೇನೆ.

ನನ್ನ ಅಭಿಮಾನಿ ವೃಂದದಲ್ಲಿ ಮೊತ್ತ ಮೊದಲು ನನಗೆ ನೆನಪಾಗುವುದು, ಮಟ್ಕಾ ಆಡುವವರು! ಇವರು ನೇರ ನನಗೆ ಫೋನ್ಮಾಡಿ, ದಿನಪತ್ರಿಕೆಯಲ್ಲಿ ಪ್ರಕಟವಾಗುವ ಕಾರ್ಟೂನ್ಗಳನ್ನು ಸಿಕ್ಕಾಪಟ್ಟೆ ಹೊಗಳುತ್ತಾರೆ. ಅವರ ಈ ಮೋಡಸ್ ಒಪೆರಂಡಿ ಮುಗಿದ ಬಳಿಕ, 'ಸಾರ್, ನನಗೆ ಏನಾದರೂ ಸಹಾಯಮಾಡ್ರೀ' ಅನ್ನುತ್ತಾರೆ. 'ಇಲ್ಲಪ್ಪಾ, ನಿಮಗೆ ದುಡ್ಡುಗಿಡ್ಡುಕೊಡೋಕೆ ನಾನೇನು ಕುಬೇರನಲ್ಲ...' ಎಂದು ಹೇಳಿದರೆ, ಆತ 'ಛೆಛೇ, ಹಾಗಲ್ಲ ಸಾರ್.... ನನಗೆ ಅನುಕೂಲ ಆಗುವಂತೆ ಚಿತ್ರಮಾಡ್ರೀ, ಸಾಕು....' ಅನ್ನುತ್ತಾನೆ. ಓಹ್, ಇದು ನನ್ನ ವ್ಯಂಗ್ಯ ಚಿತ್ರದ ಒಳಾರ್ಥವನ್ನು ಪತ್ತೆ ಹಚ್ಚುವ ಓದುಗನಲ್ಲ, ಅದಕ್ಕೆ ಬದಲು ವ್ಯಂಗ್ಯ ಚಿತ್ರದಲ್ಲಿರುವ ಗೆರೆಗಳಲ್ಲಿ ಅಂಕಿ ಸಂಖ್ಯೆಯ ಒಳಾರ್ಥ ಪತ್ತೆ ಹಚ್ಚುವ ಮಟ್ಕಾ ಗಿರಾಕಿ ಎಂದು ಅರಿವಾದಾಗ ಫೋನ್ಕುಕ್ಕುತ್ತೇನೆ.

ಒಮ್ಮೆ ಇಂತಹ 'ಸಹಾಯ' ಕೇಳಿಕೊಂಡು ಹಾವೇರಿಯಿಂದ ಒಬ್ಬ ಮಟ್ಕಾ ಗಿರಾಕಿ ಕಛೇರಿಗೇ ಬಂದು ಬಿಟ್ಟಿದ್ದ. 'ಸಾರ್, ಇಷ್ಟು ಚೆನ್ನಾಗಿ ಚಿತ್ರಮಾಡುವವರನ್ನೊಮ್ಮೆ ಕಾಣಲೇಬೇಕೂಂತ ಬಂದೇ ರೀ.... ಬಾಳಚಂದ ಬಿಡಿಸ್ತೀರಿ ಸಾರ್!'

ಅಂದಾಗ ಇವನಂತಹ ಅಭಿಮಾನಿಯನ್ನು ಪಡೆಯುವುದಕ್ಕೆ ನಾನು ಪುಣ್ಯ ಮಾಡಿದ್ದೇನೆ ಎಂದು ನನಗನಿಸಿತ್ತು. ಆತ ಹಾವೇರಿಯಿಂದ ಜೋಪಾನವಾಗಿ ತಂದಿದ್ದ ಒಂದು ಕಾರ್ಟೂನ್ ಕಟ್ಟಿಂಗನ್ನು ನನಗೆ ತೋರಿಸಿ, 'ಈ ಚಿತ್ರ ಬರೆಯೋರನ್ನ ಭೇಟಿಯಾಗ್ಬೇಕು ಸಾರ್... ಇವರೂ ತುಂಬಾ ಚಂದಬರಿತಾರೆ' ಎಂದು ಹೇಳಿದಾಗಲೇ ನನಗೆ ಗೋಚರವಾದದ್ದು ಈತನೊಬ್ಬ ಮೂರಂಕಿ ಆಟಗಾರ ಅಂತ!



ಒಬ್ಬನಂತೂ 'ಸಾರ್, ನೀವು ದೇವರು!' ಅನ್ನುತ್ತಲೇ ಶುರುಮಾಡಿದ್ದ. ರಾಜಕುಮಾರ್ ಅವರು ಅಭಿಮಾನಿಗಳನ್ನು ದೇವರೆಂದು ಪರಿಗಣಿಸಿರುವಾಗ, ಈತ ನನ್ನನ್ನೇ ದೇವರು ಅನ್ನುತ್ತಾನಲ್ಲ ಎಂದು ರೋಮಾಂಚನಗೊಂಡಿದ್ದೆ. ಆತ 'ನಿಮ್ಮಿಂದ ತಿಂಗಳಿಗೆ ಕೆಲವೊಮ್ಮೆ ಲಕ್ಷ ರೂಪಾಯಿ ಕೂಡಾ ಸಂಪಾದಿಸ್ತೀನಿ' ಅಂದದ್ದೇ ತಡ ನನ್ನ ಟೋನ್ ಬದಲಾಯಿಸಿ, 'ನಿಮ್ಮೂರಿನ ಪೊಲೀಸ್ ಇನ್‌ಸ್ಪೆಕ್ಟರ್ ನನಗೆ ಗೊತ್ತಪ್ಪಾ.... ನಿನ್ನ ಬಗ್ಗೆ ಮಾಹಿತಿ ಕೊಡ್ತೀನಿ' ಎಂದು ಭಯ ಹುಟ್ಟಿಸಿದ್ದೆ. ನಾನೀಗ ಇವರ ಸಂಪರ್ಕಕ್ಕೆ ಸಿಗದಂತೆ ಎಚ್ಚರಿಕೆ ವಹಿಸಿದ್ದೇನೆ. ನನ್ನ ಫೋನಿನಲ್ಲಿ ಎಲ್ಲಾ ಮೂರಂಕಿ ಕಿರಿಕ್ಗಳಿಗೆ ಮಟ್ಕಾ 1, ಮಟ್ಕಾ 2, ಮಟ್ಕಾ 3... ಹೀಗೆ ಹತ್ತಿಪ್ಪತ್ತು ಅಂಕಿ ಹೆಸರಿನಲ್ಲೇ 'ಸೇವ್' ಮಾಡಿದ್ದೇನೆ.

ನಾನು 'ದ ವೀಕ್'ನಲ್ಲಿದ್ದಾಗ ನನ್ನ ಕಾರ್ಟೂನುಗಳನ್ನು ದಿನಾ ನೋಡುತ್ತೇನೆ ಅನ್ನುವ ಅಭಿಮಾನಿಗಳಿದ್ದರು. ಅಂದರೆ ವಾರಪತ್ರಿಕೆಯಲ್ಲಿ ಬರುವ ಕಾರ್ಟೂನುಗಳನ್ನು ದಿನಾ ನೋಡುತ್ತಾರೆ ಎಂದರ್ಥವೇ? ಕೆಲವರು ಮಾತಿಗೆ ಸಿಕ್ಕಾಗ 'ವ್ಹಾವ್! ಅದೇನು ಅದ್ಭುತವಾಗಿ ವ್ಯಂಗ್ಯ ಚಿತ್ರ ಬರೀತೀರಪ್ಪಾ!! ನಾನು ಪತ್ರಿಕೆ ಕೈಗೆ ಸಿಕ್ಕ ಕೂಡಲೇ ಮೊದಲು ಕಣ್ಣಾಡಿಸುವುದು ನಿಮ್ಮ ಕಾರ್ಟೂನ್ ಮೇಲೆ...' ಎಂದೆಲ್ಲಾ ಬಹುಪರಾಕ್ಹೇಳುತ್ತಾ ಮುಂದುವರಿಸುತ್ತಾರೆ! 'ಅಲ್ಲಾ ಸಾರ್, ಐಡಿಯಾಗಳು ಕೂಡಾ ನಿಮ್ಮದೇನಾ... ಅಲ್ಲ.... ಸಂಪಾದಕರು ಕೊಡ್ತಾರಾ?' ಎಂಬ ಪ್ರಶ್ನೆ ಬಿಸಾಕುವಾಗ, ನನ್ನ ಮೇಲೆ ಉಗಿದಷ್ಟೇ ಕೋಪ ಬರುತ್ತದೆ. ಅಷ್ಟಕ್ಕೆ ನಿಲ್ಲಿಸದೆ 'ನಿಮಗೇನಾದರೂ ಐಡಿಯಾಗಳು ಬೇಕಿದ್ದರೆ ನನ್ನನ್ನು ಕೇಳಿ ಸಾರ್.' ಎಂದು ಕರುಣೆ ಕೂಡಾ ತೋರಿಸುತ್ತಾರೆ!

ಇನ್ನು ತಾತ್ಕಾಲಿಕ ಅಭಿಮಾನಿಗಳಿದ್ದಾರೆ. ಅಂದರೆ ನಾನು ಅಪರೂಪಕ್ಕೊಮ್ಮೆ ಎಲ್ಲಾದರೂ ಪದಗಳೊಂದಿಗೆ ತಮಾಷೆ ಮಾಡಿದರೆ ಮಾತ್ರ ಏಕ್ ದಮ್ ಖುಷಿ ಪಡುವವರು.

ಆಗ ನಾನು ಇದಕ್ಕಿಂತ ಎಷ್ಟೋ ಒಳ್ಳೆಯ ಕಾರ್ಟೂನ್ ಮಾಡಿದ್ದೇನಲ್ಲವೇ ಎಂದು ನನ್ನನ್ನು ನಾನೇ ಕೇಳಿಕೊಳ್ಳುತ್ತೇನೆ.

ಕೆಲವೊಮ್ಮೆ ಹೀಗೂ ಆಗುತ್ತದೆ....' ನಾನು ನಿಮ್ಮ ದೊಡ್ಡ ಅಭಿಮಾನಿ ಸಾರ್... ಇವತ್ತಿನ ಕಾರ್ಟೂನಂತೂ ವಂಡರ್ಪುಲ್ಲಾರ್!' ಅನ್ನುತ್ತಲೇ ಆ ಕಾರ್ಟೂನ್ ನನ್ನ ಮತ್ತೆ ನೆನಪಿಸಿಕೊಂಡು ವಿವರಿಸುತ್ತಾರೆ.

ಆದರೆ ಅವರು ನಾನು ಬರೆದ ಕಾರ್ಟೂನಿಗಿಂತ ತದ್ವಿರುದ್ಧವಾಗಿ ಅರ್ಥ ಮಾಡಿಕೊಂಡು ವಿವರಿಸುವುದನ್ನು ಕೇಳುವಾಗ ಮಾತ್ರ ನನ್ನ ತಲೆಗೆ ಮೂರು ಬಕೆಟ್ ನೀರು ಸುರಿದಂತಾಗುತ್ತದೆ!

ನನ್ನ ಅಭಿಮಾನಿ ಅರ್ಧಾಂಗಿಯ ಬಗ್ಗೆ ಹೇಳದಿದ್ದರೆ ನಾನಿಲ್ಲಿ ಇಷ್ಟು ಹೊತ್ತು ಕೊರೆದದ್ದು ಅಪೂರ್ಣವಾಗಬಹುದು. ಈ ವರೆಗೆ ನನ್ನ ಯಾವುದೇ ಕಾರ್ಟೂನ್ ಬಗ್ಗೆ ಚಕಾರವೆತ್ತದ ನನ್ನಾಕೆ ಕಳೆದ ವರ್ಷ ನಿವೃತ್ತಿಯಾಗುವ ಹೊತ್ತಿಗೆ 'ರೀ, ನೀವು ನಿವೃತ್ತಿಯಾದ ನಂತರವೂ ಕಾರ್ಟೂನ್ ಮುಂದುವರಿಸಿ 'ಅಂದಾಗ ನನಗೆ ಅಚ್ಚರಿಯೋ ಅಚ್ಚರಿ! 'ಪರವಾಗಿಲ್ವೇ... ನೀನೂ ನನ್ನ ಅಭಿಮಾನಿ ಎಂದು ಗೊತ್ತೇ ಇರಲಿಲ್ಲ ಕಣೇ!' ಎಂದು ಖುಷಿ ಪಟ್ಟೆ. ಆದರೆ ಮುಂದೆ ಕೇಳಿ.. 'ರೀ! ನಯಾಪೈಸಾ ಪೆನ್ಶನ್ ಆಗದವನನ್ನು ಕಟ್ಟಿಕೊಂಡಿದ್ದೇನಲ್ಲ. ಅದಕ್ಕೆ ಹೇಳಿದ್ದು!' ಎಂದು ಆಕೆ, ತಾನೂ ನಕಲಿ ಅಭಿಮಾನಿ ಎಂಬುದನ್ನು ಸಾಬೀತು ಪಡಿಸುತ್ತಾಳೆ! ■



# ಪಂಡಿತ ಪುತ್ರ

• ವೈ.ಎಂ. ರಘುನಂದನ್

ಮೊಮ್ಮಗ ಹರಿಯನ್ನ ಸಂಸ್ಕೃತ ಶಾಲೆಗೆ ಸೇರಿಸಿ ಮಗ, ಸೊಸೆ ಕೈ ತೊಳೆದು ಕೊಂಡಿದ್ದರು. ಗಂಡ, ಹೆಂಡತಿ ಇಬ್ಬರೂ ಉದ್ಯೋಗಸ್ಥರು. ಬರೋದು ಸಂಜೆ ಏಳುಗಂಟೆ ಆಗುತ್ತದೆ. 5 ಗಂಟೆಗೆ ಹರಿ ಶಾಲಾ ವ್ಯಾನಿನಲ್ಲಿ ಮನೆ ಮುಂದೆ ಬಂದು ಇಳಿಯುತ್ತಾನೆ. ಅವನಿಗೆ ಸ್ನಾಕ್ಸ್ ಮತ್ತು ಹಾಲು ಇಟ್ಟು ಹೋಗಿರುತ್ತಾರೆ. ನಾನು ಮನೇಲಿ ಇರೋದ್ರಿಂದ, ಅವನ ಯೋಗಕ್ಷೇಮ 5.30ವರೆಗೆ (ಸಂಜೆ) ನೋಡಿಕೊಂಡರೆ ಆಯ್ತು. ಸಾಯಂಕಾಲ 5.30 ಯಿಂದ 7ಗಂಟೆವರೆಗೆ ಸಂಸ್ಕೃತ ತರಗತಿ. ಮಾವನವರಿಗೆ ಮಗ, ತೊಂದರೆ ಕೊಡದಿರಲಿ ಎಂದು ಈ ವ್ಯವಸ್ಥೆ. ಸ್ವ್ಯಾಪ್-ಗ್ಯಾಪ್ ಅರೇಂಜ್‌ಮೆಂಟ್! ಸಂಸ್ಕೃತ ಪಾಠಶಾಲೆ, ಮನೆ ಹತ್ತಿರವೇ ಇದೆ. ಅಲ್ಲಿ ಮೊಮ್ಮಗನ ಸ್ನೇಹಿತರೆಲ್ಲರೂ ಹೋಗಿ ಬರುವುದರಿಂದ, ನಮ್ಮ 'ಹರಿ' ತಕರಾರಿಲ್ಲದೆ ಹೋಗಿ ಬರುತ್ತಾನೆ, ಅಜ್ಜನ ತಲೆ ತಿನ್ನದಿರಲಿ ಎಂದು ಮಗನ ಇಚ್ಛೆ.

ನನ್ನಾಕೆ ಇದ್ದಿದ್ದರೆ, ಈ ವ್ಯವಸ್ಥೆ ಬೇಕಿರಲಿಲ್ಲ. ಮೊಮ್ಮಗನ ಪೂರ್ಣ ಯೋಗಕ್ಷೇಮ, ನೋಡಿಕೊಳ್ಳುತ್ತಿದ್ದಳು. ಮಗ, ಸೊಸೆಗೆ ಊಟದ ಡಬ್ಬಿಗೆ ನಾನಾ ರೀತಿ, ಹೊಸ 'ರೆಸಿಪಿ' ತುಂಬಿಸಿ ಕಳಿಸುತ್ತಿದ್ದಳು. ಎಲ್ಲಾದಕ್ಕಿಂತ ಹೆಚ್ಚಾಗಿ, 'ಮಧ್ಯೆ ಮಧ್ಯೆ ಆಚಮನೀಯಂ ಸಮರ್ಪಯಾಮಿ' ಎಂಬಂತೆ, ಕಾಫಿ ಸಪ್ಲೆ ಮಾಡಿ, ನನಗೆ ಚೈತನ್ಯ ತುಂಬುತ್ತಿದ್ದಳು. ಕಾಫಿ ದಾತಾ ಸುಖೀಭವ ಎಂದು ಹೇಳುತ್ತಿದ್ದೆ. ಅದೇನು ಅರ್ಜೆಂಟಿತ್ತೋ, ಸುಖವಾಗಿ ಇರಲು, ಇಹಲೋಕ ತ್ಯಜಿಸಿ ಹೊರಟೇ ಬಿಟ್ಟಿದ್ದಳು. ಹಾಗಾಗಿ ಸಂಧ್ಯಾಕಾಲದಲ್ಲಿ ಒಂಟಿ ಜೀವನ. ಮಗ, ಸೊಸೆ ಆದಷ್ಟೂ ನನ್ನನ್ನು ಸಂತೋಷದಿಂದ ಇಡುವ ಪ್ರಯತ್ನ ನಡೆಸುತ್ತಿರುತ್ತಾರೆ.

ಈ ದಿನ ಸಂಸ್ಕೃತ ಪಾಠಶಾಲೆಗೆ ರಜ. ಹರಿ ಆಟ ಮುಗಿಸಿ ಬೇಗ ಬಂದ. ಅವನ ಅಮ್ಮ, ಡ್ಯಾಡಿ ಬಂದಿರಲಿಲ್ಲವಾದ್ದರಿಂದ, ನನ್ನ ಬಳಿ ಸಂಸ್ಕೃತ ಕಲಿಯಲು ಬಂದ.

'ತಾತಾ.... ಸತ್ಯಂ ವದ'- ಅಂದರೇನು ಎಂದ. ಅವನ ಆಸಕ್ತಿಯಿಂದ, ನನಗೂ ಹುರುಪು ಬಂದಿತ್ತು. ಅವನಿಗೆ ಮನದಟ್ಟಾಗಲಿ ಎಂದು, ಪುಣ್ಯಕೋಟಿ ಹಸುವಿನ ಕಥೆ ಮುಗಿಸಿ, ಸದಾ ಸತ್ಯ ಹೇಳಬೇಕು ಎಂದು ವಿವರಿಸಿದೆ. ಅಷ್ಟರಲ್ಲಿ ಹರಿಯ ತಾಯಿ, ತಂದೆ ಬಂದಿದ್ದರು. ನನಗೆ ಕಾಫಿಯೂ ಬಂತು.

'ತಾತಾ ಸ್ವಲ್ಪ ವಿರಾಮ ತೆಗೆದುಕೊಳ್ಳಲಿ, ಹರೀ... ನೀನು ಡ್ಯಾಡಿ ಹತ್ತಿರ ಪಾಠ ಹೇಳಿಸಿಕೋ....' ಎಂದು ಸೊಸೆ 'ಅಮೃತಾಂಜನ ಡಬ್ಬಿ' ಗಂಡನ ಮುಂದೆ ಇಟ್ಟು ನಗುತ್ತ ಅಡಿಗೆ ಮನೆಗೆ ಹೊರಟಿದ್ದಳು. ಕಛೇರಿಯಲ್ಲಿ, ಅನೇಕ ಸಮಸ್ಯೆ ಬಗೆ ಹರಿಸಬಲ್ಲ ದಕ್ಷ ಅಧಿಕಾರಿ ನನ್ನ ಮಗ. ಮಗನ ಸಮಸ್ಯೆಗಳನ್ನ ಸುಲಭವಾಗಿ ಬಗೆ ಹರಿಸಲಾರನೆಂಬ ಅರಿವು, ಸೊಸೆಗೆ ಚೆನ್ನಾಗಿ ಗೊತ್ತಿತ್ತು. ಹಾಗಾಗಿ ಮುಂಜಾಗ್ರತಿ ಕ್ರಮಕ್ಕಾಗಿ, ಸ್ಟ್ರಾಂಗ್ ಅಮೃತಾಂಜನ ಡಬ್ಬಿ ಮಗನ ಮುಂದೆ ಇಟ್ಟಿದ್ದಳು. ಸೊಸೆ ಜಾಣತನ ನೋಡಿ ಮುಗುಳು ನಕ್ಕಿದ್ದೆ. ಹರಿ ಅಪ್ಪನ ಮುಂದೆ ಕುಳಿತು, ಪ್ರಶ್ನಾವಳಿ ಶುರುಹಚ್ಚಿಕೊಂಡಿದ್ದ.



'ಅಲ್ಲ ಡ್ಯಾಡಿ.... ತಾತ ಸದಾ ಸತ್ಯ ಹೇಳಬೇಕು ಅಂತ ಹೇಳಿ, ಪುಣ್ಯಕೋಟಿ ಕಥೆ ಹೇಳಿದರು. ಆದರೆ ನಮ್ಮ ಫ್ರೆಂಡು 'ಸತ್ಯ' ಮಾತ್ರ ಸುಳ್ಳು ಹೇಳೋದೇ ಕ್ಷೇಮ ಅಂತ ಹೇಳ್ತಿದ್ದ ಡ್ಯಾಡಿ, ಯಾಕೆ'

– ಎಂದು ಹರಿಯ ಮುಗ್ಧ ಪ್ರಶ್ನೆ.

'ನಿನ್ನ ಫ್ರೆಂಡು ಯಾಕೆ ಹಾಗೆ ಹೇಳಿದ' – ಮಗನು ವಿಚಾರಿಸಿದ

'ಸತ್ಯನ ಡ್ಯಾಡಿ, ಅವರ ಫ್ರೆಂಡು ತಮ್ಮಣ್ಣ ಅಂಕಲ್ ಬರ್ತಾ ಇರೋದನ್ನ ದೂರದಲ್ಲೇ ಕಿಡಕಿಯಲ್ಲಿ ನೋಡಿದರಂತೆ. ಬಂದು ರಜಾ ದಿನ ತಲೆ ತಿಂತಾನೆ ಆ ತರಲೆ ತಮ್ಮಣ್ಣ ಅಂತ ಯೋಚಿಸಿದರಂತೆ. ಮಗ ಸತ್ಯನಿಗೆ, ತಮ್ಮಣ್ಣ ಅಂಕಲ್ ಬಂದ್ರೆ, ಡ್ಯಾಡಿ 'ಹೊರಗೆ' ಹೋಗಿದ್ದಾರೆ ಅಂತ ಹೇಳು ಎಂದು, ಒಳಗಿದ್ದ ರೂಂ ಸೇರಿಕೊಂಡರಂತೆ, ಪಾಪ ಸತ್ಯ....' ಹರಿ ಅರ್ಧಕ್ಕೇ ನಿಲ್ಲಿಸಿ, ಅವರ ಅಮ್ಮ ಕೊಟ್ಟ ಕೋಡು ಬಳೆ ತಿನ್ನತೊಡಗಿದ.

'ಯಾವುದರಲ್ಲೂ ಸೀರಿಯಸ್‌ನೆಸ್ ಇಲ್ಲವಲ್ಲೊ ನಿನ್ನ ಅಮ್ಮನ ತರಹ. ಅದೇನು ಹೇಳ್ತಾ ಇದ್ದೀಯ ಅದನ್ನ ಮುಗಿಸಿ ಆನಂತರ ಕೋಡುಬಳೆ ಮುಗಿಸಬಾರದೆ' ಎಂದ ಅಸಹನೆಯಿಂದ, ಹರಿ ತಂದೆ ಮನೋಜ. ಹಾಗೇ ಪತ್ನಿ ಕಡೆ ತಿರುಗಿ ರೇಗಿದ – 'ಮಗೂಗೆ ಪಾಠ ಮಾಡ್ತಾ ಇದೀನಿ.... ಈಗ್ಲೇ ಆಗ ಬೇಕಿತ್ತೆ ಕುರುಕುಲು ತಿಂಡಿ... ಸೀರಿಯಸ್‌ನೆಸ್ ನಿಂಗೂ ಇಲ್ಲ.... ಅಂತ 'ನಿಜ ರೀ... ಕಂಡವರ ಮನೆ ಘಟನೆ ಬಗ್ಗೆ ನಿಮ್ಗೆ ಬಹಳ ಸೀರಿಯಸ್‌ನೆಸ್, ಕೇಳಲು....' ಎಂದು ಅಬ್ ಜಕ್ಷನ್ ಓವರ್ ರೂಲ್ಡ್ ಎಂದು, ನಗುತ್ತ ಒಳಗೆ ಹೋಗಿದ್ದಳು.

'ಡ್ಯಾಡಿ..... ಪಿತೃದೇವೋಭವ ಅಂತಾರಲ್ಲ.... ಅದರ ಅರ್ಥ ಏನು....' – ಬೇರೇ ವಿಚಾರ ಎತ್ತಿದ್ದ ಹರಿ ಕೋಡುಬಳೆ ಮುಗಿಸಿ. 'ಮೊದಲು ಸತ್ಯಂ ವದ ಬಗ್ಗೆ ಕೇಳ್ತಾ ಇದ್ದಿ. ಈಗ ಪಿತೃದೇವೋಬವ ಅಂತ ವಿಷಯ ಡೈವರ್ಟ್ ಮಾಡ್ತೀಯಲ್ಲೊ... ಮಂಕಿ' – ಮನೋಜ ಮತ್ತೆ ಸೀರಿಯಸ್ ಆಗಿ ರೇಗಿದ್ದ.

'ರೀ.... ಮಕ್ಕಳು ಹಾಗೇ... ಚಂಚಲ ಸ್ವಭಾವ, ತಾಳ್ಮೆಯಿಂದ ಹೇಳಿ ಕೊಡಿ. ಈಗ ರೇಷ್ಮೆ ಸೀರೆ ಬಗ್ಗೆನೋ, ಹೊಸ ಚಿನ್ನದ ಕೈ ಬಳೆ ಬಗ್ಗೆ, ನಾನು ವಿಚಾರ ಆರಂಭಿಸಿದಾಗ ನೀವು ವಿಷಯ ಡೈವರ್ಟ್ ಮಾಡುವುದಿಲ್ಲವೇ? ಹಾಗೇ ನಿಮ್ಮ ಮಗ. ಯಥಾ ಪಿತ.... ತಥಾ ಸುತ....' ಎಂದಳು ಸೊಸೆ ಮಾವನ ಮುಖ ನೋಡಿ ನಸುನಕ್ಕು. ಆಕೆ ಸಂಸ್ಕೃತದಲ್ಲಿ ಮಾಸ್ಟರ್ ಡಿಗ್ರಿ ಪಡೆದವಳು. ಮಾವನ ಸ್ಟೂಡೆಂಟ್. ಹಾಗಾಗಿ ಮಾವ ತಮ್ಮ ಒಬ್ಬನೇ ಮಗ, ಮನೋಜನಿಗೆ ಮಾನಸಿಯನ್ನೇ ಸೊಸೆಯಾಗಿ ಆಯ್ಕೆ ಮಾಡಿಕೊಂಡಿದ್ದರು.

'ಮಾನಸೀ..... ಈ ಸಂಸ್ಕೃತದ ವಿಚಾರ ನಿಂಗೆ ಗೊತ್ತಾಗಲ್ಲ ಆಧ್ಯಾತ್ಮಿಕ ಬೇರೆ, ಲೌಕೀಕ ಬೇರೆ.... ಸುಮ್ಮನಿರು...' ಎಂದು ಈಗ ಮಗನ ಕಡೆ ತಿರುಗಿದ್ದ ಮನೋಜ ಸೀರಿಯಸ್ ಆಗಿ.

'ಹೇಳು, ಅದೇನೋ ಹೇಳ್ತಾ ಇದ್ದಿ.... ಮತ್ತೆ ವಿಷಯ ತಿರುಗಿಸಿದ. ಪಿತೃದೇವೋಭವ ಅಂದರೆ ತಂದೆಯನ್ನ ದೇವರೆಂದು ಭಾವಿಸಿ ಪೂಜಿಸಬೇಕು, ಅವರು ಹೇಳಿದ ಹಾಗೆ ಕೇಳಬೇಕು' – ಎಂದು ಮನೋಜ.



'ದೇವರು ಅಂತೀಯ.... ಹೇಳಿದ ಹಾಗೆ ಕೇಳಬೇಕು ಅಂತೀಯ ನಾನು, ದೇವರು ಏನೂ ಹೇಳಿದ್ದು ಕೇಳೇ ಇಲ್ಲವಲ್ಲ ಡ್ಯಾಡಿ....' ಎಂದು ರಾಂ ಜೇಠ್‌ಮಲಾನಿ ತರಹ ಮರುಪ್ರಶ್ನೆ ಹಾಕಿದ್ದ–ಹರಿ.

‘ಮತ್ತೆ ಮತ್ತೆ ವಿಷಯ ಬದಲಾಯಿಸುತ್ತಿದ್ದೀಯ.... ಹರಿ... ಈಗ ಸತ್ಯಂ ವದ ವಿಚಾರಕ್ಕೆ ಬಾ....’ ಎಂದ ಅಪ್ಪ.

‘ಪಿತೃದೇವೋಭವ ಅಂತ ಅಪ್ಪ ಹೇಳಿಕೊಟ್ಟಂತೆ ಸತ್ಯ, ಡ್ಯಾಡಿ ‘ಹೊರಗೆ’ ಹೋಗಿದ್ದಾರೆ ಅಂತ ಹೇಳಿದನಂತೆ. ಆದರೆ ಆ ತರಲೆ ತಮ್ಮಣ್ಣ ಅಂಕಲ್.... ‘ಹೊರಗೆ’ ಹೋಗಿದ್ದಾನೆ ಅಂದರೆ, ವಾಷ್ ರೂಂಗೆ ಅಂತ ತಿಳಿದು, ಬರ್‍ಲಿ... ಬರ್‍ಲಿ ಸಾವಕಾಶವಾಗಿ ಬರ್‍ಲಿ... ಪೇಪರ್ ನೋಡ್ತಾ ಕೂಡುತ್ತೇನೆ. ನಿಮ್ಮ ಮಮ್ಮಿಗೆ, ಸಕ್ಕರೆ ಜಾಸ್ತಿ ಹಾಕಿಸಿ, ಕಾಫಿ ದೊಡ್ಡ ಲೋಟದಲ್ಲಿ ಕೊಡಲು ಹೇಳು ಅಂತ ಕೂತೇ ಬಿಟ್ಟರಂತೆ. ಸಾಮಾನ್ಯ ಜ್ಞಾನವೇ ಇಲ್ಲ.... ಕಾಮನ್‌ಸೆನ್ಸ್ ಇಲ್ಲದ ನೀನು, ನಾನ್ ಸೆನ್ಸ್ ಅಂತ ಸತ್ಯನಿಗೆ ಅವರ ಡ್ಯಾಡಿ ಬೈದರಂತೆ. ಹೊರಗಡೆ ಅಂದ್ರೆ ಬ್ಯಾಂಕೋ, ಮಾರ್ಕೆಟ್ಟೋ ಅಂತ ಹೇಳಬಾರದೆ ಅಂತ್ಲೂ ಬೈದರಂತೆ.... ಸತ್ಯ ಹೇಳಬಾರದಿತ್ತೆ ಡ್ಯಾಡಿ’ – ಹರಿ ಅವರ ಅಪ್ಪನ ಮುಂದೆ ಯಕ್ಷ ಪ್ರಶ್ನೆ ಇಟ್ಟಿದ್ದ.

‘ಸತ್ಯ ಯಾವಾಗಲೂ ಹೇಳಿ, ಬದುಕೋದು ಕಷ್ಟ ಮಗು’ – ಎಂದು ಮನೋಜ.

‘ಹಾಗಾದ್ರೆ ಸುಳ್ಳು ಹೇಳಬಹುದೇ ಡ್ಯಾಡಿ’ – ಶಾಂತಿ ಭೂಷಣ್ ತರಹ ಲಾ ಪಾಯಿಂಟ್ ಹಾಕಿ ಕೇಳಿದ್ದ.

‘ಒಳ್ಳೆ ವಿಚಾರಕ್ಕೆ...’ ತಡವರಿಸಿದ ಮನೋಜ. ಮಾನಸಿ ಮಾವನೊಂದಿಗೆ ಕಂಡೂಕಾಣದಂತೆ ನಕ್ಕಿದ್ದಳು.

‘ಪುಣ್ಯಕೋಟಿ ಹಸು, ಸತ್ಯವೇ ನಮ್ಮ ತಂದೆ, ತಾಯಿ, ಸತ್ಯವೇ ನಮ್ಮ ಬಂಧು ಬಳಗ, ಸತ್ಯ ವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು ಅಂತ ಹೇಳಿದರಲ್ಲ ತಾತ...’ ಹರಿ ಆಕ್ಷೇಪ ಎತ್ತಿದ್ದ, ಅಬ್ ಜಕ್ಷನ್ ಯುವರ್ ಆನರ್ ಎಂಬಂತೆ.

ಮೊದಲೇ ಕಛೇರಿಯಿಂದ ದಣಿದು ಬಂದಿದ್ದ ಮಗ ಯಾವಾಗಲೂ ಸೀರಿಯಸ್ ಆಗಿ ತಗೋಳೋ ಸ್ವಭಾವ. ಮತ್ತೆ ತನ್ನ ಮಗನ ಲಾ ಪಾಯಿಂಟು. ರೇಗಿ ಹೇಳಿದ್ದ.

‘ಪುಣ್ಯಕೋಟಿ ಕಥೆ ಹಿಂದಿನ ಕಾಲದ್ದು... ಅದು ‘ದನದ’ ಕಥೆ. ನಾನು ಹೇಳ್ತಾ ಇರೋದು.... ಈಗಿನ ‘ಜನದ’ ಕಥೆ. ಮನೆಯಲ್ಲಿ ನಿಮ್ಮಮ್ಮ ಸಂಸ್ಕೃತದ ‘ಎಮ್ಮೆ’ ಇದ್ದಾಳೆ. ನಿಮ್ಮ ತಾತನೂ ಸಂಸ್ಕೃತ ಪಂಡಿತರು... ಹೋಗಿ ಅವರ ಬಳಿ ಪಾಠ ಹೇಳಿಸಿಕೋ...’ ಎಂದು ಅಮೃತಾಂಜನ ಡಬ್ಬಿ ತೆಗೆದುಕೊಂಡ ಮನೋಜ. ಅವನ ಮನ ಅರಿತಿದ್ದ ಮಡದಿ ಮಾನಸಿ, ಮತ್ತೊಂದು ಕಪ್ ಬಿಸಿಬಿಸಿ ಕಾಫಿ ತಂದಿತ್ತು ಹೇಳಿದ್ದಳು.

‘ಬಾ ಹರಿ, ನಾನು ಹೇಳಿ ಕೊಡ್ತೀನಿ. ನಿಮ್ಮ ತಾತ, ಸಂಸ್ಕೃತ ಪಂಡಿತರು. ಅವರ ಮಗ, ಅಂದ್ರೆ ನಿಮ್ಮ ಡ್ಯಾಡಿ, ದೊಡ್ಡ ಪಂಡಿತ ಪುತ್ರ. ಈ ಚಿಕ್ಕ ವಿಷಯ ನನ್ನ ಹತ್ತಿರ ಕೇಳಿ, ಕಲಿ. ಅವರದ್ದು ಮಹಾ ಸಮಸ್ಯೆಗಳಿಗೆ ಮಾತ್ರ ಪರಿಹಾರ ಸೂಚನೆ. ಪಂಡಿತಪುತ್ರ ಅಲ್ಲವೇ ಅದಕ್ಕೆ’ ಎಂದಾಗ ಸೊಸೆ ಜೊತೆ ಮಾವನೂ ಜೋರಾಗಿ ನಕ್ಕಿದ್ದರು. ಪಂಡಿತ ಪುತ್ರ ಎಂದರೆ ಏನೂ ಗೊತ್ತಿಲ್ಲದ ಬುದ್ದು ಎಂಬ ಅರ್ಥ! ■



# ರೆಸಲ್ಯೂಶನ್ ಎಂಬೋ ಉಪದ್ರವ !

**ಲತಾ ಹೆಗಡೆ**

ರೀ ...... ! ಏನ್ರೀ ... ಏಳೀಂದ್ರೆ ... ,

.........

ಹೊಸವರ್ಷದ ಶುಭಾಶಯಗಳು !

........

ಏನೂಂದ್ರೇ ... ಏಳ್ತೀರೋ ಇಲ್ವೋ ...

...... !

ರೀ ...! ನಾಟಕ ಸಾಕು ಎದ್ದೇಳಿ ಅಂದ್ರೇ , ಇನ್ಮೇಲೆ ದಿನಾ ಬೆಳಗ್ಗೆ ಐದು ಗಂಟೆಗೇ ಏಳ್ಬೇಕು ....ಬೇಗ ಏಳೋದು ಆರೋಗ್ಯಕ್ಕೆ ಒಳ್ಳೇದಂತೆ, ಇದನ್ನೇ ಹೊಸ ವರ್ಷದ ರೆಸಲ್ಯೂಶನ್ ಮಾಡ್ಕೊಂಡ್ಬಿಡಿ; ಗೊತ್ತಾಯ್ತಾ ... ?

ರಾತ್ರಿ ಎರಡು ಗಂಟೆಯವರೆಗೂ ಗೆಳೆಯರೊಡನೆ ದೂರದರ್ಶನದ ಕಾರ್ಯಕ್ರಮ ವೀಕ್ಷಿಸುತ್ತಾ ತಿಂದು ಉಂಡು ಕುಡಿದು ಕುಪ್ಪಳಿಸಿ ತೀರ್ಥದ ಮತ್ತೇರಿಸಿಕೊಂಡು ಹಾಸಿಗೆಯಲ್ಲಿ ಬಿದ್ದುಕೊಂಡಿದ್ದೊಂದೇ ನೆನಪು . ನಿದ್ರಾದೇವಿಯ ಅಪ್ಪುಗೆಯಲ್ಲಿ ಮೈಮರೆತಿದ್ದವನಿಗೆ ಲಲಿತೆಯ ಏರುಧ್ವನಿ ಸುತ್ತಿಗೆಯಿಂದ ಬಾರಿಸಿದಂತಾಗಿತ್ತು . ಒಂದಾನೊಂದು ಕಾಲದಲ್ಲಿ ಕೋಗಿಲೆಯ ಇಂಚರದಂತೆ ಇಂಪೆನ್ನಿಸಿದ್ದ ಲಲಿತೆಯ ಧ್ವನಿಯಲ್ಲಿ ಇದೀಗ ಕಾಗೆಯ ಕರ್ಕಶ . ಮೈಯನ್ನು ಜೋರಾಗಿ ಅಲುಗಿಸಿದ್ದರಿಂದಲೋ ಏನೋ ಭೂಕಂಪದ ಭಾಸ... ತಲೆಯೋ ಬುಗುರಿಯಾಗಿತ್ತು . ಮಾಗಿಯ ಚಳಿಯಲ್ಲಿ ಹಾಯಾಗಿ ಮೈತುಂಬಾ ಹೊದ್ದು ಬೆಳಗಿನ ಸವಿಸವಿ ನಿದ್ರೆಯ ಮತ್ತಿನಲ್ಲಿದ್ದವನ ಚಾದರವನ್ನು ಸ್ವಲ್ಪವೂ ಕರುಣೆಯಿಲ್ಲದೆ ಕಿತ್ತೊಗೆದಿದ್ದಳು ಭಾರ್ಯಾಮಣಿ . ದೌರ್ಜನ್ಯವಲ್ಲವೇ ಇದು ? ಹೊಸವರ್ಷದ ನೆಪ ... ಬಾಟಲಿನಲ್ಲಿ ಬಂಧಿಯಾಗಿದ್ದ ಅಮಲುದೇವ ಶ್ರೀಕಂಠನ ಉದರವನ್ನಷ್ಟೇ ಅಲ್ಲದೇ ಪೂರ್ತಿ ಮೈಯನ್ನಾವರಿಸಿ ತಲೆಭಾರವಾಗಿಸಿದ್ದ . ಬೆಳಗಿನ ಜಾವದ ಸಕ್ಕರೆ ನಿದ್ದೆಯ ಕನಸು ... ಕನಸೇ ಆಯಿತು. ಹೋಗಲಿ ಎಂದಿನಂತೆ ಬೆಡ್ ಟೀಯನ್ನಾದರೂ ಸೊರ್ರೆಂದು ಹೀರಿ ಏಳೋಣ ... ಮನಸ್ಸಿನಲ್ಲೇ ಮಂಡಿಗೆ ಮೆಲ್ಲುತ್ತ ಮತ್ತಿನಿಂದ ಮುಷ್ಕರ ಹೂಡಿದ್ದ ಕಣ್ಣುಗಳನ್ನು ತೆರೆಯಲು ಕಷ್ಟಪಡುತ್ತಾ ಅಭ್ಯಾಸಬಲದಿಂದ ಮಲಗಿದ್ದಲ್ಲಿಂದಲೇ ಕೈ ಚಾಚಿದ್ದ ...

ಚಾಚಿದ ಕೈಯನ್ನು ಯಮನ ಪಾಶ ಬಿಗಿದೆಳೆದಂತಹ ಭಯಂಕರ ಅನುಭವ! ಕೈಯನ್ನು ಹಿಡಿದೆಳೆದ ರಭಸಕ್ಕೆ ಬಲವಂತದಿಂದ ಕೂರಿಸಲ್ಪಟ್ಟಿದ್ದ ಶ್ರೀಕಂಠ . ಎದ್ದು ಕುಳಿತರೂ ಕೂರಲಾಗದೇ ಬಿಲ್ಲಿನಂತೆ ಬಾಗುತ್ತಿದ್ದ . ಒಣಗಿದ ಬಾಳೇಗಿಡದಂತೆ ಬಾಗುತ್ತಿದ್ದವನ ದೈನೇಸಿ ದೆಸೆಗೆ ಕಂಠಪೂರ್ತಿ ಏರಿಸಿದ್ದ ನಶೆಯೇ ಖಳನಾಗಿತ್ತು .



ನೋಡ್ರೀ ... ಇನ್ಮೇಲೆ ಇದೆಲ್ಲಾ ಬಂದ್ . ಎದ್ದು ಮುಖ ತೊಳೀದೇ ಚಹಾ ಗಿಹಾ ಎಂಥಾದ್ದೂ ಇಲ್ಲ . ಮುಖ ತೊಳೀದೇ ಅದ್ಹೇಗೆ ಚಹಾ ಕುಡೀತೀರೋ ..., ವ್ಯಾಕ್ ! ... ಥೂ ಅಸಹ್ಯ ! ಇನ್ಮೇಲೆ ಬೇಗ ಎದ್ದು ಚಾದರ ಮಡಚಿಟ್ಟು ಮುಖ ತೊಳೆದು ಬರುವುದನ್ನೂ ನಿಮ್ಮ ಹೊಸ ವರ್ಷದ ರೆಸಲ್ಯೂಶನ್ ನಲ್ಲಿ ಸೇರಿಸಿಕೊಳ್ಳಿ. ಅಂದ್ಹಾಗೆ ನಿಮಗೊಂದು ಸರ್ಪ್ರೈಸ್ ನ್ಯೂಸ್ ಕಣ್ರೀ ... ನಾನೂ ಜಿಮ್ ಗೆ ಸೇರಿದ್ದೀನಿ. ಯಾವಾಗ್ಲೊ ಹಂಗಸ್ತಿದ್ರಲ್ಲ 'ಗುಜ್ಜಾನೆ ಮರಿ' ... 'ಗಜಗಮನೆ' ಅಂತೆಲ್ಲಾ . ಪಾಪ! ನನ್ನಿಂದ ನಿಮಗ್ಯಾಕೆ

ಸರೀಕರಲ್ಲಿ ಅವಮಾನ ... ಅದನ್ನ ತಪ್ಪಿಸೋಕ್ಕಂತಲೇ ಜ್ಹೀರೋ ಸೈಜ್ ಆಗೋದನ್ನ ನನ್ನ ಪರಮ ಗುರಿ ಮಾಡ್ಕೊಂಡಿದ್ದೀನಿ ಕಣ್ರೀ ; ಇದೇ ನನ್ನ ಹೊಸ ವರ್ಷದ ರೆಸಲ್ಯೂಶನ್ !

ಇಷ್ಟು ದಿವಸ ಹಾಸಿಗೆಯಲ್ಲಿ ಮಲಗಿಕೊಂಡೇ ಕಣ್ಣೂ ತೆರೆಯದೇ ಆವಾಜ್ ಹಾಕಿದ ಮರುಕ್ಷಣವೇ ದಿನಪತ್ರಿಕೆಯೊಂದಿಗೆ  ಹಬೆಯಾಡುವ ಚಹಾ ತಂದುಕೊಡುತ್ತಿದ್ದವಳಿಗೆ ಇವತ್ತು ಬೆಳ್ಬೆಳಗ್ಗೇನೇ ಅದೇನು ತಿಕ್ಕಲು ಮೆಟ್ಟುಕೊಂಡಿದೆಯೋ ...'ಅಸಹ್ಯ – ಗಿಸಹ್ಯ' ಅಂತೆಲ್ಲಾ ಏನೇನೋ ಬಡಬಡಿಸುತ್ತಿದ್ದಾಳಲ್ಲಾ... ಮೊದ್ದುಮಣಿಯಂತಿದ್ದವಳಿಗೆ ಹಲ್ಲು ತಿಕ್ಕದೇ ಚಹಾ ಕುಡಿಯೋದು ಅಸಹ್ಯ ಅನ್ನೋ ಜ್ಞಾನೋದಯ ಅದ್ಯಾವಾಗ ಯಾಕಾದ್ರೂ ಆಯ್ತೋ ...ಒಟ್ನಲ್ಲಿ ನನ್ನ ಪ್ರಾರಬ್ಧ ಕರ್ಮ

ಬಿಸಿ ಬಿಸಿ ಚಹಾ ಕುಡಿದು ಪೇಪರ್ ಓದಿ ಮಡಚಿಡದೇ ಬೋಂಡಾ ಕಟ್ಟುವ ರದ್ದಿಯಂತೆ ಮಾಡಿಟ್ಟು ಲೋಟವನ್ನೂ ಹಾಸಿಗೆಯ ಮೇಲೇ ಬಿಟ್ಟು ಅಥವಾ ಬೀಳಿಸಿ ಚಾದರವನ್ನೂ ಮಡಚದೇ ರಾಜ ಗಾಂಭೀರ್ಯದಿಂದ ಹೋಗುತ್ತಿದ್ದ ನಮ್ಮ ಬಹಾದ್ದೂರ್ ಗಂಡು ಶ್ರೀಕಂಠನಿಗೆ ಆಘಾತವಾಗದೇ ಇದ್ದೀತೇ ? ಸಿಡಿಯುತ್ತಿರುವ ತಲೆಯೊಂದಿಗೆ ಬಲು ಕಷ್ಟದಿಂದಲೇ ಪ್ರಾತರ್ವಿಧಿಯನ್ನು ಮುಗಿಸಿದ ಶಾಸ್ತ್ರ ಮಾಡಿ ಬಂದವನಿಗೆ ಈಜಿ ಚೇರ್ನಲ್ಲಿ ಕುಳಿತು ಪೇಪರ್ ಓದುತ್ತಾ ಚಹಾ ಹೀರುವ ಹೆಬ್ಬಯಕೆ – ತವಕ . ಅದಿಲ್ಲದಿದ್ದರೆ ದೇಹದ ಯಾವ ಅಂಗಾಂಗಗಳೂ ಆಡದು – ಓಡದು.

ಲೇ ... ಲಲಿತೂ ... ಎಷ್ಹೊತ್ತೆ ... ? ಈಗಲಾದರೂ ಚಹಾ ಕೊಡ್ತೀಯೇನೇ ಮಹಾರಾಯ್ತಿ ... ?

ಏನೂಂದ್ರೇ ...ಇಷ್ಟ್ ವರ್ಷ ಲಗಾಮಿಲ್ಲದ ಕುದುರೆಯಂತೆ ಮಜಾ ಮಾಡಿದ್ದು ಸಾಕು. ಇನ್ಮೇಲೆ ಮುಖ ತೊಳೀದೇ, ಖಾಲೀ ಹೊಟ್ಟೇಲಿ ಚಹಾ ಗಿಹಾ ಏನೂ ಸಿಗೋಲ್ಲ . ನ್ಯೂಸ್ ಪೇಪರ್ ಕಥೆ ಆನಂತ್ರದ್ದು , ಈಗ ಮುಖ ತೊಳೆದು ಬಂದ್ರಿ ತಾನೇ ...? ಇನ್ಮೇಲೆ ಪ್ರತಿದಿನ ಬೆಳಗ್ಗೆ ಕನಿಷ್ಠ ಒಂದು ಲೀಟರ್ ಬೆಚ್ಚಗಿನ ನೀರು ಕುಡೀಬೇಕು . ನಿಮ್ಮ ಹೊಸವರ್ಷದ ರೆಸಲ್ಯೂಶನ್ ನಲ್ಲಿ ಇದನ್ನೂ ಸೇರಿಸ್ಕೊಂಡ್ಬಿಡಿ. ಮೈಗೂ  ಒಳ್ಳೇದು ... ಬಿಸಿ ನೀರಿನ ಚೊಂಬು – ಲೋಟ ಕೈಯಲ್ಲಿ ತುರುಕಲ್ಪಟ್ಟ ರಭಸಕ್ಕೆ ತುಳುಕಿತ್ತು .

ದೌರ್ಜನ್ಯದ ಪರಮಾವಧಿ ಅಂದ್ರೆ ಇದೇ ಇರಬೇಕು ! ಹಬೆಯಾಡುವ ಬಿಸಿಬಿಸಿ ಚಹಾದ ಪರಿಮಳ ಎಲ್ಲಿ ; ರುಚಿಯಿಲ್ಲದ ಲೀಟರ್ ಗಟ್ಟಲೆ ಬಿಸಿ ನೀರೆಲ್ಲಿ? ಇದೊಳ್ಳೇ ಗ್ರಹಚಾರವಾಯ್ತಲ್ಲ ... ಇವಳ್ಯಾಕೆ ಇದ್ದಕ್ಕಿದ್ದಂತೆ ನನ್ನ ಶತ್ರು ಆಗ್ತಿದ್ದಾಳೆ ?

ಲೇ ... ಅದ್ಯಾಕೆ ಬೆಳ್ ಬೆಳಗ್ಗೇನೇ ಅಷ್ಹೊತ್ನಿಂದ್ಲೂ ನಕ್ಷತ್ರಿಕಿಯಾಗಿ ಕಾಡ್ತಿದ್ದೀಯೇ? ನಿನಗೇನೇ ಬಂತು ದೊಡ್ ರೋಗ ... ? ನೋಡೇ ... ಪತಿಯೇ ಪರದೈವ ... ಗೊತ್ತಿದೆ ತಾನೇ ... ?  ಅದೆಲ್ಲಿತ್ತೋ ಭಂಡ ಧೈರ್ಯ ...ಅಧಿಕಾರ ವಾಣಿಯಲ್ಲಿ ಪಲುಕಿದ್ದ .

ಯಾಕೇ .... 'ಬಾಜೀರಾವ್ ಮಸ್ತಾನಿ' ಸಿನೆಮಾ ನೋಡ್ಕೊಂಡು ಬರೋವಾಗ ಏನಂದ್ರಿ ರಾಯ್ರು, ಮರೆತು ಬಿಟ್ರಾ ? ಹಿರೋಯಿನ್ನು ನೋಡು ಮಲ್ಲಿಗೆ ಹೂನಂತೆ ಅದೆಷ್ಟು ನಾಜೂಕಾಗಿದ್ದಾಳೆ;  ಬಳ್ಳಿಯಂತೆ ಬಳುಕುತ್ತ ನರ್ತಿಸೋದು ನೋಡ್ತಿದ್ರೆ ನೋಡ್ತಾನೇ ಇರೋಣ ಅನ್ಸುತ್ತೆ ... ನೀನೂ ಇದ್ದೀಯಾ ಡಬ್ಬಲ್ ಸೀಟು, ಇಡೀ ದಿನ ಮೂರ್ಖರ



ಪೆಟ್ಟಿಗೆ ಮುಂದೆ ಕೂತ್ ಕೂತು ಹೇಗ್ ಮೈ ಬೆಳೆಸಿದ್ದಿ ನೋಡು. ಸುಮ್ನೇ ಭೂಮೀಗ್ ಭಾರ ಅಷ್ಟೇ. ಜಿಮ್‌ಗಾದ್ರೂ ಸೇರಿ ಮೈಯಲ್ಲಿನ ಕೊಬ್ಬು ಕಡಿಮೆ ಮಾಡ್ಕೋ ...ಮೈಗೂ ಒಳ್ಳೇದು, ಅದನ್ನೇ ಹೊಸ ವರ್ಷದ ರೆಸಲ್ಯೂಶನ್ ಮಾಡ್ಕೋ... ಅದೂ ಇದೂ ಅಂತೆಲ್ಲಾ ಏನೇನೋ ಹಲುಬಿದ್ರಲ್ಲಾ ... ಅದಕ್ಕೇ ಆದರ್ಶ ನಾರಿಯಾಗಿ ಪತಿದೇವರ ಮಾತನ್ನು ಶಿರಸಾ ಪಾಲಿಸ್ತಿದ್ದೀನಿ ಕಣ್ರೀ ...ಹಾಗೇನೇ ನಿಮ್ ಆರೋಗ್ಯದ ಬಗ್ಗೇನೂ ಕಾಳಜಿ ವಹಿಸೋದು ನನ್ ಪರಮ ಸತಿಧರ್ಮ ತಾನೇ? ಈಗ ನೀವೂ ಅಷ್ಟೇ; ನಿಮ್ಮ ಹೊಸ ವರ್ಷದ ಸಂಕಲ್ಪಗಳಲ್ಲಿ ದಿನದ ವಾಕಿಂಗನ್ನೂ ಸೇರಿಸ್ಕೊಂಡ್ಬಿಡಿ; ಆರೋಗ್ಯವೇ ಭಾಗ್ಯ ಅಲ್ವೇನ್ರೀ ...ಅದೊಂದ್ ಇದ್ರೆ ಏನೂ ಸಾಧಿಸ್ಬಹುದು . ಹಾಗೇನೇ ದೇವರ ಪೂಜೆ ಸಲುವಾಗಿ ಹೂ ಕಿತ್ತಿಡಿ, ಪುಣ್ಯ ಬರುತ್ತೆ. ಲೇಟಾದ್ರೆ ಹೂ ಕದ್ ಬಿಡ್ತಾರೆ ...ನಾ ಬರೋದು ಲೇಟ್ ಆಗುತ್ತೇನೋ ಸ್ವಲ್ಪ ಅಂಗಳ ಗುಡಿಸಿಡಿ ಸಾಕು. ಜಿಮ್‌ನಿಂದ ಬಂದ್ ಮೇಲೆ ಬಾಗಿಲು ತೊಳ್ದು ರಂಗೋಲಿ ಹಾಕೋದು ನನ್ ಕೆಲ್ಸ ...

ಅನುನಯದಲ್ಲಿ ( ? ) ಆದೇಶಿಸಿ ಕ್ಯಾನ್ವಾಸ್ ಬೂಟು ಧರಿಸಿ ಭುಜಕ್ಕೆ ಹೊಸ ಬ್ಯಾಗು ತಗ್ಲಾಕ್ಕೊಂಡು ಹುಮ್ಮಸ್ಸಿನಲ್ಲಿ ದುಡುದುಡು ಹೊರಟ ಗುಜ್ಜಾನೆ ಲಲಿತೆಯ ಗಡಗಡ ನಡುಗುವ ಹಿಂಭಾಗವನ್ನೇ ನಗು – ಅಳು – ಸಿಟ್ಟು... ಮಿಶ್ರಭಾವದಿಂದ ನೋಡುತ್ತಿದ್ದ ನಮ್ ಶ್ರೀಕಂಠ ಆಘಾತ ತಡೆಯಲಾರದೇ ಕುಳಿತ ಕುರ್ಚಿಯಲ್ಲೇ ಕುಸಿದಿದ್ದ.

ಚಕಚಕನೆ ಆದ ಹೊಸ ವಿದ್ಯಮಾನಗಳಿಂದ ಹೆದರಿ ಹೆಮ್ಮೆಟ್ಟಿ ಎದೆಯನ್ನು ಭೇದಿಸಿ ಹೊರಬರುವಷ್ಟು ಜೋರಾಗಿ ಹೊಡೆದುಕೊಳ್ಳುತ್ತ ಲಬ್ ಡಬ್ ಲಬ್ ಡಬ್ ಹೊಯ್ಕೊಳ್ಳೋಕೆ ಪ್ರಾರಂಭಿಸಿತ್ತು ಶ್ರೀಕಂಠನ ಪುಟ್ಟ ಗುಂಡಿಗೆ. ಅದನ್ನು ಸಮಾಧಾನಿಸುವಂತೆ ಒತ್ತಿಹಿಡಿದು ನೀವಿಕೊಳ್ಳುತ್ತಾ ಕಡೆಯ ಪ್ರಯತ್ನವೆಂಬಂತೆ ಲೇ... ನೀನೇ ನನ್ನ ಚಂದ್ರಮುಖಿ ; ನಿನ್ನಷ್ಟು ಸುಂದರಿ ಈ ಜಗತ್ತಿನಲ್ಲೇ ಹುಟ್ಟಿಲ್ಲ, ಹುಟ್ಟೋದೂ ಇಲ್ಲ ...ಎಷ್ಟು ಸೊಂಪಾಗಿ ದೇಹ ಬೆಳೆಸಿ ಸೊಂಪಾಗಿ ಕಣ್ಣು ತುಂಬೋ ಹಾಗಿದ್ದೀಯಲ್ಲೇ ... ನನ್ ಮುದ್ದಿನ್ ರಾಣಿ ಅಲ್ವೇನೇ ಚಿನ್ನಾ ... ಏನೋ ತಮಾಷೆಗೆ ಹೇಳಿದ್ದನ್ನ ಸೀರಿಯಸ್ ಆಗಿ ತೊಗೊಂಡು ಜಿಮ್ಮು ಗಿಮ್ಮು ಅಂತ್ಹೇಳಿ ಸೊರಗಿ ಒಣಕಲು ಕಡ್ಡಿಯಾಗಬೇಡ್ವೇ ...ಸುಮ್ನೇ ಯಾಕ್ ದೇಹ ದಂಡಿಸ್ತೀ ? ನಮ್ಮ್ ಮನೇ ಮಹಾಲಕ್ಷ್ಮಿ ಕಣೇ ನೀನು ... ನೀನೇ ಬಾಡಿ ಬಸವಳಿದರೆ ಏನ್ ಚೆನ್ನ ಹೇಳು ... ಅದೆಲ್ಲ ಎಂಥಾದ್ದೂ ಬೇಡ ... ದಯವಿಟ್ಟು ಹೋಗ್ಬೇಡ ಚಿನ್ನು ... ಇನ್ಮೇಲೆ ತಮಾಷೆಗೂ ನಿನ್ನ ಹಂಗ್ಸಲ್ಲ ಅಂತ ನೀ ತೋರ್ಸಿದ ದೇವ್ರ ಮೇಲ್ ಬೇಕಾದ್ರೆ ಪ್ರಮಾಣ ಮಾಡಿ ಹೇಳ್ತೀನಿ ಕಣೇ , ನೀ ಹೇಳಿದ್ ಹಾಗೇ ಕೇಳ್ಕೊಂಡು ಯಾವುದೋ ಒಂದ್ ಮೂಲೇಲಿ ಕುನ್ನಿಯಂತೆ ಮುದುರ್ಕೊಂಡು ಬಿದ್ದಿರ್ತೀನಿ ... ಹೋಗ್ಲೀ, ಕೊನೇಪಕ್ಷ ಚಹಾ ಆದ್ರೂ ಕೊಟ್ ಹೋಗೇ ಪ್ಲೀಸ್ ... !

ಮಲಗಿದಂತೆಯೇ ತಲೆಯನ್ನು ಆಚೀಚೆ ಆಡಿಸುತ್ತ ಹೊರಳಾಡುತ್ತಾ ಕ್ಷೀಣ ಸ್ವರದಲ್ಲಿ ಗೋಗರೆಯುತ್ತಿದ್ದ ಪತಿಯನ್ನು ಸಮೀಪಿಸುವಷ್ಟರಲ್ಲಿ ಹೊರಳಾಟದ ರಭಸಕ್ಕೆ ಮಂಚದಿಂದ ಕೆಳಗೆ ಬಿದ್ದೇ ಬಿಟ್ಟಿದ್ದ ಶ್ರೀಕಂಠ . ತಲೆ ಸೊಂಟ ನೀವಿಕೊಳ್ಳುತ್ತಾ ನರಳುತ್ತಲೇ ಅಸ್ಪಷ್ಟವಾಗಿ ಗೊಣಗಿಕೊಳ್ಳುತ್ತಿರುವ ಪತಿಯನ್ನು ಜೋರಾಗಿ ಅಲುಗಿಸಿ ಎಚ್ಚರಿಸಲು ಪ್ರಯತ್ನಿಸಿದಳು ಗಾಬರಿಗೊಂಡ ಲಲಿತೆ .ಆತನ ತಲೆ ಸವರುತ್ತಾ ಏನೂಂದ್ರೆ ... ಎದ್ದೇಳಿ .ಎಚ್ಚರ ಮಾಡಿಕೊಳ್ಳೀಂದ್ರೇ ... ಅದ್ಯಾಕ್ ಹಾಗಾಡ್ತಿದ್ದೀರಾ ... ಏನಾಯ್ತ್ರೀ... ಏನಾದ್ರೂ ಕೆಟ್ಟ ಕನಸು ಬಿತ್ತೇ ? ಈ ಚಹಾ ಕುಡೀರಿ ಎಲ್ಲಾ ಸರಿ ಹೋಗುತ್ತೆ .... ಪುಟ್ಟ ಮಗುವನ್ನು ರಮಿಸುವಂತೆ ರಮಿಸುತ್ತಾ ವಾಡಿಕೆಯಂತೆ ಬಿಸಿಬಿಸಿ ಚಹಾ – ದಿನಪತ್ರಿಕೆ ನೀಡಿದ್ದಳು.



ಅಷ್ಟು ಹೊತ್ತು ಅನುಭವಿಸಿದ್ದು ಕನಸೆಂದು ಮನವರಿಕೆಯಾಗಲು ಸಮಯ ಹಿಡಿದಿತ್ತಾದರೂ ಸಮಾಧಾನದ ಸುಧೀರ್ಘ ನಿಟ್ಟುಸಿರು ಬಿಟ್ಟಿದ್ದ ನಮ್ ಶ್ರೀಕಂಠ . ಲಲಿತೆಯನ್ನು ಮೊಟ್ಟ ಮೊದಲ ಸಲ ನೋಡುವಂತೆ ಕಣ್ಣಗಲಿಸಿ ಕ್ಷಣಕಾಲ ಗುರಾಯಿಸಿದ್ದ ಅದ್ಯಾಕ್ ಹಾಗ್ ನೋಡ್ತಿದ್ದೀರಿ ಅಂದ್ರೆ... ನಾಚುತ್ತ ನುಲಿದಿದ್ದಳವಳು. ಎಲ್ಲವೂ ಸ್ವಸ್ಥಿತಿಯಲ್ಲಿರುವುದನ್ನು ಗಮನಿಸಿದವನಿಗೆ ವಾಸ್ತವತೆಯ ಅರಿವಾಗಿ ಆದ ಸಂತಸದಲ್ಲಿ ಮೈಯ ನೋವೇ ತಿಳಿಯದಂತಾಗಿ ಆನಂದತುಂದಿಲನಾಗಿದ್ದ. ಕರಾಳ ಕನಸಿನ ಪ್ರಭಾವದಿಂದಾಗಿ ನಮ್ಮ ಶ್ರೀಕಂಠನಿಗೆ ಹಾಸಿಗೆಯಲ್ಲೇ ಜ್ಞಾನೋದಯವಾಗಿತ್ತು ! ಇನ್ನು ಇವಳನ್ನು ಯಾವುದೇ ಕಾರಣಕ್ಕೂ ಹಂಗಿಸಬಾರದು, ಇದೇ ನನ್ನ ಹೊಸ ವರ್ಷದ ಅಷ್ಟೇ ಏಕೆ ಪ್ರತೀ ವರ್ಷದ ಏಕೈಕ ರೆಸಲ್ಯೂಶನ್ನೂ ಕೂಡ ... ಗೋವಿನಂತಹವಳು ತಿರುಗಿ ಬಿದ್ದರೆ ಆಗುವ ಅವಘಡ – ಭಾನಗಡೆಯನ್ನು ಈಗಾಗಲೇ ಕನಸಿನಲ್ಲಿ ಅನುಭವಿಸಿಯಾಗಿದೆ ...ಕನಸಿನಲ್ಲಿಯೇ ಅದೆಷ್ಟು ಕ್ರೂರ ಶಿಕ್ಷೆಯಾಗಿತ್ತು ... ಇನ್ನು ವಾಸ್ತವದಲ್ಲಿ ಊಹಿಸಲೂ ಅಸಾಧ್ಯ . ಸುಮ್ಮನೆ ಇಲ್ಲದ ಪಿರಿಪಿರಿ ಯಾಕೆ ಅಂದುಕೊಂಡವನೇ ಜಾಣನಾಗಿ ನೋಡೇ ... ಯಾರು ಏನೇ ಹೇಳಿದ್ರೂ ನೀ ಮಾತ್ರ ನಿನಗ್ ಹೇಗ್ ಬೇಕೋ ಹಾಗಿದ್ದು ಹಾಯಾಗಿರು. ಎಲುಬಿಲ್ಲದ ನಾಲಿಗೆ ಹೇಗೆ ಬೇಕಾದ್ರೂ ಹೊರಳುತ್ತೆ... ತಲೆ ಕೆಡಿಸ್ಕೋ ಬೇಡ; ಬೇಕಾದ್ದನ್ನು ಬೇಕಷ್ಟು ತಿಂದುಂಡು ಇಡೀ ದಿನ ದೂರದರ್ಶನ ನೋಡುತ್ತಾ' ಹಾಯಾಗಿ ಕುಳಿತಿರು ಅಥವಾ ಮೆತ್ತನೆ ಸೋಫಾ ಮೇಲೆ ಪವಡಿಸಿರು ನೀನು ರಾಣಿಯ ಹಾಗೆ ... ' ಎದ್ದೋಡಿ ರಾಗಲಾಪ ಪ್ರಾರಂಭಿಸಿದ್ದ ...

ಅವರಿವರು ಮಾಡ್ತಾರೆ ಅಂತ ಸಂಕಲ್ಪ – ರೆಸಲ್ಯೂಶನ್ ಮೋಡಿಗೆ ಖಂಡಿತಾ ಬೀಳ್ಬೇಡ ... ಅದರ ಅವಶ್ಯಕತೆಯೂ ನಿನಗಿಲ್ಲ ...ತಿಳೀತೇನೇ ನನ್ ಪ್ರೀತಿಯ ವನ್ ಎಂಡ್ ಓನ್ಲಿ ಲಲಿತೂ ...? ಹೊಸವರ್ಷದ ಖುಷಿಯಲ್ಲಿ ನಿನಗೊಂದು ಪಾರ್ಟಿ ಜೊತೆಗೆ ರೇಷ್ಮೆ ಸೀರೇನೂ ಕೊಡಿಸ್ತೀನಿ ಕಣೆ , ಸಾಯಂಕಾಲ ಆ ಗುಲಾಬಿ ಬಣ್ಣದ ಸೀರೆ ಉಟ್ಟು ರೆಡಿಯಾಗಿರು. ಸರೀನಾ ನನ್ನ ಮುದ್ದು ಬಂಗಾರಿ? ಬಡಬಡಿಸಿ ಉಲಿಯುತ್ತಾ ಮಸ್ಕ ಹೊಡೆದವ ಇನ್ನು ತನ್ನ ಕೆಲಸ ಮುಗಿಯಿತು ಎಂಬಂತೆ ಎಂದಿನಂತೆ ಬಿಸಿ ಬಿಸಿ ಚಹಾವನ್ನು ಸೊರ್ರೆಂದು ಹೀರುತ್ತಾ ದಿನಪತ್ರಿಕೆಯಲ್ಲಿ ತಲೆ ತೂರಿಸಿದ್ದ. ಅದ್ಯಾಕೆ ಇವತ್ತು ಹೀಗಾಡ್ತಿದ್ದಾರೆ... ಸೂರ್ಯ ಏನಾದ್ರೂ ದಿಕ್ಕು ಬದಲಿಸಿರುವನೇ ... ಅಥವಾ ಮಂಚದಿಂದ ಬಿದ್ದಾಗ ತಲೇಗೇನಾದ್ರೂ ಪೆಟ್ಟು ಬಿದ್ದು ಹೆಚ್ಚು ಕಡಿಮೆ ಆಗಿದೆಯೇ ...? ಅನುಮಾನದಿಂದ ದೃಷ್ಟಿಸುತ್ತಾ' ಅಥವಾ ರಾತ್ರಿಯ ತೀರ್ಥದ ಅಮಲಿನ್ನೂ ಇಳಿದಿಲ್ಲವೇನೋ ... ಯಾವುದಕ್ಕೂ ಧರ್ಮಸ್ಥಳಕ್ಕೆ ಹರಕೆ ಕಟ್ಟೋದು ಒಳ್ಳೇದು ಅನ್ಸುತ್ತೆ. ಅಪ್ಪಾ ಶ್ರೀ ಮಂಜುನಾಥೇಶ್ವರಾ, ಕಾಪಾಡಪ್ಪಾ ತಂದೆ ಕಾಪಾಡು!' ಗಲ್ಲ ಗಲ್ಲ ಬಡಿದುಕೊಳ್ಳುತ್ತಾ ಒಳ ನಡೆದಿದ್ದಳು ನಮ್ಮ ಗೋವಿನಂತಹ ಲಲಿತೆ. ■

---

## ಪರೀಕ್ಷೆ

**ಒಬ್ಬಾತ ಅಂಗಡಿಗೆ ಹೋಗಿ ಇಲಿ ಪಾಷಾಣ ಕೊಡಿ ಅಂತ ಕೇಳಿದ. ಅಂಗಡಿಯವನು ಕೊಟ್ಟ ಪ್ಯಾಕೆಟ್ಟನ್ನು ತಿರುಗ ಮುರುಗ ನೋಡುತ್ತಾ ಇದು ಒರಿಜಿನಲ್ಲಾ ಸಾರ್ ಅಂತ ಕೇಳಿದ. ಅದಕ್ಕೆ ಅಂಗಡಿಯವನು ನಾಳೆ ನಿಮಗೆ ಗೊತ್ತಾಗುತ್ತೆ ಅಂದ. ಅದು ಹೇಗೆ ಸರ್ ಅಂತ ಕೇಳಿದರೆ ಅಂಗಡಿಯವನು ಇವತ್ತು ಇದನ್ನು ಮನೆಗೆ ತಗೊಂಡು ಹೋಗಿ ಕುಡಿಯಿರಿ, ನೀವು ನಾಳೆ ನನ್ನ ಅಂಗಡಿಗೆ ಬಂದು ಜಗಳ ಆಡಿದರೆ ಇದು ಡೂಪ್ಲಿಕೇಟು ಇಲ್ಲದಿದ್ದರೆ ಒರಿಜಿನಲ್ಲು ಅಂದ.**



# ಹುಷಾರು, ಹುಷಾರು

• ನಂನಾಗ್ರಾಜ್

ನಾನು ಹಿರಿಯ ನಾಗರೀಕನಾದ ನಂತರ ನನ್ನ ಕುಗ್ಗಿದ ಗಮನ ಹಾಗೂ ನೆನಪಿನ ಶಕ್ತಿಯ ಸಮ್ಮಿಲನದ ಕಾರಣದಿಂದ ನನ್ನ ಹೆಂಡತಿಯ 'ಹುಷಾರು', 'ಹುಷಾರು' ಪಲ್ಲವಿ ನಿರಂತರವಾಗಿ ಸಾಗಿದೆ.

ಏನ್ರೀ ಇದು, ಹಣೆಯ ಮೇಲೆ ಮತ್ತೆ ಬೋರೆ?

ಅಯ್ಯೋ, ನೀನು ಹೇಳಿದ್ದ ಹಾಗೆ ಎಡಗಡೆ ಹಾಗೂ ಬಲಗಡೆ ಎರಡೂ ಕಡೆ ನೋಡ್ಕೊಂಡು ಹಾಗೂ ಸಿಗ್ನಲ್ 'ಹಸಿರು' ಬಂದಾಗಲೇ ರೋಡ್ ಕ್ರಾಸ್ ಮಾಡಿದೆ. ಆದರೆ ಮುಂದೆ ಇದ್ದ 'ಬೃಹತ್' ಪಾಟ್‌ಹೋಲ್ ನೋಡಲಿಲ್ಲ!

ಈ ತಿಂಗಳಲ್ಲಿ ಎರಡನೆ ಬೋರೆ ಇದು. ಗೆಸ್ಟ್ ರೂಂ ಬಾಗಿಲು ಜೋರಾಗಿ ಎಳೆದು ಅದು ನಿಮ್ಮ ಹಣೆಗೆ ಬಡಿದು ಬೋರೆ ಬಂದಿತ್ತು. ಹೇಳಿದ್ದೆ ತಾನೆ, 'ಹುಷಾರು' ಆ ಬಾಗಿಲು ಸ್ವಲ್ಪ ಬಿಗಿ ಅಂತ!

ಛೆ, ಛೆ, ಈ ಬೋರೆ ನಿಮ್ಮ ಬಾಲ್ಡ್ ಹೆಡ್ ಕೆಳಗೆ ಉಪಗ್ರಹದ ತರಹ ಮೆರೀತಿದೆ!

ಈಗ ತಾನೆ ಸ್ಟೊವ್ ಆರಿಸಿದೀನಿ. 'ಹುಷಾರು' ಪಾತ್ರೆ ಮುಟ್ಟ ಬೇಡಿ ಕೈಸುಡುತ್ತೆ. ನಾನು ಏನು ಅಡಿಗೆ ಮಾಡಿದೀನಿ ಅಂತ ತಿಳ್ಕೋಳೋ ಆತುರ. ಆಗೋ ತನಕ ಕಾದೋರು ಆರೋ ತನಕ ಕಾಯ್ಲಿಲ್ಲ ಅನ್ನೋ ಹಾಗೆ.

'ಹುಷಾರು', ಇಸ್ತ್ರಿ ಪೆಟ್ಟಿಗೆ ಬಿಸಿಯಾಗಿದೆಯಾ ಅಂತ ತಿಳ್ಕೋಳಕ್ಕೆ ಮುಟ್ಟಿ ನೋಡಬೇಡಿ ಅಂತ ಎಷ್ಟು ಸಾರ್ತಿ ಹೇಳಿದರೂ ಮುಟ್ಟಿ ಬೆರಳು ಸುಟ್ಟುಕೊಂಡು ಸ್ವಲ್ಪ ಎಣ್ಣೆ ನೀವು ಅಂತ ಗೋಗರೀತೀರಾ!

ಅಯ್ಯೋ, ಅಯ್ಯೋ, ಅದ್ಯಾಕೆ ತಲೆ ಹಾಗೆ ಪರಾ, ಪರಾಂತ ಬಾಚ್ಕೋತೀರ? ಹುಷಾರು, ಇರೋ ಮೂರು ಮತ್ತೊಂದು ಕೂದಲೂ ಕಿತ್ತೋಗಲ್ವೇ?

'ಹುಷಾರು', ನಿಧಾನವಾಗಿ ನಡೆದಾಡಿ. ಈಗ ತಾನೆ ಕೆಲಸದವಳು ಮನೆ ಸಾರಿಸಿದಾಳೆ. ಗೊತ್ತಲ್ಲ ಅವಳ ಕೆಲಸ, ಅಲ್ಲಲ್ಲಿ ಜಪಾನ್ ದೇಶದ ತರಹ ದ್ವೀಪಗಳಿರುತ್ತವೆ. ಹಾಗೂ ಅವು ಒಣಗುವ ತನಕ ನಿಮ್ಮ ಎಕ್ಸ್ಟ್ರಾಫಿಟಿಂಗ್ಸ್ (ಕನ್ನಡಕ, ಹಿಯರಿಂಗ್ ಏಯ್ಡ್, ಡೆಂಚರ್) ಎಲ್ಲವನ್ನೂ ಕಳಚಿಟ್ಟು ಓಡಾಡಿ, ಯಾವುದೊಂದು ಒಡೆದರೂ ವೃಥಾ ಖರ್ಚು!

ದೇವಸ್ಥಾನಕ್ಕೆ ಹೋಗ್ತಿದೀರಾ? 'ಹುಷಾರು'. ಈ ವರ್ಷದಲ್ಲಿ ನಾಲ್ಕು ಜೊತೆ ಚಪ್ಪಲಿಗಳು ಕಳ್ಕೊಂಡು/ಬದಲಾಯಿಸ್ಕೊಂಡು ಬಂದಿದೀರಾ. ಒಂದು ರೂಪಾಯಿ ಉಳಿಸಕ್ಕೆ ಹೋಗಿ 'ಬೇರ್ ಫುಟ್ ಬಾಯ್' ಆಗಿ ಬರಬೇಡಿ! ಹ್ಞಾ! ಹಾಗೇ ಇನ್ನೊಂದು ವಿಷಯ, ಆಗಾಗ ವಾಪಸ್ಸಾಗುವ ಹಾಗೆ ನಿಮ್ಮ ಸ್ಲಿಪ್‌ಆನ್‌ಗಳನ್ನು ಎಡದ್ದು ಬಲಕ್ಕೆ ಬಲದ್ದು ಎಡಕ್ಕೆ ಹಾಕ್ಕೊಂಡು ಚಾರ್ಲಿ ಚಾಪ್ಲಿನ್ ತರಹ ನಡ್ಕೊಂಡು ಬರಬೇಡಿ!!



ಬ್ಯಾಂಕಿಗೆ ಹೊರಟ್ರಾ? 'ಹುಷಾರು', ಸೇಫ್ಟಿಗೋಸ್ಕರ ಸೆಲ್ಫ್ ಚೆಕ್ ಹಿಂದೆ ಸೈನ್

ಬ್ಯಾಂಕ್‌ಲಿ ಮಾಡಿದ ನಂತರ ಹಿಂಬದಿಯಲ್ಲಿ ಸಿಕ್ಕಿಸಿದ್ದ ಕ್ಯಾಪ್‌ಅನ್ನು ಮುಂಬದಿಗೆ ಸಿಕ್ಕಿಸದೇ ಹಾಗೇ ಇಟ್ಕೊಂಡು ಜೇಬೆಲ್ಲ ಕಲೆ ಮಾಡ್ಕೊಂಡು ವಾಪಸ್ಸಾಗ್ತೀರ ಎಂತಹ ಕಲಾವಿದ? 'ದಾಗ್ ಅಚ್ಛಾ ಹೈ'ನಲ್ಲಿ ನಂಬಿಕೆಯೋ? ಒಮ್ಮೊಮ್ಮೆ ಇಷ್ಟಕ್ಕೇ ನಿಲ್ಲಲ್ವೇ ವಿಷಯ. ನಿಮ್ಮ ಕುಗ್ಗಿದ ಬಾಡಿ ಭಾಷೆ ನೋಡಿದರೇ ಎಂತಹವರು ಎಂಬುದು ಸ್ಪಷ್ಟ. ಯಾರಾದರೂ ಸ್ಮಾರ್ಟಿ ಸ್ವಲ್ಪ ಪೆನ್ ಕೊಡ್ತೀರಾ ಎಂದು ಕೇಳಿದಾಗ ಅವನಿಗಿಂತ ಸ್ಮಾರ್ಟ್ ಅಂದುಕೊಂಡು ಕ್ಯಾಪ್ ಕೈಯಲ್ಲಿಟ್ಕೊಂಡು ಬಾಡಿ ಮಾತ್ರ ಕೊಡ್ತೀರ, ಗೊತ್ತಿರುವ ವಿಷಯವೇ, ಸ್ವಲ್ಪ ಸಮಯ ಬಾಡಿಗಾಗಿ ಕಾದು ಬೇಸತ್ತು ಕ್ಯಾಪ್ ಹಿಡ್ಕೊಂಡು (ಹಾಕಿಸ್ಕೊಂಡು?) ವಾಪಸ್ಸಾಗ್ತೀರ!

ಕನ್ನಡಕ ಮೇಜಿನ ತುದಿಯಲ್ಲಿಡ್ಬಿಡ್ತೀರಿ. ಹಿಯರಿಂಗ್ ಎಯ್ಡ್ ಎಲ್ಲೀಂದ್ರಲ್ಲಿ ಕೆಳಗೆ ಬಿದ್ದು ಡ್ಯಾಮೇಜ್ ಆಗ್ಬೋದು 'ಹುಷಾರು' ಅಂತ ಎಷ್ಟು ಸಾರ್ತಿ ಹೇಳೋದು? ಯಾವಾಗಲೂ ಸ್ವಸ್ಥಾನದಲ್ಲಿರುವುದು ನಿಮ್ಮ ಡೆಂಚರ್ ಮಾತ್ರ ಅದಕ್ಕೆ ಎಡಬಿಡದೇ ಕೆಲಸ ಅಲ್ವೇ?

ಕಾರಲ್ಲಿ ಒಬ್ಬರೇ ಹೋಗುತ್ತಿದ್ದೀರ 'ಹುಷಾರು'. ಅರವತ್ತೈದರ ನಂತರ ನಿಮ್ಮ ಕಾರ್ ಡ್ರೈವಿಂಗ್ ಹದಗೆಟ್ಟಿದೆ. ಅರ್ಧ ಕಿ.ಮಿ. ಹೋಗುವುದರೊಳಗೇ ತೂಕಡಿಸ್ಬಿಡ್ತೀರ. ತಿರುಗುವಾಗ ಇಂಡಿಕೇಟರನ್ನು ಎಡದ್ದು ಬಲಕ್ಕೆ, ಬಲದ್ದು ಎಡಕ್ಕೆ ಹಾಕುತ್ತೀರಿ. ಇನ್ನು ಸರ್ಕಲ್ ಬಂದರೆ ಕನ್ಫ್ಯೂಷನ್, ರೈಟಾ, ಲೆಫ್ಟಾ ಅಥವಾ ಸ್ಟ್ರೈಟಾ? ನಿಮ್ಮ 'ದಿಕ್ ಸೆನ್ಸ್' ದಿಕ್ಕಾಪಾಲಾಗಿದೆ!

ಮುಖ್ಯ ರಸ್ತೆಗೆ ಹೋಗಲು ಮೂರನೆಯ ಕ್ರಾಸಲ್ಲೇ ಏಕೆ ಹೋಗುತ್ತೀರೆಂದು ನನಗೆ ಗೊತ್ತು. ಅಲ್ಲೇ ಇರುವುದು 'ವಿಷಯ'. ಸಬ್‌ಸ್ಟಿಟ್ಯೂಟ್ 'ವಿಷಯ' ಬೈ ವನಜ! ನಿಮ್ಮನ್ನು ಕಂಡಾಗ ಅವಳಲ್ಲಿ ಉಕ್ಕುವ ಉತ್ಸಾಹ, ಅವಳ ಹಾವ, ಭಾವ, ವಾರೆನೋಟ, ವೈಯ್ಯಾರ ಹಾಗು ಬೆಡಗು, ಬಿನ್ನಾಣ ನಾನು ಕಂಡಿಲ್ಲವೇ? ಹುಷಾರು, ಹುಷಾರು.

ನಾಮಕರಣಕ್ಕೆ ಹೋಗುತ್ತಿದ್ದೇವೆ, ಆದರೆ 'ಹುಷಾರು' ಆ ಪುಟ್ಟ ಮಗುವನ್ನು ಎತ್ತಿಕೊಳ್ಳಲು ಹೋಗಬೇಡಿ. ನಿಮ್ಮ ಬಟರ್ ಹ್ಯಾಂಡ್ಸ್‌ಲಿ ಬಿಯರ್ ಬಾಟಲ್ ಬಿಟ್ಟು ಬೇರೇನೂ ಭದ್ರವಾಗಿರೊಲ್ಲ. ನಿಮ್ಮ ಕಾಲದ ಕ್ರಿಕೆಟರ್‌ಗಳು ಕ್ಯಾಚ್ ಹಿಡಿದು ಬಿಡ್ತಾ ಇದ್ರಲ್ಲಾ ಹಾಗೆ!

ನಿದ್ರೆ ಬರದೇ ಹೊರಳಾಡುವವರನ್ನು ನೋಡಿದೀನಿ. ನೀವು ನಿದ್ರೆಯಲ್ಲಿ ಅದೆಷ್ಟು ಹೊರಳಾಡುತ್ತೀರ್‍ರಿ, 'ಹುಷಾರು' ಮಂಚದಿಂದ ಬಿದ್ದು ಏನಾದರೂ (!) ಮುರಿದ್ರೆ ಏನ್ಗತಿ. ■

---

## ಪ್ರಕಟಣೆ

**ವಿಮಾನ ಯಾನದಲ್ಲಿ ಊಟಕ್ಕೆ ಮುಂಚೆ ಒಂದು ಪ್ರಕಟಣೆ ಕೇಳಿಸಿತು. 'ಪ್ರಯಾಣಿಕರ ಗಮನಕ್ಕೆ, ದಯವಿಟ್ಟು ಕ್ಷಮಿಸಿ. ಪ್ರಯಾಣಿಕರು ನೂರು ಮಂದಿ ಇದ್ದಾರೆ. ಆದರೆ ಅಚಾತುರ್ಯದಿಂದಾಗಿ ನಮ್ಮ ಬಳಿ ಕೇವಲ 30 ಊಟದ ಪ್ಯಾಕೆಟ್‌ಗಳಿವೆ. ಯಾರು ಬೇರೊಬ್ಬರಿಗೆ ತಮ್ಮ ಊಟ ಬಿಟ್ಟು ಕೊಡುತ್ತಾರೊ ಅವರಿಗೆ ಯಾನ ಮುಗಿಯುವವರಿಗೂ ಪುಕ್ಕಟೆ ಡ್ರಿಂಕ್ಸ್ ಕೊಡುತ್ತೇವೆ. ದಯವಿಟ್ಟು ಸಹಕರಿಸಿ'.**

**ಒಂದು ತಾಸಿನ ನಂತರ ಇನ್ನೊಂದು ಪ್ರಕಟಣೆ: ಯಾರಾದರೂ ಮನಸ್ಸು ಬದಲಾಯಿಸುವುದಿದ್ದರೆ ತಿಳಿಸಿ. ಏಕೆಂದರೆ ನಮ್ಮ ಬಳಿ ಇನ್ನೂ 20 ಊಟದ ಪ್ಯಾಕೆಟ್‌ಗಳು ಮಿಕ್ಕವೆ.'**



# ಹೆಸರಲ್ಲೇನಿದೆ ಮಹಾ!

**• ಸುಧಾ ಸರನೋಬತ್**

ಸುಲಭದ ಕೆಲಸವಲ್ಲ ಹೆಸರು ಇಡುವುದು. ನಮ್ಮ ಮನೆ ಕಟ್ಟಿಸಿದಾಗ ಮನೆ ಕಟ್ಟಿಸುವಾಗ ಎಷ್ಟು ತಲೆ ಬಿಸಿ ಆಗಿತ್ತೋ, ಅದರ ಹತ್ತರಷ್ಟು ತಲೆ ಬಿಸಿ ಆ ಕಟ್ಟಿದ ಮನೆಗೆ ಹೆಸರು ಇಡುವಾಗ ಆಗಿತ್ತು. ಸಿಮೆಂಟು, ಜಲ್ಲಿ, ಮರಳು, ಕಂಬಿ, ಕಂಟ್ರಾಕ್ಟರ್ ಜೊತೆ ವಾದ, ವಿವಾದ, ಇದೆರಲ್ಲದರ ಮಧ್ಯೆ ಈ ಮನೆಗೆ ಏನು ನಾಮಕರಣ ಮಾಡುವುದು, ಎಂಬ ಬಿಸಿ ಬಿಸಿ ಚರ್ಚೆ ಮನೆಯಲ್ಲಿ ದಿನಾ ನಡೆಯುತ್ತಿತ್ತು. ನಾವು ಏಳು ಜನ ಮಕ್ಕಳು, ನಮ್ಮ ಅಮ್ಮನಿಗೆ ಒಬ್ಬೊಬ್ಬರು ಒಂದೊಂದು ಹೆಸರು ದಿನಾಲು ಸೂಚಿಸುತ್ತಿದ್ದೆವು. ಹಿರಿಯಣ್ಣ ಹೇಳಿದ 'ನವಜೀವನ' ಅಂತ ಎಲ್ಲರೂ ಗೊಳ್ಳೆಂದು ನಕ್ಕೆವು, ಕಿರಿಯ ತಮ್ಮ 'ಸೂರ್ಯಕಿರಣ' ಅಂತ ಇಡೋಣ ಎಂದಾಗ ಮತ್ತೆ ಎಲ್ಲರೂ ಸಾಮೂಹಿಕವಾಗಿ ನಕ್ಕೆವು. ಅವನಿಗೆ ಅವಮಾನ ಆಗಿ ಕಾಲು ಅಪ್ಪಳಿಸುತ್ತಾ ಹೊರಗೆ ಹೋದ. ನನ್ನ ತಂದೆ "ಗೋವಿಂದ" ಅಂತ ಇಡೋಣ ದೇವರ ಹೆಸರೂ ಆಗುತ್ತೆ ಹೇಳಲೂ ಸುಲಭ ಎಂದಾಕ್ಷಣ ನಾವೆಲ್ಲರೂ ಬಾಲವಿಲ್ಲದ ಮಂಗನಂತಿದ್ದವರು, "ಗೋವಿಂದಾ ಗೋವಿಂದಾ" ಎಂದು ಕೂಗಿ, ನಮಗೆ ಈ ಹೆಸರು ಸಮ್ಮತವಿಲ್ಲ ಎಂಬುದನ್ನು ಅಪರೋಕ್ಷವಾಗಿ ಸೂಚಿಸಿದೆವು. ನಮ್ಮ ತಾಯಿ, ನಮ್ಮನ್ನೆಲ್ಲ ಉದ್ದೇಶಿಸಿ ಹಾಗೆಲ್ಲ ದೇವರ ಹೆಸರಿಗೆ ಅವಮಾನ ಮಾಡಬಾರದು ಎಂದು ನಯವಾಗಿ ಗದರಿಸಿದಳು. ಆಗ ನಾವು ನಮ್ಮ ಮಂಗಾಟವನ್ನು ಮುಂದುವರಿಸಿ, "ನಾವೆಲ್ಲಿ ಅವಮಾನ ಮಾಡಿದ್ದೇವೆ? 'ಗೋವಿಂದಾ, ಗೋವಿಂದಾ' ಎಂಬ ನಾಮಸ್ಮರಣೆ ಮಾಡಿದ್ದೀವಿ" ಎಂದೆವು.

ಇಷ್ಟೆಲ್ಲಾ ಒಳಗೆ ನಡೀತಿರಬೇಕಾದರೆ, ಹೊರಗೆ ಬಿಟ್ಟ ನಮ್ಮ ಚಪ್ಪಲಿ, ಶೂಗಳೆಲ್ಲ ಗೋವಿಂದ!. ನಮ್ಮ ಮನೆಯ ಹೊರಗೆ ಬಿಟ್ಟಿದ್ದ ಕಾಂಪೌಂಡಿನಿಂದ ಮಿನಿಕಳ್ಳ ಎಲ್ಲವನ್ನೂ ಕದ್ದು ಒಯ್ದಿದ್ದ. ಸಂಜೆ ಮತ್ತೆ ಎಲ್ಲರೂ ಸಭೆ ಸೇರಿ, ಮನೆಗೆ ಹೆಸರಿಡುವ ಬಗ್ಗೆ ಚರ್ಚೆ ಆರಂಭಿಸಿದೆವು. ಮಂತ್ರಿಗಳು ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಿದಂತಾಯಿತು! ಚರ್ಚೆ ವಿಫಲ. ಮನೆ ಕಟ್ಟುವುದು ಪೂರ್ತಿ ಮುಗಿದರೂ, ನಮಗೆ ಅದಕ್ಕೆ ಇಡುವ ಸಮರ್ಪಕ ಹೆಸರು ಹೊಳೆಯಲೇ ಇಲ್ಲ! ಒಬ್ಬರಿಗೆ ಹೊಳೆದದ್ದು ಇನ್ನೊಬ್ಬರಿಗೆ ಒಪ್ಪಿಗೆಯಿಲ್ಲ, ಬೀಚಿಯವರ ಜೋಕು ನೆನಪಾಯಿತು. 'ರಮಾ ವಿಲ್ಲಾ' 'ಸುಧಾ ವಿಲ್ಲಾ' ಎಂಬ ಹೆಸರಿನ ಬದಲಾಗಿ 'ಸುಖವಿಲ್ಲಾ' ಸಮಾಧಾನವಿಲ್ಲಾ' ಎಂಬ ಹೆಸರು ತಿಂಮನಿಗೆ ಹೊಳೆದಿದ್ದು.

ಅಷ್ಟರಲ್ಲಿ ಮೇಸ್ತ್ರಿ ನಮ್ಮನ್ನು ಹೊರಗೆ ಕರೆದು, "ಸರ್ ಮನೆಗೆ ಹೆಸರು ಬೇಕಾ? ನನ್ನ ಫ್ರೆಂಡು ಕಾಲಿಮುತ್ತು ಸಾವಿರ ಹೆಸರಿನ 'ಲಿಸ್ಟ್' ಇಟ್ಟುಕೊಂಡಿದ್ದಾನೆ, ಬೇಕಾದ್ರೆ ತಂದುಕೊಡ್ತೀನಿ, ಅದರಲ್ಲಿ ನಿಮಗೆ ಒಳ್ಳೆಯ ಹೆಸರು ಸಿಕ್ಕೇ ಸಿಗುತ್ತದೆ", ಎಂದು ಸರ್ರಂತ ಗಾಡಿ ಮೇಲೆ ಹೋಗಿ ಲಿಸ್ಟ್ ಸಮೇತ ಕಾಲಿಮುತ್ತುವನ್ನೂ ಕರೆತಂದಿದ್ದ. ಕಾಲಿಮುತ್ತು ಲಿಸ್ಟ್ ಹಿಡಿದು ಒಳಗೆ ಬಂದು "ಎನ್ನ ವೇಣು ಸರ್ ವೀಟಿಕಿ ನಲ್ಲ ಪೇರಾ?" ನಾವು, ಎಲ್ಲರೂ ಮುಖ ಮುಖ ನೋಡಿಕೊಂಡೆವು, ಅರ್ಥವಾಗಲಿಲ್ಲ ನೀನು ಹೇಳಿದ್ದು ಎಂಬಂತೆ. "ಪಾರಂಗೋ ಸಾರ್ ಪೇರು" ಎಂದು ಲಿಸ್ಟ್ ನಮ್ಮ ಕೈಗಿಟ್ಟ. ಒಂದೊಂದಾಗಿ ಓದಿದೆವು. ತಲೆತಿರುಗಿದಂತಾಯಿತು. 'ಮುತ್ತುಲಕ್ಷ್ಮಿ' 'ಅನಂತಲಕ್ಷ್ಮಿ' 'ಪೆರುಮಾಳ' 'ತಂಬಿಯಾರ್' 'ನಂಬಿಯಾರ್' 'ನಂಬೂದ್ರಿ' 'ಚಿನ್ನತಂಬಿ' 'ಗಲಾಟಾ ಸಂಸಾರಂಗಳ್' 'ಅಮ್ಮಾ ಕ್ಯಾಂಟೀನ್' 'ಕಾವೇರೀ ಗಲಾಟಾ' 'ಸಾಂಬಾ' ಮುಂದೆ ಓದಲಾಗದೆ ಕಣ್ಣು ಕತ್ತಲಿಟ್ಟಿತು. ಲಿಸ್ಟ್ ವಾಪಸ್



ಕೊಟ್ಟು ಬಿಸಿ ಕಾಫಿ ಕೊಟ್ಟು ಕಳಿಸಿದೆವು. ಊರಿನಿಂದ ನಮ್ಮ ನೆಂಟರಿಷ್ಟರು ಕೆಲವು ಹೆಸರು ಸೂಚಿಸಿದ್ದರು.

'ಕಮಲಾಕ್ಷಿ' 'ಜಲಜಾಕ್ಷಿ' 'ಆಕ್ಷೀ' 'ಮಾಧುರಿ' 'ಅಂತರಾತ್ಮ' ಇವ್ಯಾವೂ ನಮ್ಮ ಅಂತರಾತ್ಮಕ್ಕೆ ಒಪ್ಪಿಗೆಯಾಗಲಿಲ್ಲ. ಈ ನಡುವೆ, ನಮ್ಮ ಮನೆಯ ಕೆಲಸದ ತಿಮ್ಮಕ್ಕ ಚಿಕ್ಕದೊಂದು ಮನೆ ಕಟ್ಟಿಸಿ ಅದಕ್ಕೆ ಹೊಸ ಹೆಸರು ಇಟ್ಟಿದ್ದೇನೆ ಎಂದು ಹೇಳಿದ್ದಳು ಆದರೆ ತನಗೆ ಆ ಹೆಸರು ಹೇಳಲು ಬರದು ನೀವೇ ಖುದ್ದಾಗಿ ಬಂದು ನಿಮ್ಮ ಕಣ್ಣಿಂದ ನೋಡಿ, ಎಂದು ಹೇಳಿದ್ದರಿಂದ ನಾನೇ ಸ್ವತಃ ಸಂದಿ–ಗೊಂದಿಯಲ್ಲಿದ್ದ ಅವಳ ಮನೆಗೆ ಕಸದ ರಾಶಿಯ ನಡುವೆ ಮೂಗುಮುಚ್ಚಿಕೊಂಡು ಹೋದೆ, ನೋಡಿದೆ ಕಣ್ಣು ಅಗಲಿಸಿ ಮತ್ತೊಮ್ಮೆ ನೋಡಿದೆ. "ಸರ್ಕಲ್ ಮಾರಮ್ಮ" ದೊಡ್ಡ ದಪ್ಪನೆಯ ಅಕ್ಷರದಲ್ಲಿ ಹಾಕಿಸಿದ್ದಳು. ಕಾಲಿಮುತ್ತು ಹೆಸರೇ ಎಷ್ಟೋ ಮೇಲು ಅನ್ನಿಸಿ ಮತ್ತೆ ಮೂಗು ಮುಚ್ಚಿ ಹೊರಗೆ ಬಂದು ಉಸಿರಾಡಿದೆ. 'ಚನ್ನಾಗಿಲ್ಲವೇನಮ್ಮ' ತಿಮ್ಮಕ್ಕ ಕೇಳಿದಾಗ 'ತುಂಬಾ ಚೆನ್ನಾಗಿದೆ ತಿಮ್ಮಕ್ಕ' ಎಂದು ಯಾಂತ್ರಿಕವಾಗಿ ಹೇಳಿದೆ.

ಮನೆಗೆ ಬರುವಾಗ ಒಂದು ಪುಟ್ಟ ಶಾಲೆ, ಒಳಗೆ ಮಕ್ಕಳ ಗಲಾಟೆ, ಬಹುಶಃ ಕನ್ನಡ ಮೀಡಿಯಂ ಶಾಲೆ ಇರಬಹುದು ಟೀಚರ್ ಅಟೆಂಡೆನ್ಸ್ ಕೂಗುತ್ತಿದ್ದರು, 'ಕಮಲಾ, ವಿಮಲಾ, ಕಲಾ, ರತ್ನಾ, ಶಂಕರಿ, ಶಾಂಭವಿ, ಕೊನೆಯಲ್ಲಿ ಕೂಗಿದಳು 'ಅನನ್ಯ'. ನನ್ನ ಕಿವಿ ನಿಮಿರಿತು 'ಅನನ್ಯ' ಎಷ್ಟು ಚೆನ್ನಾಗಿದೆ. ಯುರೇಕಾ, ಎಂದು ಕೂಗಿದೆ ಹೊಸ ಸಂಶೋಧನೆ ಮಾಡಿದಂತೆ. ನನ್ನ ಕೂಗಿಗೆ ಒಳಗಿಂದ ಟೀಚರ್ ಬಂದು 'ರೇಖಾ ಅಂತ ಯಾರಿಲ್ಲ ಇಲ್ಲಿ' ಎಂದು ಹೇಳಿ ಹೋದರು. ಮೂಗು ಮುಚ್ಚಿ ಆ ಬೀದಿಗೆ ಹೋದ ನಾನು ಬಾಯಿ ತೆರೆದುಕೊಂಡು ಮನೆಗೆ ಬಂದೆ. ಎಲ್ಲರೆದುರು ಹೇಳಿದೆ "ಅನನ್ಯ" ಅಂತ ಇಡೋಣ ಮನೆಗೆ ಹೆಸರು, ಎಲ್ಲರೂ ಒಕ್ಕೊರಲಿನಿಂದ "ಜೈ" ಅಂದರು, ತಂದೆಯವರು 'ತಥಾಸ್ತು' ಎಂದರು. ನಮ್ಮ ಹೊಸಮನೆಯ ಹೆಸರು "ಅನನ್ಯ" ಯಾರು, ಯಾವಾಗ ಬೇಕಾದರೂ ಬನ್ನಿ ಸುಸ್ವಾಗತ!! ■

---

## ಸೋಲು ಗೆಲುವು

ಗಂಡ ಹೆಂಡಿರ ಜಗಳದಲ್ಲಿ
ಯಾರಾದರೊಬ್ಬರು ಸೋಲು
ಒಪ್ಪಿಕೊಳ್ಳುವುದು ಒಳ್ಳೆಯದು

ಜಿದ್ದಿಗೆ ಬಿದ್ದು ಹೋರಾಡಿ
ಇಬ್ಬರೂ ಗೆದ್ದರೆ
ದಾಂಪತ್ಯ ಸೋಲುವುದು

## ವಯಸ್ಸು

ಇಬ್ಬರು ಕವಿಗಳು
ಮೂವತ್ತು ತುಂಬಿ ಮೂವತ್ತೊಂದಕ್ಕೆ
ಕಾಲಿಡುತ್ತಿದ್ದಾರೆ

ಇಬ್ಬರು ಹಿರಿಯ ಕವಿಗಳು
ಎಂಭತ್ತೊಂಭತ್ತು ತುಂಬಿ ತೊಂಭತ್ತಕ್ಕೆ
ಕೋಲಿಡುತ್ತಿದ್ದಾರೆ



**ಎಚ್. ಡುಂಡಿರಾಜ್**